
ಶುಕ್ರವಾರ, ಜೂನ್ 18, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 169 | ಪುಟ 10 + 2
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಟ್ರೆಂಡ್ ಅನಿಸುವಷ್ಟು ಜನಪ್ರಿಯವಾಗುತ್ತಿರುವ 'ಕ್ಲಬ್ ಹೌಸ್' ವೇದಿಕೆ ಸಿನಿಮಾ ಕುರಿತ ಆರೋಗ್ಯಕರ ಚರ್ಚೆಗೂ ವೇದಿಕೆ ಕಲ್ಪಿಸುತ್ತಿರುವುದು ಕುತೂಹಲಕಾರಿ ವಿದ್ಯಮಾನ



ಆಳ-ಅಗಲ ಕೊರೊನಾ ನೆರಳಲ್ಲಿ ಟೆಸ್ಟ್ ಮುಕುಟಕ್ಕೆ ಹೋರಾಟ

ಯಡಿಯೂರಪ್ಪ ಬದಲಿಸುವುದು ಸೂಕ್ತ: ವಿಶ್ವನಾಥ್ 8
'ಅಪ್ಪ, ಅಮ್ಮ ಇದ್ದಾಗ ಸಿರಿತನವಿತ್ತು...' 4

ಸೆನ್ಸೆಕ್ಸ್	ನಿಫ್ಟಿ	₹/$
52,323 ▼	15,691 ▼	74.08 ▼

ದೂರವಾಣಿ ಕದ್ದಾಲಿಕೆ – ಬೆಲ್ಲದ ಆರೋಪ • ಪ್ರಮುಖರ ಸಮಿತಿ ಸಭೆ ಇಂದು

ಬಿಜೆಪಿ 3 ಬಣ ಅನಾವರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ರಾಜ್ಯ ಘಟಕ ಮತ್ತು ಸರ್ಕಾರದಲ್ಲಿ ಯಾವುದೇ ಭಿನ್ನಮತ ಇಲ್ಲ ಎಂದು ಆ ಪಕ್ಷದ ರಾಜ್ಯ ಉಸ್ತುವಾರಿ ಅರುಣ್ ಸಿಂಗ್, ಗಟ್ಟಿ ಧ್ವನಿಯಲ್ಲಿ ಪ್ರತಿಪಾದಿಸುತ್ತಲೇ ಇದ್ದರೂ, ಬಿಜೆಪಿಯ ಮೂರು ಬಣಗಳ ಭಿನ್ನನೆಲೆ ಗುರುವಾರ ಬಯಲಾಗಿದೆ.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನಾಯಕತ್ವದ ಪರ ಮತ್ತು ವಿರೋಧ ಬಣಗಳ ಜತೆಗೆ ಪಕ್ಷದ ವರಿಷ್ಠರು (ಹೈಕಮಾಂಡ್) ಹಾಕುವ 'ಲಕ್ಷ್ಮಣ ರೇಖೆ' ದಾಟುವುದಿಲ್ಲ ಎಂಬ ತಟಸ್ಥ ಬಣವೂ ಈಗ ಬಹಿರಂಗವಾಗಿ ತೋರಿಸಿಕೊಂಡಿರುವುದು ಬಣ ಜಗಳವನ್ನು ತಾರಕಕ್ಕೆ ಕೊಂಡೊಯ್ಯುವ ಲಕ್ಷಣ ಆಡಳಿತ ಪಕ್ಷದಲ್ಲಿ ನಿಚ್ಚಳವಾಗಿ ಕಾಣಿಸತೊಡಗಿದೆ.

ಪಕ್ಷ ಮತ್ತು ಸರ್ಕಾರದ ಬಗ್ಗೆ ಅಹವಾಲುಗಳನ್ನು ಹೇಳಿಕೊಳ್ಳಲು ಶಾಸಕರಿಗೆ ಅರುಣ್‌ಸಿಂಗ್, ಗುರುವಾರ ನೀಡಿದ್ದ ಅವಕಾಶವನ್ನು ಮೂರು ಬಣಗಳೂ ಬಳಸಿಕೊಂಡಿವೆ. 46 ಕ್ಕೂ ಹೆಚ್ಚು ಶಾಸಕರು ಮತ್ತು 5 ಕ್ಕೂ ಹೆಚ್ಚು ಸಚಿವರು ತಮ್ಮ ದೂರು, ಬೇಡಿಕೆ ಮತ್ತು ಅಹವಾಲುಗಳನ್ನು ದಾಖಲಿಸಿದರು.

ಮಲ್ಲೇಶ್ವರದಲ್ಲಿರುವ ಪಕ್ಷದ ಕಚೇರಿ 'ಜಗನ್ನಾಥ ಭವನ'ದಲ್ಲಿ ಚಟುವಟಿಕೆ ಗರಿಗೆದರಿತ್ತು. ವಿಧಾನಪರಿಷತ್ ಸದಸ್ಯ ಎಚ್.ವಿಶ್ವನಾಥ್ ಅವರು ಅರುಣ್‌ಸಿಂಗ್ ಭೇಟಿಯ ಬಳಿಕ ಸುದ್ದಿಗಾರರ ಜತೆ ಮಾತನಾಡಿ, ಯಡಿಯೂರಪ್ಪ ಬದಲಿಸುವುದು ಸೂಕ್ತ ಎಂದು ಹೇಳಿದ ವಿಷಯ ರಾಜಕೀಯವಾಗಿ ಭಾರಿ ಚರ್ಚೆಗೆ ಗ್ರಾಸವಾಯಿತು. ಮುಖ್ಯಮಂತ್ರಿ ಆಪ್ತ ಬಣದ ಶಾಸಕರು ವಿಶ್ವನಾಥ್ ಮೇಲೆ ಹರಿಹಾಯ್ದರು. ಬಳಿಕ ಪಕ್ಷವೂ ವಿಶ್ವನಾಥ್ ಅವರಿಗೆ ಎಚ್ಚರಿಕೆ ನೀಡಿತು.

ಮುಖ್ಯಮಂತ್ರಿಯವರ ನಿಷ್ಠ ಶಾಸಕರು ಬೆಳಿಗ್ಗೆ ಎಂ.ಪಿ. ರೇಣುಕಾಚಾರ್ಯ ಮನೆಯಲ್ಲಿ ಸಭೆ ಸೇರಿ ಸಿಂಗ್ ಅವರಿಗೆ ಏನು ಹೇಳಬೇಕು ಎಂಬ ವಿಷಯದ ಬಗ್ಗೆ ಚರ್ಚಿಸಿ, ನಂತರ ಮುಖ್ಯಮಂತ್ರಿಯವರನ್ನು ಭೇಟಿ ಮಾಡಿದರು.

ಕೆಲವು ಶಾಸಕರಿಗೆ ಕಚೇರಿಗೆ ಬಂದು ಅಭಿಪ್ರಾಯ ಹೇಳುವಂತೆ ಸೂಚಿಸಲಾಗಿತ್ತು. ಆದರೆ, ಸ್ಪಷ್ಟನೆ ಕೇಳಿ ಪಕ್ಷದಿಂದ ನೋಟಿಸ್ ಪಡೆದಿರುವ ವಿಜಯಪುರ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರಿಗೆ ಬರಲು ಹೇಳಿಲ್ಲ ಎಂದು ಪಕ್ಷದ ಮೂಲಗಳು ತಿಳಿಸಿವೆ.

ಇದಕ್ಕೆ ಪ್ರತಿಕ್ರಿಯಿಸಿರುವ ಯತ್ನಾಳ, 'ನಾನು ಅರುಣ್‌ಸಿಂಗ್ ಅವರ ಭೇಟಿಗೆ ಅವಕಾಶ ಕೇಳಿಯೇ ಇಲ್ಲ' ಎಂದಿದ್ದಾರೆ.

ಪ್ರವಾಸೋದ್ಯಮ ಸಚಿವ ಸಿ.ಪಿ. ಯೋಗೇಶ್ವರ್ ಅವರು ತಮ್ಮ ಭೇಟಿಯ ಸಂದರ್ಭದಲ್ಲಿ 'ನಾನು ಹೇಳಬೇಕಾಗಿದ್ದನ್ನು ಹೇಳಿದ್ದೇನೆ. ಮಾಧ್ಯಮಗಳ ಜತೆ ಚರ್ಚಿಸುವುದಿಲ್ಲ' ಎಂದರು.

ಯಡಿಯೂರಪ್ಪ ಆಪ್ತ ಬಣದಲ್ಲಿ ಗುರುತಿಸಿಕೊಂಡಿರುವ ಶಾಸಕರು ಅವರ ಮನೆಯಿಂದಲೇ ಒಟ್ಟಾಗಿ ಪಕ್ಷದ ಕಚೇರಿಗೆ ಬಂದರು. ತಮ್ಮ ಸರದಿ ಬಂದಾಗ ಒಬ್ಬೊಬ್ಬರೇ ಹೋಗಿ ಮಾತನಾಡಿದರು.

ಈ ಎಲ್ಲ ಬೆಳವಣಿಗೆಗಳ ಮಧ್ಯೆಯೇ, ತಮ್ಮ ದೂರವಾಣಿ ಕರೆಗಳನ್ನು ಕದ್ದಾಲಿಸಲಾಗುತ್ತಿದೆ ಎಂದು ಭಿನ್ನಮತೀಯ ಶಾಸಕ ಎಂದೇ ಗುರುತಿಸಿಕೊಂಡಿರುವ ಅರವಿಂದ ಬೆಲ್ಲದ್ ಹೇಳಿರುವುದಲ್ಲದೇ, ದೂರಿನ ದಾಖಲೆಗಳನ್ನು ಪ್ರದರ್ಶಿಸಿರುವುದು, ರಾಜಕೀಯ ಕ್ಷೋಭೆಯ ಚಟುವಟಿಕೆಗೆ ಮತ್ತೊಂದು ಆಯಾಮವನ್ನೂ ನೀಡಿದೆ. ಈ ಬಗ್ಗೆ ಸಿಬಿಐ ಅಥವಾ ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಕಾಂಗ್ರೆಸ್ ಆಗ್ರಹಿಸಿದ್ದು, ಪ್ರಕರಣ ರಾಜಕೀಯ ತಿರುವು ಪಡೆದುಕೊಂಡಿದೆ.

ಏತನ್ಮಧ್ಯೆ, ಈ ಎಲ್ಲ ವಿದ್ಯಮಾನಗಳ ಬಗ್ಗೆ ಚರ್ಚಿಸಲು ಪಕ್ಷದ ಪ್ರಮುಖರ ಸಮಿತಿಯ ಸಭೆ ಶುಕ್ರವಾರ ಸಂಜೆ ಪಕ್ಷದ ಕಚೇರಿಯಲ್ಲಿ ನಡೆಯಲಿದ್ದು, ಅಲ್ಲಿನ ಚರ್ಚೆಗಳ ಮೇಲೆ ಎಲ್ಲರ ಕುತೂಹಲ ಕೇಂದ್ರೀಕೃತವಾಗಿದೆ.

ಇನ್ನಷ್ಟು ಸುದ್ದಿಗಳು 3B, 8

1.'ಬಿಎಸ್‌ವೈ ನಾಯಕತ್ವ ಕೊನೆಗೊಳ್ಳಲಿ'

ಯಡಿಯೂರಪ್ಪ ವಿರೋಧಿ ಬಣದ ಮುಂಚೂಣಿಯಲ್ಲಿರುವ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ಅರವಿಂದ ಬೆಲ್ಲದ ಅವರು, ನಾಯಕತ್ವದ ಬದಲಾವಣೆಗೆ ಬಹಿರಂಗವಾಗಿ ಒತ್ತಾಯಿಸಿದ್ದಾರೆ. ಸಚಿವ ಸಿ.ಪಿ. ಯೋಗೇಶ್ವರ ಈ ಗುಂಪಿನಲ್ಲಿದ್ದರೂ, ಬಹಿರಂಗವಾಗಿ ಮಾತನಾಡಿಲ್ಲ. ವಿಧಾನಪರಿಷತ್ ಸದಸ್ಯ ಎಚ್. ವಿಶ್ವನಾಥ್ ಅವರು ಇವರೆಲ್ಲರ ಪರವಾಗಿ ಅರುಣ್‌ಸಿಂಗ್ ಮುಂದೆ ಮುಖ್ಯಮಂತ್ರಿ ಬದಲಾವಣೆಗೆ ಬೇಡಿಕೆ ಇಟ್ಟಿದ್ದಾರೆ. ಕೆಲವರು ತೆರೆಮರೆಯಲ್ಲಿ ಬೆಂಬಲಕ್ಕೆ ನಿಂತಿದ್ದಾರೆ.

ಈ ಬಣದ ಬೇಡಿಕೆ:
- ತಕ್ಷಣವೇ ನಾಯಕತ್ವ ಬದಲಿಸಬೇಕು. ಹೊಸಬರನ್ನು ಮುಖ್ಯಮಂತ್ರಿಯಾಗಿ ಮಾಡಬೇಕು.
- ಬಿ.ವೈ.ವಿಜಯೇಂದ್ರ ಮತ್ತು ಮುಖ್ಯಮಂತ್ರಿ ಕುಟುಂಬವರು ಆಡಳಿತದಲ್ಲಿ ನಡೆಸುತ್ತಿರುವ ಹಸ್ತಕ್ಷೇಪಕ್ಕೆ ಕಡಿವಾಣ ಹಾಕಬೇಕು.

2.'ಬಿಎಸ್‌ವೈ ನಾಯಕತ್ವವೇ ಮುಂದುವರಿಯಲಿ'

ಯಡಿಯೂರಪ್ಪ ಅವರ ಆಪ್ತ ಬಣದ ಶಾಸಕರು ಮತ್ತು ಸಚಿವರು, 'ಯಾವುದೇ ಕಾರಣಕ್ಕೂ ನಾಯಕತ್ವ ಬದಲಿಸಬಾರದು, ಮುಖ್ಯಮಂತ್ರಿಯಾಗಿ ಅವಧಿಪೂರ್ಣಗೊಳಿಸಲು ಅವಕಾಶ ನೀಡಬೇಕು' ಎಂದು ಒತ್ತಾಯಿಸುತ್ತಲೇ ಬಂದಿದ್ದಾರೆ. ಈ ಗುಂಪಿನಲ್ಲಿ ಶಾಸಕರಾದ ಎಂ.ಪಿ. ರೇಣುಕಾಚಾರ್ಯ, ಎಸ್.ಆರ್. ವಿಶ್ವನಾಥ್, ಹರತಾಳು ಹಾಲಪ್ಪ, ಮಾಡಾಳು ವಿರೂಪಾಕ್ಷಪ್ಪ ಮುಂಚೂಣಿಯಲ್ಲಿದ್ದಾರೆ.

ಯಡಿಯೂರಪ್ಪ ಅವರ ಪರ ಇರುವ ಶಾಸಕರ ಸಹಿ ಸಂಗ್ರಹಿಸಿಟ್ಟುಕೊಂಡಿರುವ ಈ ಬಣ ಅವಶ್ಯ ಇದ್ದಾಗ ವರಿಷ್ಠರ ಮುಂದೆ ಮಂಡಿಸಲು ಸಿದ್ಧವಾಗಿದೆ.

ಈ ಬಣದ ಬೇಡಿಕೆ:
- ಯಡಿಯೂರಪ್ಪ ಅವರು ಎರಡು ವರ್ಷಗಳು ಸ್ವತಂತ್ರವಾಗಿ ಕೆಲಸ ಮಾಡಲು ಅವಕಾಶ ಕೊಡಿ.
- ನಾಯಕತ್ವದ ವಿರುದ್ಧ ಟೀಕೆ ಮಾಡುತ್ತಿರುವವರ ವಿರುದ್ಧ ಕ್ರಮ ತೆಗೆದುಕೊಂಡು, ಯತ್ನಾಳ್, ಯೋಗೇಶ್ವರ ಅವರನ್ನು ಪಕ್ಷದಿಂದ ಉಚ್ಚಾಟಿಸಬೇಕು.

3.'ವರಿಷ್ಠರ ಲಕ್ಷ್ಮಣ ರೇಖೆಗೆ ಬದ್ಧ'

'ನಾವು ಯಾರ ಪರವೂ ಇಲ್ಲ, ವಿರುದ್ಧವೂ ಇಲ್ಲ. ವರಿಷ್ಠರು ತೆಗೆದುಕೊಳ್ಳುವ ತೀರ್ಮಾನಕ್ಕೆ ಬದ್ಧ. ಪಕ್ಷ ಮತ್ತು ಸಂಘದ ನಿಷ್ಠರು' ಎಂದು ಹೇಳುವ ದೊಡ್ಡ ಗುಂಪೇ ಇದೆ. ಸರ್ಕಾರದ ಮುಖ್ಯ ಸಚೇತಕ ವಿ.ಸುನಿಲ್ ಕುಮಾರ್ ಈ ಗುಂಪಿನಲ್ಲಿ ಮುಂಚೂಣಿಯಲ್ಲಿದ್ದಾರೆ.

ಪಕ್ಷ ಮತ್ತು ಸರ್ಕಾರದ ವರ್ಚಸ್ಸು ಮುಖ್ಯ ಎಂಬುದು ಇವರ ವಾದ. ಇವರಲ್ಲಿ ಆರ್‌ಎಸ್‌ಎಸ್ ಸಂಪರ್ಕದ ಶಾಸಕರೇ ಹೆಚ್ಚಿನವರು. ಸಚಿವ ಕೋಟ ಶ್ರೀನಿವಾಸ ಪೂಜಾರಿ ಇದನ್ನು ಬಹಿರಂಗವಾಗಿ ಹೇಳಿದ್ದಾರೆ.

ಇವರ ಮುಖ್ಯ ಬೇಡಿಕೆ:
- ಮೋದಿ ಮಾದರಿಯ ಆಡಳಿತ ಇರಬೇಕು, ಭ್ರಷ್ಟಾಚಾರ, ಪಕ್ಷಪಾತ ಮತ್ತು ಕುಟುಂಬದ ಮಧ್ಯ ಪ್ರವೇಶಕ್ಕೆ ಅವಕಾಶ ಇರಬಾರದು

ಯಡಿಯೂರಪ್ಪ ಮುಖ್ಯಮಂತ್ರಿ ಆಗಬೇಕೆಂದು ಸಂಸದೀಯ ಮಂಡಳಿ ತೀರ್ಮಾನಿಸಿತ್ತು. ನಾಯಕತ್ವ ಬದಲಾವಣೆ ವಿಷಯದಲ್ಲಿ ಮಂಡಳಿಯೇ ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತದೆ
ಸಿ.ಟಿ.ರವಿ
ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

ಬಿಜೆಪಿ ನಾಯಕರ ಒಳಜಗಳದಿಂದ ಆಡಳಿತ ವ್ಯವಸ್ಥೆ ಸಂಪೂರ್ಣ ಕುಸಿದಿದೆ. ರಾಜ್ಯಪಾಲರು ತಕ್ಷಣ ಮಧ್ಯಪ್ರವೇಶಿಸಿ, ಬಿಜೆಪಿ ಸರ್ಕಾರವನ್ನು ವಜಾಗೊಳಿಸಬೇಕು
ಸಿದ್ದರಾಮಯ್ಯ
ವಿಧಾನಸಭೆ ವಿರೋಧ ಪಕ್ಷದ ನಾಯಕ

ನಾಯಕತ್ವ ಸರಿ ಇಲ್ಲ ಎಂದು ಶಾಸಕರೇ ಹೇಳುತ್ತಿರುವಾಗ ನಾಯಕನ ಬದಲಿಸಲು ಬಿಜೆಪಿ ರಾಷ್ಟ್ರ ನಾಯಕರು ತಿಣುಕಾಡುವುದೇಕೆ?
ಎಚ್.ಡಿ. ಕುಮಾರಸ್ವಾಮಿ
ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ

ವಿಶ್ವ 'ಟೆಸ್ಟ್' ಕಿರೀಟಕ್ಕೆ ಹಣಾಹಣಿ ಇಂದಿನಿಂದ

ಸೌತಾಂಪ್ಟನ್: ವಿರಾಟ್ ಕೊಹ್ಲಿ ನಾಯಕತ್ವದ ಭಾರತ ಮತ್ತು ಕೇನ್ ವಿಲಿಯಮ್ಸನ್ ನಾಯಕತ್ವದ ನ್ಯೂಜಿಲೆಂಡ್ ತಂಡಗಳು ಶುಕ್ರವಾರ ಇಲ್ಲಿ ಆರಂಭವಾಗಲಿರುವ ಚೊಚ್ಚಲ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ ಮುಖಾಮುಖಿಯಾಗಲಿವೆ.

ಉಭಯ ತಂಡಗಳ ಬಲಾಬಲ
ಅವಧಿ 1955-2021
ಪಂದ್ಯಗಳು 59

ಭಾರತ ಗೆಲುವು	21
ನ್ಯೂಜಿಲೆಂಡ್ ಜಯ	12
ಡ್ರಾ	26

ಪ್ರಶಸ್ತಿ ಮೊತ್ತ ₹ 11.71 ಕೋಟಿ

ಡಬ್ಲ್ಯುಟಿಸಿ ಪಾಯಿಂಟ್ಸ್

ಭಾರತ	520
ನ್ಯೂಜಿಲೆಂಡ್	420

ಪಂದ್ಯ ಆರಂಭ ಮಧ್ಯಾಹ್ನ 3.00 (ಭಾರತೀಯ ಕಾಲಮಾನ)
ಲೈವ್: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್



₹ 20 ಸಾವಿರ ಕೋಟಿ ಮೊತ್ತದ ಆರ್ಥಿಕ ಪ್ಯಾಕೇಜ್‌ಗೆ ಮನವಿ

'ಎರಡನೇ ಅಲೆಯಿಂದ 30 ಲಕ್ಷ ಉದ್ಯೋಗ ನಷ್ಟ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಸಾಂಕ್ರಾಮಿಕದ ಎರಡನೇ ಅಲೆಯಿಂದಾಗಿ ರಾಜ್ಯದಲ್ಲಿ ಅಂದಾಜು 30 ಲಕ್ಷ ಮಂದಿ ಉದ್ಯೋಗ ಕಳೆದುಕೊಂಡಿದ್ದಾರೆ ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಅಧ್ಯಕ್ಷ ಪೆರಿಕಲ್ ಎಂ. ಸುಂದರ್ ಗುರುವಾರ ಹೇಳಿದರು.

ಕೈಗಾರಿಕೆಗಳು, ಸಣ್ಣಪುಟ್ಟ ವ್ಯಾಪಾರಸ್ಥರು, ಮಾಲ್‌ಗಳು, ಅಂಗಡಿಗಳು ಸೇರಿದಂತೆ ಬೇರೆ ಬೇರೆ ವಾಣಿಜ್ಯ ವಲಯಗಳನ್ನು ಪರಿಗಣಿಸಿದರೆ ರಾಜ್ಯದಲ್ಲಿ ಈ ಪ್ರಮಾಣದ ಉದ್ಯೋಗ ನಷ್ಟ ಆಗಿದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಾಂಕ್ರಾಮಿಕದಿಂದಾಗಿ ರಾಜ್ಯದ ಉದ್ಯಮಗಳು ತೀವ್ರ ಸಂಕಷ್ಟಕ್ಕೆ ಸಿಲುಕಿವೆ. ಸಹಜ ಸ್ಥಿತಿಗೆ ಬರಲು ಕನಿಷ್ಠ ಎರಡು ವರ್ಷ ಬೇಕಾಗಲಿದೆ. ಹೀಗಾಗಿ ಕಿರು, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ (ಎಂಎಸ್‌ಎಂಇ) ₹ 20 ಸಾವಿರ ಕೋಟಿ ಮೊತ್ತದ ಆರ್ಥಿಕ ಪ್ಯಾಕೇಜ್ ಘೋಷಿಸುವಂತೆ ಮುಖ್ಯಮಂತ್ರಿಗೆ ಬೇಡಿಕೆ ಸಲ್ಲಿಸಲಾಗಿದೆ' ಎಂದರು.



ಪೆರಿಕಲ್ ಎಂ. ಸುಂದರ್

ಕಾರ್ಮಿಕರು ಕೆಲಸದ ಸ್ಥಳಕ್ಕೆ ಬರಲು ಅನುಕೂಲ ಆಗುವಂತೆ ಸಾರ್ವಜನಿಕ ಸಾರಿಗೆಯನ್ನು ಆರಂಭಿಸುವಂತೆ ಸರ್ಕಾರವನ್ನು ಮತ್ತೊಮ್ಮೆ ಒತ್ತಾಯಿಸಲಾಗಿದೆ ಎಂದರು.

'₹ 75 ಸಾವಿರ ಕೋಟಿ ನಷ್ಟ'

ರಾಜ್ಯದಲ್ಲಿ ತಿಂಗಳಿಗೆ ಸುಮಾರು ₹ 50 ಸಾವಿರ ಕೋಟಿ ಮೌಲ್ಯದ ವಾಣಿಜ್ಯ ವಹಿವಾಟು ನಡೆಯುತ್ತದೆ. ಕೋವಿಡ್ ಎರಡನೇ ಅಲೆ ನಿಯಂತ್ರಿಸಲು ರಾಜ್ಯದಲ್ಲಿ ಮೇ ಮತ್ತು ಜೂನ್ ತಿಂಗಳಿನಲ್ಲಿ ಲಾಕ್‌ಡೌನ್ ಜಾರಿಗೊಳಿಸಲಾಯಿತು. ಇದರಿಂದಾಗಿ ಕೈಗಾರಿಕೆ, ವಾಣಿಜ್ಯ ಮತ್ತು ವ್ಯಾಪಾರ ವಲಯವು ಸುಮಾರು ₹ 75 ಸಾವಿರ ಕೋಟಿ ಮೌಲ್ಯದ ವಹಿವಾಟು ನಷ್ಟ ಅನುಭವಿಸಿದೆ ಎಂದು ಸುಂದರ್ ತಿಳಿಸಿದರು.



ಮೈದುಂಬಿದ ನದಿ ಬೆಳಗಾವಿ ಜಿಲ್ಲೆಯ ಖಾನಾಪುರ ತಾಲ್ಲೂಕಿನಲ್ಲಿ ಉತ್ತಮ ಮಳೆಯಾಗುತ್ತಿರುವ ಪರಿಣಾಮ ಮಲಪ್ರಭಾ ನದಿ ಮೈದುಂಬಿ ಹರಿಯುತ್ತಿದ್ದು ಎಂ.ಕೆ. ಹುಬ್ಬಳ್ಳಿ ಸಮೀಪದ ಶರಣೆ ಗಂಗಾಂಬಿಕಾ ಐಕ್ಯಮಂಟಪ ಗುರುವಾರ ಕಂಡು ಬಂದಿದ್ದು ಹೀಗೆ

ಒಳ ಪುಟಗಳು



ಜಲಾಶಯಗಳ ಒಳಹರಿವು ಹೆಚ್ಚಳ 8
ಗ್ರಾಮೀಣ ಭಾರತಕ್ಕೆ ಗೂಗಲ್ ನೆರವು: ₹113 ಕೋಟಿ ದೇಣಿಗೆ ಘೋಷಣೆ 9

ರಾಜ್ಯ ಕೋವಿಡ್ ಅಂಕಿ-ಅಂಶ

27,90,338 ▲	ಒಟ್ಟು ಸೋಂಕಿತರು (27,84,355 ನಿನ್ನೆಯ ವಿವರ)
1,46,726 ▼	ಸಕ್ರಿಯ ಪ್ರಕರಣಗಳು
26,10,157 ▲	ಗುಣಮುಖರಾದವರು
33,434 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	5,983 ▼
ಗುಣಮುಖ	10,685 ▼
ಸಾವು	138 ▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಇಂದಿನ ಪಾಡ್‌ಕಾಸ್ಟ್ ವಿಶೇಷ
ಕಥೆ ಕೇಳು ಮಗುವೆ ಸಿನಿಮಾ ಮ್ಯಾಟಿನಿ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ
ಪ್ರಕಾಶ್ ಶೆಟ್ಟಿ



ಟೂಲ್‌ಕಿಟ್ ಪ್ರಕರಣ: ಬೆಂಗಳೂರಿಗೆ ಭೇಟಿ ಕೊಟ್ಟಿದ್ದ ದೆಹಲಿ ಪೊಲೀಸರು

ಪೊಲೀಸರಿಂದ ಟ್ವಿಟರ್ ಎಂ.ಡಿ ವಿಚಾರಣೆ

ನವದೆಹಲಿ (ಪಿಟಿಐ): ಕೋವಿಡ್ ಟೂಲ್‌ಕಿಟ್ ಪ್ರಕರಣಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣ, ಟ್ವಿಟರ್ ಸಂಸ್ಥೆಯ ಭಾರತದ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ದಿನೇಶ್ ಮಹೇಶ್ವರಿ ಅವರನ್ನು ದೆಹಲಿ ಪೊಲೀಸರು ಕಳೆದ ತಿಂಗಳು ವಿಚಾರಣೆ ನಡೆಸಿದ್ದರು.

ವಿಚಾರಣೆ ಬಗ್ಗೆ ಪೊಲೀಸರು ಹೆಚ್ಚಿನ ಮಾಹಿತಿ ನೀಡಿಲ್ಲ. ಆದರೆ, ಟ್ವಿಟರ್ ಬಳಕೆದಾರರ ಟ್ವೀಟ್‌ಗಳಿಗೆ 'ತಿರುಚಿದ ಮಾಹಿತಿ' ಎಂಬ ಹಣೆಪಟ್ಟಿ ಹಚ್ಚುವ ಕಂಪನಿಯ ನೀತಿಯ ಬಗ್ಗೆ ಪೊಲೀಸರು ಪ್ರಶ್ನಿಸಿದ್ದಾರೆ ಎನ್ನಲಾಗಿದೆ. ಬಿಜೆಪಿ ಮುಖಂಡ ಸಂಬಿತ್ ಪಾತ್ರಾ ಅವರು ಇತ್ತೀಚೆಗೆ ಮಾಡಿದ್ದ ಟ್ವೀಟ್‌ಗೆ ಟ್ವಿಟರ್ ಸಂಸ್ಥೆಯು ಈ ರೀತಿಯ ಹಣೆಪಟ್ಟಿ ಬಳಸಿತ್ತು.

ಟೂಲ್‌ಕಿಟ್ ಪ್ರಕರಣದ ತನಿಖೆ ನಡೆಸುತ್ತಿರುವ ದೆಹಲಿ ಪೊಲೀಸರ ವಿಶೇಷ ತಂಡವು ಮಹೇಶ್ವರಿ ಅವರನ್ನು ವಿಚಾರಣೆ ನಡೆಸುವ ಸಲುವಾಗಿ ಮೇ 31ರಂದು ಬೆಂಗಳೂರಿಗೆ ತೆರಳಿತ್ತು ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ಎಫ್‌ಐಆರ್ ಹಿಂಪಡೆಯಲು ಒತ್ತಾಯ

ಮುಸ್ಲಿಂ ವ್ಯಕ್ತಿಯೊಬ್ಬರ ವಿಡಿಯೊ ಹಂಚಿಕೊಂಡ ಕಾರಣಕ್ಕೆ ಉತ್ತರ ಪ್ರದೇಶದ ಸುದ್ದಿಸಂಸ್ಥೆ ಮತ್ತು ಕೆಲವು ಪತ್ರಕರ್ತರ ವಿರುದ್ಧ ಎಫ್‌ಐಆರ್ ದಾಖಲಿಸಿರುವುದನ್ನು ಸಂಪಾದಕರ ಕೂಟ (ಇಜಿಐ) ಖಂಡಿಸಿದ್ದು, ದೂರು ಹಿಂಪಡೆಯುವಂತೆ ಒತ್ತಾಯಿಸಿದೆ.

ವಯಸ್ಸಾದ ಮುಸ್ಲಿಂ ವ್ಯಕ್ತಿಯ ಮೇಲೆ ಹಲ್ಲೆ ನಡೆಸಲಾಗಿದೆ ಎಂದು ಟ್ವೀಟ್ ಮಾಡಿದ್ದಕ್ಕಾಗಿ 'ದಿ ವೈರ್' ಮತ್ತು ಹಲವಾರು ಪತ್ರಕರ್ತರ ವಿರುದ್ಧ ಉತ್ತರ ಪ್ರದೇಶ ಸರ್ಕಾರ ಎಫ್‌ಐಆರ್ ಹಾಕಿದೆ.

ಟ್ವಿಟರ್ ಐಎನ್‌ಸಿ, ಟ್ವಿಟರ್ ಕಮ್ಯುನಿಕೇಷನ್ಸ್ ಇಂಡಿಯಾ, ದಿ ವೈರ್ ನ್ಯೂಸ್ ಪೋರ್ಟಲ್, ಪತ್ರಕರ್ತರಾದ ಮೊಹಮ್ಮದ್ ಜುಬೈರ್, ರಾಣಾ ಅಯೂಬ್, ಸಬಾ ನಖ್ವಿ ಮತ್ತು ಕಾಂಗ್ರೆಸ್ ಮುಖಂಡರಾದ ಸಲ್ಮಾನ್ ನಿಜಾಮಿ, ಮಸ್ಕೂರ್ ಉಸ್ಮಾನಿ ಮತ್ತು ವಿಡಿಯೊವನ್ನು ಸಾಮಾಜಿಕ ಜಾಲತಾಣದಲ್ಲಿ ಹಂಚಿಕೊಂಡ ಸಾಮ ಮೊಹಮ್ಮದ್ ವಿರುದ್ಧ ಪ್ರಕರಣ ದಾಖಲಾಗಿದೆ.

ಇನ್ನಷ್ಟು ಸುದ್ದಿಗಳು 7

ಸತ್ಯ ನಾದೆಲ್ಲ ಮೈಕ್ರೊಸಾಫ್ಟ್ ಅಧ್ಯಕ್ಷ

ನ್ಯೂಯಾರ್ಕ್ (ಪಿಟಿಐ): ಮೈಕ್ರೊಸಾಫ್ಟ್ ಕಂಪನಿಯ ಮುಖ್ಯ ಕಾರ್ಯ ನಿರ್ವಹಣಾ ಅಧಿಕಾರಿ (ಸಿಇಒ), ಭಾರತ ಸಂಜಾತ ಸತ್ಯ ನಾದೆಲ್ಲ ಅವರನ್ನು ಕಂಪನಿಯ ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ. ಇದು, ಅವರಿಗೆ ನೀಡಿರುವ ಹೆಚ್ಚುವರಿ ಜವಾಬ್ದಾರಿ. ಕಂಪನಿಯ ಆಡಳಿತ ಮಂಡಳಿಯ ಸ್ವತಂತ್ರ ನಿರ್ದೇಶಕರು ನಾದೆಲ್ಲ ಅವರನ್ನು ಅಧ್ಯಕ್ಷರನ್ನಾಗಿ ಸರ್ವಾನುಮತದಿಂದ ಆಯ್ಕೆ ಮಾಡಿದ್ದಾರೆ ಎಂದು ಮೈಕ್ರೊಸಾಫ್ಟ್ ಕಾರ್ಪೊರೇಷನ್ ತಿಳಿಸಿದೆ.



ಈಗ ಕಂಪನಿಯ ಅಧ್ಯಕ್ಷರಾಗಿರುವ ಜಾನ್ ಡಬ್ಲ್ಯು. ಥಾಮ್ಸನ್ ಅವರನ್ನು ಮುಖ್ಯ ಸ್ವತಂತ್ರ ನಿರ್ದೇಶಕರಾಗಿ ಸರ್ವಾನುಮತದಿಂದ ಆಯ್ಕೆ ಮಾಡಲಾಗಿದೆ. ಅವರು 2012ರಿಂದ 2014ರ ಅವಧಿಯಲ್ಲಿ ಮುಖ್ಯ ಸ್ವತಂತ್ರ ನಿರ್ದೇಶಕ ಆಗಿ ಕರ್ತವ್ಯ ನಿಭಾಯಿಸಿದ್ದರು.

ವ್ಯವಹಾರದ ಬಗ್ಗೆ ಹೆಚ್ಚಿನ ಅರಿವು ಹೊಂದಿರುವ ನಾದೆಲ್ಲ, ಪ್ರಮುಖ ಸಮಸ್ಯೆಗಳನ್ನು ಗುರುತಿಸಿ ಅವುಗಳನ್ನು ನಿವಾರಿಸುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸಲಿದ್ದಾರೆ ಎಂದು ಕಂಪನಿಯು ಪ್ರಕಟಣೆಯಲ್ಲಿ ತಿಳಿಸಿದೆ.

ಖಾದ್ಯತೈಲ: ಸುಂಕ ಇಳಿಕೆ ಇಲ್ಲ

ನವದೆಹಲಿ/ಮುಂಬೈ (ರಾಯಿಟರ್ಸ್): ಖಾದ್ಯತೈಲಗಳ ಮೇಲಿನ ಆಮದು ಸುಂಕವನ್ನು ತಗ್ಗಿಸುವ ಪ್ರಸ್ತಾವವನ್ನು ಕೇಂದ್ರ ಸರ್ಕಾರವು ತಡೆಹಿಡಿದಿದೆ. ಗರಿಷ್ಠ ಮಟ್ಟ ತಲುಪಿದ್ದ ಖಾದ್ಯ ತೈಲಗಳ ಬೆಲೆಯು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇಳಿಕೆ ಆಗುತ್ತಿರುವ ಕಾರಣ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದೇಶಿ ಸೋಯಾ ಎಣ್ಣೆ, ಪಾಮ್ ಎಣ್ಣೆ ಬೆಲೆಯು ಒಂದು ವರ್ಷದಲ್ಲಿ ಭಾರಿ ಏರಿಕೆ ಕಂಡ ನಂತರ ಆಮದು ಸುಂಕ ತಗ್ಗಿಸುವ ಪರಿಶೀಲನೆ ನಡೆದಿತ್ತು. 'ಈಗ ಸುಂಕವನ್ನು ತಗ್ಗಿಸುತ್ತಿಲ್ಲ. ಸುಂಕವನ್ನು ತಗ್ಗಿಸುವುದು ಸುಸ್ಥಿರವಾದ ಪರಿಹಾರ ಅಲ್ಲ' ಎಂದು ಅಧಿಕಾರಿಯೊಬ್ಬರು ಹೆಸರು ಬಹಿರಂಗಪಡಿಸಬಾರದು ಎಂಬ ಷರತ್ತಿನೊಂದಿಗೆ ತಿಳಿಸಿದರು.

'ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿನ ಬೆಲೆ ಹಾಗೂ ಜಾಗತಿಕ ಪೂರೈಕೆ ವ್ಯವಸ್ಥೆಯನ್ನು ಗಮನಿಸಲಾಗುತ್ತಿದೆ. ಸಂದರ್ಭ ಎದುರಾದಲ್ಲಿ, ರೈತರ ಹಾಗೂ ಗ್ರಾಹಕರ ಹಿತವನ್ನು ಗಮನದಲ್ಲಿ ಇರಿಸಿಕೊಂಡು ಸುಂಕ ತಗ್ಗಿಸುವ ಪ್ರಸ್ತಾವವನ್ನು ಮತ್ತೆ ಮುನ್ನೆಲೆಗೆ ತರಲಾಗುತ್ತದೆ' ಎಂದು ಮೂಲಗಳು ತಿಳಿಸಿವೆ.

ಜಾಮೀನು ಸಿಕ್ಕವರನ್ನು ಜೈಲಿನಲ್ಲಿ ಇರಿಸುವುದು ಸರಿಯಲ್ಲ: ಹೈಕೋರ್ಟ್

ಜೈಲಿನಿಂದ ಬಿಡುಗಡೆಯಾದ ಆಸಿಫ್, ದೇವಾಂಗನಾ, ನತಾಶಾ

ನವದೆಹಲಿ (ಪಿಟಿಐ): ಇದೇ 15ರಂದು ಜಾಮೀನು ಮಂಜೂರಾಗಿದ್ದ ಜಾಮಿಯಾ ವಿದ್ಯಾರ್ಥಿ ಆಸಿಫ್ ಇಕ್ಬಾಲ್ ತನ್ಹಾ, ಜೆಎನ್‌ಯು ವಿದ್ಯಾರ್ಥಿಗಳಾದ ದೇವಾಂಗನಾ ಕಾಲಿತಾ ಮತ್ತು ನತಾಶಾ ನರ್ವಾಲ್ ಅವರನ್ನು ತಕ್ಷಣವೇ ಬಿಡುಗಡೆ ಮಾಡಲು ವಿಚಾರಣಾ ನ್ಯಾಯಾಲಯ ಆದೇಶಿಸಿರುವುದು ಅತ್ಯುತ್ತಮವಾಗಿದೆ ಎಂದು ದೆಹಲಿ ಹೈಕೋರ್ಟ್ ನ್ಯಾಯಮೂರ್ತಿಗಳಾದ ಸಿದ್ಧಾರ್ಥ ಮೃದುಲ್ ಮತ್ತು ಅನೂಪ್ ಜೈರಾಜ್ ಭಂಭಾನಿ ಅವರ ಪೀಠವು ಗುರುವಾರ ಹೇಳಿದೆ.

ಜಾಮೀನು ದೊರೆತ ವ್ಯಕ್ತಿಗಳನ್ನು ಜೈಲಿನಲ್ಲಿಯೇ ಇರಿಸುವುದಕ್ಕೆ ದಾಖಲೆಗಳ ದೃಢೀಕರಣ ಪ್ರಕ್ರಿಯೆ ವಿಳಂಬವಾಗಿದೆ ಎಂಬುದು ಸಮಂಜಸ ಕಾರಣ ಅಲ್ಲ ಎಂದು ಹೈಕೋರ್ಟ್ ಹೇಳಿದೆ.

ದೆಹಲಿಯಲ್ಲಿ ನಡೆದ ಕೋಮು ಗಲಭೆಗೆ ಸಂಬಂಧಿಸಿ ಈ ಮೂವರನ್ನು ಕಳೆದ ವರ್ಷದ ಮೇಯಲ್ಲಿ ಬಂಧಿಸಲಾಗಿತ್ತು. ತಕ್ಷಣವೇ ಬಿಡುಗಡೆ ಮಾಡಬೇಕು ಎಂದು ವಿಚಾರಣಾ ನ್ಯಾಯಾಲಯ ನೀಡಿದ ಸೂಚನೆಯಂತೆ ಆರೋಪಿಗಳನ್ನು ಬಿಡುಗಡೆ ಮಾಡಲಾಯಿತು.

ದೆಹಲಿ ಹೈಕೋರ್ಟ್ ಈ ಮೂವರಿಗೆ ಮಂಗಳವಾರವೇ ಜಾಮೀನು ಮಂಜೂರು ಮಾಡಿತ್ತು. ಆದರೆ, ಆರೋಪಿಗಳ ವಿಳಾಸ ಮತ್ತು ಭದ್ರತಾ ಖಾತರಿಯ ಪರಿಶೀಲನೆ ಪೂರ್ಣಗೊಂಡಿಲ್ಲ ಎಂಬ ಕಾರಣಕ್ಕೆ ಬಿಡುಗಡೆ ವಿಳಂಬವಾಗಿತ್ತು.

ಹಾಗಾಗಿ, ತಕ್ಷಣವೇ ಬಿಡುಗಡೆಗೆ ಆದೇಶಿಸಬೇಕು ಎಂದು ವಿಚಾರಣಾ ನ್ಯಾಯಾಲಯಕ್ಕೆ ಆರೋಪಿಗಳು ಬುಧವಾರ ಮನವಿ ಮಾಡಿಕೊಂಡಿದ್ದರು. ವಿಚಾರಣಾ ನ್ಯಾಯಾಲಯವು ಈ ಮನವಿಯ ವಿಚಾರಣೆಯನ್ನು ಗುರುವಾರಕ್ಕೆ ಮುಂದೂಡಿದ ಕಾರಣ, ಆರೋಪಿಗಳು ಹೈಕೋರ್ಟ್‌ಗೆ ಅರ್ಜಿ ಹಾಕಿದ್ದರು.

'ಭಿನ್ನಮತವನ್ನು ದಮನಿಸುವ ಕಾತರದಲ್ಲಿ ಪ್ರಭುತ್ವವು ಪ್ರತಿಭಟನೆ ಮತ್ತು ಭಯೋತ್ಪಾದನಾ ಚಟುವಟಿಕೆಯ ನಡುವಣ ಗೆರೆಯನ್ನು ಮಸುಕಾಗಿಸಿದೆ' ಎಂದು ಹೈಕೋರ್ಟ್, ಜಾಮೀನು ಮಂಜೂರು ಮಾಡಿದ ಸಂದರ್ಭದಲ್ಲಿ ಹೇಳಿತ್ತು. ಆರೋಪಿಗಳ ಅರ್ಜಿಗೆ ಸಂಬಂಧಿಸಿ ತ್ವರಿತವಾಗಿ ಕ್ರಮ ಕೈಗೊಳ್ಳುವಂತೆ ವಿಚಾರಣಾ ನ್ಯಾಯಾಲಯಕ್ಕೆ ಹೈಕೋರ್ಟ್ ಗುರುವಾರ ಬೆಳಿಗ್ಗೆ ಸೂಚಿಸಿತ್ತು.

'ಸುಪ್ರೀಂ' ವಿಚಾರಣೆ ಇಂದು

ದೇವಾಂಗನಾ ಕಾಲಿತಾ, ನತಾಶಾ ನರ್ವಾಲ್ ಮತ್ತು ಆಸಿಫ್ ಇಕ್ಬಾಲ್ ತನ್ಹಾ ಅವರಿಗೆ ದೆಹಲಿ ಹೈಕೋರ್ಟ್ ಜಾಮೀನು ನೀಡಿದ್ದನ್ನು ಪ್ರಶ್ನಿಸಿ ದೆಹಲಿ ಪೊಲೀಸರು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿರುವ ಅರ್ಜಿಯ ವಿಚಾರಣೆ ಶುಕ್ರವಾರ ನಡೆಯಲಿದೆ.

ಪರೀಕ್ಷೆಗೆ ಪರ್ಯಾಯವಾಗಿ ಮೌಲ್ಯಮಾಪನ ನಡೆಸಲಿವೆ ಸಿಬಿಎಸ್‌ಇ, ಐಸಿಎಸ್‌ಇ

ಜುಲೈ 31ರೊಳಗೆ ಸಿಬಿಎಸ್‌ಇ 12ರ ಫಲಿತಾಂಶ

ನವದೆಹಲಿ (ಪಿಟಿಐ): ಕೇಂದ್ರೀಯ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ (ಸಿಬಿಎಸ್‌ಇ) ಮತ್ತು ಐಸಿಎಸ್‌ಇ ಪಠ್ಯಕ್ರಮದ 12ನೇ ತರಗತಿಯ ಅಂತಿಮ ಫಲಿತಾಂಶವನ್ನು ಜುಲೈ 31ರೊಳಗೆ ಪ್ರಕಟಿಸುತ್ತೇವೆ ಎಂದು ಎರಡೂ ಮಂಡಳಿಗಳು ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿವೆ. ಈ ಎರಡೂ ಮಂಡಳಿಗಳು ಸಿದ್ಧಪಡಿಸಿರುವ ಮೌಲ್ಯಮಾಪನ ವಿಧಾನಕ್ಕೆ ಸುಪ್ರೀಂ ಕೋರ್ಟ್ ಒಪ್ಪಿಗೆ ನೀಡಿದೆ.

'10, 11 ಮತ್ತು 12ನೇ ತರಗತಿಯಲ್ಲಿನ ಅಂಕಗಳ ಆಧಾರದಲ್ಲಿ 12ನೇ ತರಗತಿಯ ಅಂತಿಮ ಫಲಿತಾಂಶ ನಿರ್ಧರಿಸಲಾಗುವುದು' ಎಂದು ಸಿಬಿಎಸ್‌ಇ ಮಾಹಿತಿ ನೀಡಿದೆ. 'ಐಸಿಎಸ್‌ಇ ಪಠ್ಯಕ್ರಮದ 12ನೇ ತರಗತಿಯ ಅಂತಿಮ ಅಂಕಗಳನ್ನು ಹಿಂದಿನ 6 ವರ್ಷಗಳ ಅಂಕಗಳ ಆಧಾರದಲ್ಲಿ ನೀಡುತ್ತೇವೆ' ಎಂದು ಐಸಿಎಸ್‌ಇ ಮಂಡಳಿ ಮಾಹಿತಿ ನೀಡಿದೆ.

ಸಿಬಿಎಸ್‌ಇ ಮತ್ತು ಐಸಿಎಸ್‌ಇ 12ನೇ ತರಗತಿಯ ಅಂತಿಮ ಪರೀಕ್ಷೆಗಳನ್ನು ರದ್ದುಪಡಿಸಲು ನಿರ್ದೇಶನ ನೀಡಿ ಎಂದು ಕೋರಿ ಸಲ್ಲಿಸಲಾಗಿದ್ದ ಅರ್ಜಿಗಳ ವಿಚಾರಣೆ ವೇಳೆ ಎರಡೂ ಮಂಡಳಿಗಳು ಈ ಮಾಹಿತಿ ನೀಡಿವೆ. ಎರಡೂ ಮಂಡಳಿಗಳು ಈ ಹಿಂದೆಯೇ 12ನೇ ತರಗತಿ ಪರೀಕ್ಷೆಗಳನ್ನು ರದ್ದುಪಡಿಸಿದ್ದವು. ಆದರೆ ಅಂತಿಮ ಪರೀಕ್ಷೆಯ ಫಲಿತಾಂಶವನ್ನು ಹೇಗೆ ನೀಡುತ್ತೀರಿ ಎಂಬುದನ್ನು ವಿವರಿಸಿ ಎಂದು ಈ ಹಿಂದಿನ ವಿಚಾರಣೆ ವೇಳೆ ಸುಪ್ರೀಂ ಕೋರ್ಟ್ ಪೀಠವು ಸೂಚಿಸಿತ್ತು. ಈ ಪ್ರಕಾರ ಎರಡೂ ಮಂಡಳಿಗಳು ಅಂಕ ನೀಡಿಕೆ ಮತ್ತು ಮೌಲ್ಯಮಾಪನ ಪ್ರಕ್ರಿಯೆಯ ವಿವರಗಳನ್ನು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿವೆ.

10, 11 ಮತ್ತು 12ನೇ ತರಗತಿಯ ಥಿಯರಿ ಪರೀಕ್ಷೆಗಳ ಅಂಕಗಳನ್ನು ಕ್ರಮವಾಗಿ 30:30:40ರ ಅನುಪಾತದಲ್ಲಿ ಪರಿಗಣಿಸಿ, 12ನೇ ತರಗತಿಯ ಅಂಕಗಳನ್ನು ನಿಗದಿ ಮಾಡಲಾಗುವುದು. 12ನೇ ತರಗತಿಯ ಪ್ರಾಯೋಗಿಕ ಪರೀಕ್ಷೆಯ ಅಂಕಗಳನ್ನು ಯಥಾವತ್ತಾಗಿ ಪರಿಗಣಿಸಲಾಗುವುದು ಎಂದು ಸಿಬಿಎಸ್‌ಇ ವಿವರಿಸಿದೆ.

'7ರಿಂದ 12ನೇ ತರಗತಿವರೆಗಿನ ವಿವಿಧ ಪರೀಕ್ಷೆಗಳ ಅಂಕಗಳನ್ನು ಪರಿಗಣಿಸಿ 12ನೇ ತರಗತಿಯ ಅಂತಿಮ ಫಲಿತಾಂಶವನ್ನು ಪ್ರಕಟಿಸುತ್ತೇವೆ' ಎಂದಷ್ಟೇ ಸಿಐಎಸ್‌ಸಿಇ ವಿವರ ಸಲ್ಲಿಸಿದೆ.

ಇನ್ನಷ್ಟು ಸುದ್ದಿಗಳು 9

ಪಿಯುಸಿ ಫಲಿತಾಂಶಕ್ಕೆ ತಡೆ

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆ ತೆಗೆದುಕೊಂಡಿರುವ ಎಲ್ಲಾ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟು ನಿರ್ಧಾರ ಕೈಗೊಳ್ಳುವ ತನಕ ಫಲಿತಾಂಶ ಪ್ರಕಟಿಸದಂತೆ ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ನಿರ್ದೇಶನ ನೀಡಿದೆ.



'ಮೊದಲ ಬಾರಿಗೆ ಪರೀಕ್ಷೆ ಬರೆಯುವವರಿಗೆ ಪರೀಕ್ಷೆ ನಡೆಸದೆ, ಪುನರಾವರ್ತಿತ ವಿದ್ಯಾರ್ಥಿಗಳು ಮಾತ್ರ ಪರೀಕ್ಷೆಗೆ ಹಾಜರಾಗಬೇಕು ಎಂಬುದು ತಾರತಮ್ಯ ಆಗಲಿದೆ' ಎಂದು ಜ್ಞಾನಮಂದಿರ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಎಸ್.ವಿ. ಶ್ರೀನಿವಾಸಗೌಡ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಬಿ.ವಿ. ನಾಗರತ್ನಾ ನೇತೃತ್ವದ ವಿಭಾಗೀಯ ಪೀಠ ವಿಚಾರಣೆ ನಡೆಸಿತು.

'ವಿವಿಧ ವರ್ಗದ ಅಭ್ಯರ್ಥಿಗಳ ಸಮಸ್ಯೆ ಪರಿಶೀಲಿಸಲು ತಜ್ಞರ ಸಮಿತಿ ರಚಿಸಲಾಗಿದೆ. ಖಾಸಗಿ ವಿದ್ಯಾರ್ಥಿಗಳು ಪ್ರಥಮ ಪಿಯುಸಿ ಅಧ್ಯಯನ ಮಾಡದೆ ನೇರವಾಗಿ ದ್ವಿತೀಯ ಪಿಯು ಪರೀಕ್ಷೆ ತೆಗೆದುಕೊಂಡಿದ್ದಾರೆ. ಅವರನ್ನು ಉತ್ತೀರ್ಣ ಮಾಡಲು ಪ್ರಥಮ ಪಿಯುಸಿ ಪರೀಕ್ಷೆಯಲ್ಲಿ ಪಡೆದ ಅಂಕಗಳಿಲ್ಲ. ಹೀಗಾಗಿ, ಪರೀಕ್ಷೆ ಬರೆಯಬೇಕಾಗುತ್ತದೆ' ಎಂದು ಸರ್ಕಾರಿ ವಕೀಲರು ವಾದಿಸಿದರು.

'ಪ್ರಥಮ ಪಿಯು ಅಂಕಪಟ್ಟಿ ಇರುವ ವಿದ್ಯಾರ್ಥಿಗಳನ್ನು ಹೊಸ ವಿದ್ಯಾರ್ಥಿಗಳಿಗೆ ಸಮಾನವಾಗಿ ಪರಿಗಣಿಸಬಹುದು' ಎಂದು ಪೀಠ ಹೇಳಿತು.

ನೌಕರಿ ಆಮಿಷ: ಯುವತಿಗೆ ವಂಚನೆ

ಕೆಜಿಎಫ್: ನೌಕರಿ ಕೊಡಿಸುವುದಾಗಿ ಹೇಳಿ ಮೊಬೈಲ್ ಮೂಲಕ ಮಾಹಿತಿ ಪಡೆದ ವಂಚಕನೊಬ್ಬ ಯುವತಿಗೆ ₹ 28 ಸಾವಿರ ರೂಪಾಯಿ ವಂಚನೆ ಮಾಡಿದ ಪ್ರಕರಣ ನಡೆದಿದೆ. ರಾಬರ್ಟಸನ್‌ಪೇಟೆಯ ಶಂಕರಿ ಎಂಬುವವರ ಮೊಬೈಲ್‌ಗೆ ಮಂಗಳವಾರ ಕರೆ ಮಾಡಿ, ನೌಕರಿ ಡಾಟ್ ಕಾಂನಿಂದ ಕರೆ ಮಾಡುತ್ತಿರುವುದಾಗಿ ಹೇಳಿ ಬ್ಯಾಂಕ್ ಖಾತೆ ವಿವರ ಪಡೆದು ವಂಚಿಸಿದ್ದಾನೆ. ಸೈಬರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೇಲ್ಸೇತುವೆಗೆ ಉದ್ಯಾನದ ಜಾಗ ಸ್ವಾಧೀನ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಶಿವಾನಂದ ವೃತ್ತದ ಬಳಿ ಮೇಲ್ಸೇತುವೆ ನಿರ್ಮಾಣಕ್ಕಾಗಿ ಕುಮಾರ ಪಾರ್ಕ್‌ನ ಜಾಗವನ್ನೂ ಸ್ವಾಧೀನಪಡಿಸಿಕೊಳ್ಳುವ ಪ್ರಯತ್ನಗಳು ನಡೆಯುತ್ತಿವೆ ಎಂದು ಶೇಷಾದ್ರಿಪುರ ಸುತ್ತಮುತ್ತಲಿನ ನಿವಾಸಿಗಳು ದೂರಿದ್ದಾರೆ.

'ವರ್ಷದಿಂದ ಆಮೆಗತಿಯಲ್ಲಿ ನಡೆಯುತ್ತಿರುವ ಕಾಮಗಾರಿಯಿಂದ ಆಗಲೇ ಹೈರಾಣಾಗಿದ್ದೇವೆ. ಆದರೆ, ಮೇಲ್ಸೇತುವೆ ನಿರ್ಮಾಣದ ನೆಪದಲ್ಲಿ ಕುಮಾರ ಪಾರ್ಕ್‌ನ ಜಾಗವನ್ನೂ ಒತ್ತುವರಿ ಮಾಡಿಕೊಳ್ಳಲಾಗುತ್ತಿದೆ. ಯೋಜನೆಗಾಗಿ ಉದ್ಯಾನದ ಸ್ಥಳವನ್ನೂ ಸ್ವಾಧೀನಪಡಿಸಿಕೊಳ್ಳಬಹುದು' ಎಂದು ಸ್ಥಳೀಯರು ಅನುಮಾನ ವ್ಯಕ್ತಪಡಿಸಿದ್ದಾರೆ.

'ಉದ್ಯಾನದ ಸುತ್ತ ಹಾಕಿದ್ದ ಮುಳ್ಳಿನ ತಂತಿಯನ್ನು ತೆಗೆದು ಹಾಕಲಾಗಿದೆ. ಸುತ್ತ ಬೆಳೆದಿದ್ದ ಬಿದಿರನ್ನೂ ತೆಗೆದು ಹಾಕಲಾಗುತ್ತಿದೆ. ಉದ್ಯಾನದ ಸುತ್ತ ಇರುವ ಮರ–ಗಿಡಗಳನ್ನೂ ಕಡಿಯಲಾಗುತ್ತಿದೆ' ಎಂದು ಸ್ಥಳೀಯರಾದ ಭಗವಾನ್‌ದಾಸ್ ರಾವ್ ಹೇಳಿದರು.



ನಗರದ ಶಿವಾನಂದ ವೃತ್ತದ ಬಳಿ ಮೇಲ್ಸೇತುವೆಗಾಗಿ ಕುಮಾರ ಪಾರ್ಕ್ ಬಳಿಯ ಬೃಹತ್ ಮರ ಮತ್ತು ಬಿದಿರುಗಳನ್ನು ಕತ್ತರಿಸುತ್ತಿರುವುದು ಪ್ರಜಾವಾಣಿ ಚಿತ್ರ

'ಈ ಬಗ್ಗೆ ಸ್ಥಳೀಯರಿಗೆ ಮಾಹಿತಿಯನ್ನೇ ನೀಡಿಲ್ಲ. ಉದ್ಯಾನದ ಜಾಗವನ್ನು ಸ್ವಾಧೀನ ಪಡಿಸುವ ಬಗ್ಗೆಯೂ ಸಾರ್ವಜನಿಕವಾಗಿ ಮಾಹಿತಿ ನೀಡಿಲ್ಲ. ಈ ಉದ್ಯಾನಕ್ಕೆ ಹಲವರು ಬೆಳಿಗ್ಗೆ ವಾಯುವಿಹಾರಕ್ಕೆ ಬರುತ್ತಾರೆ. ಹಿರಿಯ ನಾಗರಿಕರೇ ಹೆಚ್ಚಿನ ಸಂಖ್ಯೆಯಲ್ಲಿರುತ್ತಾರೆ' ಎಂದರು.

'ಈ ಮೇಲ್ಸೇತುವೆಗಾಗಿ ಈಗಾಗಲೇ ಹಲವಾರು ಮರಗಳನ್ನು ಕಳೆದುಕೊಂಡಿದ್ದೇವೆ. ಈಗ ಈ ಉದ್ಯಾನದ ಸ್ಥಳವನ್ನೂ ವಶಪಡಿಸಿಕೊಳ್ಳಲು ನಾವು ಅವಕಾಶ ನೀಡುವುದಿಲ್ಲ' ಎಂದರು.

'ತಂತಿ ಬೇಲಿಯನ್ನು ಎರಡರಿಂದ–ಮೂರು ಮೀಟರ್‌ನಷ್ಟು ಹಿಂದಕ್ಕೆ ಸರಿಸಲಾಗುತ್ತದೆಯಷ್ಟೇ. ಉದ್ಯಾನದೊಳಗೆ ಯಾವುದೇ ಬದಲಾವಣೆ ಮಾಡುವುದಿಲ್ಲ' ಎಂದು ಬಿಬಿಎಂಪಿಯ ಮುಖ್ಯ ಎಂಜಿನಿಯರ್ (ರಸ್ತೆ ಮೂಲಸೌಕರ್ಯ) ಎಂ. ಲೋಕೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

ಆದರೆ, ಇದಕ್ಕೆ ವಿಭಿನ್ನವಾಗಿ ಪ್ರತಿಕ್ರಿಯಿಸಿದ ಬಿಬಿಎಂಪಿಯ ಕಿರಿಯ ಎಂಜಿನಿಯರ್ ಒಬ್ಬರು, 'ಮೇಲ್ಸೇತುವೆಯ ಯೋಜನೆ ಅಥವಾ ನಕ್ಷೆಗೆ ಅನುಗುಣವಾಗಿ ತಂತಿ ಬೇಲಿಯನ್ನು ಪುನರ್ ನಿರ್ಮಾಣ ಮಾಡಲಾಗುವುದು' ಎಂದರು.

ಆಮೆಗತಿ: ಮೇಲ್ಸೇತುವೆ ನಿರ್ಮಾಣ ಈಗಾಗಲೇ ಪೂರ್ಣಗೊಳ್ಳಬೇಕಿತ್ತು. ಆದರೆ, ಹಲವು ಕಾರಣಗಳಿಂದ ಗಡುವು ಮುಂದೂಡುತ್ತಲೇ ಬಂದಿದೆ. ಕಳೆದ ವಾರ ಸ್ಥಳಕ್ಕೆ ಭೇಟಿ ನೀಡಿದ್ದ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ, ತಿಂಗಳೊಳಗೆ ಕಾಮಗಾರಿಯನ್ನು ಪೂರ್ಣಗೊಳಿಸಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಿದ್ದರು. ಅಧಿಕಾರಿಗಳು ಒಂದೂವರೆ ತಿಂಗಳು ಸಮಯ ಕೇಳಿದ್ದು, ಜುಲೈ ಅಂತ್ಯದ ವೇಳೆಗೆ ಕಾಮಗಾರಿ ಮುಕ್ತಾಯವಾಗುವ ನಿರೀಕ್ಷೆ ಇದೆ.

ಆನ್‌ಲೈನ್ ಹೂಡಿಕೆ: ₹ 5.42 ಲಕ್ಷ ವಂಚನೆ

ಬೆಂಗಳೂರು: ಆನ್‌ಲೈನ್ ಜಾಲತಾಣಗಳಲ್ಲಿ ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ಗಳಿಸಬಹುದೆಂದು ನಂಬಿಸಿ ನಗರದ ನಿವಾಸಿಗಳಿಬ್ಬರಿಂದ ₹ 5.42 ಲಕ್ಷ ಪಡೆದು ವಂಚಿಸಲಾಗಿದೆ.

'ವಂಚನೆ ಬಗ್ಗೆ ವೈಟ್‌ಫೀಲ್ಡ್ ಹಾಗೂ ಉತ್ತರ ವಿಭಾಗಗಳ ಸೈಬರ್ ಕ್ರೈಂ ಠಾಣೆಗಳಲ್ಲಿ ಪ್ರತ್ಯೇಕ ಎಫ್‌ಐಆರ್ ದಾಖಲಾಗಿದೆ' ಎಂದು ಪೊಲೀಸರು ಹೇಳಿದರು.

'ಕುರುಬರಹಳ್ಳಿಯ ನಿವಾಸಿಯೊಬ್ಬರನ್ನು ಸಂಪರ್ಕಿಸಿದ್ದ ಆರೋಪಿ, ದುಪ್ಪಟ್ಟು ಲಾಭದ ಆಮಿಷವೊಡ್ಡಿದ್ದರು. ಹೈಪೇಜಾ ಡಾಟ್ ಕಾಮ್ ಜಾಲತಾಣದ ಹೆಸರಿನಲ್ಲಿ ₹ 3.38 ಲಕ್ಷ ಹೂಡಿಕೆ ಮಾಡಿಸಿಕೊಂಡಿದ್ದರು. ನಂತರ ಆರೋಪಿ ಯಾವುದೇ ಲಾಭ ನೀಡಿಲ್ಲ. ಹಣವನ್ನೂ ವಾಪಸು ಕೊಟ್ಟಿಲ್ಲ' ಎಂದೂ ತಿಳಿಸಿದರು.

'ಇನ್ನೊಂದು ಪ್ರಕರಣದಲ್ಲಿ ಕಾಡುಗೋಡಿ ನಿವಾಸಿಯೊಬ್ಬರು, ಸ್ಟೇನ್‌66 ಡಾಟ್ ಕಾಮ್ ಜಾಲತಾಣದಲ್ಲಿ ಹಣ ಹೂಡಿಕೆ ಮಾಡಿದ್ದರು. ಷೇರು ವ್ಯವಹಾರ ಮಾಡುವುದಾಗಿ ಹೇಳಿದ್ದ ಕಂಪನಿ, ಆರಂಭದಲ್ಲಿ ಲಾಭ ನೀಡಿತ್ತು. ಅದೇ ನಂಬಿಕೆಯಿಂದಾಗಿ ದೂರುದಾರ ಪುನಃ ₹ 2.04 ಲಕ್ಷ ಹೂಡಿಕೆ ಮಾಡಿದ್ದರು' ಎಂದೂ ಹೇಳಿದರು.

ಕಲ್ಲು ಎತ್ತಿ ಹಾಕಿ ಕೊಲೆ; ಫ್ಲ್ಯಾಟ್ ವ್ಯವಹಾರ ಕಾರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜಗೋಪಾಲನಗರ ಠಾಣೆ ವ್ಯಾಪ್ತಿಯ ಜಿಕೆಡಬ್ಲ್ಯು ಲೇಔಟ್‌ನಲ್ಲಿ ನಡೆದಿದ್ದ ಕಾರ್ತಿಕ್ (42) ಎಂಬುವರ ಕೊಲೆ ಪ್ರಕರಣ ಸಂಬಂಧ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ಸ್ಥಳೀಯ ನಿವಾಸಿಗಳಾದ ಮೋಹನ್ ಹಾಗೂ ನಾಗರಾಜು ಬಂಧಿತರು. ಅವರಿಬ್ಬರು ರಿಯಲ್ ಎಸ್ಟೇಟ್ ಏಜೆಂಟ್‌ಗಳು' ಎಂದು ಪೊಲೀಸರು ಹೇಳಿದರು.

'ಕೊಲೆಯಾದ ಕಾರ್ತಿಕ್, ಆರೋಪಿಗಳ ಮಧ್ಯಸ್ಥಿಕೆಯಲ್ಲಿ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರಲ್ಲಿ ಫ್ಲ್ಯಾಟ್ ಖರೀದಿಸಿದ್ದರು. ಅರ್ಧ ಹಣ ಮಾತ್ರ ನೀಡಿ, ಉಳಿದ ಹಣ ಕೊಡದೇ ಸತಾಯಿಸುತ್ತಿದ್ದರು. ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡುವುದಾಗಿ ಹೇಳುತ್ತಿದ್ದರು. ಅದರಿಂದಾಗಿ ಫ್ಲ್ಯಾಟ್‌ನ ಮೂಲ ಮಾಲೀಕರು, ಆರೋಪಿಗಳಿಗೆ ಕಮಿಷನ್ ನೀಡಿರಲಿಲ್ಲ. ಪೂರ್ತಿ ಹಣ ವಸೂಲಿ ಮಾಡಿ ಕೊಡುವಂತೆ ಮಾಲೀಕರು ತಾಕೀತು ಮಾಡಿದ್ದರು.'

'ಹಣ ನೀಡದಿದ್ದರಿಂದ ಕೋಪಗೊಂಡಿದ್ದ ಆರೋಪಿಗಳು, ಕಾರ್ತಿಕ್ ಸಂಚರಿಸುವ ರಸ್ತೆಯನ್ನು ಬಂದ್ ಮಾಡಿದ್ದರು. ಇದೇ ವಿಚಾರವಾಗಿ ಗಲಾಟೆ ನಡೆದಿತ್ತು. ಆ ವಿಷಯ ಪೊಲೀಸ್ ಠಾಣೆ ಮೆಟ್ಟಿಲೇರಿತ್ತು. ಆಗ ಕಾರ್ತಿಕ್, 'ಮಧ್ಯವರ್ತಿಗಳು ಬೇಡ. ನಾವೇ ವ್ಯವಹಾರ ಬಗೆಹರಿಸಿಕೊಳ್ಳೋಣ' ಎಂದು ಮಾಲೀಕರ ಜೊತೆ ಸಂಧಾನ ಮಾಡಿಕೊಳ್ಳಲು ಮುಂದಾಗಿದ್ದರು. ಆ ವಿಷಯ ತಿಳಿಯುತ್ತಿದ್ದಂತೆ ಆರೋಪಿಗಳು, ಕಾರ್ತಿಕ್ ತಲೆ ಮೇಲೆ ಕಲ್ಲು ಎತ್ತಿ ಹಾಕಿ ಕೊಂದಿದ್ದರು. ಈ ಬಗ್ಗೆ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ' ಎಂದೂ ಪೊಲೀಸರು ತಿಳಿಸಿದರು.

ಎಸ್‌ಬಿಐ ಆಧಾರ್ ಜೋಡಣೆ ಸಂದೇಶ: ₹ 12.29 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಎಸ್‌ಬಿಐ) ಖಾತೆಗೆ ಆಧಾರ್ ಜೋಡಣೆ ಮಾಡಬೇಕು' ಎಂಬ ಸಂದೇಶ ನಂಬಿ ಗ್ರಾಹಕರೊಬ್ಬರು ₹ 12.29 ಲಕ್ಷ ಕಳೆದುಕೊಂಡಿದ್ದಾರೆ.

ಈ ವಂಚನೆ ಬಗ್ಗೆ ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ನಾಗವಾರ ವೀರಣ್ಣಪಾಳ್ಯದ 49 ವರ್ಷದ ಮಹಿಳೆಯೊಬ್ಬರು, ಎಸ್‌ಬಿಐನಲ್ಲಿ ಖಾತೆ ಹೊಂದಿದ್ದಾರೆ. 'ನಿಮ್ಮ ಎಸ್‌ಬಿಐ ಖಾತೆಗೆ ಕೆವೈಸಿ (ಗ್ರಾಹಕರ ಮಾಹಿತಿ) ಹಾಗೂ ಆಧಾರ್ ಜೋಡಣೆ ಮಾಡಬೇಕು' ಎಂದು ಜೂನ್ 13ರಂದು ಮಹಿಳೆಯ ಮೊಬೈಲ್‌ಗೆ ಸಂದೇಶ ಬಂದಿತ್ತು' ಎಂದು ಪೊಲೀಸರು ಹೇಳಿದರು.

'ಸಂದೇಶದಲ್ಲಿದ್ದ ಮೊಬೈಲ್ ನಂಬರ್‌ಗೆ ಮಹಿಳೆ ಕರೆ ಮಾಡಿದ್ದರು. ಬ್ಯಾಂಕ್ ಪ್ರತಿನಿಧಿ ಸೋಗಿನಲ್ಲಿ ಮಾತನಾಡಿದ್ದ ಆರೋಪಿ, ಮಹಿಳೆಯ ಬ್ಯಾಂಕ್ ಖಾತೆ ಮಾಹಿತಿ ತಿಳಿದುಕೊಂಡಿದ್ದ. ಲಿಂಕ್ ಕಳುಹಿಸಿ ಅದನ್ನು ತೆರೆಯುವಂತೆಯೂ ಹೇಳಿದ್ದ. ಆತನ ಮಾತು ನಂಬಿದ್ದ ಮಹಿಳೆ, ಲಿಂಕ್ ಕ್ಲಿಕ್ ಮಾಡಿದ್ದರು. ಅದಾದ ಕೆಲ ನಿಮಿಷಗಳಲ್ಲೇ ಹಂತ ಹಂತವಾಗಿ ಖಾತೆಯಿಂದ ₹ 12.29 ಲಕ್ಷ ಕಡಿತವಾಗಿದೆ' ಎಂದೂ ತಿಳಿಸಿದರು.

'ಹಣ ಕಡಿತದ ನಂತರ ಆರೋಪಿ ಮೊಬೈಲ್ ಸ್ವಿಚ್ ಆಫ್ ಮಾಡಿಕೊಂಡಿದ್ದಾನೆ. ಬ್ಯಾಂಕ್‌ನಲ್ಲಿ ವಿಚಾರಿಸಿದಾಗ ಯಾವುದೇ ಪ್ರತಿಕ್ರಿಯೆ ಸಿಕ್ಕಿಲ್ಲ. ಬಳಿಕ ಮಹಿಳೆಯು ಠಾಣೆಗೆ ದೂರು ನೀಡಿದ್ದಾರೆ' ಎಂದೂ ಹೇಳಿದರು.

₹ 10 ನೋಂದಣಿಯಿಂದ ₹ 1.44 ಲಕ್ಷ ಕಳೆದುಕೊಂಡರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯೋಗಕ್ಕಾಗಿ ₹ 10 ನೀಡಿ ನೋಂದಣಿ ಮಾಡಿಕೊಂಡಿದ್ದ ನಗರದ ನಿವಾಸಿಯೊಬ್ಬರು ₹ 1.44 ಲಕ್ಷ ಕಳೆದುಕೊಂಡಿದ್ದಾರೆ.

'ಆರ್.ಎಂ. ನಗರದ 25 ವರ್ಷದ ಯುವಕರೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ನಯನಾ ಶರ್ಮಾ ಎಂಬುವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರ ಉದ್ಯೋಗಕ್ಕಾಗಿ ಹುಡುಕಾಟ ನಡೆಸಿದ್ದರು. ಹಲವು ಜಾಲತಾಣಗಳಲ್ಲಿ ವೈಯಕ್ತಿಕ ವಿವರ ಅಪ್‌ಲೋಡ್ ಮಾಡಿದ್ದರು. ನೌಕರಿ ಇಂಟ್ರೊ ಡಾಟ್ ಇನ್ ಜಾಲತಾಣದ ಪ್ರತಿನಿಧಿ ಸೋಗಿನಲ್ಲಿ ಯುವಕನಿಗೆ ಕರೆ ಮಾಡಿದ್ದ ಆರೋಪಿ, '₹ 10 ನೀಡಿ ನಮ್ಮ ಜಾಲತಾಣದಲ್ಲಿ ನೋಂದಣಿ ಮಾಡಿಕೊಳ್ಳಿ. ನಿಮಗೆ ಉದ್ಯೋಗದ ಮಾಹಿತಿ ನೀಡಲಾಗುವುದು' ಎಂದಿದ್ದಳು.'

'ಆರೋಪಿ ಮಾತು ನಂಬಿದ್ದ ದೂರುದಾರ, ಕ್ರೆಡಿಟ್ ಕಾರ್ಡ್ ಬಳಸಿ ನೋಂದಣಿ ಮಾಡಿಕೊಂಡಿದ್ದರು. ಅದಾದ ಕೆಲ ನಿಮಿಷಗಳಲ್ಲೇ ಆರೋಪಿ ಬ್ಯಾಂಕ್ ಖಾತೆಯಿಂದ ₹1.44 ಲಕ್ಷ ಕಡಿತವಾಗಿದೆ. ಆರೋಪಿ ಮೊಬೈಲ್ ಸಹ ಸ್ವಿಚ್ ಆಫ್ ಆಗಿದೆ' ಎಂದೂ ಪೊಲೀಸರು ತಿಳಿಸಿದರು.

ನೇಣು ಹಾಕಿಕೊಂಡು ಆತ್ಮಹತ್ಯೆ

ಬೆಂಗಳೂರು: ಯಶವಂತಪುರ ರೈಲು ನಿಲ್ದಾಣ ಸಮೀಪದ ಮರವೊಂದಕ್ಕೆ ನೇಣು ಹಾಕಿಕೊಂಡು ತಿಮ್ಮರಾಜು (29) ಎಂಬುವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಶಿರಾ ತಾಲ್ಲೂಕಿನ ಚನ್ನೇನಹಳ್ಳಿಯ ತಿಮ್ಮರಾಜು, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದರು. ಅವರ ಆತ್ಮಹತ್ಯೆಗೆ ಕಾರಣ ಗೊತ್ತಾಗಿಲ್ಲ. ಪ್ರಕರಣ ದಾಖಲಿಸಿಕೊಂಡು ತನಿಖೆ ಮುಂದುವರಿಸಲಾಗಿದೆ' ಎಂದು ಆರ್‌ಎಂಸಿ ಯಾರ್ಡ್ ಪೊಲೀಸರು ಹೇಳಿದರು.

'ಗಾರ್ಮೆಂಟ್ಸ್ ಕಾರ್ಖಾನೆಯಲ್ಲಿ ತಿಮ್ಮರಾಜು ಕೆಲಸ ಮಾಡುತ್ತಿದ್ದರು. ಲಾಕ್‌ಡೌನ್‌ನಿಂದಾಗಿ ಕೆಲಸ ಹೋಗಿತ್ತು. ಅವಿವಾಹಿತರಾಗಿದ್ದ ಅವರು, ಕೊಠಡಿಯೊಂದರಲ್ಲಿ ವಾಸವಿದ್ದರು. ಮಾನಸಿಕವಾಗಿ ನೊಂದಿದ್ದರು. ಸ್ಥಳೀಯರೊಬ್ಬರು ಗುರುವಾರ ಬೆಳಿಗ್ಗೆ ಮೃತದೇಹ ನೋಡಿ ಠಾಣೆಗೆ ಮಾಹಿತಿ ನೀಡಿದ್ದರು' ಎಂದೂ ತಿಳಿಸಿದರು.



ಮಲ್ಲೇಶ್ವರದ ಗಾಯತ್ರಿನಗರದಲ್ಲಿ ಕಾಂಗ್ರೆಸ್ ಪಕ್ಷವು ಗುರುವಾರ ಆಯೋಜಿಸಿದ ಕೋವಿಡ್ ಕಿಟ್ ವಿತರಣೆ ಕಾರ್ಯಕ್ರಮದಲ್ಲಿ ಸೇರಿದ್ದ ಮಹಿಳೆಯರು

ಹಾಸಿಗೆ, ರೆಮ್‌ಡಿಸಿವಿರ್ ಹೆಸರಿನಲ್ಲಿ ವಂಚನೆ

ಬೆಂಗಳೂರು: ಕೋವಿಡ್ ರೋಗಿಗೆ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಹಾಸಿಗೆ ಕೊಡಿಸಿ ಚಿಕಿತ್ಸೆಗೆ ಅಗತ್ಯವಿರುವ ರೆಮ್‌ಡಿಸಿವಿರ್ ಚುಚ್ಚುಮದ್ದು ನೀಡುವುದಾಗಿ ಹೇಳಿ ಹಣ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಪೂರ್ವ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕಲ್ಯಾಣನಗರದ 37 ವರ್ಷದ ನಿವಾಸಿಯಾಗಿರುವ ಎಂಜಿನಿಯರೊಬ್ಬರು ದೂರು ನೀಡಿದ್ದಾರೆ. ಆರೋಪಿ ವಿಶ್ವ ಎಂಬುವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಹಾಸಿಗೆಗಾಗಿ ಹುಡುಕಾಟ ನಡೆಸುತ್ತಿದ್ದ ದೂರುದಾರ, ಮೊಬೈಲ್ ಮೂಲಕ ಆರೋಪಿಯನ್ನು ಸಂಪರ್ಕಿಸಿದ್ದರು. 'ಖಾಸಗಿ ಆಸ್ಪತ್ರೆಯಲ್ಲಿ ಐಸಿಯು ಹಾಸಿಗೆ ಒದಗಿಸಿ, ರೆಮ್‌ಡಿಸಿವಿರ್ ಚುಚ್ಚುಮದ್ದು ವ್ಯವಸ್ಥೆ ಮಾಡುತ್ತೇನೆ. ಅದಕ್ಕಾಗಿ ಮುಂಗಡವಾಗಿ ಹಣ ಪಾವತಿ ಮಾಡಬೇಕು' ಎಂದು ಆರೋಪಿ ಹೇಳಿದ್ದ.'

'ಆರೋಪಿ ಮಾತು ನಂಬಿದ್ದ ದೂರುದಾರ, ಆತ ಹೇಳಿದ್ದ ಬ್ಯಾಂಕ್ ಖಾತೆಗೆ ₹ 38 ಸಾವಿರ ಹಾಕಿದ್ದರು. ಅದಾದ ನಂತರ ಆರೋಪಿ ನಾಪತ್ತೆಯಾಗಿದ್ದಾನೆ' ಎಂದೂ ಮೂಲಗಳು ತಿಳಿಸಿವೆ.

ನಾಲ್ಕು ವರ್ಷದ ಪದವಿಯಲ್ಲಿ ಮೂರು ವರ್ಷ ಭಾಷಾ ಕಲಿಕೆಗೆ ಒತ್ತಾಯ

‘ಕನ್ನಡ ಕಲಿಕೆ ವರ್ಷಕ್ಕೆ ಸೀಮಿತ: ಅಸಮರ್ಪಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೂತನ ಶಿಕ್ಷಣ ನೀತಿ ಅನ್ವಯ, ನಾಲ್ಕು ವರ್ಷಗಳ ಪದವಿಯಲ್ಲಿ ಕನ್ನಡ ಭಾಷಾ ಕಲಿಕೆಯನ್ನು ಕೇವಲ ಒಂದು ವರ್ಷಕ್ಕೆ ಸೀಮಿತಗೊಳಿಸಿರುವ ಸರ್ಕಾರದ ನಿರ್ಧಾರವನ್ನು ಸಾಹಿತಿಗಳು, ಕನ್ನಡಪರ ಸಂಘಟನೆಗಳು ಖಂಡಿಸಿದ್ದಾರೆ.

‘ರಾಜ್ಯದ ಎಲ್ಲ ಸಾಂಪ್ರದಾಯಿಕ ಪದವಿಗಳ 4 ಸೆಮಿಸ್ಟರ್‌ಗಳಿಗೆ (ಎರಡು ವರ್ಷ) ಹಾಗೂ ವೃತ್ತಿ ಶಿಕ್ಷಣದ ಪದವಿಗಳಿಗೆ 2 ಸೆಮಿಸ್ಟರ್‌ಗಳಿಗೆ (ಒಂದು ವರ್ಷ) ಈ ಹಿಂದಿನಂತೆ ಕನ್ನಡ ಕಲಿಕೆಗೆ ಅವಕಾಶ ನೀಡಬೇಕು. ಅದನ್ನು ಒಂದು ವರ್ಷಕ್ಕೆ ಸೀಮಿತಗೊಳಿಸಿರುವುದು ಅಸಮರ್ಪಕ ನಿರ್ಧಾರ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಅಸಮಾಧಾನ ವ್ಯಕ್ತಪಡಿಸಿದೆ.

‘ಈ ಹಿಂದೆ ಕೆಲವು ವಿಶ್ವವಿದ್ಯಾಲಯಗಳು ಇಂಗ್ಲಿಷ್ ಅನ್ನು ಕಡ್ಡಾಯಗೊಳಿಸಿದಂತೆ ನಾಲ್ಕು ವರ್ಷದ ಪದವಿಗೆ ಕನ್ನಡವನ್ನು ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಕಡ್ಡಾಯಗೊಳಿಸಬೇಕು. ಕನ್ನಡ ಕಲಿಕೆಯನ್ನು ಒಂದು ವರ್ಷಕ್ಕೆ ಇಳಿಸಿದರೆ, ಈಗಾಗಲೇ ಕನ್ನಡದಲ್ಲಿ ಪದವಿ ಪಡೆದಿರುವ ಅಸಂಖ್ಯಾತ ಅಭ್ಯರ್ಥಿಗಳು ಉದ್ಯೋಗದಿಂದ ವಂಚಿತರಾಗಲಿದ್ದಾರೆ. ಹೊಸ ಹುದ್ದೆಗಳ ಸೃಷ್ಟಿಯು ಸ್ಥಗಿತಗೊಂಡು ಮುಂದೆ ಕನ್ನಡ ಕಲಿಯುವುದೇ ಅನುಪಯುಕ್ತ ಎಂಬ ವಾತಾವರಣ ಸೃಷ್ಟಿಯಾಗಲಿದೆ’ ಎಂದು ಪ್ರಾಧಿಕಾರದ ಅಧ್ಯಕ್ಷ ಟಿ.ಎಸ್. ನಾಗಾಭರಣ ಆತಂಕ ವ್ಯಕ್ತಪಡಿಸಿದ್ದಾರೆ.



ಟಿ.ಎಸ್. ನಾಗಾಭರಣ

‘ಕನ್ನಡ ಕಲಿಕೆ ಮೊಟಕಿಲ್ಲ’



‘ಪದವಿ ಶಿಕ್ಷಣದಲ್ಲಿ ಕನ್ನಡ ಕಲಿಕೆ ಮೊಟಕುಗೊಳಿಸುವ ಯಾವುದೇ ಪ್ರಸ್ತಾವ ಸರ್ಕಾರದ ಮುಂದಿಲ್ಲ’ ಎಂದು ಉನ್ನತ ಶಿಕ್ಷಣ ಸಚಿವರೂ ಆದ ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥ ನಾರಾಯಣ ಸ್ಪಷ್ಟಪಡಿಸಿದ್ದಾರೆ.

‘ಸ್ಥಳೀಯ ಹಾಗೂ ಪ್ರಾದೇಶಿಕ ಭಾಷೆಗಳಿಗೆ ಹೆಚ್ಚು ಮನ್ನಣೆ ನೀಡಿ ಆ ಭಾಷೆಗಳಲ್ಲೇ ವೃತ್ತಿಪರ ಶಿಕ್ಷಣ ಸೇರಿ ಎಲ್ಲ ವಿಭಾಗದ ಉನ್ನತ ಶಿಕ್ಷಣವನ್ನು ಬೋಧಿಸಬೇಕು ಎಂಬುದು ರಾಷ್ಟ್ರೀಯ ಶಿಕ್ಷಣ ನೀತಿಯ ಆಶಯ. ಈ ಅಂಶಕ್ಕೆ ನೀತಿಯಲ್ಲಿ ಹೆಚ್ಚು ಒತ್ತು ನೀಡಲಾಗಿದೆ’ ಎಂದಿದ್ದಾರೆ.

‘ಈ ವಿಷಯ ಇನ್ನೂ ಕರಡು ತಯಾರಿಕೆ ಹಂತದಲ್ಲಿದೆ. ಈಗಲೇ ಅದರ ಬಗ್ಗೆ ಆತಂಕಪಡುವ ಅಗತ್ಯ ಇಲ್ಲ. ಮುಖ್ಯವಾಗಿ ಪದವಿ ಶಿಕ್ಷಣದಲ್ಲಿ ಎರಡು ವರ್ಷ ಕನ್ನಡ ಬೋಧನೆ ಆಗುತ್ತಿರುವ ಹಾಲಿ ವ್ಯವಸ್ಥೆಯಲ್ಲಿ ಯಾವ ಬದಲಾವಣೆಯೂ ಇರುವುದಿಲ್ಲ’ ಎಂದೂ ಅವರು ಹೇಳಿದ್ದಾರೆ.



ಸರ್ಕಾರದ ಈ ಧೋರಣೆಯನ್ನು ಪರಿಷತ್ತು ತೀವ್ರವಾಗಿ ಖಂಡಿಸುತ್ತದೆ. ಸರ್ಕಾರ ಈ ನಿಲುವು ಬದಲಿಸಿ ಮೂರು ವರ್ಷದ ಅವಧಿಗೆ ಕನ್ನಡ ಬೋಧನೆಯನ್ನು ನಿಗದಿಪಡಿಸಬೇಕು

ಡಾ. ಮನು ಬಳಿಗಾರ, ಅಧ್ಯಕ್ಷ, ಕಸಾಪ

ಪ್ರತಿರೋಧ ಎಚ್ಚರಿಕೆ: ‘ಮೂರು ವರ್ಷಗಳ ಪದವಿಯಲ್ಲಿ ಮೊದಲ ಎರಡು ವರ್ಷ ಅಂದರೆ, ನಾಲ್ಕು ಸೆಮಿಸ್ಟರ್‌ಗಳಲ್ಲಿ ಕನ್ನಡ ಮತ್ತು ಇತರೆ ಭಾಷಾ ವಿಷಯ ಬೋಧನೆಗೆ ಅವಕಾಶವಿತ್ತು. ಈಗ ನಾಲ್ಕು ವರ್ಷಗಳ ಪದವಿಯಲ್ಲಿ, ಭಾಷಾ ಬೋಧನೆಯನ್ನು ಮೂರು ವರ್ಷಗಳಿಗೆ ವಿಸ್ತರಿಸಬೇಕಾಗಿತ್ತು. ಕಡೇ ಪಕ್ಷ ಈ ಹಿಂದೆ ಇದ್ದಂತೆ ಎರಡು ವರ್ಷಗಳ ಅವಧಿಯನ್ನಾದರೂ ಉಳಿಸಿ ಕೊಳ್ಳಬೇಕಾಗಿತ್ತು. ಅದರ ಬದಲು ಒಂದು ವರ್ಷಕ್ಕೆ ಮಿತಿಗೊಳಿಸಿರುವುದು ಖಂಡನೀಯ’ ಎಂದು ಹಿರಿಯ ಸಾಹಿತಿ ಪ್ರೊ.ಬರಗೂರು ರಾಮಚಂದ್ರಪ್ಪ ಹೇಳಿದ್ದಾರೆ.



ಬರಗೂರು ರಾಮಚಂದ್ರಪ್ಪ

‘ಯಾವುದೇ ವಿಶೇಷ ವಿಷಯದಲ್ಲಿ ಪದವಿ ವ್ಯಾಸಂಗ ಮಾಡುವವರಿಗೆ ಕನ್ನಡ ಭಾಷೆ, ಸಾಹಿತ್ಯದ ಸಾಮಾನ್ಯ ಪರಿಚಯ ಕಡ್ಡಾಯವಾಗಬೇಕು. ಇದು ಕನ್ನಡಾಭಿಮಾನದ ಪ್ರಶ್ನೆಯಲ್ಲ. ಯಾವುದೇ ವಿದ್ಯಾರ್ಥಿಗಳಲ್ಲಿ ಸಾಂಸ್ಕೃತಿಕ ಅರಿವು ಮೂಡಿಸಿ, ಮಾನವೀಯ ಮೌಲ್ಯಗಳನ್ನು ನೆಲೆಗೊಳಿಸಲು ಕನ್ನಡ ಭಾಷೆ, ಸಾಹಿತ್ಯಗಳ ಸಂಕ್ಷಿಪ್ತ ಪರಿಚಯವು ಪೂರಕವಾಗುತ್ತದೆ. ಈ ಕಾರಣದಿಂದಾಗಿ, ನಾಲ್ಕು ವರ್ಷಗಳ ಪದವಿ ಕೋರ್ಸ್‌ನಲ್ಲಿ ಮೂರು ವರ್ಷ ಕನ್ನಡ ಕಲಿಸಬೇಕು’ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಉಚಿತ ಲಸಿಕೆ ಶಿಬಿರಕ್ಕೆ ಚಾಲನೆ

ಪ್ರಜಾವಾಣಿ ವಾರ್ತೆ



ಉಚಿತ ಲಸಿಕೆ ಶಿಬಿರಕ್ಕೆ ಶಾಸಕ ವಿಶ್ವನಾಥ್ ಚಾಲನೆ ನೀಡಿದರು. ಬಿ.ಎಸ್.ಸುರೇಂದರ್, ಪರಾಗ್, ಎಂ.ಸತೀಶ್ ಇದ್ದರು

ಯಲಹಂಕ: ಸೈಟ್‌ಕೇರ್ ಆಸ್ಪತ್ರೆಯ ಸಹಯೋಗದೊಂದಿಗೆ ಗ್ಯಾಲರಿಯಾ ಮಾಲ್‌ನ ವತಿಯಿಂದ ಸ್ಥಳೀಯರು ಹಾಗೂ ನೌಕರರಿಗೆ ಉಚಿತವಾಗಿ ಲಸಿಕೆ ನೀಡುವ ಶಿಬಿರಕ್ಕೆ ಶಾಸಕ ಎಸ್.ಆರ್. ವಿಶ್ವನಾಥ್ ಚಾಲನೆ ನೀಡಿದರು.

‘ಕೋವಿಡ್ ತಡೆಗಟ್ಟುವಲ್ಲಿ ಲಸಿಕೆ ನೀಡುವುದೊಂದೇ ಮಾರ್ಗ. ಈ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರವು ಲಸಿಕೆ ನೀಡುವ ಪ್ರಕ್ರಿಯೆಯನ್ನು ಆರಂಭಿಸಿತ್ತು. ಆದರೆ ಖಾಸಗಿ ಸಂಸ್ಥೆಗಳೂ ಸಹ ಶೆ.25ರಷ್ಟು ಲಸಿಕೆ ಖರೀದಿಸಿ, ತಮ್ಮ ನೌಕರರು, ಸಿಬ್ಬಂದಿಗೆ ನೀಡುವ ಅವಕಾಶವನ್ನು ಕೇಂದ್ರ ಸರ್ಕಾರ ಕಲ್ಪಿಸಿದೆ. ಈ ನಿಟ್ಟಿನಲ್ಲಿ ಗ್ಯಾಲರಿಯಾ ಮಾಲ್‌ನ ವ್ಯವಸ್ಥಾಪಕರು, ನೌಕರರು ಹಾಗೂ ಸ್ಥಳೀಯರಿಗೆ ಉಚಿತವಾಗಿ ಲಸಿಕೆ ನೀಡುವ ಶಿಬಿರವನ್ನು ಆಯೋಜಿಸಿರುವುದು ಶ್ಲಾಘನೀಯ’ ಎಂದರು.

‘ಯಲಹಂಕದಲ್ಲಿ ಈಗಾಗಲೇ 45 ವರ್ಷ ಮೇಲ್ಪಟ್ಟವರಿಗೆ ಲಸಿಕೆ ಹಾಕುವ ಪ್ರಕ್ರಿಯೆಯನ್ನು ಬಹುತೇಕ ಪೂರ್ಣಗೊಳಿಸಲಾಗಿದೆ. ಜೂನ್ 21ರಿಂದ 18ವರ್ಷ ಮೇಲ್ಪಟ್ಟವರಿಗೆ ವ್ಯವಸ್ಥಿತವಾಗಿ ಲಸಿಕೆ ನೀಡಲು ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ. ಇದೇ 21ರಂದು ಎನ್‌ಆರ್‌ಐ ಸಂಸ್ಥೆಯೊಂದು ತಮ್ಮ ಸಾಮಾಜಿಕ ಹೊಣೆಗಾರಿಕೆ ನಿಧಿಯಡಿ 2,500 ಲಸಿಕೆ ನೀಡಲಿದ್ದು, ಇದನ್ನು ಕ್ಷೇತ್ರದ ಬಿಪಿಎಲ್ ಕಾರ್ಡ್ ಹೊಂದಿರುವ ಕೊಳಚೆ ಪ್ರದೇಶಗಳ ನಿವಾಸಿಗಳಿಗೆ ನೀಡಲಾಗುವುದು’ ಎಂದರು.

ಗ್ಯಾಲರಿಯಾ ಮಾಲ್‌ನ ಮಾಲೀಕ ಬಿ.ಎಸ್.ಸುರೇಂದರ್, ‘ಕೊರೊನಾ ಸೋಂಕು ಹರಡುವ ಭಯದಿಂದ ಸಾರ್ವಜನಿಕರು ಮನೆಯಿಂದ ಹೊರ ಬರಲು ಸಾಧ್ಯವಾಗದ ಪರಿಸ್ಥಿತಿಯಿದೆ. ಈ ದಿಸೆಯಲ್ಲಿ ಸಾರ್ವಜನಿಕರು ವಾಹನದಲ್ಲಿ ಮನೆಯಿಂದ ನೇರವಾಗಿ ಇಲ್ಲಿಗೆ ಬಂದಿಳಿದ ತಕ್ಷಣ ಲಸಿಕೆ ಹಾಕಿಸಿಕೊಂಡು 30 ನಿಮಿಷ ವಿಶ್ರಾಂತಿ ಪಡೆದ ಬಳಿಕ ಮನೆಗೆತೆರಳಲು ಅವಕಾಶ ಕಲ್ಪಿಸಲಾಗಿದೆ. ಜೂನ್ 20ರವರೆಗೆ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಈ ಶಿಬಿರ ನಡೆಯಲಿದೆ’ ಎಂದು ತಿಳಿಸಿದರು.

ಬ್ರೂಕ್‌ಫೀಲ್ಡ್ ಪ್ರಾಪರ್ಟೀಸ್‌ನ ಪರಾಗ್, ಪಾಲಿಕೆ ಮಾಜಿ ಸದಸ್ಯ ಎಂ.ಸತೀಶ್ ಉಪಸ್ಥಿತರಿದ್ದರು.

ಪ್ರೇಮಾಭಟ್‌ಗೆ ‘ಗಣ್ಯಲೇಖಕಿ’ ಗೌರವ

ಬೆಂಗಳೂರು: ಲೇಖಕಿ ಪ್ರೇಮಾಭಟ್ ಅವರು ಬಿ.ಎಂ.ಶ್ರೀ ಪ್ರತಿಷ್ಠಾನ ನೀಡುವ 2021ನೇ ಸಾಲಿನ ‘ಡಾ. ವಿಜಯಾ ಸುಬ್ಬರಾಜ್ ಗಣ್ಯಲೇಖಕಿ’ ಗೌರವಕ್ಕೆ ಪಾತ್ರರಾಗಿದ್ದಾರೆ.

ಕಥಾ ಸಾಹಿತ್ಯ ಕ್ಷೇತ್ರದಲ್ಲಿನ ಕೊಡುಗೆಯನ್ನು ಆಧರಿಸಿ ಅವರನ್ನು ಈ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಚಿದಾನಂದ ಸಾಲಿ ಅವರ ‘ಸಕಾರಣ’ ಕೃತಿಗೆ ‘ಸೂ.ವೆಂ.ಆರಗ ವಿಮರ್ಶಾ ಪ್ರಶಸ್ತಿ’ ಸಿಕ್ಕಿದೆ. ಈ ಕೃತಿ 2020ರಲ್ಲಿ ಪ್ರಕಟವಾಗಿತ್ತು. ನಾ.ದಾಮೋದರ ಶೆಟ್ಟಿ ಮತ್ತು ಡಿ.ಮಂಗಳಾ ಪ್ರಿಯದರ್ಶಿನಿ ಅವರು ಆಯ್ಕೆ ಸಮಿತಿಯಲ್ಲಿದ್ದರು.



ಪ್ರೇಮಾಭಟ್



ಚಿದಾನಂದ ಸಾಲಿ

‘ಪರಿಸರ ಮಾಲಿನ್ಯಕ್ಕೆ ಎಲ್ಲರೂ ಹೊಣೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಸರ ಮಾಲಿನ್ಯಕ್ಕೆ ನಾವು ಸರ್ಕಾರಗಳನ್ನು ಮತ್ತು ಕೈಗಾರಿಕೆಗಳನ್ನು ದೂಷಿಸುತ್ತೇವೆ. ಆದರೆ, ಪರೋಕ್ಷವಾಗಿ ನಾವು ಆ ಎಲ್ಲ ಕೈಗಾರಿಕೆಗಳು ಉತ್ಪಾದಿಸುವ ಉತ್ಪನ್ನಗಳ ಗ್ರಾಹಕರು ಆಗಿರುತ್ತೇವೆ. ಪರಿಸರದ ಮೇಲಿನ ಹಾನಿಗೆ ನಾವೆಲ್ಲರೂ ಕಾರಣ’ ಎಂದು ನಟ ಪ್ರಕಾಶ್ ಬೆಳವಾಡಿ ಹೇಳಿದರು.

ರೋಟರಿ ಕ್ಲಬ್ ಮತ್ತು ಕ್ರಾನಿಕ್ ಫೌಂಡೇಷನ್‌ನ ಪ್ರೈಡ್ ಎನರ್ಜಿ ಎನ್ವಿರಾನ್ಮೆಂಟ್ ರಿಸೋರ್ಸ್ ರಿಸರ್ಚ್ ಇನ್‌ಸ್ಟಿಟ್ಯೂಟ್ ವತಿಯಿಂದ ಪರಿಸರ ದಿನದ ಅಂಗವಾಗಿ ಹಮ್ಮಿಕೊಂಡಿದ್ದ ವೆಬಿನಾರ್‌ನಲ್ಲಿ ಮಾತನಾಡಿದರು.

ರೋಟರಿ ಕ್ಲಬ್‌ನ ರಮೇಶ್ ಶಿವಣ್ಣ, ’ಪರಿಸರ ವ್ಯವಸ್ಥೆಯ ಪುನರ್ ಸ್ಥಾಪನೆ ಎಂಬುದು ಈ ಬಾರಿಯ ಪರಿಸರದ ದಿನದ ಘೋಷವಾಕ್ಯ. ನಾವು ಕೂಡ ಪರಿಸರ ಸ್ನೇಹಿ ಅಭ್ಯಾಸಗಳನ್ನು ರೂಢಿಸಿಕೊಳ್ಳಬೇಕು. ಅಭಿವೃದ್ಧಿ ಹೆಸರಿನಲ್ಲಿ ಪರಿಸರದ ಮೇಲಾಗುತ್ತಿರುವ ಹಾನಿಯನ್ನು ಆದಷ್ಟು ತಪ್ಪಿಸಬೇಕು. ಆರ್ಥಿಕ ಚಟುವಟಿಕೆಯೂ ಪರಿಸರ ಸಂರಕ್ಷಣೆಗೆ ಪೂರಕವಾಗಿರಬೇಕು’ ಎಂದರು.

ರೋಟರಿ ಕ್ಲಬ್‌ನ ಶೇಖರ್ ಮೆಹ್ತಾ, ’ರೋಟರಿ ಕ್ಲಬ್ ವತಿಯಿಂದ ಈ ವರ್ಷದಲ್ಲಿ ದೇಶದಾದ್ಯಂತ ಒಂದು ಕೋಟಿ ಸಸಿ ನೆಡುವ ಗುರಿ ಹೊಂದಿದ್ದೇವೆ. ಐದು ವರ್ಷಗಳಲ್ಲಿ ಐದು ಸಾವಿರ ಹಳ್ಳಿಗಳಲ್ಲಿ ಘನ ತ್ಯಾಜ್ಯ ನಿರ್ವಹಣಾ ಯೋಜನೆಯನ್ನು ಅನುಷ್ಠಾನಗೊಳಿಸುವ ಉದ್ದೇಶವಿದೆ’ ಎಂದರು.

ರಾಜ್ಯಸರ್ಕಾರದ ಕೆಆರ್‌ಇಡಿಎಲ್, ರೋಟರಿ ಗ್ರೀನ್ ಪಾರ್ಕ್ ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯಿತು.

‘ಜೈನ ಪುರೋಹಿತರಿಗೂ ಪರಿಹಾರ ನೀಡಿ’

ಬೆಂಗಳೂರು: ಜೈನ ಬಸದಿಗಳಲ್ಲಿ ಪೂಜೆ ಮಾಡುವ ಪುರೋಹಿತ ವರ್ಗವೂ ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಈಡಾಗಿದೆ. ಈ ಸಮುದಾಯಕ್ಕೆ ತಲಾ ₹5 ಸಾವಿರ ಪರಿಹಾರ ಘೋಷಿಸಬೇಕು ಎಂದು ಕರ್ನಾಟಕ ಜೈನ ಸಂಘ ಮನವಿ ಮಾಡಿದೆ.

‘ರಾಜ್ಯದಲ್ಲಿ ಸುಮಾರು 1,130 ಜಿನ ಮಂದಿರಗಳಿದ್ದು, ಸುಮಾರು 2,000 ಪುರೋಹಿತರಿದ್ದಾರೆ. ಸಮಾಜ ವತಿಯಿಂದ ಕೊಡುವ ಅತ್ಯಲ್ಪ ವೇತನವೇ ಈಗ ಆಧಾರವಾಗಿದೆ. ಲಾಕ್‌ಡೌನ್‌ನಿಂದಾಗಿ ಈ ಹಣವೂ ಇಲ್ಲದೆ ಅವರು ಸಂಕಷ್ಟಕ್ಕೆ ಈಡಾಗಿದ್ದಾರೆ’ ಎಂದು ಕರ್ನಾಟಕ ಜೈನ್ ಅಸೋಸಿಯೇಷನ್‌ನ ಅಧ್ಯಕ್ಷ ಬಿ. ಪ್ರಸನ್ನಯ್ಯ ಹೇಳಿದ್ದಾರೆ.

ಸುವೇಂದು ಗೆಲುವು ಪ್ರಶ್ನಿಸಿ ಅರ್ಜಿ: ಇಂದು ವಿಚಾರಣೆ

ಕೋಲ್ಕತ್ತ (ಪಿಟಿಐ): ನಂದಿಗ್ರಾಮ ವಿಧಾನಸಭಾ ಕ್ಷೇತ್ರದಿಂದ ಬಿಜೆಪಿಯ ಸುವೇಂದು ಅಧಿಕಾರಿ ಗೆಲುವನ್ನು ಪ್ರಶ್ನಿಸಿ ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಕಲ್ಕತ್ತ ಹೈಕೋರ್ಟ್‌ನಲ್ಲಿ ಚುನಾವಣಾ ತಕರಾರು ಅರ್ಜಿ ಸಲ್ಲಿಸಿದ್ದಾರೆ.

‘ನ್ಯಾಯಮೂರ್ತಿ ಕೌಶಿಕ್ ಚಂದ ಅವರಿರುವ ನ್ಯಾಯಪೀಠ, ಶುಕ್ರವಾರ (ಜೂನ್ 18) ಈ ಅರ್ಜಿಯ ವಿಚಾರಣೆಯನ್ನು ಕೈಗೆತ್ತಿಕೊಳ್ಳಲಿದೆ’ ಎಂದು ಹೈಕೋರ್ಟ್ ವೆಬ್‌ಸೈಟ್‌ನಲ್ಲಿ ಗುರುವಾರ ಪ್ರಕಟಿಸಲಾಗಿದೆ.

ಮೈಸೂರು– ಬೆಂಗಳೂರು ರೈಲುಗಳ ಪುನರಾರಂಭ

ಮೈಸೂರು: ಕೋವಿಡ್ ಲಾಕ್‌ಡೌನ್ ನಿಮಿತ್ತ ಪ್ರಯಾಣಿಕರ ಕೊರತೆಯಿಂದಾಗಿ ತಾತ್ಕಾಲಿಕವಾಗಿ ಸ್ಥಗಿತಗೊಂಡಿದ್ದ ಮೈಸೂರು– ಬೆಂಗಳೂರು ನಡುವಿನ ಮೆಮು ಎಕ್ಸ್‌ಪ್ರೆಸ್ ಸೇರಿದಂತೆ ಕೆಲವೊಂದು ರೈಲುಗಳ ಸಂಚಾರವನ್ನು ನೈರುತ್ಯ ರೈಲ್ವೆ ಮೈಸೂರು ವಿಭಾಗ ಪುನರಾರಂಭಿಸಿದೆ.



ರಾಜ್ಯರಾಣಿ ಎಕ್ಸ್‌ಪ್ರೆಸ್ (ಗಾಡಿ ಸಂಖ್ಯೆ 06567/ 06568), ಚಾಮುಂಡಿ ಎಕ್ಸ್‌ಪ್ರೆಸ್ (06569/ 06570), ರೈಲು ಸಂಖ್ಯೆ 06559, 06560, ಮತ್ತು ಟಿಪ್ಪು ಎಕ್ಸ್‌ಪ್ರೆಸ್ (06201/ 06202) ರೈಲುಗಳು ಮೈಸೂರು– ಬೆಂಗಳೂರು ನಡುವೆ ಪ್ರತಿದಿನ ಸಂಚಾರ ಆರಂಭಿಸಿವೆ.

ಮೈಸೂರು– ಬಾಗಲಕೋಟೆ ನಡುವಿನ ಬಸವ ಎಕ್ಸ್‌ಪ್ರೆಸ್ (07307/ 07308) ರೈಲು ಸಂಚಾರ ಜೂನ್ 20 ರಿಂದ ಆರಂಭವಾಗಲಿದೆ. ಮೈಸೂರು– ಕೊಚ್ಚುವೇಳಿ (06316/ 06315) ನಡುವಿನ ರೈಲು ಸಂಚಾರ ಜೂನ್ 16 ರಿಂದಲೇ ಸೇವೆ ಆರಂಭಿಸಿದೆ ಎಂದು ಪ್ರಕಟಣೆ ತಿಳಿಸಿದೆ.

ಬೆಂಗಳೂರಿಗೆ ಮತ್ತೊಂದು ಡೆಮು ರೈಲು

ತುಮಕೂರು: ನೈರುತ್ಯ ರೈಲ್ವೆಯು ತುಮಕೂರು– ಯಶವಂತಪುರ ಮಧ್ಯೆ ಮತ್ತೊಂದು ಡೆಮು ರೈಲು ಸಂಚಾರ ಗುರುವಾರದಿಂದ ಆರಂಭವಾಗಿದೆ.

ಯಶವಂತಪುರದಿಂದ ಬೆಳಗ್ಗೆ 5.30ಕ್ಕೆ, ತುಮಕೂರಿನಿಂದ ಬೆಳಗ್ಗೆ 8ಕ್ಕೆ, ಯಶವಂತಪುರದಿಂದ ಬೆಳಗ್ಗೆ 9.30ಕ್ಕೆ, ತುಮಕೂರಿನಿಂದ ಸಂಜೆ 4.20ಕ್ಕೆ, ಯಶವಂತಪುರದಿಂದ ಸಂಜೆ 6ಕ್ಕೆ ಹಾಗೂ ತುಮಕೂರಿನಿಂದ ರಾತ್ರಿ 7.40ಕ್ಕೆ ಹೊರಡಲಿದೆ.

ಯಶವಂತಪುರ ಮತ್ತು ತುಮಕೂರು ನಡುವಿನ ಎಲ್ಲ ನಿಲ್ದಾಣಗಳಲ್ಲೂ ರೈಲು ನಿಲುಗಡೆ ಮಾಡಲಿದೆ.ಕೋವಿಡ್ ಲಾಕ್‌ಡೌನ್ ಸಡಿಲಿಕೆಯಿಂದ ಕೈಗಾರಿಕೆಗಳು ಮತ್ತು ಇತರ ಚಟುವಟಿಕೆಗಳು ಆರಂಭವಾಗಿದ್ದು, ತುಮಕೂರಿನಿಂದ ಬೆಂಗಳೂರಿಗೆ ಉದ್ಯೋಗಕ್ಕೆ ತೆರಳುವವರ ಸಂಖ್ಯೆ ಹೆಚ್ಚಾಗಿದೆ. ಕೇವಲ ಒಂದೇ ಡೆಮು ರೈಲಿನ ಸಂಚಾರದಿಂದಾಗಿ ಅತಿ ಹೆಚ್ಚಿನ ದಟ್ಟಣೆ ಇತ್ತು. ಕೋವಿಡ್ ಸುರಕ್ಷತಾ ಕ್ರಮವಾಗಿ ಅಂತರ ಕಾಯ್ದುಕೊಳ್ಳುವುದು ಕಷ್ಟಕರವಾಗಿತ್ತು. ಈಗ ಮತ್ತೊಂದು ರೈಲು ಸಂಚಾರ ಆರಂಭಿಸಿರುವುದು ಪ್ರಯಾಣಿಕರಿಗೆ ಅನುಕೂಲವಾಗಿದೆ ಎಂದು ತುಮಕೂರು– ಬೆಂಗಳೂರು ರೈಲ್ವೆ ಪ್ರಯಾಣಿಕರ ವೇದಿಕೆ ಪ್ರಧಾನ ಕಾರ್ಯದರ್ಶಿ ಕರಣಂ ರಮೇಶ್ ತಿಳಿಸಿದ್ದಾರೆ.

ವಿದ್ಯುತ್ ವ್ಯತ್ಯಯ ಇಂದಿನಿಂದ

ಬೆಂಗಳೂರು: ತುರ್ತು ನಿರ್ವಹಣಾ ಕಾರ್ಯ ಕೈಗೆತ್ತಿಕೊಳ್ಳುತ್ತಿರುವುದರಿಂದ ನಗರದ ವಿವಿಧೆಡೆ ಇದೇ 18ರಿಂದ 20ರವರೆಗೆ ಬೆಳಿಗ್ಗೆ 10ರಿಂದ ಸಂಜೆ 5.30ರ ತನಕ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಹೇಳಿದೆ.

ನಾಯಂಡಹಳ್ಳಿ ವ್ಯಾಪ್ತಿಯ ಪಟೇಲ್ ಪುಟ್ಟಪ್ಪ ಕೈಗಾರಿಕಾ ಪ್ರದೇಶ, ದೀಪಾಂಜಲಿ ನಗರ, ಮುತ್ತಾಚಾರಿ ಕೈಗಾರಿಕಾ ಪ್ರದೇಶ ಸುತ್ತಮುತ್ತ.











ಕ್ರ.ಸಂ.	ತರಗತಿ (ಉತ್ತೀರ್ಣಕ್ಕೆ)	ವಾರ್ಷಿಕ ಸಹಾಯಧನ	
		ಗಂಡು	ಹೆಣ್ಣು
1.	ನರ್ಸರಿ	3,000/-	4,000/-
2.	1 ರಿಂದ 4ನೇ ತರಗತಿ	3,000/-	4,000/-
3.	5 ರಿಂದ 8ನೇ ತರಗತಿ	5,000/-	6,000/-
4.	9 ಹಾಗೂ 10ನೇ ತರಗತಿ	10,000/-	11,000/-
5.	ಪ್ರಥಮ ಪಿ.ಯು.ಸಿ. ಮತ್ತು ದ್ವಿತೀಯ ಪಿ.ಯು.ಸಿ.	10,000/-	14,000/-
6.	ಐ.ಟಿ.ಐ.	12,000/-	15,000/-
7.	ಪದವಿ (ಪ್ರತಿ ವರ್ಷಕ್ಕೆ)	15,000/-	20,000/-
8.	ಸ್ನಾತಕೋತ್ತರ ಪದವಿ ಸೇರ್ಪಡೆಗೆ	20,000/-	20,000/-
	ಪ್ರತಿ ವರ್ಷಕ್ಕೆ	20,000/-	25,000/-
9.	ಇಂಜಿನಿಯರಿಂಗ್ ಕೋರ್ಸ್ ಬಿ.ಇ./ಬಿ.ಟೆಕ್. ಸೇರ್ಪಡೆಗೆ	25,000/-	25,000/-
	ಪ್ರತಿ ವರ್ಷಕ್ಕೆ	25,000/-	30,000/-
10.	ವೈದ್ಯಕೀಯ ಕೋರ್ಸ್ ಸೇರ್ಪಡೆಗೆ	30,000/-	30,000/-
	ಪ್ರತಿ ವರ್ಷಕ್ಕೆ	40,000/-	50,000/-
11.	ಡಿಪ್ಲೊಮಾ	15,000/-	20,000/-
12.	ಎಂ.ಟೆಕ್./ಎಂ.ಇ.	30,000/-	35,000/-
13.	ಎಂ.ಡಿ. (ವೈದ್ಯಕೀಯ)	45,000/-	55,000/-
14.	ಪಿ.ಹೆಚ್‌ಡಿ. (ಪ್ರತಿ ವರ್ಷಕ್ಕೆ – ಗರಿಷ್ಠ 03 ವರ್ಷ)	25,000/-	30,000/-

ಶುಕ್ರವಾರ ● ಜೂನ್ 18, 2021 ಪ್ರಜಾವಾಣಿ

'ಶುಲ್ಕ ಗೊಂದಲ ಪರಿಹಾರಕ್ಕೆ 3 ಸೂತ್ರ'

ಬೆಂಗಳೂರು: ಶಾಲಾ ಶುಲ್ಕದ ವಿಚಾರವಾಗಿ ಖಾಸಗಿ ಶಾಲೆಗಳ ಆಡಳಿತ ಮಂಡಳಿ ಹಾಗೂ ಪೋಷಕರ ನಡುವೆ ಉದ್ಭವಿಸಿರುವ ಬಿಕ್ಕಟ್ಟು ಪರಿಹರಿಸಲು ಆಮ್ ಆದ್ಮಿ ಪಕ್ಷವು ಮೂರು ಅಂಶಗಳ ಸೂತ್ರವನ್ನು ಸೂಚಿಸಿದೆ.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ, ಆನ್‌ಲೈನ್‌ನಲ್ಲಿ ಗುರುವಾರ ಸುದ್ದಿಗೋಷ್ಠಿಯಲ್ಲಿ ಈ ಕುರಿತು ಮಾತನಾಡಿದರು.

'₹50 ಸಾವಿರದವರೆಗೆ ಶುಲ್ಕ ಪಡೆಯುವ ಬಜೆಟ್ ಶಾಲೆಗಳಲ್ಲಿ ಅನೇಕರು ವ್ಯಾಸಂಗ ಮಾಡುತ್ತಿದ್ದಾರೆ. ಅಂತಹ ವಿದ್ಯಾರ್ಥಿಗಳಿಗೆ ಸರ್ಕಾರವು ಕನಿಷ್ಠ ₹15 ಸಾವಿರ ಶಿಷ್ಯವೇತನ ನೀಡಬೇಕು. ಅಥವಾ ಆ ಶಾಲೆಗಳ ಶಿಕ್ಷಕರಿಗೆ ಅನುದಾನಿತ ಶಾಲಾ ಶಿಕ್ಷಕರ ರೀತಿಯಲ್ಲೇ ವೇತನ ಭತ್ಯೆಗಳನ್ನು ಒದಗಿಸಬೇಕು' ಎಂದರು.

'ವಿದ್ಯಾರ್ಥಿಗಳಿಗೆ ಸ್ಮಾರ್ಟ್‌ಫೋನ್, ಟ್ಯಾಬ್ ಖರೀದಿಸಲು ಬಡ್ಡಿರಹಿತ ಸಾಲ ನೀಡುವ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು. ಇದರ ಜೊತೆಗೆ ಪೋಷಕರು, ಶಿಕ್ಷಕರು, ಆಡಳಿತ ಮಂಡಳಿ ಹಾಗೂ ಸ್ಥಳೀಯ ನಾಗರಿಕ ಸಂಘಗಳ ಸದಸ್ಯರನ್ನೊಳಗೊಂಡ ಶಾಲಾ ನಿರ್ವಹಣಾ ಸಮಿತಿ ರಚಿಸಿ, ಅದಕ್ಕೆ ಸಾಂವಿಧಾನಿಕ ಹಕ್ಕು ನೀಡಬೇಕು. ಈ ಪರಿಹಾರ ಸೂತ್ರಗಳನ್ನು ಕೂಡಲೇ ಜಾರಿಗೆ ತರಬೇಕು' ಎಂದು ಒತ್ತಾಯಿಸಿದರು.

ಗೊಂದಲದಲ್ಲಿ ವಿದ್ಯಾರ್ಥಿಗಳು, ಪೋಷಕರು ● ಉಪನ್ಯಾಸಕರ ಇನ್ನಿಲ್ಲದ ಕಸರತ್ತು

ಪ್ರಥಮ ಪಿಯುಸಿ ಮೌಲ್ಯಾಂಕನ ಗೊಂದಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರೀಕ್ಷೆ ಇಲ್ಲದೆ ಪ್ರಥಮ ಪಿಯುಸಿ ವಿದ್ಯಾರ್ಥಿಗಳನ್ನು ಪಾಸ್ ಎಂದು ಘೋಷಿಸಿದ್ದ ಪದವಿ ಪೂರ್ವ ಶಿಕ್ಷಣ ಇಲಾಖೆ, ಈಗ 100 ಅಂಕಗಳ ಎರಡು 'ಅಸೈನ್‌ಮೆಂಟ್'ಗಳ ಮೂಲಕ ಪರೀಕ್ಷೆ ನಡೆಸುತ್ತಿರುವುದು ವಿದ್ಯಾರ್ಥಿಗಳು, ಪೋಷಕರು ಮತ್ತು ಉಪನ್ಯಾಸಕರನ್ನು ಗೊಂದಲಕ್ಕೀಡು ಮಾಡಿದೆ.

ವಿದ್ಯಾರ್ಥಿಗಳ ಕಲಿಕಾ ಪ್ರಕ್ರಿಯೆ ನಿರಂತರತೆಯ ಉದ್ದೇಶಕ್ಕಾಗಿ 'ಅಸೈನ್‌ಮೆಂಟ್'ಗಳನ್ನು ಬರೆಸಿ ಮೌಲ್ಯಾಂಕನ ನೀಡಿ, ವಿದ್ಯಾರ್ಥಿ ಸಾಧನೆಯ ಟ್ರ್ಯಾಕಿಂಗ್ ವ್ಯವಸ್ಥೆಯಲ್ಲಿ (ಎಸ್‌ಎಟಿಎಸ್) ನಮೂದಿಸುವಂತೆ ಇದೇ 8ರಂದು ಇಲಾಖೆ ಸುತ್ತೋಲೆ ಹೊರಡಿಸಿದೆ.

ಸುತ್ತೋಲೆ ಪ್ರಕಾರ ಎರಡು ಮಾದರಿ ಪ್ರಶ್ನೆಗಳಿಗೆ ವಿದ್ಯಾರ್ಥಿಗಳು ಉತ್ತರಿಸಬೇಕು. ಅವುಗಳನ್ನು ಅಸೈನ್‌ಮೆಂಟ್ ಎಂದು ಪರಿಗಣಿಸಿ, ಉಪನ್ಯಾಸಕರು ಮೌಲ್ಯಮಾಪನ ಮಾಡಿ ಅಂಕ ನೀಡಬೇಕು. ಒಟ್ಟು 200 ಅಂಕಗಳಿಗೆ ಪಡೆದ ಅಂಕಗಳನ್ನು ಸ್ಲ್ಯಾಬ್ ಆಧರಿಸಿ 60 ಅಂಕಗಳಿಗೆ ಪರಿವರ್ತಿಸಿಕೊಳ್ಳಬೇಕು. ಈ ಅಂಕಗಳಿಗೆ ಉತ್ತೀರ್ಣ ಅಂಕ 35 ಮತ್ತು ಉಪನ್ಯಾಸಕರ ಆಂತರಿಕ ಮೌಲ್ಯಮಾಪನ ಅಂಕ 5 ನೀಡಬೇಕು. ಹೀಗೆ 100 ಅಂಕಗಳಿಗೆ ಎಷ್ಟು ಅಂಕಗಳನ್ನು ವಿದ್ಯಾರ್ಥಿಗಳು ಪಡೆದಿದ್ದಾರೆ ಎಂಬುದನ್ನು ಲೆಕ್ಕ ಮಾಡಿ ಎಸ್‌ಎಟಿಎಸ್‌ನಲ್ಲಿ ನಮೂದಿಸಬೇಕು. ಸುತ್ತೋಲೆಯಲ್ಲಿ 2 ಮಾದರಿ ಪ್ರಶ್ನೆಪತ್ರಿಕೆಗಳು ಎಂದು ಹೇಳಲಾಗಿದೆ. ಆದರೆ, ವಾಸ್ತವವಾಗಿ ಪ್ರತಿ ವಿಷಯಕ್ಕೆ 2 ಮಾದರಿ ಪ್ರಶ್ನೆ ಪತ್ರಿಕೆಗಳಿಗೆ ವಿದ್ಯಾರ್ಥಿಗಳು ಉತ್ತರಿಸಬೇಕಿದೆ. ಅಂದರೆ, 6 ವಿಷಯಗಳಿಂದ ಒಟ್ಟು 12 ಪ್ರಶ್ನೆಪತ್ರಿಕೆಗಳಿಗೆ ವಿದ್ಯಾರ್ಥಿಗಳು ಉತ್ತರಿಸಬೇಕು.

ಮೊದಲ ಪ್ರಶ್ನೆ ಪತ್ರಿಕೆಯ ಅಸೈನ್‌ಮೆಂಟ್‌ಗಳನ್ನು ಇದೇ 20ರೊಳಗೆ ಸಲ್ಲಿಸಬೇಕು. ಬೆಂಗಳೂರಿನ ಕೆಲವು ಖಾಸಗಿ ಕಾಲೇಜುಗಳ ವಿದ್ಯಾರ್ಥಿಗಳಿಂದ ಉತ್ತಮ ಪ್ರಕ್ರಿಯೆ ವ್ಯಕ್ತವಾಗಿದೆ. ಆದರೆ, ಸರ್ಕಾರಿ ಮತ್ತು ಅನುದಾನಿತ ಕಾಲೇಜುಗಳಲ್ಲಿ ವಿದ್ಯಾರ್ಥಿಗಳನ್ನು ಸಂಪರ್ಕಿಸಲು ಉಪನ್ಯಾಸಕರು ಇನ್ನಿಲ್ಲದ ಕಸರತ್ತು ನಡೆಸುತ್ತಿದ್ದಾರೆ.

'ಅತಿಥಿ ಉಪನ್ಯಾಸಕರನ್ನು ಈಗಾಗಲೇ ಇಲಾಖೆ ಬಿಡುಗಡೆ ಮಾಡಿದೆ. ಅವರಿಗೆ ಕೆಲವು ತಿಂಗಳ ವೇತನ ಬಾಕಿ ಬೇರೆ ಇದೆ. ಅತಿಥಿ ಉಪನ್ಯಾಸಕರನ್ನು ಏಕಾಏಕಿ ಬಿಡುಗಡೆಗೊಳಿಸಿರುವುದರಿಂದ ಅವರೆಲ್ಲರೂ ಅಸೈನ್‌ಮೆಂಟ್ ಮೌಲ್ಯಮಾಪನ ಮಾಡದಿರಲು ನಿರ್ಧರಿಸಿದ್ದಾರೆ. ಇದು ಪ್ರಾಂಶುಪಾಲರಿಗೆ ತಲೆನೋವು ತಂದಿದೆ.

'ವಿದ್ಯಾರ್ಥಿ ವೇತನ ಪಡೆಯಲು ಕೆಲವು ಪ್ರವರ್ಗದ ವಿದ್ಯಾರ್ಥಿಗಳಿಗೆ ಇರಬೇಕಾದ ಕನಿಷ್ಠ ಶೇಕಡ ಅಂಕಗಳನ್ನು ಗೊತ್ತುಪಡಿಸಲಾಗಿದೆ. ವಿದ್ಯಾರ್ಥಿಗಳು ಅಸೈನ್‌ಮೆಂಟ್ ಸಲ್ಲಿಸದಿದ್ದರೆ, ಕನಿಷ್ಠ ಅಂಕ ಮಾತ್ರ ಸಿಗಲಿದೆ. ಅಂಥವರು ಶಿಷ್ಯವೇತನದಿಂದ ವಂಚಿತರಾಗುವ ಸಾಧ್ಯತೆಯಿದೆ. ಆದ್ದರಿಂದ ಈ ಮೌಲ್ಯಾಂಕನ ವಿಧಾನವೇ ವಿರೋಧಾಭಾಸದಿಂದ ಕೂಡಿದೆ' ಎಂದು ಪ್ರಾಂಶುಪಾಲರೊಬ್ಬರು ಅಭಿಪ್ರಾಯಪಟ್ಟರು.

'ಮೌಲ್ಯಾಂಕನ ನಿರ್ಧಾರವನ್ನು ಮರುಪರಿಶೀಲಿಸಬೇಕು ಮತ್ತು ದ್ವಿತೀಯ ಪಿಯುಸಿ ತರಗತಿ ಆರಂಭವಾಗುವ ಸಂದರ್ಭದಲ್ಲಿ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗೆ ನೇರ ಪರೀಕ್ಷೆ ನಡೆಸಲು ಅವಕಾಶ ಕಲ್ಪಿಸಬೇಕು' ಎಂದು ಪದವಿ ಪೂರ್ವ ಉಪನ್ಯಾಸಕರ ಸಂಘ ಈಗಾಗಲೇ ಮನವಿ ಮಾಡಿದೆ.

'ವಿದ್ಯಾರ್ಥಿಗಳಿಂದ 'ಅಸೈನ್‌ಮೆಂಟ್' ನಕಲು'

'ದಾಖಲಾತಿ ಸಂದರ್ಭದಲ್ಲಿ ಪೋಷಕರ ಮೊಬೈಲ್ ಸಂಖ್ಯೆಯನ್ನೊ, ಸಂಬಂಧಿಕರ ಸಂಖ್ಯೆಯನ್ನೋ ವಿದ್ಯಾರ್ಥಿಗಳು ಕೊಟ್ಟಿರುತ್ತಾರೆ. ಅವರು ಊರಿಗೆ ಹೋಗಿದ್ದಾರೆ, ಅವರದ್ದೂ ಗೊತ್ತಿಲ್ಲ, ನಾಟ್ ರೀಚೆಬಲ್ ಉತ್ತರಗಳು ಬರುತ್ತಿವೆ. 'ನಮಗೆ ಪಾಠ ಬೋಧನೆ ಪೂರ್ಣ ಆಗದಿರುವುದರಿಂದ ಪ್ರಶ್ನೆಗಳಿಗೆ ಉತ್ತರ ಬರೆಯುವುದು ಹೇಗೆ' ಎನ್ನುವುದು ಸರ್ಕಾರಿ ಕಾಲೇಜಿನ ವಿದ್ಯಾರ್ಥಿಗಳ ಪ್ರಶ್ನೆ. ಕೆಲವರು ಬುದ್ಧಿವಂತ ವಿದ್ಯಾರ್ಥಿ ಬರೆದ ಅಸೈನ್‌ಮೆಂಟ್‌ನ್ನೇ ನಕಲು ಮಾಡಿ ಕಳುಹಿಸುತ್ತಿದ್ದಾರೆ' ಎಂದು ಉಪನ್ಯಾಸಕರೊಬ್ಬರು ಹೇಳಿದರು.

ಸುದ್ದಿ 2 ನಿಮಿಷ


ಡಿ.ಎಸ್. ರಾಮಸ್ವಾಮಿಗೆ ಕಡೆಂಗೋಡ್ಲು ಕಾವ್ಯ ಪ್ರಶಸ್ತಿ

ಉಡುಪಿ: ರಾಷ್ಟ್ರಕವಿ ಗೋವಿಂದ ಪೈ ಸಂಶೋಧನಾ ಕೇಂದ್ರ, ಮಣಿಪಾಲ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ಕೊಡಮಾಡುವ ಕಡೆಂಗೋಡ್ಲು ಕಾವ್ಯ ಪ್ರಶಸ್ತಿಯು ಲೇಖಕ ಡಿ.ಎಸ್. ರಾಮಸ್ವಾಮಿ ಅವರಿಗೆ ಲಭಿಸಿದೆ.

ಡಿ.ಎಸ್. ರಾಮಸ್ವಾಮಿ ಅವರ 'ಮೀನು ಬೇಟೆಗೆ ನಿಂತ ದೋಣಿ ಸಾಲು' ಅಪ್ರಕಟಿತ ಕವನ ಸಂಕಲನವನ್ನು ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ. ಕವಿ, ಕಾದಂಬರಿಕಾರ, ನಾಟಕಕಾರ, ಕಥೆಗಾರ, ಪತ್ರಿಕೋದ್ಯಮಿ ಹೀಗೆ ಕನ್ನಡ ಸಾರಸ್ವತ ಲೋಕದಲ್ಲಿ ಹೆಸರುವಾಸಿಯಾದ ಕಡೆಂಗೋಡ್ಲು ಶಂಕರ ಭಟ್ಟರ ಹೆಸರಲ್ಲಿ ಪ್ರಶಸ್ತಿಯನ್ನು ನೀಡಲಾಗುತ್ತಿದೆ ಎಂದು ಆಡಳಿತಾಧಿಕಾರಿ ಡಾ. ಬಿ. ಜಗದೀಶ್ ಶೆಟ್ಟಿ ತಿಳಿಸಿದ್ದಾರೆ.

ಡಿ.ಎಸ್. ರಾಮಸ್ವಾಮಿ ತರೀಕೆರೆಯವರಾಗಿದ್ದು, ಪ್ರಸ್ತುತ ಅರಸೀಕೆರೆ ಭಾರತೀಯ ಜೀವ ವಿಮಾ ನಿಗಮದಲ್ಲಿ ಆಡಳಿತಾಧಿಕಾರಿಯಾಗಿದ್ದಾರೆ. ಹಾಸನ, ಭದ್ರಾವತಿ ಮತ್ತು ಮೈಸೂರು ಆಕಾಶವಾಣಿಯಲ್ಲಿ ಅವರ 150ಕ್ಕೂ ಹೆಚ್ಚು ಚಿಂತನೆಗಳು ಪ್ರಸಾರವಾಗಿವೆ. 'ಅಂಡಮಾನ್' ಕುರಿತ ಪ್ರವಾಸ ಕಥನ ಧಾರಾವಾಹಿಯಾಗಿ ಪ್ರಸಾರಗೊಂಡಿತ್ತು. ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ಡಿ.ಸಿ. ಅನಂತಸ್ವಾಮಿ ಪ್ರಶಸ್ತಿ, ಶಿವಮೊಗ್ಗ ಕರ್ನಾಟಕ ಸಂಘದ ಪ್ರೊ.ಜಿ.ಎಸ್. ಶಿವರುದ್ರಪ್ಪ ಕಾವ್ಯ ಪ್ರಶಸ್ತಿ, ಕಾಂತಾವರ ಕನ್ನಡ ಸಂಘದ ಮುದ್ದಣ ಕಾವ್ಯ ಪ್ರಶಸ್ತಿ ಹಾಗೂ ವಿಭಾಕಾವ್ಯ ಪ್ರಶಸ್ತಿಗಳು ರಾಮಸ್ವಾಮಿ ಅವರಿಗೆ ಸಂದಿವೆ.

ಪ್ರಶಸ್ತಿಯು ₹ 10,000 ಹಾಗೂ ಪ್ರಶಸ್ತಿ ಫಲಕ ಒಳಗೊಂಡಿದೆ.



ನಿರ್ಗತಿಕರಿಗೆ ಪೊಲೀಸರಿಂದ ಬೆಡ್‌ಶೀಟ್ ವಿತರಣೆ

ಬೆಂಗಳೂರು: ಸಿಟಿ ಮಾರುಕಟ್ಟೆ ಪ್ರದೇಶ ಹಾಗೂ ರಸ್ತೆ ಬದಿ ಮಲಗುವ ನಿರ್ಗತಿಕರಿಗೆ ಪೊಲೀಸರು ಬುಧವಾರ ರಾತ್ರಿ ಬೆಡ್ ವಿತರಿಸಿದರು.

ನಗರದಲ್ಲಿ ಕೆಲದಿನಗಳಿಂದ ಮಳೆಯಾಗುತ್ತಿದ್ದು, ಚಳಿಯೂ ಇದೆ. ಇದರ ನಡುವೆಯೇ ನಿರ್ಗತಿಕರು, ರಸ್ತೆ ಬದಿ ಹಾಗೂ ವಿವಿಧ ಸ್ಥಳಗಳಲ್ಲಿ ಮಲಗುತ್ತಿದ್ದಾರೆ. ಅವರೆಲ್ಲ ಕಾಗದ ಹಾಗೂ ಬ್ಯಾನರ್‌ಗಳನ್ನೇ ಹೊದಿಕೆಯಾಗಿ ಬಳಸುತ್ತಿದ್ದಾರೆ.

ರಾತ್ರಿ ಗಸ್ತಿನಲ್ಲಿದ್ದ ಪಶ್ಚಿಮ ವಿಭಾಗದ ಡಿಸಿಪಿ ಸಂಜೀವ ಪಾಟೀಲ ಹಾಗೂ ಇನ್‌ಸ್ಪೆಕ್ಟರ್ ಕುಮಾರಸ್ವಾಮಿ ಅವರು ನಿರ್ಗತಿಕರ ಕಷ್ಟವನ್ನು ಆಲಿಸಿದರು. ನಂತರ ಬೆಡ್ ಶೀಟ್‌ಗಳನ್ನು ತಂದು ವಿತರಿಸಿದರು. ತಾವೇ ಕೆಲವರಿಗೆ ಬೆಡ್ ಶೀಟ್ ಹೊದಿಸಿದರು. ಅವರ ಕೆಲಸಕ್ಕೆ ಸಿಬ್ಬಂದಿ ಸಹಕಾರ ನೀಡಿದರು.

ಕೋವಿಡ್: ದೃಢ ಪ್ರಮಾಣ ಶೇ 3.77ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ


ಬೆಂಗಳೂರು: ರಾಜ್ಯದಲ್ಲಿ ಹೊಸದಾಗಿ 5,983 ಮಂದಿ ಕೋವಿಡ್ ಪೀಡಿತರಾಗಿರುವುದು ಗುರುವಾರ ದೃಢಪಟ್ಟಿದೆ. ಬೆಂಗಳೂರು ಸೇರಿದಂತೆ ಮೂರು ಜಿಲ್ಲೆಗಳಲ್ಲಿ ಮಾತ್ರ 500ಕ್ಕೂ ಅಧಿಕ ಹೊಸ ಪ್ರಕರಣಗಳು ವರದಿಯಾಗಿದ್ದು, 12 ಜಿಲ್ಲೆಗಳಲ್ಲಿ ಈ ಸಂಖ್ಯೆ ಎರಡಂಕಿಯಲ್ಲಿದೆ.

ಒಂದು ದಿನದ ಅವಧಿಯಲ್ಲಿ 1.58 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದೆ. ಸೋಂಕು ದೃಢ ಪ್ರಮಾಣವು ಶೇ 3.77ಕ್ಕೆ ಇಳಿಕೆಯಾಗಿದೆ. ಈ ಪ್ರಮಾಣವು ಕಳೆದ ತಿಂಗಳು ಈ ವೇಳೆ ಶೇ 40ಕ್ಕೆ ಏರಿಕೆಯಾಗಿತ್ತು. ಈ ತಿಂಗಳು 17 ದಿನಗಳಲ್ಲಿ 1.85 ಲಕ್ಷ ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ. ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 27.90 ಲಕ್ಷ ದಾಟಿದೆ.

ಕೊರೊನಾ ಸೋಂಕಿತರಲ್ಲಿ 138 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಮರಣ ಪ್ರಮಾಣ ದರವು ಶೇ 2.30ರಷ್ಟು ವರದಿಯಾಗಿದೆ. ರಾಜ್ಯದ 24 ಜಿಲ್ಲೆಗಳಲ್ಲಿ ಹೊಸದಾಗಿ ಮರಣ ಪ್ರಕರಣಗಳು ವರದಿಯಾಗಿವೆ. ಮೈಸೂರಿನಲ್ಲಿ 26 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ಬೆಂಗಳೂರಿನಲ್ಲಿ 17 ಮಂದಿ, ದಕ್ಷಿಣ ಕನ್ನಡ ಹಾಗೂ ದಾವಣಗೆರೆಯಲ್ಲಿ ತಲಾ 11 ಮಂದಿ ಸಾವಿಗೀಡಾಗಿದ್ದಾರೆ. ಉಳಿದ ಜಿಲ್ಲೆಗಳಲ್ಲಿ 10ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ. ಈವರೆಗೆ ಕೋವಿಡ್‌ನಿಂದ ಮೃತಪಟ್ಟವರ ಒಟ್ಟು ಸಂಖ್ಯೆ 33,434ಕ್ಕೆ ತಲುಪಿದೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 1.46 ಲಕ್ಷಕ್ಕೆ ಇಳಿಕೆಯಾಗಿದೆ. ಸೋಂಕಿತರಲ್ಲಿ 10,685 ಮಂದಿಗೆ ಕಾಯಿಲೆ ವಾಸಿಯಾಗಿದೆ. ಈವರೆಗೆ ಗುಣಮುಖರಾದವರ ಒಟ್ಟು ಸಂಖ್ಯೆ 26.10 ಲಕ್ಷ ದಾಟಿದೆ.

ಬೆಂಗಳೂರಿನಲ್ಲಿ 1,209 ಮಂದಿ ಸೋಂಕಿತರಾಗಿರುವುದು ಖಚಿತಪಟ್ಟಿದೆ. ದಕ್ಷಿಣ ಕನ್ನಡದಲ್ಲಿ 679, ಮೈಸೂರಿನಲ್ಲಿ 596 ಪ್ರಕರಣಗಳು ವರದಿಯಾಗಿವೆ. ಬೀದರ್, ಬಾಗಲಕೋಟೆ, ಗದಗ, ಹಾವೇರಿ, ಕಲಬುರ್ಗಿ, ಕೊಪ್ಪಳ, ರಾಯಚೂರು, ರಾಮನಗರ, ಯಾದಗಿರಿಯಲ್ಲಿ 50ಕ್ಕಿಂತ ಕಡಿಮೆ ಸಂಖ್ಯೆಯಲ್ಲಿ ಹೊಸ ಪ್ರಕರಣಗಳು ವರದಿಯಾಗಿವೆ.



ಲಸಿಕೆ: ಶೇ 92ರಷ್ಟು ಮಂದಿ ಬೇಗ ಚೇತರಿಕೆ

ಬೆಂಗಳೂರು: ಕೊರೊನಾ ಸೋಂಕಿನ ತೀವ್ರತೆ ತಡೆಯಲು ಸದ್ಯ ಬಳಕೆಯಲ್ಲಿರುವ ಕೋವಿಡ್ ಲಸಿಕೆಗಳು ಸಹಕಾರಿ ಎಂಬುದು ಫೋರ್ಟಿಸ್ ಹೆಲ್ತ್‌ಕೇರ್ ನಡೆಸಿದ ಅಧ್ಯಯನದಿಂದ ದೃಢಪಟ್ಟಿದೆ.

ಈ ಬಗ್ಗೆ ಸಂಸ್ಥೆಯು ಅಧ್ಯಯನ ವರದಿ ಬಿಡುಗಡೆ ಮಾಡಿದೆ. ಜನವರಿಯಿಂದ ಮೇ ತಿಂಗಳವರೆಗೆ ಕೊರೊನಾ ಸೋಂಕಿತರಾದ 1,600 ಆರೋಗ್ಯ ಕಾರ್ಯಕರ್ತರನ್ನು ಅಧ್ಯಯನಕ್ಕೆ ಒಳಪಡಿಸಲಾಗಿತ್ತು. ಅವರು ಎರಡು ಡೋಸ್ ಲಸಿಕೆ ಪಡೆದುಕೊಂಡವರು. ಶೇ 92ರಷ್ಟು ಮಂದಿಗೆ ಸೋಂಕಿನ ಲಕ್ಷಣಗಳು ಅಷ್ಟಾಗಿ ಗೋಚರಿಸಲಿಲ್ಲ. ಹೀಗಾಗಿ, ವಿಶೇಷ ಚಿಕಿತ್ಸೆಯೂ ಬೇಕಾಗಲಿಲ್ಲ. ಶೇ 1ರಷ್ಟು ಮಂದಿ ಮಾತ್ರ ತೀವ್ರ ನಿಗಾ ಘಟಕಕ್ಕೆ ದಾಖಲಾಗಿದ್ದರು.

'ಲಸಿಕೆ ಪಡೆದ ಆರೋಗ್ಯ ಕಾರ್ಯಕರ್ತರಲ್ಲಿ ಬಹುತೇಕರಿಗೆ ಸೋಂಕು ತಗುಲಿದರೂ ಅಷ್ಟಾಗಿ ಲಕ್ಷಣಗಳು ಗೋಚರಿಸಲಿಲ್ಲ. ಎರಡೂ ಡೋಸ್ ಪಡೆದವರಲ್ಲಿ ಶೇ 7ರಷ್ಟು ಮಂದಿ ಮಾತ್ರ ಆಮ್ಲಜನಕದ ಹಾಸಿಗೆ ಅವಲಂಬಿಸಿದ್ದರು. ಹೀಗಾಗಿ, ಕೋವಿಡ್ ಜಯಿಸಲು ಲಸಿಕೆ ಸಹಾಯಕಾರಿ' ಎಂದು ವರದಿಯಲ್ಲಿ ತಿಳಿಸಲಾಗಿದೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಸಂಸ್ಥೆಯ ಕಾರ್ಯಾಚರಣೆ ಮುಖ್ಯಸ್ಥ ಡಾ. ಬಿಷ್ಣು ಪಾಣಿಗ್ರಹಿ, 'ದೇಶದಲ್ಲಿ ಲಭ್ಯವಿರುವ ಕೋವಿಡ್ ಲಸಿಕೆಗಳು ಹೆಚ್ಚು ಪರಿಣಾಮಕಾರಿಯಾಗಿವೆ ಎಂಬುದು ಈ ಅಧ್ಯಯನದಿಂದ ತಿಳಿದು ಬಂದಿದೆ. ಹೀಗಾಗಿ, ಲಸಿಕೆ ಉತ್ಪಾದನೆ ಹೆಚ್ಚು ಮಾಡಿ, ಬೇಗ ಎಲ್ಲರಿಗೂ ನೀಡಬೇಕು. ಆಗ ಸೋಂಕಿನಿಂದಾಗುವ ಅಪಾಯದಿಂದ ತಪ್ಪಿಸಿಕೊಳ್ಳಬಹುದು' ಎಂದು ತಿಳಿಸಿದ್ದಾರೆ.

ಕಪ್ಪು ಶಿಲೀಂಧ್ರಕ್ಕೆ ಚಿಕಿತ್ಸೆ ದುಬಾರಿ: ಹೈಕೋರ್ಟ್‌ಗೆ ಮಾಹಿತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಪ್ಪು ಶಿಲೀಂಧ್ರದಿಂದ ಬಳಲುತ್ತಿರುವ 117 ರೋಗಿಗಳು ಚಿಕಿತ್ಸಾ ವೆಚ್ಚ ದುಬಾರಿ ಎಂಬ ಕಾರಣಕ್ಕೆ ವೈದ್ಯರ ಸಲಹೆಗೆ ವಿರುದ್ಧವಾಗಿ ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ' ಎಂದು ಹೈಕೋರ್ಟ್‌ಗೆ ರಾಜ್ಯ ಸರ್ಕಾರ ಮಾಹಿತಿ ನೀಡಿದೆ.

ಕಪ್ಪು ಶಿಲೀಂಧ್ರ ಸೋಂಕಿತರಿಗೆ ಹಾಸಿಗೆ ಕಾಯ್ದಿರಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಬೇಕು. ಸರ್ಕಾರಿ ಆಸ್ಪತ್ರೆಗಳಿಗೆ ದಾಖಲಾಗುವ ರೋಗಿಗಳಿಗೆ ಉಚಿತವಾಗಿ ಚಿಕಿತ್ಸೆ ನೀಡಲು ನಿರ್ಧಾರ ಕೈಗೊಳ್ಳುವಂತೆ ರಾಜ್ಯ ಸರ್ಕಾರಕ್ಕೆ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ಮತ್ತು ನ್ಯಾಯಮೂರ್ತಿ ಅರವಿಂದಕುಮಾರ್ ಅವರಿದ್ದ ವಿಭಾಗೀಯ ಪೀಠ ನಿರ್ದೇಶನ ನೀಡಿತು.

'ರಾಜ್ಯದಲ್ಲಿ ಒಟ್ಟು 2,871 ಕಪ್ಪು ಶಿಲೀಂಧ್ರ ಪ್ರಕರಣಗಳಿದ್ದು, 2,304 ಜನ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಸರ್ಕಾರದ ಪರ ವಕೀಲರು ವಿವರ ಸಲ್ಲಿಸಿದರು.

'ಜೂನ್ 17ರ ತನಕ 217 ಮಂದಿ ಮೃತಪಟ್ಟಿದ್ದು, ಇದನ್ನು ಗಮನಿಸಿದರೆ ಸಾವಿನ ಪ್ರಮಾಣ ಕೂಡ ಹೆಚ್ಚಾಗಿದೆ' ಎಂದು ಪೀಠ ಅಭಿಪ್ರಾಯಪಟ್ಟಿತು.

ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ₹11 ಲಕ್ಷ ವೆಚ್ಚವಾಗಿರುವ ಬಗ್ಗೆ ವಕೀಲರೊಬ್ಬರು ಬರೆದಿದ್ದ ಪತ್ರವನ್ನು ಅಮಿಕಸ್ ಕ್ಯೂರಿ ಅವರು ವಿಚಾರಣೆ ವೇಳೆ ಸಲ್ಲಿಸಿದರು.

'ಕಪ್ಪು ಶಿಲೀಂಧ್ರ ಸೋಂಕಿನ ಬಗ್ಗೆ ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಯಾವುದೇ ಕ್ರಮಗಳಿಲ್ಲ. ಹೀಗಾಗಿಯೇ, ಚಿಕಿತ್ಸೆ ವೆಚ್ಚ ದುಬಾರಿ ಎಂಬ ಕಾರಣಕ್ಕೆ ವೈದ್ಯರ ಸಲಹೆಗೆ ವಿರುದ್ಧವಾಗಿ 117 ರೋಗಿಗಳು ಆಸ್ಪತ್ರೆಯಿಂದ ಬಿಡುಗಡೆಯಾಗಿದ್ದಾರೆ' ಎಂದು ಪೀಠ ಅಭಿಪ್ರಾಯಪಟ್ಟಿತು.

'ಇದು ಕೋವಿಡ್‌ಗೆ ಸಂಬಂಧಿಸಿದ ಸೋಂಕಾಗಿರುವ ಕಾರಣ ಹಾಸಿಗೆಗಳನ್ನು ಕಾಯ್ದಿರಿಸಲಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು' ಎಂದು ಪೀಠ ತಿಳಿಸಿತು. ವಿಚಾರಣೆಯನ್ನು ಜೂ.21ಕ್ಕೆ ಮುಂದೂಡಿತು.

ನಗರದಲ್ಲಿ ಇಂದು

ವಿಶೇಷ ಉಪನ್ಯಾಸ: ವಿಷಯ: 'ಬಾಬಾಸಾಹೇಬ್ ಅಂಬೇಡ್ಕರ್ ಮತ್ತು ಸಮಕಾಲೀನ ಭಾರತ', ಉಪನ್ಯಾಸಕ: ಡಾ. ನಟರಾಜ್ ಹುಳಿಯಾರ್, ಉಪಸ್ಥಿತಿ: ಪ್ರೊ. ಜಯಸಿಂಹ ಡಿ.ಎಸ್., ಡಾ. ನಿಖಿತಾ ಆಲುರ್, ಡಾ. ಶಿವರಾಜ್ ಬಿ.ಇ, ಪ್ರೊ. ಶರತ್ ಕುಮಾರ್ ವೈ., ಆಯೋಜನೆ: ದಿ ಆಕ್ಸ್‌ಫರ್ಡ್ ಕಾಲೇಜ್ ಆಫ್ ಬಿಸಿನೆಸ್ ಮ್ಯಾನೇಜ್ಮೆಂಟ್, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)



ಡಾ.ನಟರಾಜ್ ಹುಳಿಯಾರ್

ವಾರದ ಉಪನ್ಯಾಸ: ವಿಷಯ: 'ಪರಿಸರ ರಕ್ಷಣೆ: ಊರೊಟ್ಟಿನ ಆಸ್ತಿ ಯಾರಪ್ಪಂದು?', ಉಪನ್ಯಾಸಕ: ನಾಗೇಶ ಹೆಗಡೆ, ಆಯೋಜನೆ: ಸಾರ್ವಜನಿಕ ವಲಯದ ರಕ್ಷಣೆಗಾಗಿ ಬೆಂಗಳೂರು, ಸಂಜೆ 7 (ಆನ್‌ಲೈನ್ ಕಾರ್ಯಕ್ರಮ)

ಸುರಕ್ಷಾ ಕ್ರಮಗಳೊಂದಿಗೆ ಆತಿಥ್ಯ ಸೇವೆಗೆ ಪುನಃ ಸಜ್ಜಾದ ಹೋಟೆಲ್‌ಗಳು

ಕೋವಿಡ್: ಹೋಟೆಲ್ ಆರೈಕೆ ಸ್ಥಗಿತ

● ವರುಣ ಹೆಗಡೆ

ಬೆಂಗಳೂರು: ನಗರದಲ್ಲಿ ಕೋವಿಡ್ ಹೊಸ ಪ್ರಕರಣಗಳು ಇಳಿಕೆಯಾಗಿರುವುದರಿಂದ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ಮೀಸಲಿರಿಸಿದ ಹಾಸಿಗೆಗಳಲ್ಲಿ ಶೇ 85ಕ್ಕೂ ಅಧಿಕ ಹಾಸಿಗೆಗಳು ಖಾಲಿಯಿವೆ. ಇದರಿಂದಾಗಿ ಖಾಸಗಿ ಆಸ್ಪತ್ರೆಗಳು ಪ್ರಾರಂಭಿಸಿದ ಹೋಟೆಲ್ ಆರೈಕೆ ಕೇಂದ್ರಗಳು ಒಂದೂವರೆ ತಿಂಗಳಲ್ಲೇ ಸ್ಥಗಿತಗೊಂಡಿವೆ.

ಈ ವರ್ಷದ ಮಾರ್ಚ್ ಬಳಿಕ ಸೋಂಕಿತರ ಸಂಖ್ಯೆ ಏರುಗತಿಯಾಗಿದ್ದರಿಂದ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಸಮಸ್ಯೆ ಗಂಭೀರ ಸ್ವರೂಪ ಪಡೆದುಕೊಂಡಿತ್ತು. ಮೇ ತಿಂಗಳಲ್ಲಿ ಸಕ್ರಿಯ ಪ್ರಕರಣಗಳ ಸಂಖ್ಯೆ 4 ಲಕ್ಷದ ಆಸುಪಾಸಿಗೆ ಏರಿಕೆಯಾಗಿತ್ತು. ಸರ್ಕಾರಿ ಹಾಗೂ ಖಾಸಗಿ ವ್ಯವಸ್ಥೆಯಡಿ ಆಸ್ಪತ್ರೆಗಳಲ್ಲಿನ ಬಹುತೇಕ ಎಲ್ಲ ಹಾಸಿಗೆಗಳು ಭರ್ತಿಯಾಗಿದ್ದವು. ಇದರಿಂದಾಗಿ ರೋಗಿಗಳು ಆಸ್ಪತ್ರೆಯಿಂದ ಆಸ್ಪತ್ರೆಗೆ ಅಲೆದಾಟ ನಡೆಸಬೇಕಾದ ಸ್ಥಿತಿ ನಿರ್ಮಾಣವಾಗಿತ್ತು. ಹೀಗಾಗಿ, ಹೋಟೆಲ್‌ಗಳಲ್ಲಿ ಸೌಮ್ಯ ಮತ್ತು ಮಧ್ಯಮ ಸ್ವರೂಪದ ಲಕ್ಷಣಗಳು ಇರುವವರಿಗೆ ಚಿಕಿತ್ಸೆ ಒದಗಿಸಲು ಹಾಸಿಗೆಗಳನ್ನು ಸಜ್ಜುಗೊಳಿಸುವಂತೆ ಸರ್ಕಾರವು ಖಾಸಗಿ ಆಸ್ಪತ್ರೆಗಳಿಗೆ ಸೂಚಿಸಿತ್ತು.

ಕೋವಿಡ್ ಹಾಗೂ ಲಾಕ್‌ಡೌನ್‌ನಿಂದ ಹೋಟೆಲ್ ಉದ್ಯಮ ಕುಸಿತ ಕಂಡಿದ್ದರಿಂದ ಆತಿಥ್ಯ ಕೇಂದ್ರಗಳು ಕೂಡ ಆರೈಕೆ ಕೇಂದ್ರಗಳ ಆರಂಭಕ್ಕೆ ಒಲವು ತೋರಿದ್ದವು. ಸುಗುಣ, ಮಣಿಪಾಲ್, ಪೀಪಲ್ ಟ್ರೀ, ಅಪೋಲೊ, ಕೊಲಂಬಿಯಾ ಏಷ್ಯಾ, ಮಲ್ಲಿಗೆ ಸೇರಿದಂತೆ ನಗರದ ಪ್ರಮುಖ ಆಸ್ಪತ್ರೆಗಳು 32 ಹೋಟೆಲ್‌ಗಳನ್ನು ಗುರುತಿಸಿ, 1,281 ಹಾಸಿಗೆಗಳನ್ನು ಸಜ್ಜುಗೊಳಿಸಿದ್ದವು. ಈ ಸೇವೆಯು ಮನೆ ಆರೈಕೆಗೆ ವ್ಯವಸ್ಥೆ ಇಲ್ಲದವರಿಗೆ, ಅನ್ಯ ರಾಜ್ಯಗಳಿಂದ ಬಂದು ಸೋಂಕಿತರಾದವರಿಗೆ, ಆಸ್ಪತ್ರೆ ಚಿಕಿತ್ಸೆ ಅಗತ್ಯ ಇಲ್ಲದವರಿಗೆ ಸಹಕಾರಿಯಾಗಿದ್ದವು. ಈಗ ಆಸ್ಪತ್ರೆಗಳಲ್ಲಿಯೇ ಹಾಸಿಗೆಗಳು ಖಾಲಿ ಇರುವುದರಿಂದ ಹೋಟೆಲ್ ಆರೈಕೆ ಸೇವೆಯನ್ನು ಆಸ್ಪತ್ರೆಗಳು ಸ್ಥಗಿತ ಮಾಡಿವೆ.

ಪುನಃ ಆತಿಥ್ಯ: 'ಖಾಸಗಿ ಆಸ್ಪತ್ರೆಗಳ ಜತೆಗೆ ಒಪ್ಪಂದ ಮಾಡಿಕೊಂಡು, ಚಿಕಿತ್ಸೆ ಒದಗಿಸಲು ಕೆಲ ತಾರಾ ಹೋಟೆಲ್‌ಗಳನ್ನು ನೀಡಲಾಗಿತ್ತು. ಇದು ಲಾಭದಾಯಕ ಅಲ್ಲದಿದ್ದರೂ ಕೋವಿಡ್ ವಿರುದ್ಧದ ಹೋರಾಟದಲ್ಲಿ ಕೈಜೋಡಿಸುವುದು ನಮ್ಮ ಆಶಯವಾಗಿತ್ತು. ಈಗ ಆಸ್ಪತ್ರೆಗಳಲ್ಲಿಯೇ ಬಹಳಷ್ಟು ಹಾಸಿಗೆಗಳು ಖಾಲಿ ಉಳಿದಿವೆ' ಎಂದು ಬೃಹತ್ ಬೆಂಗಳೂರು ಹೋಟೆಲ್ ಸಂಘಟನೆಯ ಅಧ್ಯಕ್ಷ ಪಿ.ಸಿ. ರಾವ್ ತಿಳಿಸಿದರು.

'ಕೋವಿಡ್ ಸೇವೆ ನೀಡುತ್ತಿದ್ದ ಎಲ್ಲ ಹೋಟೆಲ್‌ಗಳಲ್ಲಿ ಸೋಂಕು ನಿವಾರಕ ದ್ರಾವಣದಿಂದ ಕೊಠಡಿಗಳನ್ನು ಸ್ವಚ್ಛಗೊಳಿಸಲಾಗಿದೆ. ಊರುಗಳಿಗೆ ತೆರಳಿದ್ದ ಸಿಬ್ಬಂದಿಗೆ ವಾಪಸ್ ಬರಲು ಸೂಚಿಸಲಾಗಿದೆ. ಎಲ್ಲ ಸುರಕ್ಷತಾ ಕ್ರಮಗಳನ್ನು ಅನುಸರಿಸಿ, ಆತಿಥ್ಯ ಸೇವೆ ನೀಡಲಾಗುತ್ತದೆ' ಎಂದರು.


ಸರ್ಕಾರಿ ಕೋಟಾದಡಿ ಆಸ್ಪತ್ರೆಗಳಲ್ಲಿ ಹಾಸಿಗೆ ವಿವರ (ಜೂ.17)

ವಿಧ	ಮೀಸಲು	ಭರ್ತಿ	ಖಾಲಿ
ಸಾಮಾನ್ಯ ಹಾಸಿಗೆ	7,172	407	6,765
ಐಸಿಯು ಹಾಸಿಗೆ	570	234	336
ಎಚ್‌ಡಿಯು ಹಾಸಿಗೆ	4,913	712	4,201
ವೆಂಟಿಲೇಟರ್ ಸಹಿತ ಐಸಿಯು ಹಾಸಿಗೆ	643	370	273



ಕೋವಿಡ್ ಚಿಕಿತ್ಸೆಗೆ ಆಸ್ಪತ್ರೆಗಳಿಗೆ ಬರುವವರ ಸಂಖ್ಯೆ ಕೆಲ ದಿನಗಳಿಂದ ಇಳಿಕೆಯಾಗಿದೆ. ಹೀಗಾಗಿ, ಹೋಟೆಲ್‌ಗಳಲ್ಲಿ ಕೋವಿಡ್ ಆರೈಕೆ ಸೌಲಭ್ಯ ನೀಡುತ್ತಿಲ್ಲ.

ಡಾ. ಪ್ರಸನ್ನ ಎಚ್.ಎಂ., ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ಅಧ್ಯಕ್ಷ



ಸಾವಿನ ದರ ಶೇ 1.59ಕ್ಕೆ ಇಳಿಕೆ

27 ವಾರ್ಡ್‌ಗಳಲ್ಲಿ ಶೇ 5ಕ್ಕಿಂತ ಹೆಚ್ಚು ಸೋಂಕು ಪತ್ತೆ ದರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಪರೀಕ್ಷೆಗೆ ಒಳಗಾದವರಲ್ಲಿ ಸೋಂಕು ಪತ್ತೆ ದರದ ಸರಾಸರಿಯು ಶೇ 2.32ಕ್ಕೆ ಇಳಿದಿದೆ. ಆದರೆ, 27 ವಾರ್ಡ್‌ಗಳಲ್ಲಿ ಈಗಲೂ ಶೇ 5ಕ್ಕಿಂತ ಹೆಚ್ಚು ಸೊಂಕು ಪತ್ತೆ ದರ ಇದೆ.

ಕೋವಿಡ್ ಸೋಂಕು ಪತ್ತೆ ದರ ಅತಿ ಹೆಚ್ಚು ಇರುವುದು ಮತ್ತಿಕೆರೆ (ಶೇ 18.37) ವಾರ್ಡ್‌ನಲ್ಲಿ. ಅದರ ಪಕ್ಕದ ಜೆ.ಪಿ.ಉದ್ಯಾನ ವಾರ್ಡ್‌ನಲ್ಲೂ ಪರೀಕ್ಷೆಗೊಳಗಾದ ಶೇ 16.67ರಷ್ಟು ಮಂದಿಯಲ್ಲಿ ಸೋಂಕು ಪತ್ತೆಯಾಗುತ್ತಿದೆ. ರಾಧಾಕೃಷ್ಣ ದೇವಸ್ಥಾನ, ಸಂಜಯನಗರ, ಡಿ.ಜೆ.ಹಳ್ಳಿ, ಮುನೇಶ್ವರನಗರ, ಪುಲಿಕೇಶಿನಗರ, ಎಸ್.ಕೆ.ಗಾರ್ಡನ್, ಕತ್ರಿಗುಪ್ಪೆ, ಬಿಟಿಎಂ ಬಡಾವಣೆ, ಜೆ.ಪಿ.ನಗರ ವಾರ್ಡ್‌ಗಳಲ್ಲಿ ಸೊಂಕು ಪತ್ತೆ ದರ ಶೇ 10ಕ್ಕಿಂತಲೂ ಹೆಚ್ಚು ಇದೆ. ಮಹದೇವಪುರ ಹಾಗೂ ಪೂರ್ವ ವಲಯಗಳಲ್ಲಿ ಸೋಂಕು ಪ್ರಮಾಣ ಶೇ 3ಕ್ಕಿಂತ ಹೆಚ್ಚು ಇದೆ. ಅತ್ಯಂತ ಕಡಿಮೆ ಇರುವುದು ದಾಸರಹಳ್ಳಿ ವಲಯದಲ್ಲಿ.

ಜೂನ್ ತಿಂಗಳಿನಲ್ಲಿ ಬಿಬಿಎಂಪಿ ಕೋವಿಡ್ ಪರೀಕ್ಷೆಯ ಪ್ರಮಾಣವನ್ನು ಹೆಚ್ಚಿಸಿದೆ. ನಗರದಲ್ಲಿ ಲಾಕ್‌ಡೌನ್ ಸಡಿಲಗೊಳಿಸಿದ ಬಳಿಕ ನಿತ್ಯ 60 ಸಾವಿರಕ್ಕೂ ಅಧಿಕ ಮಂದಿಯನ್ನು ಕೋವಿಡ್ ಪರೀಕ್ಷೆಗೆ ಒಳಪಡಿಸಲಾಗುತ್ತಿದೆ. ಗುರುವಾರ 60,478 ಮಂದಿಯ ಪರೀಕ್ಷೆ ನಡೆಸಲಾಗಿದೆ.

ಜೂನ್ ತಿಂಗಳ ಆರಂಭದಲ್ಲಿ ಕೋವಿಡ್ ರೋಗಿಗಳ ಸಾವಿನ ದರ ಶೇ 7.8ರವರೆಗೆ ತಲುಪಿತ್ತು. ಪ್ರಸ್ತುತ ಕೋವಿಡ್‌ನಿಂದ ಸಾಯುವವರ ಸಾವಿನ ಪ್ರಮಾಣ ಗಣನೀಯವಾಗಿ ಇಳಿಕೆ ಕಂಡಿದೆ. ಬಿಬಿಎಂಪಿ ಗುರುವಾರ ಬಿಡುಗಡೆ ಮಾಡಿರುವ ಅಂಕಿ–ಅಂಶಗಳ ಪ್ರಕಾರ ಕೋವಿಡ್ ರೋಗಿಗಳ ಸಾವಿನ ದರ ಶೇ 1.59. ಕೋವಿಡ್‌ನಿಂದ ಗುರುವಾರ 17 ಮಂದಿ ಕೊನೆಯುಸಿರೆಳೆದಿದ್ದಾರೆ. ಜೂನ್ 10ರಿಂದ 16ರವರೆಗೆ ಒಟ್ಟು 156 ಮಂದಿ ಸೋಂಕಿನಿಂದ ಸತ್ತಿದ್ದಾರೆ. ಜೂನ್ ತಿಂಗಳ ಮೊದಲ ಆರು ದಿನಗಳಲ್ಲಿ 1,529 ಮಂದಿ ಕೋವಿಡ್‌ನಿಂದ ಮೃತಪಟ್ಟಿದ್ದರು.

ಕೋವಿಡ್‌ನಿಂದ ಆಸ್ಪತ್ರೆಗೆ ದಾಖಲಾಗುವವರ ಪ್ರಮಾಣವೂ ಒಂದಂಕಿಗೆ ಇಳಿದಿದೆ. ಬಿಬಿಎಂಪಿಯ ಚಿಕಿತ್ಸಾ ನಿರ್ಧಾರ ಕೇಂದ್ರಗಳ (ಟ್ರಯಾಜ್ ಸೆಂಟರ್) ಮೂಲಕ ಗುರುವಾರ ಕೇವಲ ಐವರು ಸೋಂಕಿತರು ಆಸ್ಪತ್ರೆಗಳಿಗೆ ದಾಖಲಾಗಿದ್ದಾರೆ. ಒಬ್ಬರನ್ನು ಕೋವಿಡ್ ರೋಗಿಗಳ ಆರೈಕೆ ಕೇಂದ್ರಕ್ಕೆ ದಾಖಲಿಸಲಾಗಿದೆ.

ಕೋವಿಡ್: ಸೋಂಕು ಪತ್ತೆ ದರ ಶೇ 5ಕ್ಕಿಂತ ಹೆಚ್ಚು ಇರುವ ವಾರ್ಡ್‌ಗಳು (ಜೂನ್ 15ರ ದತ್ತಾಂಶದ ಪ್ರಕಾರ)

ವಾರ್ಡ್ (ವಾರ್ಡ್ ಸಂಖ್ಯೆ)	ಸೋಂಕು ಪತ್ತೆ ದರ (%)
ಕೊಡಿಗೆಹಳ್ಳಿ (8)	5.50
ಜೆ.ಪಿ.ಉದ್ಯಾನ (17)	16.67
ರಾಧಾಕೃಷ್ಣ ದೇವಸ್ಥಾನ (18)	13.08
ಸಂಜಯನಗರ (19)	13.08
ಗಂಗಾನಗರ (20)	6.98
ಗಂಗೇನಹಳ್ಳಿ (34)	6.98
ಮತ್ತಿಕೆರೆ (36)	18.37
ಜೆ.ಸಿ.ನಗರ (46)	5.61
ಡಿ.ಜೆ.ಹಳ್ಳಿ (47)	11.34
ಮುನೇಶ್ವರ ನಗರ (48)	11.34
ಲಿಂಗರಾಜಪುರ (49)	5.36
ಕೆ.ಆರ್.ಪುರ (52)	9.35
ಬಸವನಪುರ (53)	9.35
ಹೂಡಿ (54)	9.35
ದೇವಸಂದ್ರ (55)	9.35
ಎಸ್.ಕೆ.ಗಾರ್ಡನ್ (61)	14.43
ರಾಮಸ್ವಾಮಿ ಪಾಳ್ಯ (62)	5.61
ಪುಲಿಕೇಶಿನಗರ (78)	14.43
ರಾಜಾಜಿನಗರ (99)	6.81
ಅಗ್ರಹಾರ ದಾಸರಹಳ್ಳಿ (105)	5.45
ಡಾ.ರಾಜ್‌ಕುಮಾರ್ ವಾರ್ಡ್ (106)	5.45
ಬಿನ್ನಿಪೇಟೆ (121)	7.47
ಕೆಂಪಾಪುರ ಅಗ್ರಹಾರ (122)	7.47
ಹೊಸಕೆರೆಹಳ್ಳಿ (161)	10.91
ಕತ್ರಿಗುಪ್ಪೆ (163)	10.91
ಬಿಟಿಎಂ ಬಡಾವಣೆ (176)	11.43
ಜೆ.ಪಿ.ನಗರ (177)	11.43

ಚಿತ್ರಾವಳಿ



ನಗರದ ರೈಲು ನಿಲ್ದಾಣದಲ್ಲಿ ಬಿಬಿಎಂಪಿ ಆರೋಗ್ಯ ಸಿಬ್ಬಂದಿ ಕೋವಿಡ್ ಪರೀಕ್ಷೆ ಸಂಬಂಧ ಮಕ್ಕಳ ಗಂಟಲು ಹಾಗೂ ಮೂಗಿನ ದ್ರವದ ಮಾದರಿ ಸಂಗ್ರಹಿಸಿದರು



ಕೋವಿಡ್‌ನಿಂದ ಸಂಕಷ್ಟಕ್ಕೆ ಸಿಲುಕಿರುವವರಿಗೆ ವಿತರಿಸುವ ಸಲುವಾಗಿ ಆಹಾರದ ಕಿಟ್‌ಗಳನ್ನು ಹೊತ್ತು ಸಾಗಿದ್ದ ವಾಹನದ ಹಿಂಬದಿಯಲ್ಲಿ ಮಕ್ಕಳು ನೇತಾಡುತ್ತಿದ್ದ ದೃಶ್ಯ ಮಲ್ಲೇಶ್ವರದಲ್ಲಿ ಗುರುವಾರ ಕಂಡುಬಂತು –ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ಸಿದ್ದರಾಮಯ್ಯ ಕೈ ಬಿಟ್ಟರೆ ಕಾಂಗ್ರೆಸ್ ನಿರ್ನಾಮ: ರೇವಣ್ಣ

ಹಾಸನ: 'ರಾಜ್ಯದಲ್ಲಿ ಕಾಂಗ್ರೆಸ್ ಉಳಿಯಲು ಮಾಜಿ ಸಿ.ಎಂ ಸಿದ್ದರಾಮಯ್ಯ ಅವರೇ ಕಾರಣ. ಅವರು ಇಲ್ಲ ಅಂದಿದ್ದರೆ, ಎಂದೋ ನಿರ್ನಾಮವಾಗುತ್ತಿತ್ತು' ಎಂದು ಶಾಸಕ ಎಚ್.ಡಿ.ರೇವಣ್ಣ ಹೇಳಿದರು.

'ಸಿದ್ದರಾಮಯ್ಯ ಕೈ ಬಿಟ್ಟರೆ ಈಗಲೂ ಪಕ್ಷ ಮುಳುಗುತ್ತೆ. ಎಚ್.ಡಿ. ದೇವೇಗೌಡ ಅವರನ್ನು ಪ್ರಧಾನಿ ಸ್ಥಾನದಿಂದ ಕೆಳಗಿಸಿದ ಶಾಪ ಕಾಂಗ್ರೆಸ್‌ಗೆ ತಟ್ಟಿದೆ. ಹಾಗಾಗಿಯೇ ಪಕ್ಷಕ್ಕೆ ಈ ಸ್ಥಿತಿ ಬಂದಿದೆ' ಎಂದು ಗುರುವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

ಕೋವಿಡ್ ಸಂದರ್ಭದಲ್ಲಿ ಜನರ ಜೀವ ಉಳಿಸುವ ಕಡೆ ಗಮನ ಹರಿಸುವ ಬದಲು, ಪ್ರಚಾರಕ್ಕಾಗಿ ಕಾಂಗ್ರೆಸ್ ನಿತ್ಯ ಪ್ರತಿಭಟನೆ ನಡೆಸುತ್ತಿದೆ. ಪ್ರತಿಭಟನೆ ಮಾಡಿದ ತಕ್ಷಣ ಪ್ರಧಾನಿ ನರೇಂದ್ರ ಮೋದಿ ಮತ್ತು ಸಿ.ಎಂ ಯಡಿಯೂರಪ್ಪ ಅಧಿಕಾರದಿಂದ ಕೆಳಗೆ ಇಳಿಯುತ್ತಾರಾ' ಎಂದು ಪ್ರಶ್ನಿಸಿದರು.

'ಹೆಚ್ಚು ಹಣ ವಸೂಲಿ ಮಾಡಿದರೆ ಕ್ರಮ'

ಬೆಂಗಳೂರು: ಕೋವಿಡ್ ಚಿಕಿತ್ಸೆಗಾಗಿ ನಿಗದಿತ ದರಕ್ಕಿಂತ ಹೆಚ್ಚಿಗೆ ಹಣ ವಸೂಲಿ ಮಾಡುವಂತಹ ಖಾಸಗಿ ಆಸ್ಪತ್ರೆಗಳ ಮೇಲೆ ಕ್ರಮ ಕೈಗೊಳ್ಳುವಂತೆ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಜೆ. ಮಂಜುನಾಥ್ ಸೂಚಿಸಿದ್ದಾರೆ.

ಸಾರ್ವಜನಿಕ ದೂರಿನ ಮೇರೆಗೆ ಯಲಹಂಕದ ಅಶ್ವಿನಿ ಆಸ್ಪತ್ರೆ, ಅಪೂರ್ವ ಚೈಲ್ಡ್ ಆಸ್ಪತ್ರೆ, ಸಿ.ವೈ.ಟಿ. ಆಸ್ಪತ್ರೆ, ನವಚೇತನ, ಕೆ.ಕೆ. ಆಸ್ಪತ್ರೆಗಳಿಗೆ ಭೇಟಿ ನೀಡಿ ದಾಖಲೆಗಳನ್ನು ಪರಿಶೀಲಿಸಿದ ಜಿಲ್ಲಾಧಿಕಾರಿ, ನಿಗದಿತ ದರಕ್ಕಿಂತ ಹೆಚ್ಚಿನ ಹಣವನ್ನು ಸಾರ್ವಜನಿಕರಿಂದ ಪಡೆಯುತ್ತಿರುವುದು ಕಂಡು ಬಂದ ಕಾರಣ ಈ ಆಸ್ಪತ್ರೆಗಳ ವಿರುದ್ಧ ಶಿಸ್ತುಕ್ರಮ ಕೈಗೊಳ್ಳುವಂತೆ ಸೂಚಿಸಿದರು.

ಈ ಆಸ್ಪತ್ರೆಗಳ ವಿರುದ್ಧ ಕೆಪಿಎಂಇ ಕಾಯ್ದೆ ಹಾಗೂ ಎನ್‌ಡಿಎಂಎ ಕಾಯ್ದೆ ಅನ್ವಯ ಕಾನೂನು ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದರು.

ಈ ಸಂದರ್ಭದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಶ್ರೀನಿವಾಸ, ರಾಜ್ಯ ಕ್ಷ ಕಿರಣ ವಿಕಿರಣ ಮತ್ತು ನಿರ್ದೇಶನಾಲಯ ಉಪನಿರ್ದೇಶಕ ಡಾ. ಕೆ.ಎಸ್. ರಾಜೇಶ್, ಆರೋಗ್ಯಾಧಿಕಾರಿ ಎಂ.ಆರ್. ಶಿವಕುಮಾರ್, ಡಾ. ರಾಮಚಂದ್ರರೆಡ್ಡಿ ಇದ್ದರು.

ಜೂನ್ 21ರಿಂದ 'ಅನುಭವ್ 2.0' ಸರಣಿ

ಬೆಂಗಳೂರು: 'ಸೊಸೈಟಿ ಫಾರ್ ದಿ ಪ್ರಮೋಷನ್ ಆಫ್ ಇಂಡಿಯನ್ ಕ್ಲಾಸಿಕಲ್ ಮ್ಯೂಸಿಕ್ ಆ್ಯಂಡ್ ಕಲ್ಚರ್ ಅಮಾಂಗ್ ಯೂತ್' (ಸ್ಪಿಕ್ ಮೆಕೇ) ಸಂಸ್ಥೆಯು ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗಾಗಿ ಇದೇ 21ರಿಂದ 27ರವರೆಗೆ 'ಅನುಭವ್ 2.0' ಶೀರ್ಷಿಕೆಯಡಿ ವಿವಿಧ ಕಾರ್ಯಕ್ರಮಗಳನ್ನು ಆನ್‌ಲೈನ್ ಮೂಲಕ ಹಮ್ಮಿಕೊಂಡಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ 'ಅನುಭವ್' ಕಾರ್ಯಕ್ರಮದ ಮುಖ್ಯ ಸಂಯೋಜಕ ಜೈಶರ್ಮಾ, 'ವಿದ್ಯಾರ್ಥಿಗಳನ್ನು ಸೃಜನಶೀಲ ಹಾಗೂ ಕರಕುಶಲ ಕಲೆಗಳಲ್ಲಿ ತೊಡಗಿಸಿಕೊಳ್ಳುವುದು ಹಾಗೂ ವಿದ್ಯಾರ್ಥಿಗಳ ಒತ್ತಡ ಮತ್ತು ಹೊರೆ ಸರಾಗಗೊಳಿಸುವ ಉದ್ದೇಶದಿಂದ ಸರಣಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ' ಎಂದರು.

'ಜೂ.21ರ ಸಂಜೆ 6 ಗಂಟೆಗೆ ಸರಣಿ ಉದ್ಘಾಟನಾ ಕಾರ್ಯಕ್ರಮ ಇರಲಿದೆ. ಪ್ರತಿದಿನ ಬೆಳಿಗ್ಗೆ 4ರಿಂದ 7 ಗಂಟೆಯವರೆಗೆ ಯೋಗ ಗುರುಗಳಿಂದ ಯೋಗ–ಧ್ಯಾನ ತರಬೇತಿ, ಬಳಿಕ ಶಾಸ್ತ್ರೀಯ ಸಂಗೀತ ಮತ್ತು ನೃತ್ಯ, ನಾಟಕ, ಸಿನಿಮಾ ಪ್ರದರ್ಶನ, ಕರಕುಶಲತೆ, ಉಪನ್ಯಾಸ ಹಾಗೂ ಕಾರ್ಯಾಗಾರಗಳು ನಡೆಯಲಿವೆ. ಚಲನಚಿತ್ರ ನಿರ್ದೇಶಕ ಶ್ಯಾಮ್ ಬೆನಗಲ್ ಸೇರಿದಂತೆ ಸಿನಿಮಾ ನಟರು, ಸಂಗೀತಗಾರರು ವಿವಿಧ ಕ್ಷೇತ್ರದ ಗಣ್ಯರು ಕಾರ್ಯಾಗಾರಗಳಲ್ಲಿ ಭಾಗವಹಿಸಲಿದ್ದಾರೆ' ಎಂದು ವಿವರಿಸಿದರು.

ಸ್ಪಿಕ್ ಮೆಕೇ ರಾಷ್ಟ್ರೀಯ ಉಪಾಧ್ಯಕ್ಷ ಪಂಕಜ್ ಮಲ್ಹೋತ್ರಾ, 'ಕೋವಿಡ್ ಪರಿಸ್ಥಿತಿ ಕಾರಣದಿಂದ ವಿದ್ಯಾರ್ಥಿಗಳು ಆನ್‌ಲೈನ್ ಮೂಲಕ ತಮ್ಮ ಮನೆಗಳಿಂದಲೇ ಕಾರ್ಯಕ್ರಮದಲ್ಲಿ ಭಾಗವಹಿಸಬಹುದು. ಆಸಕ್ತರು spicmacay.org/convention/anubhav2021/registration ಮೂಲಕ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು. https://www.youtube.com/user/spicmacay ಮೂಲಕ ನೇರಪ್ರಸಾರವೂ ಇರಲಿದೆ' ಎಂದು ಮಾಹಿತಿ ನೀಡಿದರು.

'ಅನಾಥ ಮಕ್ಕಳ ಖಾತೆಗೆ ₹3.5 ಸಾವಿರ'

ಪ್ರಜಾವಾಣಿ ವಾರ್ತೆ

ರಾಮನಗರ: ಕೋವಿಡ್‌ನಿಂದ ಅನಾಥರಾದ ಮಕ್ಕಳಿಗಾಗಿ ಸರ್ಕಾರ ಮುಖ್ಯಮಂತ್ರಿ ಬಾಲ ಸೇವಾ ಯೋಜನೆ ಘೋಷಣೆ ಮಾಡಿದ್ದು, ಅಂತಹ ಮಕ್ಕಳ ಮೇಲೆ ವಿಶೇಷ ಕಾಳಜಿ ವಹಿಸಲಾಗುವುದು. ಅನಾಥ ಮಕ್ಕಳ ಖಾತೆಗೆ ಪ್ರತಿ ತಿಂಗಳು ₹3.5 ಸಾವಿರ ಹಾಗೂ 21 ವರ್ಷ ಬಳಿಕ ಹೆಣ್ಣು ಮಕ್ಕಳಿಗೆ ₹1 ಲಕ್ಷ ನೀಡಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಶಶಿಕಲಾ ಜೊಲ್ಲೆ ಹೇಳಿದರು.

'ಇಡೀ ರಾಜ್ಯದಲ್ಲಿ 48 ಮಕ್ಕಳು ಕೋವಿಡ್‌ನಿಂದಾಗಿ ಪೋಷಕರಿಬ್ಬರನ್ನೂ ಕಳೆದುಕೊಂಡಿದ್ದಾರೆ. ಜಿಲ್ಲೆಯಲ್ಲಿ ಇಬ್ಬರು ಮಕ್ಕಳು ಅನಾಥರಾಗಿದ್ದು, 98 ಮಕ್ಕಳು ಒಬ್ಬ ಪಾಲಕರನ್ನು ಕಳೆದುಕೊಂಡಿರುವ ಬಗ್ಗೆ ವರದಿಯಾಗಿವೆ. ಇಂತಹ ಮಕ್ಕಳ ರಕ್ಷಣೆಗೆ ಸರ್ಕಾರ ಮುಂದಾಗಿದೆ. ಉಚಿತ ಶಿಕ್ಷಣ, ಎಸ್ಸೆಸ್ಸೆಲ್ಸಿ ಉತ್ತೀರ್ಣರಾದ ಮಕ್ಕಳಿಗೆ ಲ್ಯಾಪ್‌ಟಾಪ್ ನೀಡಲಾಗುವುದು' ಎಂದರು.

ಅನಾಥರಾದ ಮಕ್ಕಳನ್ನು ಅವರ ಸಂಬಂಧಿಕರ ಬಳಿಯೇ ಇರಿಸಿಕೊಳ್ಳುವ ಕೆಲಸ ಮಾಡಲಾಗುತ್ತಿದೆ. ಮಕ್ಕಳ ಮನಸ್ಥಿತಿ ಕುಗ್ಗದಂತೆ ಕೌನ್ಸೆಲಿಂಗ್ ನಡೆಸಲಾಗಿದೆ. ಸಂಬಂಧಿಕರು ಮಕ್ಕಳನ್ನು ಸಲಹಲು ಅಶಕ್ತರಾದರೆ, ಮಕ್ಕಳ ದತ್ತು ಸ್ವೀಕಾರ ಕೇಂದ್ರದ ಮೂಲಕ ನಿರ್ವಹಣೆ ಮಾಡಲಾಗುವುದು. ಜತೆಗೆ, ದತ್ತು ಸ್ವೀಕಾರ ಕೇಂದ್ರದ ಮೂಲಕ ಉತ್ತಮ ಕುಟುಂಬಕ್ಕೆ ದತ್ತು ನೀಡಲಾಗುವುದು ಎಂದು ವಿವರಿಸಿದರು.

ರಾಜ್ಯದಲ್ಲಿ ಕೋವಿಡ್‌ನಿಂದ 48 ಮಕ್ಕಳು ತಮ್ಮ ಪೋಷಕರನ್ನು ಕಳೆದುಕೊಂಡಿದ್ದಾರೆ. ಈ ಮಕ್ಕಳನ್ನು ಸರ್ಕಾರವೇ ಪೋಷಣೆ ಮಾಡಲಿದೆ

ಶಶಿಕಲಾ ಜೊಲ್ಲೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ

ರಕ್ಷಣಾ ತಂತ್ರಜ್ಞಾನ ಹಬ್: ರಾಜನಾಥ್ ಸಿಂಗ್‌ಗೆ ಶೆಟ್ಟರ್ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ರಕ್ಷಣಾ ತಂತ್ರಜ್ಞಾನ ಹಬ್‌ಗಳನ್ನು ಘೋಷಿಸುವ ಮೂಲಕ ಏರೋಸ್ಪೇಸ್ ಮತ್ತು ರಕ್ಷಣಾ ಉತ್ಪಾದನಾ ಘಟಕಗಳಿಗೆ ಉತ್ತೇಜನ ನೀಡುವಂತೆ ಕೇಂದ್ರ ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅವರಿಗೆ ಪತ್ರ ಬರೆಯಲಾಗಿದೆ' ಎಂದು ಕೈಗಾರಿಕೆ ಸಚಿವ ಜಗದೀಶ ಶೆಟ್ಟರ್ ತಿಳಿಸಿದರು.



ಏರೋಸ್ಪೇಸ್ ಮತ್ತು ಡಿಫೆನ್ಸ್ ರೌಂಡ್ ಟೇಬಲ್ ವೆಬಿನಾರ್‌ನಲ್ಲಿ ಮಾತನಾಡಿದ ಅವರು, 'ದೇಶದ ಶೇ 25ಕ್ಕೂ ಹೆಚ್ಚು ಏರ್‌ಕ್ರಾಫ್ಟ್ ಮತ್ತು ಸ್ಪೇಸ್‌ಕ್ರಾಫ್ಟ್ ಕೈಗಾರಿಕೆಗಳು ರಾಜ್ಯದಲ್ಲಿವೆ. ರಕ್ಷಣಾ ಕ್ಷೇತ್ರಕ್ಕೆ ಅಗತ್ಯವಿರುವ ಶೇ 67ರಷ್ಟು ಏರ್‌ಕ್ರಾಫ್ಟ್ ಮತ್ತು ಹೆಲಿಕ್ಯಾಪ್ಟರ್ ಉತ್ಪಾದನೆ ಇಲ್ಲಿ ನಡೆಯುತ್ತದೆ. ಅಲ್ಲದೆ, ಎಫ್‌ಡಿಐ ಇಂಟಲಿಜೆನ್ಸ್‌ನ ವಿಶ್ವ ಏರೋಸ್ಪೇಸ್ ನಗರಗಳ ಸೂಚ್ಯಂಕದ ಮೊದಲ 10ನೇ ಸ್ಥಾನದಲ್ಲಿ ಬೆಂಗಳೂರು ನಗರ ಸ್ಥಾನ ಪಡೆದುಕೊಂಡಿದೆ. ಈ ಕ್ಷೇತ್ರಕ್ಕೆ ಬಿಡಿಭಾಗಗಳನ್ನು ಪೂರೈಸುವ 2000 ಕ್ಕೂ ಹೆಚ್ಚು ಎಂಎಸ್‌ಎಂಇಗಳಿವೆ. ಏರೋಸ್ಪೇಸ್ ಹಾಗೂ ಡಿಫೆನ್ಸ್ ನೀತಿ ಜಾರಿಗೊಳಿಸಿದ ಮೊದಲ ರಾಜ್ಯ ನಮ್ಮದು' ಎಂದರು.

'ಬೆಂಗಳೂರು, ಮೈಸೂರು, ತುಮಕೂರು ಮತ್ತು ಚಾಮರಾಜ ನಗರ ಈ ನಾಲ್ಕೂ ಹಬ್‌ಗಳು ಏರೋಸ್ಪೇಸ್ ಮತ್ತು ಡಿಫೆನ್ಸ್ ಎಕೋಸಿಸ್ಟಮ್‌ಗೆ ಅಗತ್ಯವಿರುವ ಮೂಲಸೌಕರ್ಯಗಳನ್ನು ಹೊಂದಿವೆ. ರಾಜ್ಯದಲ್ಲಿ ರಕ್ಷಣಾ ತಂತ್ರಜ್ಞಾನ ಹಬ್ ಘೋಷಣೆಯಿಂದ ಏರೋಸ್ಪೇಸ್ ಮತ್ತು ರಕ್ಷಣಾ ಕ್ಷೇತ್ರದ ಬೆಳವಣಿಗೆಗೆ ಮತ್ತಷ್ಟು ಪುಷ್ಟಿ ಸಿಗಲಿದೆ. ಜೊತೆಗೆ, ಆತ್ಮನಿರ್ಭರ ಭಾರತ ಗುರಿಗೆ ಮತ್ತಷ್ಟು ಬಲ ತುಂಬಲಿದೆ ಎಂದು ಪತ್ರದಲ್ಲಿ ವಿವರಿಸಿದ್ದೇವೆ' ಎಂದೂ ಹೇಳಿದರು.

ಕೈಗಾರಿಕಾ ಅಭಿವೃದ್ಧಿ ಆಯುಕ್ತೆ ಗುಂಜನ್ ಕೃಷ್ಣ ಮಾತನಾಡಿ, 'ಏರೋಸ್ಪೇಸ್ ಮತ್ತು ಡಿಫೆನ್ಸ್ ನೀತಿ 2021-2026' ಕರಡು ಅಂಶಗಳನ್ನು ವಿವರಿಸಿದರು.

'ಕರ್ನಾಟಕವನ್ನು ಏರೋಸ್ಪೇಸ್ ಮತ್ತು ಡಿಫೆನ್ಸ್ ಕೈಗಾರಿಕಾ ಕ್ಷೇತ್ರದ ಪ್ರಮುಖ ಬಂಡವಾಳ ಹೂಡಿಕೆಯ ರಾಜ್ಯವನ್ನಾಗಿಸುವುದು ನೀತಿಯ ಗುರಿ' ಎಂದರು.

ಬಿಬಿಎಂಪಿ: ಹೆಚ್ಚುತ್ತಲೇ ಇದೆ ಬಾಕಿ ಬಿಲ್ ಮೊತ್ತ ● ಕಾಮಗಾರಿಗಳ ಅನುಷ್ಠಾನಕ್ಕೆ ₹ 18,667.23 ಕೋಟಿ ಅಗತ್ಯ

ಆರ್ಥಿಕ ಹೊಣೆ ₹ 23 ಸಾವಿರ ಕೋಟಿ!

● ಪ್ರವೀಣ್ ಕುಮಾರ್ ಪಿ.ವಿ.

ಬೆಂಗಳೂರು: ಬಿಬಿಎಂಪಿಯ 2021-22ನೇ ಸಾಲಿನ ₹ 9,951 ಕೋಟಿ ಗಾತ್ರದ ಬಜೆಟ್‌ಗೆ ನಗರಾಭಿವೃದ್ಧಿ ಇಲಾಖೆ ಜೂನ್ 15ರಂದು ಅನುಮೋದನೆ ನೀಡಿದೆ. ಆದರೆ, ಪಾಲಿಕೆಯು ಹಳೆ ಬಿಲ್‌ಗಳ ಪಾವತಿ ಬಾಕಿ ಸೇರಿ ಪ್ರಸಕ್ತ ಸಾಲಿನಲ್ಲಿ ₹23,272 ಕೋಟಿಗಳಷ್ಟು ಆರ್ಥಿಕ ಹೊಣೆಗಾರಿಕೆ ಹೊಂದಿದೆ.

ಬಿಬಿಎಂಪಿಯು ಬಜೆಟ್‌ನಲ್ಲಿ ಗೊತ್ತುಪಡಿಸಿದಷ್ಟು ಸಂಪನ್ಮೂಲ ಸಂಗ್ರಹಿಸಲು ಸಾಧ್ಯವಾಗದೇ ಇರುವುದರಿಂದ ಆರ್ಥಿಕ ಹೊರೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಇವುಗಳಲ್ಲಿ ಬಾಕಿ ಬಿಲ್‌ಗಳು, ಪ್ರಗತಿಯಲ್ಲಿರುವ ಕಾಮಗಾರಿಗಳು, ಕಾರ್ಯಾದೇಶ ಹೊರಡಿಸಿ ಇನ್ನಷ್ಟೇ ಕಾಮಗಾರಿ ಆರಂಭವಾಗಬೇಕಿರುವಂತಹವು ಹಾಗೂ ಇನ್ನಷ್ಟೇ ಟೆಂಡರ್ ಕರೆಯಬೇಕಾದ ಕಾಮಗಾರಿಗಳ ಹೊಣೆಗಾರಿಕೆಯ ಮೊತ್ತವೇ ₹18,667 ಕೋಟಿಗಳಷ್ಟಾಗುತ್ತದೆ.

ಇನ್ನುಳಿದಂತೆ ಆಡಳಿತಾತ್ಮಕ ವೆಚ್ಚ, ಸಾಲ ಮರುಪಾವತಿ, ತೋಟಗಾರಿಕಾ ವಿಭಾಗದ ನಿರ್ವಹಣೆ ವೆಚ್ಚ, ಅರಣ್ಯ, ಸಾರ್ವಜನಿಕ ಮತ್ತು ವೈದ್ಯಕೀಯ ಆರೋಗ್ಯ ವಿಭಾಗಗಳ ನಿರ್ವಹಣೆ ವೆಚ್ಚ, ಕಸ ನಿರ್ವಹಣೆ, ಶಿಕ್ಷಣ ಕಲ್ಯಾಣ ಕಾರ್ಯಕ್ರಮಗಳು ಹಾಗೂ ಸಂಗ್ರಹಿಸಿದ ಸೆಸ್‌ಗಳ ಮರುಪಾವತಿ ಸೇರಿ ಒಟ್ಟು ₹ 3,605 ಕೋಟಿಯನ್ನು ಈ ಆರ್ಥಿಕ ವರ್ಷದಲ್ಲಿ ವೆಚ್ಚ ಮಾಡಬೇಕಾಗುತ್ತದೆ. 110 ಹಳ್ಳಿಗಳ ಅಭಿವೃದ್ಧಿಗೆ ₹ 1 ಸಾವಿರ ಕೋಟಿ ವೆಚ್ಚ ಮಾಡಬೇಕಿದೆ.

ಕಾಮಗಾರಿಗಳಿಗೆ ಸಂಬಂಧಿಸಿದ ₹ 18,667.23 ಕೋಟಿ ಹೊಣೆಗಾರಿಕೆಯಲ್ಲಿ ರಾಜ್ಯ ಸರ್ಕಾರ ಹಾಗೂ ಕೇಂದ್ರ ಸರ್ಕಾರಗಳ ಅನುದಾನದಲ್ಲಿ ಕೈಗೊಳ್ಳುತ್ತಿರುವ ಯೋಜನೆಗಳಿಗೆ ಸಂಬಂಧಿಸಿದಂತೆ ಪಾವತಿಸಬೇಕಾದ ಮೊತ್ತ ₹8740.43 ಕೋಟಿ ಮಾತ್ರ. ಇನ್ನುಳಿದಂತೆ ₹ 9,926.80 ಕೋಟಿ ಹೊರೆ ಬಿಬಿಎಂಪಿ ಅನುದಾನಕ್ಕೆ ಸಂಬಂಧಿಸಿದ ಕಾಮಗಾರಿಗಳದ್ದೇ ಆಗಿದೆ.

'ಆರ್ಥಿಕ ಹೊಣೆಗಾರಿಕೆಯ ಹೊರೆ ಹೆಚ್ಚುತ್ತಲೇ ಇರುವುದು ಒಳ್ಳೆಯ ಬೆಳವಣಿಗೆ ಅಲ್ಲ. ಪಾಲಿಕೆಯು ತನ್ನ ಆಸ್ತಿಗಳನ್ನು ಅಡ ಇಟ್ಟು ಸಾಲ ಪಡೆಯುವಷ್ಟು ಆರ್ಥಿಕ ಸಂಕಷ್ಟಕ್ಕೆ ಈ ಹಿಂದೆ ಸಿಲುಕಿತ್ತು. ವಾಸ್ತವಕ್ಕಿಂತ ಹೆಚ್ಚು ಆದಾಯ ನಿರೀಕ್ಷಿಸಿ ಬಜೆಟ್ ಮಂಡಿಸುತ್ತಾ ಬಂದಿರುವುದೇ ಈ ಸ್ಥಿತಿಗೆ ಕಾರಣ' ಎಂದು ಹೆಸರು ಬಹಿರಂಗ ಪಡಿಸಲು ಬಯಸದ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

'2020-21ನೇ ಸಾಲಿನಲ್ಲಿ ಬಿಬಿಎಂಪಿ ₹11,972.89 ಕೋಟಿ ವರಮಾನ ನಿರೀಕ್ಷಿಸಿ ಬಜೆಟ್ ಮಂಡಿಸಿತ್ತು. ಆದರೆ, ಅಂತಿಮವಾಗಿ ಬಜೆಟ್ ಗಾತ್ರ ₹ 6799.04 ಕೋಟಿಗಷ್ಟೇ ಸೀಮಿತವಾಯಿತು. ಆಸ್ತಿ ತೆರಿಗೆ ಮತ್ತಿತರ ಮೂಲಗಳಿಂದ ಸಂಪನ್ಮೂಲ ಸಂಗ್ರಹಿಸಲು ನಿಗದಿಪಡಿಸುವ ಗುರಿ ತಲುಪಲು ಸಾಧ್ಯವಾಗುತ್ತಲೇ ಇಲ್ಲ. ಆಸ್ತಿ ತೆರಿಗೆ ಹಳೆ ಬಾಕಿ ವಸೂಲಿಯೂ ಕನ್ನಡಿಯೊಳಗಿನ ಗಂಟಿನಂತಾಗಿದೆ' ಎಂದು ಅವರು ಪರಿಸ್ಥಿತಿ ವಿರಿಸಿದರು.

'ಪ್ರಸಕ್ತ ಪರಿಸ್ಥಿತಿಯಲ್ಲಿ ಬಿಬಿಎಂಪಿ ₹ 23 ಸಾವಿರ ಕೋಟಿಯನ್ನು ಹೊಂದಿಸುವುದು ಕನಸಿನ ಮಾತು. ಈಗಿನ ಪರಿಸ್ಥಿತಿಯಲ್ಲಿ ಬಜೆಟ್ ಗಾತ್ರವನ್ನು ಏಕಾಏಕಿ ಕಡಿತಗೊಳಿಸುವುದಕ್ಕೂ ಆಗದು. ಏಕೆಂದರೆ, ಪ್ರಗತಿಯಲ್ಲಿರುವ ಹಾಗೂ ಪಾವತಿಗೆ ಬಾಕಿ ಇರುವ ಹಳೆ ಬಿಲ್‌ಗಳ ಮೊತ್ತಗಳನ್ನೆಲ್ಲ ಪರಿಗಣಿಸಿಯೇ ಬಜೆಟ್ ರೂಪಿಸಬೇಕು. ಬಿಬಿಎಂಪಿ ಮುಂದಿರುವುದು ಎರಡೇ ದಾರಿ. ಒಂದೋ ಸಂಪನ್ಮೂಲ ಹೆಚ್ಚಿಸಲು ಕ್ರಮ ಕೈಗೊಳ್ಳುವುದು ಅಥವಾ ಅನಿವಾರ್ಯವಲ್ಲದ ಕಾಮಗಾರಿಗಳನ್ನು, ತುಷ್ಟೀಕರಣದ ಕಾರ್ಯಕ್ರಮಗಳನ್ನು ಕೈಬಿಡುವ ಮೂಲಕ ಅನಗತ್ಯ ವೆಚ್ಚಗಳನ್ನು ಕಡಿತಗೊಳಿಸುವುದು' ಎಂದು ಅವರು ಸಲಹೆ ನೀಡಿದರು.

'ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಅನುದಾನದಲ್ಲಿ ಕೈಗೊಳ್ಳುವ ಕಾಮಗಾರಿಗಳನ್ನು ಬಿಬಿಎಂಪಿ ಕೈಬಿಡಲು ಆಗದು. ಅವುಗಳಿಗೆ ನಿಗದಿ ಪಡಿಸಿದ ಅನುದಾನ ಬಿಡುಗಡೆ ಆಗುತ್ತದೆ. ಈ ಹಂತದಲ್ಲಿ ಬಿಬಿಎಂಪಿ ತನ್ನ ಅನುದಾನದಲ್ಲಿ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ ಹಾಗೂ ಇನ್ನೂ ಟೆಂಡರ್ ಆಗದ ಕಾಮಗಾರಿಗಳನ್ನು ಕೈಬಿಡುವ ಬಗ್ಗೆ ಚಿಂತಿಸಬಹುದು. ಇವುಗಳಲ್ಲಿ 2-3 ವರ್ಷಗಳ ಹಿಂದಿನ ಬಜೆಟ್‌ನಲ್ಲಿ ಘೋಷಣೆ ಆಗಿ ಇನ್ನೂ ಟೆಂಡರ್ ಆಗದ ಕಾಮಗಾರಿಗಳೂ ಸೇರಿವೆ. ಅವುಗಳ ಅನುಷ್ಠಾನದಲ್ಲಿ ಇಷ್ಟೊಂದು ವಿಳಂಬವಾಗಿದೆ ಎಂದರೆ ಅವುಗಳ ಅಗತ್ಯತೆಯೇ ಪ್ರಶ್ನಾರ್ಹವಾದುದು' ಎಂದು ಅವರು ಅಭಿಪ್ರಾಯಪಟ್ಟರು.

'ಕಸ ನಿರ್ವಹಣೆಗೆ ಪ್ರಸಕ್ತ ವರ್ಷ ₹ 664 ಕೋಟಿಯನ್ನು ವೆಚ್ಚ ಮಾಡಬೇಕಾದ ಹೊಣೆಗಾರಿಕೆಯನ್ನು ಬಿಬಿಎಂಪಿ ಹೊಂದಿದೆ. ಜುಲೈ 1ರಿಂದ ಬೆಂಗಳೂರು ಕಸ ನಿರ್ವಹಣೆ ನಿಯಮಿತ ಕಂಪನಿ ಕಾರ್ಯಾರಂಭ ಮಾಡಲಿರುವುದರಿಂದ ಈ ಉದ್ದೇಶಕ್ಕೆ ವೆಚ್ಚ ಮಾಡುವ ಹೊಣೆ ಬಿಬಿಎಂಪಿಗೆ ಇರದು' ಎಂದು ಅವರು ತಿಳಿಸಿದರು.

ವಿವಿಧ ಯೋಜನೆಗಳಿಗೆ ಸಂಬಂಧಿಸಿದ ಪಾವತಿ ಹೊಣೆಗಾರಿಕೆ (₹ ಕೋಟಿಗಳಲ್ಲಿ)

ವಿವರ	ರಾಜ್ಯ ಸರ್ಕಾರದ ಯೋಜನೆ	ಕೇಂದ್ರದ ಯೋಜನೆ	ಬಿಬಿಎಂಪಿ ಕಾರ್ಯಕ್ರಮ	ಒಟ್ಟು
ಬಾಕಿ ಬಿಲ್ ಪಾವತಿಗೆ	102.88	1,658.19	3,108.88	4,869.95
ಪ್ರಗತಿಯಲ್ಲಿರುವ ಕಾಮಗಾರಿಗಳಿಗೆ	151.45	2,479.40	1,740.00	4,370.85
ಕಾರ್ಯಾದೇಶವಾಗಿ ಇನ್ನೂ ಶುರುವಾಗದ ಕಾಮಗಾರಿಗಳಿಗೆ	192.99	1,621.82	1,699.15	3,513.96
ಇನ್ನಷ್ಟೇ ಟೆಂಡರ್ ಆಗಬೇಕಾದ ಕಾಮಗಾರಿಗಳಿಗೆ	183.05	2,350.65	3,378.77	5,912.47

ಇತರ ಹೊಣೆಗಾರಿಕೆಗಳು (₹ ಕೋಟಿಗಳಲ್ಲಿ)

ಆಡಳಿತಾತ್ಮಕ ವೆಚ್ಚ	1,518
ಸಾಲ ಮರುಪಾವತಿ	297
ತೋಟಗಾರಿಕೆ	197
ಅರಣ್ಯ	37
ಆರೋಗ್ಯ (ಸಾರ್ವಜನಿಕ)	183
ಆರೋಗ್ಯ (ವೈದ್ಯಕೀಯ)	68
ಕಸ ನಿರ್ವಹಣೆ	664
ಶಿಕ್ಷಣ	304
ಸೆಸ್ ಮರುಪಾವತಿ	302

ಪ್ರಜಾವಾಣಿ ವಿಶೇಷ

ಕೆಸರೆರಚಾಟ: ಕೇಂದ್ರ ಶಿಸ್ತು ಸಮಿತಿಗೆ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಸ್ಪರ ಹೇಳಿಕೆಗಳನ್ನು ನೀಡುತ್ತಿರುವ ಶಾಸಕರ ವಿರುದ್ಧ ಶಿಸ್ತು ಕ್ರಮ ತೆಗೆದುಕೊಳ್ಳಲು ರಾಜ್ಯ ಬಿಜೆಪಿ ಶಿಸ್ತು ಸಮಿತಿಯು ಕೇಂದ್ರ ಸಮಿತಿಗೆ ಶಿಫಾರಸು ಮಾಡಿದೆ.

ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ಎಂ.ಪಿ. ರೇಣುಕಾಚಾರ್ಯ, ಅರವಿಂದ ಬೆಲ್ಲದ್, ಎಚ್.ವಿಶ್ವನಾಥ್ ಮತ್ತು ಇತರರ ವಿರುದ್ಧ ರಾಜ್ಯ ಶಿಸ್ತು ಸಮಿತಿ ಅಧ್ಯಕ್ಷ ಲಿಂಗರಾಜಪಾಟೀಲ ಅವರು ಕೇಂದ್ರಕ್ಕೆ ಪತ್ರ ಬರೆದಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಕೇಂದ್ರದ ನಾಯಕರ ಎಚ್ಚರಿಕೆಯ ಮಧ್ಯೆಯೂ ಶಾಸಕರು ಪರಸ್ಪರ ಹೇಳಿಕೆಗಳನ್ನು ನೀಡುತ್ತಿದ್ದು, ಇದರಿಂದ ಪಕ್ಷಕ್ಕೆ ಹಾನಿಯಾಗುತ್ತಿದೆ ಎಂದು ಪತ್ರದಲ್ಲಿ ತಿಳಿಸಲಾಗಿದೆ.

ಮೂಗಿಗೆ ತುಪ್ಪ ಸವರುವ ತಂತ್ರ: ಭಿನ್ನಮತೀಯರ ಅಭಿಮತ

ಮುನ್ನೆಲೆಗೆ ಬಂದ ಸಂಪುಟ ಪುನಾರಚನೆ ಚರ್ಚೆ?

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸಚಿವ ಸಂಪುಟದಲ್ಲಿ ಹೊಸ ಮುಖಗಳಿಗೆ ಅವಕಾಶ ನೀಡಲು ಸಂಪುಟ ಪುನಾರಚನೆಯ ಪ್ರಸ್ತಾಪ ಮತ್ತೆ ಮುನ್ನೆಲೆಗೆ ಬಂದಿದೆ.

ಅರುಣ್‌ಸಿಂಗ್ ಅವರ ರಾಜ್ಯ ಭೇಟಿಯ ಬೆನ್ನಲ್ಲೇ ಹೊಸ ಮುಖಗಳಿಗೆ ಸಂಪುಟದಲ್ಲಿ ಅವಕಾಶ ನೀಡುವ ವಿಚಾರ ಗುರುವಾರ ಬಿಜೆಪಿ ಆಂತರಿಕ ವಲಯದಲ್ಲಿ ದಟ್ಟವಾಗಿ ಹರಿದಾಡಿದೆ.

ನಾಯಕತ್ವದ ಬದಲಾವಣೆಗಿಂತ ಮೊದಲು ಭಿನ್ನಮತವನ್ನು ಶಮನ ಮಾಡಲು, ಸಂಪುಟದಲ್ಲಿ ಹೊಸಬರಿಗೆ ಅವಕಾಶ ಕೊಡುವ ಬಗ್ಗೆ ಅರುಣ್‌ಸಿಂಗ್ ಚಿಂತನೆ ನಡೆಸಿದ್ದಾರೆ. ಶುಕ್ರವಾರದ ಪ್ರಮುಖರ ಸಭೆಯಲ್ಲೂ ಚರ್ಚಿಸಲಿದ್ದಾರೆ. ಸಚಿವ ಸ್ಥಾನ ಕಳೆದುಕೊಳ್ಳುವವರಿಗೆ ಪಕ್ಷದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಲು ಉದ್ದೇಶಿಸಲಾಗಿದೆ ಎಂದು ಮೂಲಗಳು ತಿಳಿಸಿವೆ.

ಅರುಣ್‌ಸಿಂಗ್ ಅವರನ್ನು ಇಂದು ಭೇಟಿ ಮಾಡಿದ ಹಲವು ಶಾಸಕರು ನಾಯಕತ್ವ ಬದಲಾವಣೆಗಿಂತ ಸಂಪುಟದಲ್ಲಿ ಅವಕಾಶ ನೀಡಬೇಕು ಎಂದು ಮನವಿ ಮಾಡಿದರು. ಅವರಲ್ಲಿ ಚಿತ್ರದುರ್ಗದ ತಿಪ್ಪಾರೆಡ್ಡಿ ಪ್ರಮುಖರು.

'ಸಂಪುಟ ಪುನಾರಚನೆ ಮಾಡಿ ಉತ್ತರಕರ್ನಾಟಕ ಭಾಗಕ್ಕೆ ಸಾಮಾಜಿಕ ನ್ಯಾಯ ನೀಡಿ' ಎಂದು ಎ.ಎಸ್.ಪಾಟೀಲ ನಡಹಳ್ಳಿ ಬೇಡಿಕೆ ಸಲ್ಲಿಸಿದರು.

ಆಡಳಿತಕ್ಕೆ ಚುರುಕು ನೀಡುವುದರ ಜತೆಗೆ ಶಾಸಕರ ಆಗಬೇಕಾಗಿರುವ ಕೆಲಸಗಳ ಬಗ್ಗೆ, ಅನುದಾನ ನೀಡುವ ಬಗ್ಗೆ ಹೆಚ್ಚು ಒತ್ತು ನೀಡಲು ಸಿಂಗ್ ಸೂಚಿಸಲಿದ್ದಾರೆ. ಈ ಕಾರಣಕ್ಕಾಗಿ ಬೆಂಗಳೂರಿಗೆ ಕಾಲಿಟ್ಟ ಕ್ಷಣದಿಂದಲೂ ಅವರು ನಾಯಕತ್ವ ಬದಲಾವಣೆ ಇಲ್ಲ ಎಂದು ಪ್ರತಿಪಾದಿಸುತ್ತಲೇ ಬಂದಿದ್ದಾರೆ ಎಂದು ಮೂಲಗಳು ಹೇಳಿವೆ.

ಇದೇ ವಿಚಾರ ಬಿ.ವೈ. ವಿಜಯೇಂದ್ರ ಅವರು ದೆಹಲಿ ಭೇಟಿಯ ಸಂದರ್ಭದಲ್ಲೂ ಕೇಳಿ ಬಂದಿತ್ತು. ಬಳಿಕ ಆ ವಿಚಾರ ತಣ್ಣಗಾಯಿತು. ಈ ಬಗ್ಗೆ ಭಿನ್ನರ ಗುಂಪಿನ ಶಾಸಕರೊಬ್ಬರು, 'ಇದು ನಮ್ಮ ಮೂಗಿಗೆ ತುಪ್ಪ ಸವರಿ ಸುಮ್ಮನಾಗಿಸುವ ತಂತ್ರವಲ್ಲದೇ ಬೇರೇನೂ ಅಲ್ಲ. ನಾವು ನಮ್ಮ ಬೇಡಿಕೆಯಿಂದ ಹಿಂದಕ್ಕೆ ಸರಿಯುವ ಪ್ರಶ್ನೆಯೇ ಇಲ್ಲ' ಎಂದು ಹೇಳಿದರು.

ರಾಜ್ಯಗಳ ಸಮಸ್ಯೆ ಬಗೆಹರಿಸಲು ಒತ್ತು: ಉತ್ತರ ಪ್ರದೇಶ ಸೇರಿದಂತೆ ಹಲವು ರಾಜ್ಯಗಳಲ್ಲಿ ಪಕ್ಷದಲ್ಲಿ ಸ್ಥಳೀಯ ಮಟ್ಟದಲ್ಲಿ ಸಮಸ್ಯೆಗಳು ಉದ್ಭವವಾಗುತ್ತಿದ್ದು, ಅವುಗಳನ್ನು ಸರಿಪಡಿಸಲು ವರಿಷ್ಠರು ನಿರ್ಧರಿಸಿದ್ದಾರೆ. ಉತ್ತರಪ್ರದೇಶದಲ್ಲೂ ಮುಖ್ಯಮಂತ್ರಿ ಬದಲಿಸಲಾಗುತ್ತದೆ ಎಂಬ ವ್ಯವಸ್ಥಿತ ಪ್ರಚಾರ ನಡೆಯಿತು. ಇಲ್ಲೂ ನಡೆದಿದೆ. ಅಂತಹ ಸಾಧ್ಯತೆ ಇಲ್ಲ ಎನ್ನುತ್ತವೆ ಅರುಣ್‌ಸಿಂಗ್ ಆಪ್ತ ಮೂಲಗಳು.

ನಾಯಕತ್ವದ ಚರ್ಚೆಯೇ ಆಗಿಲ್ಲ: ಅರುಣ್ ಸಿಂಗ್

ಬೆಂಗಳೂರು: 'ಇವತ್ತಿನ ಸಭೆಯಲ್ಲಿ ಪಕ್ಷದ ನಾಯಕತ್ವದ ಬದಲಾವಣೆ ವಿಚಾರ ಬಂದಿಲ್ಲ. ಆ ಕುರಿತು ಯಾವುದೇ ಶಾಸಕರು ಪ್ರಸ್ತಾಪ ಮಾಡಲಿಲ್ಲ' ಎಂದು ಬಿಜೆಪಿ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ತಿಳಿಸಿದರು.

ಎಲ್ಲ ಶಾಸಕರ ಭೇಟಿಯ ಬಳಿಕ ಅವರು ಸಂಜೆ ಸುದ್ದಿಗಾರರ ಜತೆ ಮಾತನಾಡಿ ಈ ವಿಷಯ ತಿಳಿಸಿದರು.

'ನಾಯಕತ್ವದ ವಿಚಾರ ನಮ್ಮ ಕಾರ್ಯಸೂಚಿಯಲ್ಲಿ ಇದ್ದರೆ ಅದಕ್ಕಾಗಿಯೇ ಪ್ರತ್ಯೇಕ ಸಭೆ ಕರೆಯುತ್ತೇವೆ. ಈಗ ಅಂತಹ ಪ್ರಮೇಯವಿಲ್ಲ. ನಾವು ಮೂರು ದಿನ ನಾಯಕತ್ವದ ಬಗ್ಗೆ ಚರ್ಚೆ ಮಾಡುತ್ತಿಲ್ಲ' ಎಂದು ಅವರು ಪುನರುಚ್ಚರಿಸಿದರು.

'ಒಂದಿಬ್ಬರು ಶಾಸಕರು ಪದೇ ಪದೇ ಮುಖ್ಯಮಂತ್ರಿ ಮತ್ತು ಅಧ್ಯಕ್ಷ ನಳಿನ್ ಅವರ ಬಗ್ಗೆ ಮಾತನಾಡುತ್ತಲೇ ಇದ್ದಾರೆ. ಅವರ ಹೇಳಿಕೆಗಳನ್ನು ಗಮನಿಸುತ್ತಾ ಬಂದಿದ್ದೇವೆ. ಅವರ ಬಗ್ಗೆ ಇನ್ನಷ್ಟು ಮಾಹಿತಿ ಸಂಗ್ರಹಿಸಲಾಗುವುದು. ಯಾವುದೇ ಶಾಸಕರ ಹೇಳಿಕೆ ಪಕ್ಷಕ್ಕೆ ಹಾನಿ ಮಾಡಬಾರದು. ಈ ಶಾಸಕರ ಹೇಳಿಕೆ ಪಕ್ಷಕ್ಕೆ ಹಾನಿ ಮಾಡುವ ಸ್ವರೂಪದ್ದು' ಎಂದು ಅರುಣ್ ಸಿಂಗ್ ಹೇಳಿದರು.

'ಪಕ್ಷಕ್ಕೆ ಹೊಸದಾಗಿ ಬಂದಿರುವ ಕೆಲವರಿಗೆ ಪಕ್ಷದ ಸಂಸ್ಕೃತಿ, ಕಾರ್ಯಕರ್ತರ ಪರಿಶ್ರಮದ ಬಗ್ಗೆ ಅರಿವಿಲ್ಲ. ಅವರು ಹೇಳಿಕೆ ನೀಡುವ ಮೊದಲು ಅದನ್ನು ಗಮನಿಸಬೇಕು. ನಮ್ಮ ಕಾರ್ಯಕರ್ತರು ತ್ಯಾಗ, ಬಲಿದಾನಗಳ ಮೂಲಕ ಪಕ್ಷವನ್ನು ಕೆಳ ಹಂತದಿಂದ ಕಟ್ಟಿದ್ದಾರೆ. ಈ ರೀತಿ ನೀತಿಗಳನ್ನು ತಿಳಿದುಕೊಳ್ಳಬೇಕು' ಎಂದು ಅವರು ಎಚ್.ವಿಶ್ವನಾಥ್ ಅವರನ್ನು ಉದ್ದೇಶಿಸಿ ಹೇಳಿದರು.

'ರಾಜ್ಯದಲ್ಲಿ ಸಚಿವರು ಮತ್ತು ಶಾಸಕರು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಇವತ್ತು ಅವರಿಂದ ಪಡೆದ ಮಾಹಿತಿಗಳಿಂದ ಸಂತೃಪ್ತನಾಗಿದ್ದೇನೆ' ಎಂದೂ ಅರುಣ್‌ಸಿಂಗ್ ವಿವರಿಸಿದರು.

'ಭೂಮಿ ಇಲ್ಲದಿದ್ದರೂ ಮುಡಾದಿಂದ ಪರಿಹಾರ'

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ತಾಲ್ಲೂಕಿನ ಕೇರ್ಗಳ್ಳಿ ಗ್ರಾಮದ ಸರ್ವೆ ನಂಬರ್ 115ಕ್ಕೆ ಸಂಬಂಧಿಸಿದಂತೆ ಆರ್‌ಟಿಸಿಗೆ ಅನುಗುಣವಾಗಿ ಜಮೀನು ಇಲ್ಲದಿದ್ದರೂ, ಮುಡಾದಿಂದ ಪರಿಹಾರ ನೀಡಲಾಗಿದೆ. ಯೋಜನೆಯ ಲೋಪಗಳ ಬಗ್ಗೆ ಸಂಪೂರ್ಣ ತನಿಖೆ ನಡೆಸಲಾಗುವುದು ಎಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಅಧ್ಯಕ್ಷ ಎಚ್.ವಿ.ರಾಜೀವ್ ಹೇಳಿದರು.

'15 ಎಕರೆ ಭೂಮಿ ಭೌತಿಕವಾಗಿ ಲಭ್ಯವಿಲ್ಲದಿದ್ದರೂ ಕಂದಾಯ ದಾಖಲೆ ಪರಿಶೀಲಿಸದೆ, ಈ ಸರ್ವೆ ನಂಬರ್‌ನಲ್ಲಿ ಬಡಾವಣೆ ನಿರ್ಮಾಣಕ್ಕೆ ಅಂತಿಮ ಅಧಿಸೂಚನೆ ಹೊರಡಿಸಲಾಗಿದೆ. 2013ರವರೆಗೂ ಈ ಬಡಾವಣೆಗೆ ಪರಿಹಾರ ನೀಡಲಾಗಿದ್ದು, ದಾಖಲೆಗಳನ್ನು ಪರಿಶೀಲಿಸದೆ ಭೂ ಪರಿಹಾರ ವಿತರಿಸಿ ಅಕ್ರಮವೆಸಲಾಗಿದೆ. ಭೂಮಿ ಇಲ್ಲದಿದ್ದರೂ 7 ಎಕರೆಗೆ ಇಬ್ಬರು ವ್ಯಕ್ತಿಗಳು ₹ 21 ಲಕ್ಷ ಪರಿಹಾರ (ಎಕರೆಗೆ ₹ 3 ಲಕ್ಷ) ಪಡೆದಿದ್ದಾರೆ. ಇದು ನನ್ನ ಅವಧಿಯಲ್ಲಿ ನಡೆದಿರುವ ಪ್ರಕರಣ ಅಲ್ಲ' ಎಂದು ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

'ಹಿಂದಿನ ಜಿಲ್ಲಾಧಿಕಾರಿಗೆ ಇದೇ ವಿಚಾರವಾಗಿ ಕೆಲವರು ದೂರು ನೀಡಿದ್ದರು. ಆದರೆ, ನಾನು ಈ ದೂರಿಗಿಂತ ಮುನ್ನವೇ ಜಮೀನನ್ನು ಸರ್ವೆ ಮಾಡಿಸಿದ್ದೆ. ಜೊತೆಗೆ ನಕ್ಷೆ ರಚಿಸಿ, ಲೋಪ ಪತ್ತೆ ಹಚ್ಚುವ ಕೆಲಸ ಮಾಡಿದ್ದೆ. ಮುಡಾ ಸಭೆ ಗಮನಕ್ಕೆ ತಂದು ತನಿಖೆ ಕುರಿತು ಮುಂದುವರಿಯಲಾಗುವುದು' ಎಂದರು.

'ಪ್ರಧಾನಿ ಮೋದಿ ಕರೆ ನೀಡಿದ 'ಸ್ವಚ್ಛ ಭಾರತ್' ಕಾರ್ಯಕ್ರಮಕ್ಕೆ ಕೈಜೋಡಿಸಿ 322 ಅಭಿಯಾನ ನಡೆಸಿದ್ದೇನೆ. ಮೈಸೂರು ನಗರದಲ್ಲಿ 'ಹಸಿರು ಮೈಸೂರು' ವತಿಯಿಂದ 50 ಸಾವಿರ ಗಿಡ ಬೆಳೆಸಿದ್ದೇನೆ. ಕೋವಿಡ್ ಸಮಯದಲ್ಲಿ ಜೀವದ ಹಂಗು ತೊರೆದು ನೆರವು ಕಾರ್ಯದಲ್ಲಿ ತೊಡಗಿದ್ದೇನೆ. ಈ ಬಗ್ಗೆ ಮೈಸೂರಿನವರಿಗೆ ಅರಿವು ಇದೆ. ಬೇರೆ ಯಾರಿಂದಲೋ ಪ್ರಶಂಸನಾ ಪತ್ರ ಬೇಡ' ಎಂದು ಸಿಂಧೂರಿ ವಿರುದ್ಧ ವಾಗ್ದಾಳಿ ನಡೆಸಿದರು.

ಚಿತ್ರಾವಳಿ



ಚಿಕ್ಕಬಾಣಾವರ ಪಂಚಾಯಿತಿ ವ್ಯಾಪ್ತಿಯ ಜನರಿಗೆ ದಾಸರಹಳ್ಳಿ ಶಾಸಕ ಆರ್. ಮಂಜುನಾಥ್ ಅವರು ಆಹಾರ ಸಾಮಗ್ರಿಗಳನ್ನು ಗುರುವಾರ ವಿತರಿಸಿದರು. ಜೆಡಿಎಸ್ ಮುಖಂಡರಾದ ಮುನಿಸ್ವಾಮಣ್ಣ, ಗುಂಡಪ್ಪ ಗೌಡ, ಚರಣ್ ಗೌಡ, ಗೋವಿಂದರಾಜು, ಗುರುಪ್ರಸಾದ್, ವರದರಾಜು ಇದ್ದರು.



ನಗರದ ಗಾಂಧಿ ಬಜಾರ್‌ನ ವಾಹನ ನಿಲುಗಡೆ ಪ್ರದೇಶ ಒತ್ತುವರಿಯನ್ನು ಬಿಬಿಎಂಪಿ ಸಿಬ್ಬಂದಿ ಮತ್ತು ಸಂಚಾರ ಪೊಲೀಸರು ಗುರುವಾರ ತೆರವುಗೊಳಿಸಿದರು – ಪ್ರಜಾವಾಣಿ ಚಿತ್ರ



ಭಾಗಶಃ ಲಾಕ್‌ಡೌನ್ ಪರಿಣಾಮ ನಾಲ್ಕು ದಿನಗಳಿಂದ ಮಾರಾಟವಾಗದೇ ಉಳಿದಿರುವ ಜರ್ಬೆರಾ ಹೂವುಗಳನ್ನು ಜೋಡಿಸಿಡುತ್ತಿರುವ ಯುವಕ



ಗೋವಿಂದರಾಜನಗರ ಕ್ಷೇತ್ರದ ಅಗ್ರಹಾರ ದಾಸರಹಳ್ಳಿ ವಾರ್ಡ್ ಕಚೇರಿ ಮುಂಭಾಗದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಬಡ ಕುಟುಂಬಗಳಿಗೆ ಸಚಿವ ವಿ.ಸೋಮಣ್ಣ ಅವರು ದಿನಸಿ ಕಿಟ್‌ಗಳನ್ನು ವಿತರಿಸಿದರು. ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್, ಪಾಲಿಕೆ ಮಾಜಿ ಸದಸ್ಯೆ ಶಿಲ್ಪಾ ಶ್ರೀಧರ್, ಬಿಜೆಪಿ ಮಂಡಲ ಅಧ್ಯಕ್ಷ ವಿಶ್ವನಾಥ್ ಗೌಡ, ಮುಖಂಡರಾದ ಅರುಣ್ ಸೋಮಣ್ಣ, ಶ್ರೀಧರ್ ಇದ್ದರು

ಸಮಿತಿ ರಚನೆ: ದಕ್ಷಿಣ ಪೀಠದ ಆದೇಶ ಪ್ರಶ್ನಿಸಿ ಕರ್ನಾಟಕದಿಂದ ಮೇಲ್ಮನವಿ

ಮೇಕೆದಾಟು: ತೀರ್ಪು ಕಾಯ್ದಿರಿಸಿದ ಎನ್‌ಜಿಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೇಕೆದಾಟು ಸ್ಥಳ ಪರಿಶೀಲನೆಗಾಗಿ ಸಮಿತಿ ರಚಿಸಿ ದಕ್ಷಿಣ (ಚೆನ್ನೈ) ಪೀಠ ನೀಡಿದ್ದ ಆದೇಶ ಪ್ರಶ್ನಿಸಿರುವ ಕರ್ನಾಟಕದ ಮೇಲ್ಮನವಿಯ ವಿಚಾರಣೆಯನ್ನು ಗುರುವಾರ ಪೂರ್ಣಗೊಳಿಸಿರುವ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ)ಯ ಪ್ರಧಾನ ಪೀಠ, ಈ ಸಂಬಂಧದ ತೀರ್ಪನ್ನು ಕಾಯ್ದಿರಿಸಿದೆ.

'ಕರ್ನಾಟಕ ಸರ್ಕಾರವು ಮೇಕೆದಾಟು ಬಳಿ ಕಾವೇರಿ ನದಿಗೆ ಅಡ್ಡಲಾಗಿ ಅಕ್ರಮವಾಗಿ ಅಣೆಕಟ್ಟೆ ನಿರ್ಮಿಸುತ್ತಿದೆ' ಎಂಬ ಪತ್ರಿಕಾ ವರದಿ ಆಧರಿಸಿ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದ್ದ ದಕ್ಷಿಣದ ಪೀಠ, ಮೇ 21ರಂದು ಸಮಿತಿಯೊಂದನ್ನು ರಚಿಸಿ ಸ್ಥಳ ಪರಿಶೀಲನೆಗಾಗಿ ಆದೇಶಿಸಿತ್ತು.



ಈ ಆದೇಶ ಪ್ರಶ್ನಿಸಿ ಸಲ್ಲಿಕೆಯಾಗಿರುವ ಮೇಲ್ಮನವಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಆದರ್ಶಕುಮಾರ್ ಗೋಯೆಲ್ ನೇತೃತ್ವದ ಪ್ರಧಾನ ಪೀಠದೆದುರು ಅಡ್ವೋಕೇಟ್ ಜನರಲ್ ಪ್ರಭುಲಿಂಗ ನಾವದಗಿ ವಾದ ಮಂಡಿಸಿದರು.

ಮೇಕೆದಾಟು ಯೋಜನೆ ವಿರೋಧಿಸಿ ತಮಿಳುನಾಡು ಸರ್ಕಾರ ಸುಪ್ರೀಂ ಕೋರ್ಟ್‌ಗೆ ಈಗಾಗಲೇ ಸಲ್ಲಿಸಿರುವ ಮೇಲ್ಮನವಿಯ ವಿಚಾರಣೆ ಬಾಕಿ ಇದೆ. ಈ ವಿಷಯವನ್ನು ತಮಿಳುನಾಡು ಸರ್ಕಾರವೇ ಕೇಂದ್ರ ಸರ್ಕಾರದೆದುರು ಹೇಳಿಕೊಂಡಿದೆ. ಹಾಗಾಗಿ, ಎನ್‌ಜಿಟಿ ದಕ್ಷಿಣದ ಪೀಠ ಸ್ವಯಂ ಪ್ರೇರಣೆಯ ದೂರು ದಾಖಲಿಸಿಕೊಂಡು ವಿಚಾರಣೆ ನಡೆಸಲು ಅವಕಾಶವಿಲ್ಲ ಎಂದು ಅವರು ಹೇಳಿದರು.

ಕಾವೇರಿಯ ಹೆಚ್ಚುವರಿ ನೀರನ್ನು ತಡೆದು, ಬೆಂಗಳೂರು ಮತ್ತು ಸುತ್ತ ಮುತ್ತಲ ಪ್ರದೇಶಗಳ ಜನತೆಗೆ ಕುಡಿಯುವ ನೀರು ಪೂರೈಸುವ ಉದ್ದೇಶದಿಂದ ಕರ್ನಾಟಕ ಸರ್ಕಾರ ಮೇಕೆದಾಟು ಯೋಜನೆಯನ್ನು ರೂಪಿಸಿದೆ. ಯೋಜನಾ ಸ್ಥಳದಲ್ಲಿ ಕಾಮಗಾರಿ ಆರಂಭಿಸಲಾಗಿಲ್ಲ. ಯಾವುದೇ ರೀತಿಯ ಅಕ್ರಮಕ್ಕೆ ಅವಕಾಶವೇ ಇಲ್ಲ ಎಂದು ವಿವರಿಸಿದರು.

ಪ್ರಕರಣ ಕುರಿತು ಮಾಹಿತಿ ಕಲೆಹಾಕಿ, ದಾಖಲೆ ಸಲ್ಲಿಸಲು ಸಮಯಾವಕಾಶ ನೀಡಬೇಕು. ಅಲ್ಲಿಯವರೆಗೆ ವಿಚಾರಣೆ ಮುಂದೂಡಬೇಕು ಎಂದು ಈ ಸಂದರ್ಭ ತಮಿಳುನಾಡು ಪರ ವಕೀಲರು ಮಾಡಿಕೊಂಡ ಮನವಿಗೆ ಹಸಿರು ಪೀಠ ಮಾನ್ಯತೆ ನೀಡಲಿಲ್ಲ.

ರಾಜ್ಯ ಸರ್ಕಾರದ ವಾದ ಆಲಿಸಿದ ನ್ಯಾಯಮೂರ್ತಿ ಸುಧೀರ್ ಅಗರ್‌ವಾಲ್, ತಜ್ಞ ಸದಸ್ಯ ನಾಗಿನ್ ನಂದಾ ಅವರಿದ್ದ ಪೀಠವು ತೀರ್ಪು ಕಾಯ್ದಿರಿಸಿತು.

'ಅರಣ್ಯ, ಪರಿಸರ ಅನುಮತಿ ಪಡೆಯದೆಯೇ ಮೇಕೆದಾಟು ಜಲಾಶಯ ನಿರ್ಮಿಸಲು ಕರ್ನಾಟಕ ಸರ್ಕಾರ ಸಿದ್ಧತೆ ನಡೆಸಿದೆ' ಎಂಬ ಚೆನ್ನೈನ ಪತ್ರಿಕೆಯೊಂದರ ವರದಿ ಆಧರಿಸಿ ನ್ಯಾಯಮೂರ್ತಿ ಆರ್.ರಾಮಕೃಷ್ಣನ್ ಹಾಗೂ ತಜ್ಞ ಸದಸ್ಯ ಕೆ.ಸತ್ಯಗೋಪಾಲ್ ಅವರನ್ನು ಒಳಗೊಂಡ ದಕ್ಷಿಣ ಪೀಠವು ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿತ್ತು. ಮೇಕೆದಾಟು ಬಳಿಯ ಸ್ಥಳ ಪರಿಶೀಲನೆಗಾಗಿ ಸಮಿತಿ ರಚಿಸಿ, ಜುಲೈ 5ರೊಳಗೆ ವರದಿ ಸಲ್ಲಿಸುವಂತೆ ಆ ಸಮಿತಿಗೆ ಸೂಚಿಸಿತ್ತು.

ಉದ್ದೇಶಿತ ಯೋಜನಾ ಪ್ರದೇಶದ ಬಳಿ ಇರುವ ಕಾವೇರಿ ವನ್ಯಜೀವಿ ತಾಣ ಹಾಗೂ ಮೇಕೆದಾಟು ಸುತ್ತಮುತ್ತಲಿನ ಅರಣ್ಯ ಪ್ರದೇಶದಲ್ಲಿ ಯಾವುದೇ ರೀತಿಯ ಉಲ್ಲಂಘನೆ ಕಂಡುಬಂದಲ್ಲಿ ವಾಸ್ತವ ವರದಿಯನ್ನು ಸಲ್ಲಿಸಬೇಕು ಎಂದು ಪೀಠವು ಸಮಿತಿಗೆ ನಿರ್ದೇಶನ ನೀಡಿತ್ತು.

ಡಿಎಚ್‌ಒ ಡಾ.ಅಮರನಾಥ್ ಎತ್ತಂಗಡಿ

ಪ್ರಜಾವಾಣಿ ವಾರ್ತೆ

ಮೈಸೂರು: ಐಎಎಸ್ ಅಧಿಕಾರಿಗಳಾದ ರೋಹಿಣಿ ಸಿಂಧೂರಿ ಹಾಗೂ ಶಿಲ್ಪಾನಾಗ್ ವರ್ಗಾವಣೆ ಬೆನ್ನಲೇ, ಜಿಲ್ಲಾ ಆರೋಗ್ಯಾಧಿಕಾರಿ (ಡಿಎಚ್‌ಒ) ಡಾ.ಟಿ.ಅಮರನಾಥ್ ಅವರನ್ನೂ ಎತ್ತಂಗಡಿ ಮಾಡಲಾಗಿದೆ.

ಜಿಲ್ಲೆಯಲ್ಲಿ ಕೋವಿಡ್ ಸಾವಿನ ಸಂಖ್ಯೆ ದಿನೇದಿನೇ ಹೆಚ್ಚುತ್ತಲೇ ಇದ್ದು, ಸೋಂಕು ನಿಯಂತ್ರಣ ವಿಚಾರದಲ್ಲಿನ ವೈಫಲ್ಯವೇ ಈ ವರ್ಗಾವಣೆಗೆ ಕಾರಣ ಎನ್ನಲಾಗಿದೆ. ಈಚೆಗೆ ನಡೆದ ಸಭೆಯಲ್ಲಿ ಡಾ.ಅಮರನಾಥ್ ಅವರನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ತರಾಟೆಗೆ ತೆಗೆದುಕೊಂಡಿದ್ದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಮೈಸೂರು ವಿಭಾಗೀಯ ಉಪನಿರ್ದೇಶಕರಾಗಿದ್ದ ಡಾ.ಕೆ.ಎಚ್.ಪ್ರಸಾದ್ ಅವರನ್ನು ನೂತನ ಜಿಲ್ಲಾ ಆರೋಗ್ಯಾಧಿಕಾರಿಯನ್ನಾಗಿ ನೇಮಕ ಮಾಡಿ ಸರ್ಕಾರ ಆದೇಶ ಹೊರಡಿಸಿದೆ. ಡಾ.ಅಮರನಾಥ್ ಅವರನ್ನು ಡಾ.ಪ್ರಸಾದ್ ಸ್ಥಾನಕ್ಕೆ ನಿಯೋಜಿಸಲಾಗಿದೆ. ಅವರೂ ಮೈಸೂರಿನ ವಿಭಾಗೀಯ ಕಚೇರಿಯಲ್ಲಿ ಕಾರ್ಯನಿರ್ವಹಿಸಲಿದ್ದಾರೆ.

'ಪವರ್ ಬ್ಯಾಂಕ್' ವಂಚನೆ: ಜಾಮೀನು ತಿರಸ್ಕೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪವರ್ ಬ್ಯಾಂಕ್' ಆ್ಯಪ್ ಮೂಲಕ ₹ 290 ಕೋಟಿ ವಂಚನೆ ಮಾಡಿರುವ ಪ್ರಕರಣದ ಪ್ರಮುಖ ಆರೋಪಿ ಅನಸ್ ಅಹ್ಮದ್ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಸಿಸಿಎಚ್ 67ನೇ ನ್ಯಾಯಾಲಯ ತಿರಸ್ಕರಿಸಿದೆ.

ವ್ಯವಸ್ಥಿತ ಜಾಲ ರೂಪಿಸಿ ಲಾಭದ ಆಮಿಷವೊಡ್ಡಿ ಜನರಿಂದ ಹಣ ಸಂಗ್ರಹಿಸಿದ್ದ ಆರೋಪಿ ಲಾಭ, ಅಸಲು ಮರಳಿಸದೇ ವಂಚಿಸಿದ್ದ. ಈ ಬಗ್ಗೆ ರೇಜೋರ್‌ಪೇ ಕಂಪನಿಯ ಪ್ರತಿನಿಧಿ, ಸಿಐಡಿ ಸೈಬರ್ ಕ್ರೈಂ ವಿಭಾಗಕ್ಕೆ ದೂರು ನೀಡಿದ್ದರು.

ತನಿಖೆ ಕೈಗೆತ್ತಿಕೊಂಡಿದ್ದ ಅಧಿಕಾರಿಗಳು, ಚೀನಾ ಪ್ರಜೆಗಳು ಸೇರಿದಂತೆ 12 ಮಂದಿಯನ್ನು ಬಂಧಿಸಿದ್ದಾರೆ. ತಲೆಮರೆಸಿಕೊಂಡಿರುವ ಆರೋಪಿ ಅನಸ್ ಅಹ್ಮದ್, ನಿರೀಕ್ಷಣಾ ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದರು.

ಅರ್ಜಿಗೆ ಆಕ್ಷೇಪಣೆ ಸಲ್ಲಿಸಿದ್ದ ಸಿಐಡಿ ಅಧಿಕಾರಿಗಳು, 'ಆರೋಪಿಗಳ ವಿರುದ್ಧ 29,000 ಮಂದಿ ದೂರು ನೀಡಿದ್ದಾರೆ. ಹೆಚ್ಚಿನ ತನಿಖೆ ನಡೆಸಬೇಕು. ಹೀಗಾಗಿ, ಅರ್ಜಿ ತಿರಸ್ಕರಿಸಬೇಕು' ಎಂದಿದ್ದರು. ಸಿಐಡಿ ಪರ ಪಬ್ಲಿಕ್ ಪ್ರಾಸಿಕ್ಯೂಟರ್ ಬಿ.ಎಸ್. ಪಾಟೀಲ ವಾದಿಸಿದ್ದರು.

ನ್ಯಾಯಾಧೀಶರಾದ ಕಾತ್ಯಾಯಿನಿ, ಜಾಮೀನು ಅರ್ಜಿಯನ್ನು ತಿರಸ್ಕರಿಸಿ ಗುರುವಾರ ಆದೇಶ ಹೊರಡಿಸಿದ್ದಾರೆ. ಇದರ ಬೆನ್ನಲ್ಲೇ ಅಧಿಕಾರಿಗಳು, ಅನಸ್ ಅಹ್ಮದ್‌ಗಾಗಿ ಹುಡುಕಾಟ ಚುರುಕುಗೊಳಿಸಿದ್ದಾರೆ.

ಅತ್ಯಾಚಾರ ದೂರು: ಗ್ರಾ.ಪಂ ಸದಸ್ಯ ಬಂಧನ



ಆನೇಕಲ್: ವಿವಾಹಿತ ಮಹಿಳೆಯೊಬ್ಬರ ಮೇಲೆ ಅತ್ಯಾಚಾರವೆಸಗಿದ ದೂರಿನ ಹಿನ್ನೆಲೆಯಲ್ಲಿ ಬನ್ನೇರುಘಟ್ಟ ಪೊಲೀಸರು ಗುರುವಾರ ಸ್ಥಳೀಯ ಗ್ರಾಮ ಪಂಚಾಯಿತಿ ಸದಸ್ಯರೊಬ್ಬರನ್ನು ಬಂಧಿಸಿದ್ದಾರೆ.

ಫೇಸ್‌ಬುಕ್‌ನಲ್ಲಿ ಪರಿಚಿತರಾದ ಬನ್ನೇರುಘಟ್ಟ ಗ್ರಾಮ ಪಂಚಾಯಿತಿ ಸದಸ್ಯ ಅಹ್ಮದ್ ಪಾಷಾ ತನ್ನ ಮೇಲೆ ಅತ್ಯಾಚಾರವೆಸಗಿದ್ದಾನೆ ಎಂದು ಮಹಿಳೆ ದೂರು ನೀಡಿದ್ದಾರೆ.

ದೂರಿನ ಆಧಾರದ ಮೇಲೆ ಅಹ್ಮದ್ ಪಾಷಾ ಮತ್ತು ಆತನಿಗೆ ಸಹಾಯ ಮಾಡಿದ ವಾಹನ ಚಾಲಕ ವಹೀದ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ಕಂಪನಿ ಆಡಳಿತ ಮಂಡಳಿಯ ಮೊದಲ ಸಭೆಯಲ್ಲಿ ನಿರ್ಧಾರ

ವಸಂತನಗರದಲ್ಲಿ ಕಸ ನಿರ್ವಹಣೆ ಕಂಪನಿ ಕಚೇರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ಕಸ ನಿರ್ವಹಣೆ ನಿಯಮಿತ' ಕಂಪನಿಯು ವಸಂತನಗರದ ತಿಮ್ಮಯ್ಯ ರಸ್ತೆ ಪಕ್ಕದಲ್ಲಿರುವ ಬಿಬಿಎಂಪಿ ಕಟ್ಟಡದ ಎರಡನೇ ಮಹಡಿಯಲ್ಲಿ ಶೀಘ್ರವೇ ತನ್ನ ಕಚೇರಿಯನ್ನು ಆರಂಭಿಸಲಿದೆ.

ಕಂಪನಿಯ ಆಡಳಿತ ಮಂಡಳಿಯ ಮೊದಲ ಸಭೆಯು ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ರಾಕೇಶ್ ಸಿಂಗ್ ಅಧ್ಯಕ್ಷತೆಯಲ್ಲಿ ಗುರುವಾರ ನಡೆಯಿತು. ಸಭೆಯಲ್ಲಿ ಕಂಪನಿಯು ತುರ್ತಾಗಿ ಕೈಗೊಳ್ಳಬೇಕಾದ ಕ್ರಮಗಳ ಬಗ್ಗೆ ಚರ್ಚಿಸಿ ಪ್ರಮುಖ ನಿರ್ಧಾರಗಳನ್ನು ಕೈಗೊಳ್ಳಲಾಯಿತು.

ಕಂಪನಿಗೆ ಹೊಸ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಯನ್ನು (ಸಿಇಒ) ಆಯ್ಕೆ ಮಾಡಲು ಪರಿಶೋಧನಾ ಸಮಿತಿಯನ್ನು ಬುಧವಾರ ರಚಿಸಲಾಗಿದೆ. ನೂತನ ಸಿಇಒ ಆಯ್ಕೆಯಾಗುವವರೆಗೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರನ್ನೇ ಹಂಗಾಮಿ ಸಿಇಒ ಆಗಿ ನೇಮಿಸಲು ನಿರ್ಧರಿಸಲಾಯಿತು.



ಕಂಪನಿಯ ಮೊದಲ ಸಭೆಯ ಸಂದರ್ಭದಲ್ಲಿ ಅಧ್ಯಕ್ಷ ರಾಕೇಶ್ ಸಿಂಗ್ ಅವರು ಹಂಗಾಮಿ ಸಿಇಒ ಗೌರವ್ ಗುಪ್ತ ಜೊತೆ ಸಮಾಲೋಚನೆ ನಡೆಸಿದರು. ಬಿಬಿಎಂಪಿ ವಿಶೇಷ ಆಯುಕ್ತ ಡಿ.ರಂದೀಪ್ ಅವರೂ ಇದ್ದಾರೆ

ಕಂಪನಿಯು ಕಸ ನಿರ್ವಹಣೆಗೆ ಸಂಬಂಧಿಸಿದ ಕಾರ್ಯಗಳನ್ನು ಜುಲೈ 1ರಿಂದಲೇ ಆರಂಭಿಸುವ ಉದ್ದೇಶ ಹೊಂದಿದೆ. ಸಾರ್ವಜನಿಕ ಶೌಚಾಲಯಗಳ ಕಸ ಹಾಗೂ ಜೈವಿಕ-ವೈದ್ಯಕೀಯ ಕಸವನ್ನು ಹೊರತಾಗಿ ಉಳಿದ ಎಲ್ಲ ರೀತಿಯ ಕಸಗಳನ್ನು ಈ ಕಂಪನಿಯೇ ನಿರ್ವಹಿಸಲಿದೆ. ಕಸ ಸಂಗ್ರಹ, ವಿಂಗಡಣೆ, ರವಾನೆ, ಸಂಸ್ಕರಣೆ, ಹಸಿ ತ್ಯಾಜ್ಯದಿಂದ ಸಾವಯವ ಗೊಬ್ಬರ ತಯಾರಿ, ಮರುಬಳಕೆ ಹಾಗೂ ವಿಲೇವಾರಿ ಕುರಿತ ಎಲ್ಲ ಹೊಣೆಗಳೂ ಈ ಕಂಪನಿಯದ್ದಾಗಲಿದೆ.

ಕಸ ನಿರ್ವಹಣೆಯ ಕಾರ್ಯವನ್ನು ಆರಂಭಿಸುವ ಸಲುವಾಗಿ ಬಿಬಿಎಂಪಿಯ ಕಸ ನಿರ್ವಹಣೆ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲವು ಅಧಿಕಾರಿಗಳನ್ನು ಕಂಪನಿಯ ಸೇವೆಗೆ ನಿಯೋಜಿಸಿಕೊಳ್ಳುವ ಸಿದ್ಧತೆ ನಡೆದಿದೆ. ಏಳು ನಗರ ಸ್ಥಳೀಯ ಸಂಸ್ಥೆಗಳಿಂದ ಬಿಬಿಎಂಪಿ ತೆಕ್ಕೆಗೆ ಬಂದ ಪರಿಸರ ಎಂಜಿನಿಯರ್‌ಗಳಲ್ಲಿ ಕೆಲವರು ಪ್ರಸ್ತುತ ಬಿಬಿಎಂಪಿ ಬೇರೆ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. ಅವರು ಬೆಂಗಳೂರು ಕಸ ನಿರ್ವಹಣೆ ಕಂಪನಿಯಡಿ ಕಾರ್ಯನಿರ್ವಹಿಸಲು ಹಿಂದೇಟು ಹಾಕುತ್ತಿದ್ದಾರೆ.

ಅರುಣ್ ಸಿಂಗ್‌ಗೆ ಡಿಕೆಶಿ ಪ್ರಶ್ನೆ

ಚಾಮರಾಜನಗರ ದುರಂತ ಸರ್ಕಾರದ ಅತ್ಯುತ್ತಮ ಕೆಲಸವೇ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಜನರ ಸಂಕಷ್ಟದಲ್ಲಿ ಭಾಗಿಯಾಗಿ, ಅವರ ಧ್ವನಿಯಾಗಲು ಕಾಂಗ್ರೆಸ್ ಸಂಕಲ್ಪ ಮಾಡಿದೆ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

ಮಲ್ಲೇಶ್ವರ ವಿಧಾನಸಭೆ ಕ್ಷೇತ್ರದ ಗಾಯತ್ರಿ ನಗರದಲ್ಲಿ ಶಿವಕುಮಾರ್ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಬಡವರಿಗೆ ಗುರುವಾರ ಆಹಾರ ಕಿಟ್ ವಿತರಿಸಿದರು.

ಈ ವೇಳೆ ಮಾತನಾಡಿದ ಶಿವಕುಮಾರ್, 'ಪಕ್ಷದ ಶಾಸಕರಿಲ್ಲದ ಕಡೆಗಳಲ್ಲೂ ಬಡವರಿಗೆ ಆಹಾರ ಕಿಟ್ ನೀಡುವ ಕಾರ್ಯಕ್ರಮದಲ್ಲಿ ನಾನು ಭಾಗಿಯಾಗಿದ್ದೇನೆ. ನಮ್ಮ ನಾಯಕರು, ಕಾರ್ಯಕರ್ತರು ಸ್ವಂತ ಹಣ ಖರ್ಚು ಮಾಡಿ ಆಹಾರ ಕಿಟ್ ವಿತರಿಸುತ್ತಿದ್ದಾರೆ' ಎಂದರು.

'ಕೊರೊನಾ ಸಮಯದಲ್ಲಿ ರಾಜ್ಯ ಸರ್ಕಾರದ ಕಾರ್ಯವನ್ನು ಅರುಣ್ ಸಿಂಗ್ ಹೊಗಳಿರುವುದು ಸಂತೋಷ. ಆಮ್ಲಜನಕ ಸಿಗದೆ ಚಾಮರಾಜನಗರದಲ್ಲಿ 37, ರಾಯಚೂರಿನಲ್ಲಿ 6 ಜನರನ್ನು ಸರ್ಕಾರ ಕೊಲೆ ಮಾಡಿದೆ. ಇದು ಕೂಡಾ ಅತ್ಯುತ್ತಮ ಕಾರ್ಯವೇ ಎಂದು ಅರುಣ್ ಸಿಂಗ್ ಅವರು ಉತ್ತರಿಸಬೇಕು' ಎಂದರು.

ಈ ಸಂದರ್ಭದಲ್ಲಿ ಕೆಪಿಸಿಸಿ ಕಾರ್ಯಾಧ್ಯಕ್ಷ ಸಲೀಂ ಅಹ್ಮದ್, ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ರಾಜ್ಯಸಭೆ ಸದಸ್ಯ ಜಿ.ಸಿ. ಚಂದ್ರಶೇಖರ್, ಪಕ್ಷದ ಉತ್ತರ ನಗರ ಜಿಲ್ಲಾ ಘಟಕದ ಅಧ್ಯಕ್ಷ ರಾಜಕುಮಾರ್, ಎಚ್.ಎಂ. ರೇವಣ್ಣ, ವಿ.ಎಸ್. ಆರಾಧ್ಯ ಇದ್ದರು.

ದಂಪತಿ ಸಾವು ● ಮೂವರು ಹೆಣ್ಣು ಮಕ್ಕಳು ಅನಾಥ, ಅಜ್ಜಿ ಮನೆಯಲ್ಲಿ ಆಶ್ರಯ

‘ಅಪ್ಪ, ಅಮ್ಮ ಇದ್ದಾಗ ಸಿರಿತನವಿತ್ತು..’

● ಎಂ.ರಾಮಕೃಷ್ಣಪ್ಪ

ಮಕ್ಕಳ ಆಸರೆ ಕಸಿದ ಕೊರೊನಾ

ಚಿಂತಾಮಣಿ: ‘ಅಪ್ಪ ಅಮ್ಮ ಕೂಲಿ ಮಾಡಿದರೂ ಅವರು ಇದ್ದಾಗ ಬದುಕಿನಲ್ಲಿ ಸಿರಿತನವಿತ್ತು. ನೆಮ್ಮದಿಯ ಜೀವನ ನಡೆಸುತ್ತಿದ್ದೆವು’ ಎಂದು ತಾಲ್ಲೂಕಿನ ಪೆರಮಾಚನಹಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ವೆಂಕಟಾಪುರದ ವಿದ್ಯಾರ್ಥಿನಿ, 16 ವರ್ಷದ ಮಂಗಳಾ ಭಾವುಕರಾದರು.

ವೆಂಕಟಾಪುರದ ಶ್ರೀರಾಮಪ್ಪ ಹಾಗೂ ವಿಜಯಮ್ಮ ದಂಪತಿಗೆ ಮೂವರು ಮಕ್ಕಳು. ಮಂಗಳಾ ಹಿರಿಯ ಮಗಳು. ಭಾಗ್ಯಲಕ್ಷ್ಮಿ ಮತ್ತು ಲಲಿತಾ ಕಿರಿಯ ಮಕ್ಕಳು. ಶ್ರೀರಾಮಪ್ಪ ಮತ್ತು ವಿಜಯಮ್ಮ ಕೋವಿಡ್ ಸೋಂಕಿನಿಂದ ಎರಡೇ ವಾರದ ಅಂತರದಲ್ಲಿ ಮೃತಪಟ್ಟರು. ಈಗ ಈ ಮೂವರು ಹೆಣ್ಣು ಮಕ್ಕಳು ಅಜ್ಜಿಮನೆ (ತಾಯಿಯ ತವರು) ಶಿಡ್ಲಘಟ್ಟ ತಾಲ್ಲೂಕಿನ ಪಿಲ್ಲಗುಂಡ್ಲಹಳ್ಳಿಯಲ್ಲಿ ಸೋದರ ಮಾವನ ಆಶ್ರಯದಲ್ಲಿ ಇದ್ದಾರೆ.

ಮಂಗಳಾ ಚಿಂತಾಮಣಿಯ ಬಾಲಕಿಯರ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ಪ್ರಥಮ ಪಿಯುಸಿ ಓದುತ್ತಿದ್ದಾರೆ. ಭಾಗ್ಯಲಕ್ಷ್ಮಿ 9ನೇ ಹಾಗೂ ಲಲಿತಾ 8ನೇ ತರಗತಿಯಲ್ಲಿ ಓದುತ್ತಿದ್ದಾರೆ.

ಬಡತನವಿದ್ದರೂ ಅಪ್ಪ, ಅಮ್ಮ ನಮ್ಮನ್ನು ಚೆನ್ನಾಗಿ ನೋಡಿಕೊಂಡಿದ್ದರು. ಮೂವರನ್ನು ಓದಿಸುತ್ತಿದ್ದರು. ಏಪ್ರಿಲ್‌ನಲ್ಲಿ ಎರಡನೇ ವಾರದಲ್ಲಿ ತಂದೆಗೆ ಕೆಮ್ಮು, ಜ್ವರ ಕಾಣಿಸಿಕೊಂಡಿತು. ಒಂದೆರಡು ದಿನ ಮಾತ್ರೆ ನುಂಗಿ ಮಲಗಿದ್ದರು. ಕಡಿಮೆ ಆಗಲಿಲ್ಲ, ಕೊರೊನಾ ಪರೀಕ್ಷೆ ಮಾಡಿಸಿದರು. ಪಾಸಿಟಿವ್ ವರದಿ ಬಂದಿತ್ತು. ಕಷ್ಟದಲ್ಲೇ ಸಾಕಷ್ಟು ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಕೊಡಿಸಿದ್ದೆವು. ಆದರೂ ಪ್ರಯೋಜನವಾಗಲಿಲ್ಲ. ಅಮ್ಮ ಕೂಲಿ ಮಾಡಿ ನಮ್ಮನ್ನು ಸಾಕುತ್ತಿದ್ದರು. ಅಪ್ಪ ತೀರಿದ ಎರಡನೇ ವಾರದಲ್ಲಿ ಕೊರೊನಾ ತಾಯಿಗೆ ತಗುಲಿತು. ಕ್ರೂರ ಕೊರೊನಾ ಅಮ್ಮನ ಮೇಲೂ ಕರುಣೆ ತೋರಲಿಲ್ಲ. ಅಮ್ಮ ಕೂಡ ಅಪ್ಪನ ಹಾದಿ ಹಿಡಿದರು.

‘ನಾವು ತಂದೆ ತಾಯಿ ಪ್ರೀತಿ, ಮಮತೆಯಿಂದ ವಂಚಿತರಾಗಿದ್ದೇವೆ. ನಾನು ಚೆನ್ನಾಗಿ ವ್ಯಾಸಂಗ ಮಾಡಿ ಉದ್ಯೋಗ ಪಡೆಯಬೇಕು. ನನ್ನ ತಂಗಿಯರನ್ನು ಚೆನ್ನಾಗಿ ಓದಿಸಬೇಕು ಎನ್ನುವ ಆಸೆ ಇದೆ. ಶಿಕ್ಷಣ ಮತ್ತು ಉದ್ಯೋಗಕ್ಕೆ ಸರ್ಕಾರದ ಸಹಾಯ ಅಗತ್ಯ’ ಎಂದು ಮಂಗಳಾ ಮನದ ಇಂಗಿತ ವ್ಯಕ್ತಪಡಿಸಿದರು.

ಮಕ್ಕಳನ್ನು ನ್ಯಾಯಾಧೀಶರ ಮುಂದೆ ಹಾಜರು ಪಡಿಸಿ ಎಲ್ಲ ಕಾನೂನು ಪ್ರಕ್ರಿಯೆಗಳನ್ನು ಪೂರ್ಣಗೊಳಿಸಿದ ನಂತರ ಅಜ್ಜಿಯ ಮನೆಗೆ ಕಳುಹಿಸಲಾಗಿದೆ. ಮಕ್ಕಳಿಗೆ ಅವರ ಆಶ್ರಯ ಸೂಕ್ತ ಎಂದು ಮನವರಿಕೆಯಾದ ನಂತರವೇ ಕಳುಹಿಸಿದ್ದೇವೆ. ಕಾನೂನಿನ ಪ್ರಕಾರ ದೊರೆಯುವ ಸೌಲಭ್ಯಗಳನ್ನು ಒದಗಿಸಲು ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ವಿದ್ಯಾರ್ಥಿ ವೇತನ ಮತ್ತಿತರ ಸೌಲಭ್ಯಗಳು ನೇರವಾಗಿ ಮಕ್ಕಳ ಬ್ಯಾಂಕ್ ಖಾತೆಗೆ ಜಮೆ ಆಗುತ್ತದೆ ಎಂದು ತಾಲ್ಲೂಕು ಶಿಶು ಅಭಿವೃದ್ಧಿ ಯೋಜನಾಧಿಕಾರಿ ಮಹೇಂದ್ರ ತಿಳಿಸಿದರು.

‘ಅಕ್ಕನ ಮಕ್ಕಳ ದೂರ ಮಾಡಲು ಸಾಧ್ಯವೇ?’

‘ಮಂಗಳಾ ಈ ಹಿಂದಿನಿಂದಲೂ ಪಿಲ್ಲಗುಂಡ್ಲಹಳ್ಳಿಯಲ್ಲಿ ಇದ್ದಳು. ಭಾಗ್ಯಲಕ್ಷ್ಮಿ ಮತ್ತು ಲಲಿತಾಳನ್ನು ನಾವೇ ನೋಡಿಕೊಳ್ಳುತ್ತಿದ್ದೇವೆ. ಅವರ ವಿದ್ಯಾಭ್ಯಾಸ ಮುಂದುವರಿಸುತ್ತೇವೆ’ ಎಂದು ಈ ಹೆಣ್ಣು ಮಕ್ಕಳ ಸೋದರ ಮಾವ ಶ್ರೀನಿವಾಸ್ ‘ಪ್ರಜಾವಾಣಿ’ಗೆ ತಿಳಿಸಿದರು.

ಅಧಿಕಾರಿಗಳು ಸರ್ಕಾರಿ ವಸತಿ ಶಾಲೆಗಳಲ್ಲಿ ದಾಖಲಿಸಿ ಆಶ್ರಯ ನೀಡುವುದಾಗಿ ತಿಳಿಸಿದ್ದರು. ಆದರೆ ಅನಾಥ ಮಕ್ಕಳನ್ನು ಅಲ್ಲಿ ಸರಿಯಾಗಿ ನೋಡಿಕೊಳ್ಳುವುದಿಲ್ಲ ಎನಿಸಿತು. ನಮಗೂ ಕಷ್ಟ ಇದೆ. ಆದರೆ ಸಂಕಷ್ಟದ ಈ ಸಮಯದಲ್ಲಿ ನಮ್ಮ ಅಕ್ಕನ ಮಕ್ಕಳನ್ನು ದೂರ ಮಾಡಲು ಸಾಧ್ಯವೇ? ಅವರ ವಿದ್ಯಾಭ್ಯಾಸ, ಮದುವೆ ಮತ್ತಿತರ ಸಾಕಷ್ಟು ವೆಚ್ಚಗಳು ಬರುತ್ತವೆ. ಸರ್ಕಾರ ನೆರವಿಗೆ ಧಾವಿಸಬೇಕು. ಶಿಕ್ಷಣ, ಉದ್ಯೋಗಕ್ಕೆ ಸಹಾಯ ಮಾಡಬೇಕು ಎಂದು ಶ್ರೀನಿವಾಸ್ ಮನವಿ ಮಾಡುವರು.

ನಗರ ಸ್ಥಳೀಯ ಸಂಸ್ಥೆ: ಚುನಾವಣೆ ಮುಂದೂಡಿಕೆ

ಬೆಂಗಳೂರು: ರಾಜ್ಯದಲ್ಲಿ ಕೋವಿಡ್ ಹೆಚ್ಚುತ್ತಿರುವುದರಿಂದ ನಗರ ಸ್ಥಳೀಯ ಸಂಸ್ಥೆಗಳ (ನಗರ ಸಭೆ, ಪುರಸಭೆ ಮತ್ತು ಪಟ್ಟಣ ಪಂಚಾಯಿತಿ ಮತ್ತು ಮಹಾನಗರ ಪಾಲಿಕೆಗಳು) ಸಾರ್ವತ್ರಿಕ ಚುನಾವಣೆ, ಉಪ ಚುನಾವಣೆ ಮತ್ತು ಈ ಸಂಸ್ಥೆಗಳ ಅಧ್ಯಕ್ಷ- ಉಪಾಧ್ಯಕ್ಷರ ಚುನಾವಣೆಯನ್ನು ಮುಂದಿನ ಆರು ತಿಂಗಳ ಅವಧಿಗೆ ರಾಜ್ಯ ಸರ್ಕಾರ ಮುಂದೂಡಿದೆ.

ಚುನಾವಣೆ ಮುಂದೂಡಿರುವ ಬಗ್ಗೆ ಎಲ್ಲ ಜಿಲ್ಲಾಧಿಕಾರಿಗಳು, ಉಪ ವಿಭಾಗಾಧಿಕಾರಿಗಳು, ತಹಶೀಲ್ದಾರ್‌ಗಳು ಮತ್ತು ಯೋಜನಾ ನಿರ್ದೇಶಕರಿಗೆ ನಗರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿ ಪತ್ರ ಬರೆದಿದ್ದಾರೆ.

ಏ. 26ರಂದು ಸಚಿವ ಸಂಪುಟ ಸಭೆಯಲ್ಲಿ ಚುನಾವಣೆ ಮುಂದೂಡುವ ಬಗ್ಗೆ ತೀರ್ಮಾನ ತೆಗೆದುಕೊಳ್ಳಲಾಗಿತ್ತು.

ಮುಡಾದಿಂದ ವಕೀಲರಿಗೆ ₹ 24 ಲಕ್ಷ ಪಾವತಿ

ಮೈಸೂರು: ಕುರುಬಾರಹಳ್ಳಿ ಸರ್ವೆ ನಂಬರ್ 4 ಹಾಗೂ ಆಲನಹಳ್ಳಿ ಸರ್ವೆ ನಂ 41 ಜಾಗದ ಭೂ ವ್ಯಾಜ್ಯ ವಿಚಾರವಾಗಿ ಮೈಸೂರು ಜಿಲ್ಲಾಡಳಿತ ಸುಪ್ರೀಂ ಕೋರ್ಟ್‌ನಲ್ಲಿ ಕಾನೂನು ಹೋರಾಟ ನಡೆಸುತ್ತಿದ್ದು, ವಕೀಲರಿಗೆ ನೀಡಲು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ (ಮುಡಾ) ವತಿಯಿಂದ ₹ 24 ಲಕ್ಷ ಪಡೆದಿರುವುದು ಗೊತ್ತಾಗಿದೆ.

‘ಸರ್ಕಾರದ ಪರ ವಾದ ಮಂಡಿಸುತ್ತಿರುವ ಹರೀಶ್ ಸಾಳ್ವೆ ಸೇರಿ ಇಬ್ಬರು ವಕೀಲರಿಗೆ ಹಣ ನೀಡಲು ಮೈಸೂರಿನ ಹಿಂದಿನ ಜಿಲ್ಲಾಧಿಕಾರಿ ಕೋರಿದ್ದರಿಂದ ಪ್ರಾಧಿಕಾರ ವತಿಯಿಂದ ₹ 24 ಲಕ್ಷ ನೀಡಲಾಗಿದೆ’ ಎಂದು ಮುಡಾ ಅಧ್ಯಕ್ಷ ಎಚ್.ವಿ.ರಾಜೀವ್ ಗುರುವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಇದರಲ್ಲಿ ಪ್ರತಿವಾದಿ ಮುಡಾ, ವಾದಿ ಜಿಲ್ಲಾಡಳಿತಕ್ಕೆ ಹೇಗೆ ಹಣ ನೀಡಿತು ಎಂಬ ಪ್ರಶ್ನೆಗೆ ಪ್ರತಿಕ್ರಿಯಿಸಿದ ಮುಡಾ ಆಯುಕ್ತ ಡಿ.ಬಿ.ನಟೇಶ್, ‘ಪ್ರಾಧಿಕಾರವನ್ನು ಪ್ರತಿವಾದಿ ಮಾಡಲಾಗಿದೆ ಎಂಬುದು ತಡವಾಗಿ ಗೊತ್ತಾಯಿತು. ತಪ್ಪಾಗಿ ಈ ರೀತಿಯಾಗಿದ್ದು, ಅದನ್ನು ಸರಿಪಡಿಸಲಾಗುತ್ತಿದೆ’ ಎಂದರು.

ಈ ಸರ್ವೆ ನಂಬರ್‌ನಲ್ಲಿರುವ ಕೆಲ ಪ್ರದೇಶ ಸರ್ಕಾರದ್ದು (ಬಿ ಖರಾಬು) ಎಂಬುದಾಗಿ ಜಿಲ್ಲಾಡಳಿತ ನಮೂದಿಸಿದ್ದರಿಂದ, ಸ್ಥಳೀಯರು ಇದನ್ನು ಪ್ರಶ್ನಿಸಿ ಹೈಕೋರ್ಟ್ ಮೊರೆ ಹೋಗಿದ್ದರು. ಅರ್ಜಿದಾರರ ಪರ ತೀರ್ಪು ಬಂದಿದ್ದು, ಜಿಲ್ಲಾಡಳಿತ ಇನ್ನೂ ಖಾತೆ ಮಾಡಿಕೊಟ್ಟಿಲ್ಲ. ಅರ್ಜಿದಾರರು ಹೈಕೋರ್ಟ್‌ಗೆ ನ್ಯಾಯಾಂಗ ನಿಂದನೆ ಅರ್ಜಿ ಸಲ್ಲಿಸಿದ್ದು, ಜಿಲ್ಲಾಡಳಿತ ಸುಪ್ರೀಂ ಕೋರ್ಟ್ ಮೊರೆ ಹೋಗಿದೆ.

ಮಂತ್ರಾಲಯ: ಜೂನ್ 22ರಿಂದ ರಾಯರ ದರ್ಶನ


ರಾಯಚೂರು: ಮಂತ್ರಾಲಯದಲ್ಲಿ ಶ್ರೀ ರಾಘವೇಂದ್ರ ಸ್ವಾಮಿಗಳ ಮೂಲ ವೃಂದಾವನ ದರ್ಶನಕ್ಕೆ ಜೂನ್ 22ರಿಂದ ಭಕ್ತರಿಗೆ ಅವಕಾಶ ನೀಡಲಾಗುವುದು ಎಂದು ಮಠದ ವ್ಯವಸ್ಥಾಪಕ ವೆಂಕಟೇಶ ಜೋಶಿ ತಿಳಿಸಿದ್ದಾರೆ.

ಬೆಳಿಗ್ಗೆ 6ರಿಂದ ಮಧ್ಯಾಹ್ನ 2, ಸಂಜೆ 4ರಿಂದ ರಾತ್ರಿ 9ರವರೆಗೆ ದರ್ಶನಕ್ಕೆ ಅವಕಾಶವಿದೆ. ಮಠದ ವಸತಿಗೃಹಗಳನ್ನು ಭಕ್ತರಿಗೆ ನೀಡಲಾಗುತ್ತಿದೆ. ಸದ್ಯ ಅನ್ನಪ್ರಸಾದ ವ್ಯವಸ್ಥೆ ಇರುವುದಿಲ್ಲ. ಕೋವಿಡ್ ನಿಯಮ ಪಾಲನೆ ಕಡ್ಡಾಯ. ಆನ್‌ಲೈನ್ ದರ್ಶನ ಮತ್ತು ಸೇವೆಗಳನ್ನೂ ಸಲ್ಲಿಸಬಹುದು ಎಂದು ತಿಳಿಸಿದ್ದಾರೆ.

ಕೋವಿಡ್ ಕಾರಣಕ್ಕಾಗಿ ಮೇ 1 ರಿಂದ ದರ್ಶನ ಸ್ಥಗಿತಗೊಳಿಸಲಾಗಿತ್ತು.

ನಿಧನ ವಾರ್ತೆ

ಹ.ಕ.ರಾಜೇಗೌಡ



ರಾಜೇಗೌಡ

ಮೈಸೂರು: ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ಹಸ್ತಪ್ರತಿ ವಿಭಾಗದ ನಿವೃತ್ತ ಸಂಶೋಧಕ ಹ.ಕ. ರಾಜೇಗೌಡ (86) ಅವರು ಗುರುವಾರ ಅನಾರೋಗ್ಯದಿಂದ ನಿಧನರಾದರು.

ಅವರಿಗೆ ಪತ್ನಿ, ಪುತ್ರಿ ಮತ್ತು ಪುತ್ರ ಇದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮ, ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಹನುಮನಹಳ್ಳಿಯಲ್ಲಿ ಶುಕ್ರವಾರ ನಡೆಯಲಿದೆ ಎಂದು ಇವರ ಅಳಿಯ ಅಗ್ನಿಶಾಮಕ ಮತ್ತು ತುರ್ತು ಸೇವೆ ಇಲಾಖೆ ಡಿಐಜಿ ಕೆ.ಟಿ.ಬಾಲಕೃಷ್ಣ ತಿಳಿಸಿದ್ದಾರೆ.

ಎನ್‌ಜಿಇಎಫ್‌ನ ವಿಶೇಷಾಧಿಕಾರಿಯಾಗಿಯೂ ಕಾರ್ಯನಿರ್ವಹಿಸಿದ್ದ ರಾಜೇಗೌಡ ಅವರು, ಗ್ರಂಥ ಸಂಪಾದನೆ, ಅನುವಾದ, ಇತಿಹಾಸ, ನಾಟಕ, ಸಂಶೋಧನೆ ಸೇರಿದಂತೆ 62ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಜೀಶಂಪ ಜಾನಪದ ಪ್ರಶಸ್ತಿ, ಚುಂಚಶ್ರೀ ಪ್ರಶಸ್ತಿ, ಜಾನಪದ ತಜ್ಞ ಪ್ರಶಸ್ತಿ ಸೇರಿ ಹಲವು ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಸಿನಿಮಾ ಪುರವಣಿ



ಕ್ಲಬ್ ಹೌಸ್‌ನಲ್ಲಿ ಕೂತ 'ಫಿಲ್ಮಿ' ಮಂದಿ...

ಮೂರು ಮುಖಗಳು

ಕ್ಲಬ್ ಹೌಸ್ ಹೊಸ ಅರಳೀಕಟ್ಟೆ ಅಥವಾ ಸೋಮಾರಿ ಕಟ್ಟೆ ಅಥವಾ ಹರಟೆ ಜಗುಲಿ... ಹೀಗೆ ಮೂರು ಹೆಸರುಗಳ ಮೂಲಕ ಗಮನಿಸಿದಾಗಲೇ ಇಂತಹ ಒಂದು ಹೊಸ ಮಾಧ್ಯಮದ ಗುಣ ಅವಗುಣಗಳ ಸ್ಪಷ್ಟ ಅರಿವು ಮೂಡುತ್ತದೆ. ಕ್ಲಬ್‌ಹೌಸ್ ಕೇವಲ ಶ್ರವ್ಯ ವೇದಿಕೆ. ಆಡುವ ಮಾತುಗಳನ್ನು ಕೇಳುವ ಅವಕಾಶ. ಹೀಗೆ ಆಡಿದ ಮಾತು ಮನಸ್ಸನ್ನು ಅರಳಿಸಿದರೆ, ಬೆಳೆಸಿದರೆ ಆಗ ಅದನ್ನು ಅರಳೀಕಟ್ಟೆ ಅನ್ನಬಹುದು. ಕೇವಲ ಹೊತ್ತು ಕಳೆಯುವ (ಟೈಂಪಾಸ್) ಮಾತಾದರೆ ಅದನ್ನು ಸೋಮಾರಿ ಕಟ್ಟೆ ಅನ್ನಬಹುದು. ವಿಶೇಷ ವಿಷಯ ಇಲ್ಲದೆ ಕೇವಲ ಕಾಲಹರಣ ಎಂಬಂತೆ ಮಾತುಗಳು ನಡೆದಾಗ ಹರಟೆ ಕಟ್ಟೆ ಅನ್ನಬಹುದು. ಈ ನಿರ್ವಚನವೇ ಇಂತಹ ಹೊಸ ವೇದಿಕೆಯ ವಿಶ್ವರೂಪ ದರ್ಶನ ಮಾಡಿಸೀತು.


ಸದ್ಯಕ್ಕಂತೂ, ಅದು ಈ ಕೊರೊನಾ ಕಾಲದಲ್ಲಿ ಲಾಕ್‌ಡೌನ್ ಕಾರಣಕ್ಕೆ ಬಂದಿಗಳಾಗಿರುವ ಜನರಿಗೆ ಇದು ಮಾತಿನ ತಾಣವಾಗಿ ಉಪಯುಕ್ತ ಆಗಿದೆ. ಮುಂಬರುವ ಕಾಲದಲ್ಲಿ ಇದೇ ವೇದಿಕೆ ಮತ್ತಷ್ಟು ಸ್ಪಷ್ಟ ಆಕಾರ ಪಡೆದುಕೊಂಡೀತು. ಆಗ ಈ ವೇದಿಕೆ ಅಪರೂಪದ ಹಾಗೂ ಸಾರ್ಥಕ ಕೆಲಸಗಳಿಗೆ ಬಳಕೆಯಾದೀತು ಎನಿಸುತ್ತದೆ. ಹಾಗೆನ್ನುವಾಗ, ಈಗ ಆ ವೇದಿಕೆ ಅನುಪಯುಕ್ತ ಎಂದು ಅರ್ಥೈಸಬೇಕಿಲ್ಲ. ಈಗಲೂ ಹಲವು ಮಾತುಗಳ ನಡುವೆ ಅಪರೂಪದ ಅನುಭವ ದಾಟಿಸುವ, ಮುತ್ತಿನಂತಹ ವಿವರಗಳು ಸಿಗುತ್ತವೆ. ಅದು ಮುಂಬರುವ ಕಾಲದಲ್ಲಿ ಮತ್ತಷ್ಟು ಹೆಚ್ಚಾಗಲಿ ಎಂಬ ಹಾರೈಕೆ ನನ್ನದು.

- **ಬಿ.ಸುರೇಶ**
ರಂಗಕರ್ಮಿ/ಚಲನಚಿತ್ರ ನಿರ್ಮಾಪಕ, ನಿರ್ದೇಶಕ

ಪದ್ಮನಾಭ ಭಟ್

ಕಳೆದೊಂದು ವಾರದಿಂದ ಸೋಶಿಯಲ್ ಮೀಡಿಯಾಗಳಲ್ಲಿ ಕ್ಲಬ್‌ಹೌಸ್‌ನದ್ದೇ ಹವಾ. ಫೇಸ್‌ಬುಕ್‌ನ ಗದ್ದಲ, ಇನ್‌ಸ್ಟಾಗ್ರಾಮ್‌ನ ಚಿತ್ರಜಾತ್ರೆ, ಟ್ವಿಟರ್‌ನ ಸೆಲೆಬ್ರಿಟಿ ಸಮರಗಳಿಂದ ಹೊರತಾದ ಸೋಶಿಯಲ್ ಮೀಡಿಯಾ ಕ್ಲಬ್ ಹೌಸ್. ಇಲ್ಲಿ ನಿಮ್ಮ ಶಾರೀರವೇ ಶರೀರ. ಮಾತಿಗೇ ಮೀಸಲಾದ ವೇದಿಕೆಯಿದು. ಕಮೆಂಟ್‌ಗಳ ಗೊಡವೆಯಿಲ್ಲದೆ, ಲೈಕುಗಳ ಹಂಗಿಲ್ಲದೆ ಒಂದಿಷ್ಟು ಜನರು ಒಂದು ಜಾಗದಲ್ಲಿ ಕೂತು ಹರಟೆ ಹೊಡೆಯಬಹುದಾದ ವೇದಿಕೆಯನ್ನು ಕ್ಲಬ್‌ಹೌಸ್ ನಿರ್ಮಾಣಮಾಡಿದೆ.

ಕ್ಲಬ್ ಹೌಸ್ ಕನ್ನಡದಲ್ಲಿ ಜನಪ್ರಿಯವಾಗುವ ಹಂತದಲ್ಲಿ ಬೇರೆ ಯಾವ ಸಾಮಾಜಿಕ ಮಾಧ್ಯಮಗಳಿಗೂ ಇಲ್ಲದ ಒಂದು ವಿಶೇಷ ಗುಣ ಇಲ್ಲಿ ಎದ್ದು ಕಾಣುತ್ತಿದೆ. ಅದು ಸಿನಿಮಾ ಮಂದಿಯ ಚರ್ಚೆ. ಸೋಶಿಯಲ್ ಮೀಡಿಯಾಗಳಲ್ಲಿ ಸೆಲೆಬ್ರಿಟಿಗಳು ತಮ್ಮ ಸಿನಿಮಾಗಳ ಬಗ್ಗೆ ಪ್ರಚಾರ ಮಾಡುವುದು, ತಮ್ಮ ದಿನಚರಿಯ ವಿವರಗಳನ್ನು ಹಂಚಿಕೊಳ್ಳುವುದು, ಅಭಿಮಾನಿಗಳೊಂದಿಗೆ ಲೈವ್‌ನಲ್ಲಿ ಮಾತಾಡುವುದು ಎಲ್ಲವೂ ಹೊಸತೇನಲ್ಲ. ಹಾಗೆಯೇ ಪ್ರೇಕ್ಷಕರೂ ತಾವು ನೋಡಿದ ಸಿನಿಮಾಗಳ ಬಗ್ಗೆ ಫೇಸ್‌ಬುಕ್‌ನಲ್ಲಿ ಅನಿಸಿಕೆಗಳನ್ನು ಹಂಚಿಕೊಳ್ಳುತ್ತಲೇ ಇರುವುದನ್ನು ನೋಡುತ್ತೇವೆ.



ಕ್ಲಬ್‌ಹೌಸ್‌ನಲ್ಲಿ ನಡೆಯುತ್ತಿರುವ ಸಿನಿಮಾ ಚರ್ಚೆ ಇವೆಲ್ಲಕ್ಕಿಂತ ಕೊಂಚ ಭಿನ್ನವಾದದ್ದು. ಇಲ್ಲಿ ಸಿನಿಮಾ ಮೇಕರ್‌ಗಳು ತಮ್ಮ ಸಿನಿಮಾ ಕುರಿತಾಗಿಯಷ್ಟೇ ಅಲ್ಲ, ಒಟ್ಟಾರೆ ಸಿನಿಮಾ ತಯಾರಿಕೆಯ ಬಗ್ಗೆ, ಅದರ ತಾಂತ್ರಿಕ, ಸೃಜನಶೀಲ ವಿಭಾಗಗಳ ಬಗ್ಗೆ ಚರ್ಚೆ ನಡೆಸುತ್ತಿದ್ದಾರೆ. ಸಿನಿಮಾ ವಿಮರ್ಶಕರು, ನೋಡುಗರೂ ಅದರಲ್ಲಿ ಭಾಗವಹಿಸುತ್ತಿದ್ದಾರೆ. ಹಾಗಾಗಿ ಇದು ಹೊಸತಾಗಿ ಸಿನಿಮಾ ಮಾಧ್ಯಮವನ್ನು ಕಲಿಯುತ್ತಿರುವವರಿಗೆ ಪಾಠಶಾಲೆಯಾಗಿಯೂ, ಈಗಾಗಲೇ ಸಿನಿಮಾ ಮಾಧ್ಯಮದಲ್ಲಿ ಒಂದಿಷ್ಟು ಕೆಲಸ ಮಾಡಿರುವವರಿಗೆ ಅನುಭವ ಹಂಚಿಕೊಳ್ಳುವ, ತಮ್ಮ ಜ್ಞಾನವನ್ನು ವಿಸ್ತರಿಸಿಕೊಳ್ಳುವ ಕಾರ್ಯಾಗಾರವಾಗಿಯೂ ಕೆಲಸ ನಿರ್ವಹಿಸುತ್ತಿರುವುದು ವಿಶೇಷ.

Clubhouse

> 'ಕ್ಲಬ್‌ಹೌಸ್' ಮಾತುಕತೆಯನ್ನೇ ಆಧರಿಸಿದ ಹೊಸ ಸಾಮಾಜಿಕ ಜಾಲತಾಣ. ಇತ್ತೀಚೆಗೆ ಟ್ರೆಂಡ್ ಅನಿಸುವಷ್ಟು ಜನಪ್ರಿಯವಾಗುತ್ತಿರುವ ಈ ವೇದಿಕೆ ಸಿನಿಮಾ ಕುರಿತ ಆರೋಗ್ಯಕರ ಚರ್ಚೆಗೂ ವೇದಿಕೆ ಕಲ್ಪಿಸುತ್ತಿರುವುದು ಕುತೂಹಲಕಾರಿ ವಿದ್ಯಮಾನ.

ಕನ್ನಡ ಚಿತ್ರರಂಗದಲ್ಲಿ ಕ್ಲಬ್ ಹೌಸ್ ಬಗ್ಗೆ ಮೊದಲು ಮಾತಾಡಲು ಶುರುಮಾಡಿದ್ದು, ಅದರ ಸಾಧ್ಯತೆಗಳನ್ನು ಅಂದಾಜಿಸಿಕೊಂಡು ಸಕ್ರಿಯವಾಗಿದ್ದು ನಿರ್ದೇಶಕ ಪವನ್‌ಕುಮಾರ್. ತಮ್ಮ ಟ್ವಿಟರ್ ಖಾತೆಯಲ್ಲಿ ಅವರು ಕ್ಲಬ್‌ಹೌಸ್‌ನಲ್ಲಿ ಸಿನಿಮಾ ಬಗ್ಗೆ ಆರೋಗ್ಯಕರ ಚರ್ಚೆ ಮಾಡೋಣ ಬನ್ನಿ ಎಂದು ಆಹ್ವಾನಿಸಿದ್ದರು.

ಈಗ ಕ್ಲಬ್‌ಹೌಸ್‌ನಲ್ಲಿ ಕನ್ನಡ ಸಿನಿಮಾ ಚರ್ಚೆಗೇ ಮೀಸಲಾಗಿರುವ ಹಲವು 'ರೂಮ್'ಗಳಿವೆ. ಸಿನಿಮಾ ಬರವಣಿಗೆ, ಧ್ವನಿ ವಿನ್ಯಾಸ, ಹಿನ್ನೆಲೆ ಸಂಗೀತ, ಛಾಯಾಗ್ರಹಣ, ಮಾರುಕಟ್ಟೆ, ಇಂಡಿಪೆಂಡೆಂಟ್ ಸಿನಿಮಾಗಳ ಸವಾಲುಗಳು ಈ ರೀತಿಯ ಸಿನಿಮಾ ತಯಾರಿಕೆಗೆ ಸಂಬಂಧಿಸಿದ ಚರ್ಚೆಗಳು ಒಂದೆಡೆ ನಡೆಯುತ್ತಿವೆ. ಹಾಗೆಯೇ, 'ಇತ್ತೀಚೆಗೆ ನೋಡಿದ ಅತ್ಯುತ್ತಮ ಚಿತ್ರ', 'ಇತ್ತೀಚೆಗೆ ನೋಡಿದ ಅತ್ಯಂತ ಕೆಟ್ಟ ಸಿನಿಮಾ', ಒಟಿಟಿಯಲ್ಲಿ ನೋಡಿದ ಒಳ್ಳೆಯ ಸಿನಿಮಾ, ರಾಜ್‌ಕುಮಾರ್ ಅವರು ನಟಿಸಿದ ನಿಮ್ಮ ನೆಚ್ಚಿನ ಚಿತ್ರ ಹೀಗೆ ಹತ್ತು ಹಲವು ಬಗೆಯ ಚರ್ಚೆಗಳೂ ನಡೆಯುತ್ತಿವೆ. ಹೀಗಾಗಿ ಕ್ಲಬ್ ಹೌಸ್ ಒಂದು ಬಗೆಯಲ್ಲಿ ಸಿನಿಮಾ ಹಬ್ ಆಗಿ ರೂಪುಗೊಂಡಿರುವುದು ನಿಜ.

ಪವನ್ ಕುಮಾರ್, ಶ್ರುತಿ ಹರಿಹರನ್, ಅಭಯ ಸಿಂಹ, ಯೋಗರಾಜ್ ಭಟ್, ಮಾನ್ವಿತಾ ಕಾಮತ್, ಸಂಯುಕ್ತಾ ಹೊರನಾಡು, ಬಿ. ಸುರೇಶ್, ವಸಿಷ್ಠ ಸಿಂಹ ಸೇರಿದಂತೆ ಹಲವು ಹಿರಿ–ಕಿರಿಯ ನಿರ್ದೇಶಕರು, ನಟರು, ತಂತ್ರಜ್ಞರು ಈ ವೇದಿಕೆಯಲ್ಲಿದ್ದಾರೆ.

ಕನ್ನಡದ ಸಿನಿಮಾಗಳ ಬಗ್ಗೆ ಚರ್ಚೆ ನಡೆಯುವುದಷ್ಟೇ ಅಲ್ಲದೆ ಮಲಯಾಳಂ, ತಮಿಳು, ತೆಲುಗು, ಇಂಗ್ಲಿಷ್ ಭಾಷೆಯ ಸಿನಿಮಾಗಳ ಚರ್ಚೆಗಳೂ ಇಲ್ಲಿ ನಡೆಯುತ್ತಿರುವುದರಿಂದ ಜಗತ್ತಿನ ಬೇರೆ ಭಾಷೆಗಳ ಚಿತ್ರರಂಗದ ಕುರಿತೂ ತಿಳಿದುಕೊಳ್ಳಲು ಇದು ವೇದಿಕೆ ಕಲ್ಪಿಸುತ್ತಿದೆ. ಈ ಸಿನಿಮಾ ಜಾತ್ರೆಯಲ್ಲಿ ನೂರಾರು ಅಂಗಡಿಗಳಿವೆ. ನಿಮಗೆ ಇಷ್ಟವಾದ, ನಿಮ್ಮ ಅಭಿರುಚಿಗೆ ಹೊಂದುವ ಅಂಗಡಿಗೆ ಹೋಗಿ ನೀವು ಚರ್ಚೆಯನ್ನು ಕೇಳಬಹುದು, ಭಾಗವಹಿಸಬಹುದು.

ಎಲ್ಲ ಸಾಮಾಜಿಕ ಜಾಲತಾಣಗಳೂ ಆರಂಭದ ಹಂತದಲ್ಲಿ ಆರೋಗ್ಯಕರವಾಗಿಯೂ ಹೊಸ ಸಂವೇದನೆಗಳಿಗೆ, ಬದಲಾವಣೆಗಳಿಗೆ ವೇದಿಕೆಯಾಗಿಯೇ ತೋರುತ್ತಿರುತ್ತವೆ. ಆದರೆ ಕಾಲಕ್ರಮೇಣ ಅವು ತಮ್ಮ ಹೂಮೊಗವಾಡವನ್ನು ಕಳಚಿ ಇರಿಯುವ ಮುಳ್ಳುಗಳನ್ನು ಹೊರಕಾಣಿಸತೊಡಗುವುದನ್ನು ನಾವು ನೋಡಿದ್ದೇವೆ. ಕ್ಲಬ್‌ಹೌಸ್ ಕೂಡ ಇದೇ ರೀತಿ ಬದಲಾದರೆ ಅಚ್ಚರಿಯೇನಿಲ್ಲ. ಆದರೆ ಸದ್ಯದ ಪರಿಸ್ಥಿತಿಯನ್ನು ನೋಡಿದರೆ ಮಾತ್ರ ಕ್ಲಬ್ ಹೌಸ್ ಸಮಾನಮನಸ್ಕರ ವಿಚಾರ ಹಂಚಿಕೆ ವೇದಿಕೆಯಾಗಿ, ಹೊಸ ಪ್ರೇಕ್ಷಕವರ್ಗಕ್ಕೆ ಅಭಿರುಚಿಯನ್ನು ಬೆಳೆಸುವ ವಾಹಕವಾಗಿ ರೂಪುಗೊಳ್ಳುವ ಸಾಧ್ಯತೆಯನ್ನು ಕಾಣಿಸುತ್ತಿದೆ. ಮುಂದೆ ಇದೇ ಸಾಧ್ಯತೆಗಳು ವಿಸ್ತಾರವಾದರೆ ಖಂಡಿತವಾಗಿಯೂ ಚಿತ್ರರಂಗದ ಹೊಸ ಸಂವೇದನೆಯನ್ನು ರೂಪಿಸುವಲ್ಲಿ ಕ್ಲಬ್‌ಹೌಸ್ ಮುಖ್ಯಪಾತ್ರ ವಹಿಸುವುದರಲ್ಲಿ ಸಂದೇಹವಿಲ್ಲ. ಯಾಕೆಂದರೆ ಯಾವುದೇ ಮಾಧ್ಯಮದ ಭವಿಷ್ಯ ನಿಂತಿರುವುದು ಅದರ ಬಳಕೆದಾರರ ವರ್ತಮಾನದ ನಡವಳಿಕೆಯ ಮೇಲೆಯೇ ಅಲ್ಲವೇ?



ಹೊಸ ಪ್ರೇಕ್ಷಕರನ್ನು ಬೆಳೆಸುವ ಅವಕಾಶ

ಕ್ಲಬ್ ಹೌಸ್‌ನಲ್ಲಿ ಕನ್ನಡ ಸಿನಿಮಾ ಬಗ್ಗೆ ತುಂಬ ಚರ್ಚೆ ನಡೆಯುತ್ತಿದೆ. ಒಟಿಟಿ ಪ್ಲಾಟ್‌ಫಾರಂ ಬಗ್ಗೆ, ಬೇರೆ ಭಾಷೆಗಳಿಗೆ ಹೋಲಿಸಿದರೆ ಕನ್ನಡದಲ್ಲಿ ಯಾಕೆ ಇನ್ನೂ ವೆಬ್ ಸಿರೀಸ್‌ಗಳು ಅಷ್ಟೊಂದು ಜನಪ್ರಿಯ ಆಗಿಲ್ಲ ಎನ್ನುವುದರ ಬಗ್ಗೆಯೆಲ್ಲ ಒಳ್ಳೆಯ ಚರ್ಚೆ ನಡೆಯುತ್ತಿದೆ. 'ಚಂದನವನ' ಎನ್ನುವ ಒಂದು ಗುಂಪಿನವರು ಪ್ರತಿದಿನ ಸಿನಿಮಾ ಬಗ್ಗೆ ಚರ್ಚೆ ಏರ್ಪಡಿಸುತ್ತಿದ್ದಾರೆ. ಇದರಿಂದ ಕನ್ನಡ ಪ್ರೇಕ್ಷಕರನ್ನು ಬೆಳೆಸಬಹುದು. ಇದು ತುಂಬ ಮುಖ್ಯ. ಯಾಕೆಂದರೆ ಮಲಯಾಳಂ, ತಮಿಳು ಚಿತ್ರರಂಗಕ್ಕೆ ಸಂಬಂಧಿಸಿದ ಕ್ಲಬ್‌ಗಳು ತುಂಬ ಸಕ್ರಿಯರಾಗಿದ್ದಾರೆ. ನಮ್ಮ ಕನ್ನಡ ಇಂಡಸ್ಟ್ರಿಯಲ್ಲಿ ಅಷ್ಟೊಂದು ಇಲ್ಲ. ಈ ವೇದಿಕೆಯ ಮೂಲಕ ಜನರಿಗೆ ನಾವು ಕನ್ನಡ ಸಿನಿಮಾಗಳ ಕುರಿತು ನಂಬಿಕೆಯನ್ನು ಬೆಳೆಸುತ್ತಿದ್ದೇವೆ. ಹಾಗಾಗಿಯೇ ನಾನು ಕ್ಲಬ್‌ಹೌಸ್‌ನಲ್ಲಿ ಸಿನಿಮಾ ಕುರಿತ ಚರ್ಚೆ, ನಿಧಿ ಸಂಗ್ರಹ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದೇನೆ. ತುಂಬ ಜನ ನಿರ್ಮಾಪಕ, ನಿರ್ದೇಶಕ, ತಂತ್ರಜ್ಞರು, ವಿತರಕರು ಎಲ್ಲರೂ ಕ್ಲಬ್‌ಹೌಸ್‌ನಲ್ಲಿದ್ದಾರೆ. ಇದೇ ರೀತಿ ಪ್ರಯತ್ನ ಮುಂದುವರಿಸಿದರೆ ಖಂಡಿತ ಚಿತ್ರರಂಗಕ್ಕೆ ಒಳಿತಾಗುತ್ತದೆ.

–**ಸಂಯುಕ್ತಾ ಹೊರನಾಡು**, ನಟಿ

ಕಾದು ಬೈಸಿಕೊಳ್ಳೋಣ!

ಕ್ಲಬ್‌ಹೌಸ್ ಮಜಾ ಇದೆ. ಹಳೇ ಕಾಲದ 'ಸಂವಾದ ಕಾರ್ಯಕ್ರಮ' ಇದ್ದ ಹಾಗೆ ಇರ್ತದೆ. ಒಂಥರಾ ಸಮಕಾಲೀನ, ಸಭ್ಯ, 'ಆನ್ಲೈನ್ ಗುಂಪು ಗಲಭೆ'.

ಸಭೆ ಸಮಾರಂಭ ಇರಲ್ಲ, ವೇದಿಕೆ, ಮೈಕ್, ಅಹುಜಾ ಲೌಡ್ ಸ್ಪೀಕರ್, ಕುರ್ಚಿ, ಹಾರ ತುರಾಯಿ, ಗಂಧದ ಹಾರ, ಹಣ್ಣಿನ ಬುಟ್ಟಿ ಇತ್ಯಾದಿ ಇರಲ್ಲ. ಸಭಿಕರೂ ಕಾಣಿಸಲ್ಲ. ಯಾರೋ ಮಾತಾಡುವಾಗ ಕೇಳುಗರು ಇದಾರಾ ಓಡಿ ಹೋದ್ರಾ ಗೊತ್ತಾಗಲ್ಲ. 'ಹೂಂ'ಅನ್ನುವ ವ್ಯಕ್ತಿ ಕಾಣಿಸಲ್ಲ. ಈ ಡಿಜಿಟಲ್ ವಿಪರ್ಯಾಸ, ಲೋಕದ ಜೊತೆ ಡೈರೆಕ್ಟ್ ಆಗಿ ಸಂವಾದಿಸಲು ಅವಕಾಶ ಕಲ್ಪಿಸಿದೆ.

ಇದು ದುರುಪಯೋಗ ಆಗುವ ಸಾಧ್ಯತೆಗಳೇನೂ ಕಮ್ಮಿಯಿಲ್ಲ. ಸಮಯ ಹಾಳು ಮಾಡುವ ಹೊಸ ಮಾರ್ಗವೊಂದು ಇದೀಗ ಓಪನ್ ಆಗಿದೆ. ಒಂದು ವರ್ಷದಲ್ಲಿ ಬಾಯಿ ನೋವು, ಕಿವಿ ನೋವು ಬರಿಸಿಕೊಳ್ಳುವ ಮಂದಿ ತಯಾರಾಗಿದ್ದಾರೆ. ಇದೆಲ್ಲ ಬೆಳವಣಿಗೆಗೆ ಯಾವ ರೀತಿ ಬೈಬೇಕು ಮತ್ತು ಎಷ್ಟು ಪ್ರಮಾಣದಲ್ಲಿ ಉಗಿಬೇಕು ಎಂದು ಹಿರಿಯರಿಗೆ ತಕ್ಷಣ ಗೊತ್ತಾಗುವುದಿಲ್ಲ. ಕಾದು ಬೈಸಿಕೊಳ್ಳೋಣ.

–**ಯೋಗರಾಜ್ ಭಟ್**, ನಿರ್ದೇಶಕ

'ಲವ್ ಮಾಕ್ಟೇಲ್' ಹಿಟ್ ಆದ ಬಳಿಕ 'ಶುಗರ್ ಫ್ಯಾಕ್ಟರಿ' ತೆರೆದ 'ಮಿ.ಬ್ಯಾಚುಲರ್' ಡಾರ್ಲಿಂಗ್ ಕೃಷ್ಣ, 'ಲವ್ ಮಾಕ್ಟೇಲ್–2'ರತ್ತ ಗಮನಹರಿಸಿದ್ದಾರೆ. ಶೀಘ್ರದಲ್ಲೇ ಇದರ ಚಿತ್ರೀಕರಣ ಮುಗಿಸಿ ಈ ವರ್ಷವೇ ತೆರೆಗೆ ತರಲು ತಯಾರಿ ನಡೆಸಿದ್ದಾರೆ.

ಈ ವರ್ಷವೇ ಲವ್‌ಮಾಕ್ಟೇಲ್–2 ತೆರೆಗೆ


ಡಾರ್ಲಿಂಗ್ ಕೃಷ್ಣ

ಅಭಿಲಾಷ್ ಪಿ.ಎಸ್.

- **ಹೇಗಿತ್ತು ಲಾಕ್‌ಡೌನ್ ಅವಧಿ. ಕೋವಿಡ್ ಬಂದ ಸಂದರ್ಭ ಅದನ್ನು ಹೇಗೆ ನಿಭಾಯಿಸಿದ್ರಿ?**

ಮದುವೆಯಾದ ನಂತರದ ಮೊದಲ ಯುಗಾದಿ ಆಗಿದ್ದ ಕಾರಣದಿಂದಾಗಿ ಕಳೆದ ಏ.12ರಂದು ಹಾಸನದಲ್ಲಿರುವ ಮಿಲನಾ ಮನೆಗೆ ಹೋಗಿದ್ದೆವು. ಅಲ್ಲಿಗೆ ಹೋದ ಸಂದರ್ಭದಲ್ಲಿ ನನಗೂ, ಮಿಲನಾಳಿಗೂ ಕೋವಿಡ್ ದೃಢಪಟ್ಟಿತ್ತು. ಜೊತೆಗೆ ಮಿಲನಾ ಅವರ ತಂದೆಗೂ ಕೋವಿಡ್ ದೃಢಪಟ್ಟಿತ್ತು. ಹೀಗಾಗಿ ಅಲ್ಲೇ 15 ದಿನ ಕ್ವಾರಂಟೈನ್ ಆಗಿದ್ದೆವು. ಹೇಗೆ ಜೀವನ ನಡೆಸುತ್ತಿದ್ದೆವೋ ಹಾಗೆಯೇ ಇದ್ದೆವು. ಮೂರ್ನಾಲ್ಕು ದಿನ ಅನಾರೋಗ್ಯವಿತ್ತು, ಸೂಕ್ತ ಔಷಧದಿಂದ ಗುಣಮುಖರಾದೆವು. ಇದಾದ ನಂತರ ಮೈಸೂರಿನಲ್ಲಿರುವ ನನ್ನ ಮನೆಗೆ ಹೋಗಿದ್ದೆವು. ಅಲ್ಲಿ ಒಂದು ತಿಂಗಳು ಇದ್ದೆವು. ಅಲ್ಲಿ ಇದ್ದಾಗ ನಾಯಿಮರಿಯೊಂದನ್ನು ತೆಗೆದುಕೊಂಡೆವು. ಲಾಕ್‌ಡೌನ್ ಅವಧಿಯನ್ನು ತಂದೆ–ತಾಯಿಯ ಜೊತೆಗೇ ನಾವು ಕಳೆದೆವು. ಜೊತೆಗೆ ಲವ್‌ಮಾಕ್ಟೇಲ್ ಎರಡನೇ ಭಾಗದ ಮ್ಯೂಸಿಕ್ ರಿರೆಕಾರ್ಡಿಂಗ್ ನಡೆಯುತ್ತಿದ್ದು, ಆನ್‌ಲೈನ್ ವಿಡಿಯೊ ಕಾಲ್ ಕಾನ್ಫರೆನ್ಸ್ ಮುಖಾಂತರವೇ ಈ ಕೆಲಸದಲ್ಲಿ ತೊಡಗಿದ್ದೆವು.

- **ಮೊದಲ ಲಾಕ್‌ಡೌನ್‌ನಲ್ಲಿ ಕೋವಿಡ್ ಜೊತೆಗೆ ಫೇಮಸ್ ಆಗಿದ್ದು ಲವ್‌ಮಾಕ್ಟೇಲ್? ಹೇಗನಿಸಿತ್ತು ಆಗ?**

ಹೌದೌದು. ಆ ಸಂದರ್ಭದಲ್ಲಿ ಜನರ ಮಾತು ಕೇಳಿ ಖುಷಿಯಾಗಿತ್ತು. ಆ ಲಾಕ್‌ಡೌನ್ ಅವಧಿಯಲ್ಲೇ ಲವ್‌ಮಾಕ್ಟೇಲ್ ಎರಡನೇ ಭಾಗದ ಕರಡು ಸ್ಕ್ರಿಪ್ಟ್ ಸಿದ್ಧಪಡಿಸಿಕೊಂಡಿದ್ದೆವು. ಏಕೆಂದರೆ, ಚಿತ್ರಮಂದಿರಗಳಲ್ಲಿ ಮೊದಲನೇ ಭಾಗ ನೋಡಿದ ಜನ ಸಿನಿಮಾ ಮುಗಿದರೂ ಎದ್ದು ಹೋಗುತ್ತಿರಲಿಲ್ಲ. ಮುಂದೆ ಕಥೆ ಇದೆ ಎಂದು ಕೆಲವರು ಕುಳಿತೇ ಇದ್ದರು. ಈ ಸಂದರ್ಭದಲ್ಲೇ ಎರಡನೇ ಭಾಗ ಮಾಡಬಹುದೇ ಎಂಬ ಪ್ರಶ್ನೆ ನನ್ನಲ್ಲಿ ಎದ್ದಿತ್ತು. ಮೊದಲನೇ ಭಾಗದಲ್ಲಿ ಕಥೆ ಅಂತ್ಯವಾಗುವಂತೆ ಮಾಡಿದ್ದೆ. ಆದರೆ ಜನ ಇನ್ನೂ ಕಾಯುತ್ತಿದ್ದರು. ಈ ಸಂದರ್ಭದಲ್ಲಿ ಎರಡನೇ ಭಾಗ ಮಾಡಿದರೆ ಹೇಗೆ ಎಂದು ಮಿಲನಾಗೆ ಕೇಳಿದೆ. 'ಕಥೆ ಮುಗಿದೇ ಹೋಗಿದೆಯಲ್ವಾ. ಹೇಗಾಗುತ್ತದೆ' ಎಂದು ಆಕೆ ಕೇಳಿದ್ದರು. ಅದೇ ಪಾತ್ರಗಳ ಮುಂದಿನ ಜೀವನ ಹೇಗಿರಬಹುದು ಎಂದು ತೋರಿಸೋಣ ಎಂಬ ಯೋಚನೆ ಬಂದು ಮೊದಲನೇ ಲಾಕ್‌ಡೌನ್‌ನಲ್ಲೇ ನಾನು ಮೈಸೂರಿನಲ್ಲಿ ಇದ್ದುಕೊಂಡು ಮಿಲನಾ ಹಾಸನದಲ್ಲಿ ಇದ್ದುಕೊಂಡು ಕಥೆ ಬಗ್ಗೆ ಚರ್ಚೆ ನಡೆಸಿದ್ದೆವು. ಅನ್‌ಲಾಕ್ ಆದ ಮೇಲೆ ಬೆಂಗಳೂರಿಗೆ ಬಂದ ಬಳಿಕ ಸ್ಕ್ರಿಪ್ಟ್ ಅಂತಿಮಗೊಳಿಸಿದೆವು.

- **ಒಟಿಟಿ ಬಗ್ಗೆ ನಿಮ್ಮ ಅಭಿಪ್ರಾಯ?**

ಲವ್‌ಮಾಕ್ಟೇಲ್ ಮೊದಲ ಭಾಗದ ಸಿನಿಮಾಗೆ ನಮಗೆ ಚಿತ್ರಮಂದಿರಗಳಲ್ಲಿ 43 ದಿನ ಪ್ರದರ್ಶನಕ್ಕೆ ಅವಕಾಶ ದೊರೆಯಿತು. 44ನೇ ದಿನಕ್ಕೆ ಲಾಕ್‌ಡೌನ್ ಪ್ರಾರಂಭವಾಯಿತು. ಸಿನಿಮಾ ಹೌಸ್‌ಫುಲ್ ನಡೆಯುತ್ತಿತ್ತು. ಒಬ್ಬ ಚಿತ್ರ ನಿರ್ದೇಶಕನಾಗಿ ನಾನು ಚಿತ್ರಮಂದಿರಗಳಲ್ಲೇ ಬಯಸುತ್ತೇನೆ. ಏಕೆಂದರೆ ಜನರ ಪ್ರತಿಕ್ರಿಯೆ ಸಿಗುವುದು ಅಲ್ಲಿಯೇ. ಚಿತ್ರಮಂದಿರಗಳಲ್ಲಿ ಜನರ ಗಮನ ಬೇರೆಕಡೆಗೆ ಹೋಗುವುದಿಲ್ಲ. ಸಿನಿಮಾ ಮೂಲಕ ಇನ್ನೊಂದು ಪ್ರಪಂಚಕ್ಕೆ ಕರೆದೊಯ್ಯುತ್ತೇವೆ. ಆದರೆ ಒಟಿಟಿಯಲ್ಲಿ, ಮೊಬೈಲ್‌ನಲ್ಲಿ, ಟಿ.ವಿಯಲ್ಲಿ ಜನ ಸಿನಿಮಾ ನೋಡುತ್ತಾರೆ. ಗಮನವಿಟ್ಟು ಸಿನಿಮ ನೋಡಲು ಆಗುವುದಿಲ್ಲ. ಇದು ಸಮಸ್ಯೆ. ನಮ್ಮ ಕೆಲಸವನ್ನು ಸಂಪೂರ್ಣವಾಗಿ ಪ್ರೇಕ್ಷಕರಿಗೆ ತಲುಪಿಸುವುದು ಒಟಿಟಿಯಲ್ಲಿ ಸಾಧ್ಯವಿಲ್ಲ. ಈ ಅನುಭವವನ್ನು ಚಿತ್ರಮಂದಿರಗಳಲ್ಲಷ್ಟೇ ನೀಡಲು ಸಾಧ್ಯ.

- **ಲವ್‌ಮಾಕ್ಟೇಲ್–2 ಪಯಣ ಎಲ್ಲಿಯವರೆಗೆ ಬಂದಿದೆ? ಯಾವಾಗ ತೆರೆಗೆ?**

ಚಿತ್ರದ ಚಿತ್ರೀಕರಣ ಶೇ 60–65ರಷ್ಟು ಪೂರ್ಣಗೊಂಡಿದ್ದು, ಇನ್ನೂ 12 ದಿನ ಚಿತ್ರೀಕರಣ ಬಾಕಿ ಇದೆ. ಅನ್‌ಲಾಕ್ ಆದ ಬಳಿಕ ಚಿತ್ರಮಂದಿರಗಳನ್ನು ಯಾವಾಗ ತೆರೆಯುತ್ತಾರೆ ಎನ್ನುವುದು ಇನ್ನೂ ಸ್ಪಷ್ಟವಾಗಿಲ್ಲ. ಈ ವರ್ಷದೊಳಗೆ ಖಂಡಿತವಾಗಿಯೂ ಎರಡನೇ ಭಾಗ ಬಿಡುಗಡೆಯಾಗಲಿದೆ. ಈ ಚಿತ್ರ ಮುಗಿಸಿಕೊಂಡರೆ ಇನ್ನೊಂದು ಕಥೆ ಬರೆಯಬಹುದು ಎನ್ನುವುದು ನನ್ನ ಆಲೋಚನೆ. ನಮ್ಮ ಶ್ರಮವನ್ನು ಆದಷ್ಟು ಬೇಗ ಜನರೆದುರಿಗೆ ಇಟ್ಟರೆ ಸಾರ್ಥಕ. ನಮ್ಮ ಮನಸ್ಸೂ ಮತ್ತಷ್ಟು ತೆರೆದುಕೊಳ್ಳುತ್ತದೆ, ಮತ್ತೊಂದು ಪಯಣಕ್ಕೆ ಇದು ನಾಂದಿಯಾಗಲಿದೆ.

- **ರೋಮ್ಯಾಂಟಿಕ್ ಹೀರೊ ಪಾತ್ರಗಳೇ ಅರಸಿಕೊಂಡು ಬರುವಂತಿವೆ ಅಲ್ಲವೇ?**


ಲವ್‌ಮಾಕ್ಟೇಲ್ ಆದ ಮೇಲೆ ರೊಮ್ಯಾಂಟಿಕ್ ಸಿನಿಮಾ ಕಥೆಗಳೇ ಬರುತ್ತಿವೆ. ಒಂದು ಸಿನಿಮಾದಲ್ಲಿನ ಪಾತ್ರ ಹಿಟ್ ಆದರೆ ಹಾಗೆಯೇ ಅಲ್ಲವೇ. ಒಂದು ಒಳ್ಳೆಯ ಸಿನಿಮಾ ಆಗಬೇಕು, ನನ್ನ ಪಾತ್ರ ಎರಡನೇ ವಿಷಯ ಎನ್ನುವುದು ನನ್ನ ಅಭಿಪ್ರಾಯ. ಕಥೆ ಒಳ್ಳೆಯದಿದ್ದರೆ, ಪಾತ್ರ ಹೇಗೆಯೇ ಇರಲಿ ಜನರಿಗೆ ಸಿನಿಮಾ ಇಷ್ಟವಾಗುತ್ತದೆ. ನಾವು ಯಾವುದೋ ವಿಭಿನ್ನ ಪಾತ್ರಮಾಡಿ ಸಿನಿಮಾದಲ್ಲಿ ಕಥೆಯೇ ಇಲ್ಲದಿದ್ದರೆ ಅದು ವ್ಯರ್ಥ. ಸಿನಿಮಾ ಗೆದ್ದರೆ ಪಾತ್ರ ಗೆಲ್ಲುತ್ತದೆ.

- **ಒಪ್ಪಿಕೊಂಡಿರುವ ಸಿನಿಮಾಗಳ ಪಯಣ ಎಲ್ಲಿಯವರೆಗೆ ಬಂದಿದೆ?**

ಶುಗರ್ ಫ್ಯಾಕ್ಟರಿ ಚಿತ್ರೀಕರಣ ಶೇ 50–60 ಪೂರ್ಣಗೊಂಡಿದ್ದು, ಬೆಂಗಳೂರಿನಲ್ಲಿ 15 ದಿನ ಹಾಗೂ ಗೋವಾದಲ್ಲಿ 25 ದಿನ ಚಿತ್ರೀಕರಣ ನಡೆದಿದೆ. 'srikrishna@gmail.com' ಚಿತ್ರದಲ್ಲಿ ನಾನು ಪಂಚತಾರ ಹೋಟೆಲ್ ವೈಟರ್ ಪಾತ್ರ ಮಾಡುತ್ತಿದ್ದೇನೆ. ಮಿ.ಬ್ಯಾಚುಲರ್ ಸಿನಿಮಾ ಶೇ 80ರಷ್ಟು ಚಿತ್ರೀಕರಣ ಮುಗಿದಿದೆ. ಮತ್ತೆ ಚಿತ್ರೀಕರಣಕ್ಕೆ ಇಳಿಯಲು ಅನ್‌ಲಾಕ್ ಆಗಲು ಕಾಯುತ್ತಿದ್ದೇನೆ.

ಲೈಟ್ಸ್, ಕ್ಯಾಮೆರಾ, ಆ್ಯಕ್ಷನ್... ನಿರೀಕ್ಷೆ

ಕಿರುತೆರೆ



ಶರತ್ ಹೆಗ್ಡೆ

ಲಾಕ್‌ಡೌನ್ ತೆರವು ಹಂತಹಂತವಾಗಿ ಆರಂಭವಾಗಿದೆ. ಚಿತ್ರೀಕರಣಕ್ಕೆ ಸರ್ಕಾರ ಅಧಿಕೃತ ಅನುಮತಿ ನೀಡಬಹುದೇ ಎಂಬ ನಿರೀಕ್ಷೆಯಲ್ಲಿ ಆ ಕ್ಷೇತ್ರದ ಜನರು ಕಾಯುತ್ತಿದ್ದಾರೆ.

ಮನೋರಂಜನಾ ವಾಹಿನಿಗಳ ಕಾರ್ಯಕ್ರಮಕ್ಕೆ ಸಂಘಟಿತವಾಗಿ ಕೆಲಸ ಮಾಡುವ ತಂಡದವರು ತಮ್ಮ ಹಿಂದಿನ ಯೋಜನೆಗಳನ್ನೇ ಮುಂದುವರಿಸಲು (ರಿಯಾಲಿಟಿ ಷೋ, ಧಾರಾವಾಹಿ, ಸ್ಟುಡಿಯೊದೊಳಗಿನ ತಾಂತ್ರಿಕ ಕೆಲಸಗಳು ಇತ್ಯಾದಿ) ಸಜ್ಜಾಗುತ್ತಿದ್ದಾರೆ. ಆದರೆ, ನಿರ್ದಿಷ್ಟ ಯೋಜನೆಗಳಗಷ್ಟೇ ಸ್ವಂತ ತೆಗೆದುಕೊಂಡು ಕೆಲಸ ಮಾಡುತ್ತಿದ್ದವರು (ಕಿರುಚಿತ್ರ, ಸಾಕ್ಷ್ಯಚಿತ್ರ, ಜಾಹೀರಾತು ಶೂಟಿಂಗ್, ನಿರ್ಮಾಣ ಮಾಡುವ ಕ್ಯಾಮೆರಾಮನ್, ಸಂಕಲನಕಾರರು, ತಂತ್ರಜ್ಞರು, ಮೇಕಪ್ ಕಲಾವಿದರು) ಇನ್ನು ಹೊಸದಾಗಿ ಕೆಲಸ ಹುಡುಕಿಕೊಳ್ಳಬೇಕಿದೆ.

ಏಕೆಂದರೆ ಅದೆಷ್ಟೋ ಯೋಜನೆಗಳು ಕೊನೆಯ ಹಂತದಲ್ಲಿವೆ. ಒಂದು ವೇಳೆ ಸರ್ಕಾರದಿಂದ ಅನುಮತಿ ಸಿಕ್ಕರೂ ನಮ್ಮ ಸಣ್ಣಪುಟ್ಟ ನಿರ್ಮಾಣಗಳ ಕೆಲಸ ವಾರದೊಳಗೆ ಮುಗಿದುಹೋಗುತ್ತದೆ. ಹೊಸ ಯೋಜನೆಗಳಿಗೆ ಹೂಡಿಕೆ ಮಾಡುವವರೂ ತಕ್ಷಣಕ್ಕೆ ಮುಂದೆ ಬರುತ್ತಿಲ್ಲ. ನಮ್ಮ ಓರಗೆಯವರ ಹಳೆಯ ಯೋಜನೆಗಳ ದುಡ್ಡೂ ಬಂದಿಲ್ಲ. ಎಂಬುದು ಇವರ (ಸ್ವಂತ ಉದ್ಯೋಗಿಗಳ) ಅಸಹಾಯಕತೆ.

ಲಾಕ್‌ಡೌನ್ ನಂತರದ ಚೌಕಾಸಿ: ಹೊಸ ಸಹಜತೆಯ ಸನ್ನಿವೇಶದಲ್ಲಿ ಮೊದಲಿನಷ್ಟು ಆದಾಯ ಬರುವ ಸಾಧ್ಯತೆ ಕಡಿಮೆ. ಏಕೆಂದರೆ ನಿರ್ಮಾಪಕರು ನಮ್ಮ ವಿಚಾರದಲ್ಲಿ ತೀರಾ ಚೌಕಾಸಿಗೆ ಇಳಿದುಬಿಡುತ್ತಾರೆ. ಹಾಗೆಂದು ತಂತ್ರಜ್ಞರ ವೇತನ, ಉಪಕರಣಗಳು, ಒಟ್ಟಾರೆ ನಿರ್ಮಾಣಕ್ಕೆ ವ್ಯಯಿಸುವ ವೆಚ್ಚ ಏರುತ್ತಲೇ ಇದೆ. ಈ ದ್ವಂದ್ವದಲ್ಲಿ ಸಾಗಬೇಕಾದ ಅನಿವಾರ್ಯತೆ ಎನ್ನುತ್ತಾರೆ ತಂತ್ರಜ್ಞ ಸುಧಾಕರ್.


ಎಸ್.ವಿ. ಶಿವಕುಮಾರ್

ಜೂನ್ 21ರ ಬಳಿಕ ಲಾಕ್‌ಡೌನ್ ಸಂಬಂಧಿಸಿದ ನಿಯಮಗಳಲ್ಲಿ ಇನ್ನಷ್ಟು ಸಡಿಲಿಕೆ ತರಬಹುದು. ಆ ವೇಳೆಗೆ ನಾವೂ ಕೂಡಾ ಸಜ್ಜಾಗಿರಬೇಕಾಗುತ್ತದೆ ಎಂದು ಕರ್ನಾಟಕ ಟೆಲಿವಿಷನ್ ಅಸೋಸಿಯೇಷನ್ ಅಧ್ಯಕ್ಷ ಎಸ್.ವಿ. ಶಿವಕುಮಾರ್ ತಿಳಿಸಿದರು.

ನಿಲ್ಲದ ಸರಣಿಗಳು

'ಧಾರಾವಾಹಿ ಅಥವಾ ರಿಯಾಲಿಟಿ ಷೋಗಳನ್ನು ಚಿತ್ರೀಕರಿಸಬಾರದು ಎಂಬ ಆದೇಶವೇನೋ ಇತ್ತು. ಆದರೆ, ಯಾವ ಸಂಚಿಕೆಗಳೂ ನಿಂತಿಲ್ಲ. ಕಾರಣ ಅದೆಷ್ಟೋ ಸಂಚಿಕೆಗಳನ್ನು ಹೈದರಾಬಾದ್‌ನ ರಾಮೋಜಿ ರಾವ್ ಸ್ಟುಡಿಯೊದಲ್ಲಿ ಚಿತ್ರೀಕರಿಸಲಾಗುತ್ತಿತ್ತು. ನಮ್ಮ ರಾಜ್ಯದಲ್ಲೂ ಒಳಾಂಗಣ ಚಿತ್ರೀಕರಣಕ್ಕೆ ಅಂಥ ಆಕ್ಷೇಪವೇನೂ ಬರಲಿಲ್ಲ. ಹೀಗಾಗಿ ಕಲಾವಿದರು, ತಂತ್ರಜ್ಞರು ಸುರಕ್ಷಾ ಕ್ರಮಗಳನ್ನು ಕೈಗೊಂಡು ನಿರ್ವಹಿಸಿದ್ದಾರೆ' ಎಂದರು ಶಿವಕುಮಾರ್.

ಲಸಿಕೆ ಹಾಕಿಸಿಕೊಂಡು ರೆಡಿ

ಅಸೋಸಿಯೇಷನ್ ವತಿಯಿಂದ ಮೂರು ಹಂತಗಳಲ್ಲಿ ಲಸಿಕೆ ಅಭಿಯಾನ ನಡೆಸಿದ್ದೇವೆ. ಸಂಘದಲ್ಲಿ 4 ಸಾವಿರ ಸದಸ್ಯರು ಇದ್ದೇವೆ. ಇದುವರೆಗೆ 1,800 ಮಂದಿಗೆ ಲಸಿಕೆ ಹಾಕಿಸಿದ್ದೇವೆ. ಸದಸ್ಯರ ಕುಟುಂಬಗಳಿಗೂ ಲಸಿಕೆ ಹಾಕಿಸಿದ್ದೇವೆ. ಹಾಗಾಗಿ ಆತಂಕದ ಪ್ರಮಾಣ ಕಡಿಮೆಯಾಗಿದೆ ಎಂದು ಅವರು ವಿಶ್ವಾಸ ವ್ಯಕ್ತಪಡಿಸಿದರು.

ಹೀಗೆ ಟಿವಿ ಕಲಾವಿದರು ತಮ್ಮ ಧಿರಿಸು, ಮೇಕಪ್ ಕಿಟ್‌ಗಳನ್ನು ಸಜ್ಜುಗೊಳಿಸಿದ್ದಾರೆ. ಲೈಟ್ಸ್/ ಕ್ಯಾಮೆರಾ ಆ್ಯಕ್ಷನ್ ಹೇಳಲು ತಂತ್ರಜ್ಞರು, ನಿರ್ದೇಶಕರು ಕಾದು ನಿಂತಿದ್ದಾರೆ.

ಬಾಲಿವುಡ್‌ನತ್ತ ಹೆಜ್ಜೆ ಇಟ್ಟ ಧರ್ಮಕೀರ್ತಿರಾಜ್

ಸಿನಿ ಸಂಕ್ಷಿಪ್ತ

ಕನ್ನಡದ 'ನವಗ್ರಹ' ಚಿತ್ರದ ಮೂಲಕ ಚಿತ್ರರಂಗಕ್ಕೆ ಪಾದಾರ್ಪಣೆ ಮಾಡಿದ್ದ ನಟ ಧರ್ಮಕೀರ್ತಿರಾಜ್, ಇದೀಗ ಬಾಲಿವುಡ್‌ನತ್ತ ಮೊದಲ ಹೆಜ್ಜೆ ಇಟ್ಟಿದ್ದಾರೆ.

ನವಗ್ರಹ ಚಿತ್ರದಲ್ಲಿನ 'ಕಣ್ ಕಣ್ಣ ಸಲಿಗೆ' ಹಾಡು ಧರ್ಮಕೀರ್ತಿರಾಜ್ ಅವರಿಗೆ ಹೆಸರು ತಂದುಕೊಟ್ಟಿತ್ತು. ನಂತರ ನಾಯಕನಾಗಿ ಹಲವು ಚಿತ್ರಗಳಲ್ಲಿ ನಟಿಸಿದ್ದ ಅವರು, ಇದೀಗ 'ಕಿತ್ನಾ ಮಜಾ ಹೈ' ಎನ್ನುವ ನಾಲ್ಕು ನಿಮಿಷದ ಹಿಂದಿ ವಿಡಿಯೊ ಆಲ್ಬಂನಲ್ಲಿ ಕಾಣಿಸಿಕೊಂಡಿದ್ದಾರೆ. ಪ್ರೀತಿಯಲ್ಲಿ ಮೋಸಹೋಗಿ ಆತ್ಮಹತ್ಯೆಗೆ ಶರಣಾಗುವ ಹುಡುಗಿಯನ್ನು ಕಾಪಾಡಿ, ಅವಳಲ್ಲಿ ಅನುರಕ್ತಳಾಗಿ ಒಂದಾಗುವ ಕತೆಯನ್ನು ಈ ಹಾಡು ಹೊಂದಿದೆ. ಈ ಹಾಡನ್ನು ರವಿಶರ್ಮ ನಿರ್ದೇಶನ ಮಾಡಿದ್ದು, ಪಪ್ಪುಮಲ ಅವರು ಕ್ರಿಯೇಟಿವ್ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದಾರೆ. ಯುನೈಟೆಡ್ ಫಿಲ್ಮ್ ಎಂಟರ್‌ಟೈನ್‌ಮೆಂಟ್ ಸಂಸ್ಥೆಯೊಂದಿಗೆ ಸೇರಿಕೊಂಡು ಅಶೋಕ್‌ಜೈನ್ ಈ ಆಲ್ಬಂ ನಿರ್ಮಾಣ ಮಾಡಿದ್ದಾರೆ. ನಗ್ಮಅಕ್ತರ್ ನಾಯಕಿಯಾಗಿ ಅಭಿನಯಿಸಿದ್ದಾರೆ. ಅಲ್ತಾಫ್‌ಸಯ್ಯೇದ್ ಈ ಆಲ್ಬಂನ ಗಾಯಕರಾಗಿದ್ದು, ಶ್ರೀಕಾಂತ್ ಅಸತಿ ಛಾಯಾಗ್ರಹಣವಿದೆ. ಈ ಆಲ್ಬಂ ಯೂಟ್ಯೂಬ್‌ನಲ್ಲಿ ವೀಕ್ಷಣೆಗೆ ಲಭ್ಯವಿದೆ.


ಧರ್ಮಕೀರ್ತಿರಾಜ್ ಹಾಗೂ ನಗ್ಮಾ ಅಕ್ತರ್

ಒಟಿಟಿ

ಮೋಸಗಾಳ್ಳು (ತೆಲುಗು, ಇಂಗ್ಲಿಷ್)
ತಾರಾಗಣ: ವಿಷ್ಣು ಮಂಚು, ಕಾಜಲ್ ಅಗರ್‌ವಾಲ್
ನಿರ್ದೇಶನ: ಜೆಫ್ರಿ ಗೀ ಚಿನ್
ಪ್ರಸಾರ: ಅಮೆಜಾನ್

ಭಾರತೀಯ ಮಾಹಿತಿ ತಂತ್ರಜ್ಞಾನ ಉದ್ಯಮವನ್ನು ಬೆಚ್ಚಿ ಬೀಳಿಸಿದ ಸುಮಾರು ₹ 2,800 ಕೋಟಿ ಮೊತ್ತ ಲೂಟಿ ಹೊಡೆದ ಬೃಹತ್ ಹಗರಣದ ಹಿನ್ನೆಲೆಯಲ್ಲಿ ಈ ಕಥೆ ಸಾಗುತ್ತದೆ. ಈ ಹಗರಣದಲ್ಲಿ ನಡೆಯುವ ಸರಣಿ ಘಟನೆಗಳನ್ನು ತೋರಿಸಲಾಗಿದೆ. ಭಿನ್ನ ತಲೆಮಾರು ಹಾಗೂ ಪಾಶ್ಚಾತ್ಯ, ಪೌರಾತ್ಯ ಸಾಂಸ್ಕೃತಿಕ ಸಂಘರ್ಷ, ಶ್ರೀಮಂತ–ಬಡವರ ನಡುವಿನ ಅಂತರ, ಕಾಲ್ ಸೆಂಟರ್‌ಗಳ ಹಗರಣವನ್ನು ಬಿಚ್ಚಿಡಲಾಗಿದೆ


ಪಿಕ್ಚರ್ ಆಫ್ ಎ ಸೈಂಟಿಸ್ಟ್ (ಇಂಗ್ಲಿಷ್)
ತಾರಾಗಣ: ನ್ಯಾನ್ಸಿ ಹಾಪ್ಕಿನ್ಸ್, ರಾಷೆಲ್ ಬರ್ಕ್
ನಿರ್ದೇಶನ: ಶಾರೊನ್ ಶಟಕ್, ಇಯಾನ್ ಚೆನೀ ಪ್ರಸಾರ: ನೆಟ್‌ಫ್ಲಿಕ್ಸ್

ವಿಜ್ಞಾನ ಕ್ಷೇತ್ರದಲ್ಲಿ ಲಿಂಗ ಅಸಮಾನತೆಯನ್ನು ವಿವರಿಸುವ ಸಾಕ್ಷ್ಯಚಿತ್ರ ಇದು. ಮಹಿಳಾ ಸಂಶೋಧಕರು ಎದುರಿಸುವ ತಾರತಮ್ಯ, ನೋವನ್ನು ತೆರೆದಿಟ್ಟಿದೆ. ಕಿರುಕುಳದ ಪ್ರಕರಣಗಳು, ವೃತ್ತಿ ಬದುಕಿಗೆ ಎದುರಾಗುವ ಅಡೆತಡೆಗಳನ್ನು ಈ ಚಿತ್ರ ನಿರೂಪಿಸಿದೆ.

ಶುರುವಾಗಿದೆ 'ಶಂಭೋ ಶಿವ ಶಂಕರ'ನ ಮಾತು



ಅಫನ್ಯ ಪಿಕ್ಚರ್ಸ್ ಲಾಂಛನದಲ್ಲಿ ವರ್ತೂರ್ ಮಂಜು ಅವರು ನಿರ್ಮಿಸುತ್ತಿರುವ 'ಶಂಭೋ ಶಿವ ಶಂಕರ' ಚಿತ್ರಕ್ಕೆ ಬಾಲಾಜಿ ಡಿಜಿಟಲ್ ಸ್ಟುಡಿಯೋದಲ್ಲಿ ಮಾತಿನ ಜೋಡಣೆ ನಡೆಯುತ್ತಿದೆ. ಚಿತ್ರದ ಬಹುತೇಕ ಚಿತ್ರೀಕರಣ ಮುಕ್ತಾಯವಾಗಿದೆ. ಒಂದು ಹಾಡು ಹಾಗೂ ಸಾಹಸ ಸನ್ನಿವೇಶ ಚಿತ್ರೀಕರಣ ಬಾಕಿಯಿದೆ. ಶಂಕರ್ ಕೋನಮಾನಹಳ್ಳಿ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ಕಥೆ, ಚಿತ್ರಕಥೆ, ಸಂಭಾಷಣೆಯನ್ನು ನಿರ್ದೇಶಕರದ್ದು. ಗೌಸ್‌ಪೀರ್ ಹಾಡುಗಳನ್ನು ಬರೆದಿದ್ದು, ಹಿತನ್ ಹಾಸನ್ ಸಂಗೀತ ನೀಡುತ್ತಿದ್ದಾರೆ. ಅಭಯ್ ಪುನೀತ್ ನಟರಾಜ್ ಮುದ್ದಾಲ ಛಾಯಾಗ್ರಹಣ, ಕಲ್ಯೆ ನೃತ್ಯ ನಿರ್ದೇಶನ, ಡಿಫರೆಂಟ್ ಡ್ಯಾನಿ ಸಾಹಸ ನಿರ್ದೇಶನವಿದೆ.



❦ ಸುಭಾಷಿತ ❦

ಯಶಸ್ಸಿನ ಗುಟ್ಟೇನು? ಸೂಕ್ತ ನಿರ್ಧಾರಗಳು. ಸೂಕ್ತ ನಿರ್ಧಾರಗಳನ್ನು ಕೈಗೊಳ್ಳುವುದು ಹೇಗೆ? ಅನುಭವದಿಂದ. ಅನುಭವ ಗಳಿಸುವುದು ಹೇಗೆ? ತಪ್ಪು ನಿರ್ಧಾರಗಳಿಂದ.

-ಎ.ಪಿ.ಜೆ. ಅಬ್ದುಲ್ ಕಲಾಂ

ಆರೋಗ್ಯ ವಿ.ವಿ. ಹಂಗಾಮಿ ಕುಲಪತಿ ನೇಮಕಾತಿ: ಸಂಪ್ರದಾಯಕ್ಕೆ ತಿಲಾಂಜಲಿ

ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಹಂಗಾಮಿ ಕುಲಪತಿ ಸ್ಥಾನಕ್ಕೆ ಖಾಸಗಿ ದಂತವೈದ್ಯಕೀಯ ಕಾಲೇಜೊಂದರ ಪ್ರಾಂಶುಪಾಲ ಹುದ್ದೆಯಲ್ಲಿ ಇದ್ದ ಎಸ್.ಎಂ. ಜಯಕರ ಅವರನ್ನು ನೇಮಿಸುವ ಮೂಲಕ ರಾಜ್ಯಪಾಲ ವಜುಭಾಯಿ ವಾಲಾ ಅವರು ವಿವಾದಕ್ಕೆ ಸಿಲುಕಿದ್ದಾರೆ. ಈ ನೇಮಕ ಮಾಡುವ ಸಂದರ್ಭದಲ್ಲಿ ರಾಜ್ಯಪಾಲರು, ವೈದ್ಯಕೀಯ ಶಿಕ್ಷಣ ಸಚಿವ ಹಾಗೂ ವಿಶ್ವವಿದ್ಯಾಲಯದ ಸಹಕುಲಾಧಿಪತಿ ಸುಧಾಕರ್ ಅವರ ಜೊತೆ ಸಮಾಲೋಚನೆಯನ್ನೂ ಮಾಡಿಲ್ಲ. ಕುಲಪತಿ ಹುದ್ದೆ ಖಾಲಿ ಆದಾಗ ವಿಶ್ವವಿದ್ಯಾಲಯದ ಅತ್ಯಂತ ಹಿರಿಯ ಡೀನ್ ಅಥವಾ ಇಬ್ಬರು ಕುಲಸಚಿವರ ಪೈಕಿ ಒಬ್ಬರನ್ನು ಮಧ್ಯಂತರ ಅವಧಿಗೆ ಕುಲಪತಿ ಸ್ಥಾನಕ್ಕೆ ನೇಮಿಸುವುದು ಅನುಸರಿಸಿಕೊಂಡು ಬಂದಿರುವ ಪದ್ಧತಿ. ಆದರೆ, ಖಾಸಗಿ ಕಾಲೇಜೊಂದರ ಪ್ರಾಂಶುಪಾಲ ಹುದ್ದೆಯಲ್ಲಿ ಇದ್ದವರಿಗೆ ಉನ್ನತ ಅಧಿಕಾರವನ್ನು ಹಸ್ತಾಂತರಿಸುವುದು ಈ ವಿಶ್ವವಿದ್ಯಾಲಯದ ಇತಿಹಾಸದಲ್ಲಿ ಹಿಂದೆಂದೂ ನಡೆದಿಲ್ಲ. ಹಿತಾಸಕ್ತಿಗಳ ಸಂಘರ್ಷವನ್ನು ಗಣನೆಗೆ ತೆಗೆದುಕೊಂಡರೆ, ಈ ನೇಮಕಾತಿಯು ಕೆಟ್ಟ ನಿದರ್ಶನವಾಗುತ್ತದೆ. ರಾಜ್ಯಪಾಲರು ವಿಶ್ವವಿದ್ಯಾಲಯದ ಕುಲಾಧಿಪತಿ ಕೂಡ ಆಗಿರುವ ಕಾರಣ, ಹುದ್ದೆಯೊಂದು ತಾತ್ಕಾಲಿಕವಾಗಿ ತೆರವಾದಾಗ ಅಲ್ಲಿಗೆ ತಮಗೆ ಸೂಕ್ತವೆನಿಸಿದ ವ್ಯಕ್ತಿಯನ್ನು ನೇಮಿಸುವ ಅಧಿಕಾರ ಹೊಂದಿದ್ದಾರೆ ಎಂದು ಸಂಬಂಧಿಸಿದ ಕಾಯ್ದೆಗಳು ಹೇಳುತ್ತವೆ. ಆದರೆ, ಅವರು ತಮಗೆ ವಿವೇಚನಾಧಿಕಾರ ಇರುವ ಕೆಲವು ನಿರ್ದಿಷ್ಟ ವಿಷಯಗಳನ್ನು ಹೊರತುಪಡಿಸಿದರೆ, ಉಳಿದಂತೆ ಸಚಿವ ಸಂಪುಟದ ಸಲಹೆಯನ್ನು ಪಡೆದು ಮುಂದಡಿ ಇರಿಸಬೇಕಾಗುತ್ತದೆ ಎಂದು ಸಂವಿಧಾನ ಹೇಳುತ್ತದೆ. ಈ ಪ್ರಕರಣದಲ್ಲಿ ರಾಜ್ಯಪಾಲರು ಇದುವರೆಗಿನ ಸಂಪ್ರದಾಯವನ್ನು ಮುರಿದಿದ್ದಾರೆ ಎನ್ನಬೇಕಾಗುತ್ತದೆ. ಯಾವುದೇ ವಿಶ್ವವಿದ್ಯಾಲಯದ ಕುಲಪತಿ ಹುದ್ದೆಯಲ್ಲಿ ಇರುವವರು ತೆಗೆದುಕೊಳ್ಳುವ ನಿರ್ಧಾರಗಳು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಒಳಗಾಗುತ್ತವೆ. ಅವರು ತೆಗೆದುಕೊಳ್ಳುವ ನಿರ್ಧಾರಗಳು ವಿದ್ಯಾರ್ಥಿ ಸಮೂಹದ ಮೇಲೆ ನೇರವಾಗಿ ಪರಿಣಾಮ ಬೀರುತ್ತವೆ. ಕುಲಪತಿ ಹುದ್ದೆಗೆ ನೇಮಕ ಆಗುವವರು ಶಾಶ್ವತವಾಗಿ ಅಲ್ಲಿಯೇ ಇರುವುದಿಲ್ಲ. ಆದರೆ, ಅವರು ಕೈಗೊಳ್ಳುವ ತೀರ್ಮಾನಗಳು ವಿದ್ಯಾರ್ಥಿ ಸಮೂಹದ ಮೇಲೆ ಶಾಶ್ವತ ಪರಿಣಾಮ ಉಂಟುಮಾಡಬಹುದು. ಹಾಗಾಗಿ, ಇಂತಹ ಹುದ್ದೆಗಳಿಗೆ ನಡೆಯುವ ನೇಮಕಾತಿಯ ಇಡೀ ಪ್ರಕ್ರಿಯೆ ಸಂಪೂರ್ಣವಾಗಿ ಪಾರದರ್ಶಕವಾಗಿ ಇರಬೇಕಾದುದು ಅಪೇಕ್ಷಣೀಯ.



ಕುಲಪತಿಯಂತಹ ಹುದ್ದೆಗಳಿಗೆ ನಡೆಯುವ ನೇಮಕಾತಿಯ ಇಡೀ ಪ್ರಕ್ರಿಯೆಯು ಸಂಪೂರ್ಣವಾಗಿ ಪಾರದರ್ಶಕವಾಗಿ ಇರಬೇಕಾದುದು ಅಪೇಕ್ಷಣೀಯ

ರಾಜ್ಯಪಾಲರ ನಿರ್ಧಾರಕ್ಕೆ ಸುಧಾಕರ್ ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಹಂಗಾಮಿ ಕುಲಪತಿಯ ನೇಮಕದ ವಿಚಾರದಲ್ಲಿ ಸಂಪ್ರದಾಯವನ್ನು ಪಾಲಿಸಬೇಕು ಎಂದು ತಾವು ಹಿಂದೆ ಬರೆದಿದ್ದ ಪತ್ರವನ್ನು ರಾಜ್ಯಪಾಲರು ನಿರ್ಲಕ್ಷ್ಯ ಮಾಡಿದ್ದಾರೆ, ನೇಮಕ ಕುರಿತು ಚರ್ಚಿಸಲು ಸಮಯಾವಕಾಶ ಕೋರಿದ್ದಾಗ ಸಾಂಕ್ರಾಮಿಕದ ಕಾರಣವನ್ನು ಮುಂದೊಡ್ಡಿ ಅವಕಾಶ ನಿರಾಕರಿಸಿದ್ದರು ಎಂದು ಕೂಡ ಸುಧಾಕರ್ ಹೇಳಿದ್ದಾರೆ. ಸಚಿವರಿಂದ ಅಥವಾ ಸಂಬಂಧಪಟ್ಟ ಇಲಾಖೆಯ ಕಡೆಯಿಂದ ಯಾರ ಹೆಸರನ್ನೂ ಶಿಫಾರಸು ಮಾಡಿರಲಿಲ್ಲ. ಹೀಗಿದ್ದಾಗ ರಾಜ್ಯಪಾಲರು ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಹಲವು ಪ್ರೊಫೆಸರ್‌ಗಳ ಸೇವಾ ಹಿರಿತನ ಕಡೆಗಣಿಸಿ, ಜಯಕರ ಅವರನ್ನು ಆಯ್ಕೆ ಮಾಡಿದ್ದಕ್ಕೆ ಕಾರಣ ಏನು ಎಂಬುದು ಸ್ಪಷ್ಟವಾಗಿಲ್ಲ. ಕುಲಪತಿ ಹುದ್ದೆಯನ್ನು 'ಉನ್ನತ ಅಕಾಡೆಮಿಕ್ ಅರ್ಹತೆ ಮತ್ತು ಪ್ರಾಮಾಣಿಕತೆ ಇರುವವರು' ಅಲಂಕರಿಸಬೇಕು ಎಂದು ಬಹಿರಂಗವಾಗಿ ಹೇಳುವ ಮೂಲಕ ಈಗಿನ ನೇಮಕದ ಬಗ್ಗೆ ಸುಧಾಕರ್ ಅವರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಕುಲಪತಿಗಳನ್ನು ನೇಮಕ ಮಾಡುವ ಪ್ರಕ್ರಿಯೆ ಈಚಿನ ಕೆಲವು ವರ್ಷಗಳಲ್ಲಿ ಪ್ರಶ್ನಾರ್ಹವಾಗುತ್ತಿದೆ. ಅಕಾಡೆಮಿಕ್ ಅರ್ಹತೆ ಹಾಗೂ ಆಡಳಿತಾತ್ಮಕ ಸಾಮರ್ಥ್ಯವನ್ನು ಪರಿಗಣಿಸುವುದಕ್ಕಿಂತ ಹೆಚ್ಚಾಗಿ ಇತರ ಹಲವು ಅಂಶಗಳ ಪರಿಗಣನೆಯೇ ಪ್ರಮುಖವಾಗಿದ್ದ ನಿದರ್ಶನಗಳೂ ಇವೆ. ವಾಲಾ ಅವರು ಈಗ ಮಾಡಿರುವ ನೇಮಕವು ಕೆಲವು ಕಟುವಾದ ಪ್ರಶ್ನೆಗಳಿಗೆ ಗುರಿಯಾಗಬಹುದು. ನೇಮಕಾತಿಯು ಪಾರದರ್ಶಕವಾಗಿ ನಡೆದಿಲ್ಲ ಎಂದು ಮೇಲ್ನೋಟಕ್ಕೆ ಅನಿಸುತ್ತಿದೆ. ಜಯಕರ ಅವರನ್ನು ಹಂಗಾಮಿ ಕುಲಪತಿಯಾಗಿ ನೇಮಿಸಿದ್ದನ್ನು ರಾಜ್ಯಪಾಲರು ಪುನರ್ ವಿಮರ್ಶಿಸಬೇಕು. ಇದುವರೆಗೆ ಪಾಲಿಸಿಕೊಂಡು ಬಂದಿರುವ ನಿಯಮಗಳಿಗೆ ಅನುಸಾರವಾಗಿ, ಪಾರದರ್ಶಕವಾಗಿ ನೇಮಕಾತಿಗಳನ್ನು ನಡೆಸಬೇಕು.

ದಿನದ ಟ್ವೀಟ್

ಎಂಜಾಯ್ ಮಾಡೋಣ!



ಬಿಜೆಪಿಯಲ್ಲಿ ಈಗ ಒಳಜಗಳ ನಡೆಯುತ್ತಿದೆ. ಕಾಂಗ್ರೆಸ್‌ನಲ್ಲಿ ಮುಂದಿನ ದಿನಗಳಲ್ಲಿ ಯಾರು ಮುಖ್ಯಮಂತ್ರಿ ಅಭ್ಯರ್ಥಿ ಎಂದು ಒಳಜಗಳ ಪ್ರಾರಂಭವಾಗಲಿದೆ. ಅಷ್ಟರೊಳಗೆ ಬಿಜೆಪಿಯ ಒಳಜಗಳ ಮುಗಿದು ಎಲ್ಲರೂ ಸೇರಿ ಕಾಂಗ್ರೆಸ್‌ನ ಒಳಜಗಳವನ್ನು ಎಂಜಾಯ್ ಮಾಡಬಹುದಾಗಿದೆ.

ಅನುಪಮ ಶೆಣೈ, ಮಾಜಿ ಪೊಲೀಸ್ ಅಧಿಕಾರಿ

25 ವರ್ಷಗಳ ಹಿಂದೆ

ಮಂಗಳವಾರ, 18-6-1996

- **ಹೆಗಡೆ ಜತೆ ಮಾತುಕತೆಗೆ ದೇವೇಗೌಡರ ಸ್ಪಷ್ಟ ನಕಾರ: ಪಟೇಲರ ರಾಜಿ ಯತ್ನಕ್ಕೆ ತೆರೆ**

ನವದೆಹಲಿ, ಜೂನ್ 17– ಉಚ್ಚಾಟಿತ ನಾಯಕ ರಾಮಕೃಷ್ಣ ಹೆಗಡೆ ಅವರೊಂದಿಗೆ ಮಾತುಕತೆ ನಡೆಸುವ ಪ್ರಶ್ನೆಯೇ ಇಲ್ಲ ಎಂದು ಪ್ರಧಾನಿ ಎಚ್.ಡಿ.ದೇವೇಗೌಡ ಅವರು ಇಂದು ರಾತ್ರಿ ಸ್ಪಷ್ಟವಾಗಿ ಹೇಳುವುದರೊಂದಿಗೆ ಈ ಇಬ್ಬರು ನಾಯಕರ ಮಧ್ಯೆ ಸಂಧಾನ ನಡೆಸುವ ಕರ್ನಾಟಕದ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರ ಎರಡನೇ ಯತ್ನವೂ ಮುರಿದು ಬಿದ್ದಂತಾಗಿದೆ.

ವಾರಾಂತ್ಯದಲ್ಲಿ ಹೆಗಡೆ ಮತ್ತು ಗೌಡ ಅವರು ಬೆಂಗಳೂರಿನಲ್ಲಿ ಭೇಟಿಯಾಗಿ ಚರ್ಚಿಸುವರು ಎಂದು ಸಂಧಾನಕ್ಕೆ ಅವಿರತ ಯತ್ನಿಸುತ್ತಿರುವ ಪಟೇಲ್ ಅವರು ಹೇಳಿರುವುದರ ಬಗ್ಗೆ ಪ್ರಧಾನಿ ಅವರು ಪ್ರತಿಕ್ರಿಯಿಸಿ, ತಾವು ಮತ್ತು ಹೆಗಡೆ ಭೇಟಿಯಾಗುವ ಪ್ರಶ್ನೆಯೇ ಇಲ್ಲ ಎಂದರು. ಇದರಿಂದಾಗಿ ಹೆಗಡೆ ಅವರಿಗೆ ಜನತಾದಳದ ಬಾಗಿಲು ಸಂಪೂರ್ಣವಾಗಿ ಮುಚ್ಚಿದಂತಾಗಿದೆ.

- **ಹೊರ ರಾಜ್ಯ ವಿದ್ಯಾರ್ಥಿಗೆ ಶೇ 15 ಪಾವತಿ ಸೀಟು– ಸುಪ್ರೀಂ ಕೋರ್ಟ್ ಸೂಚನೆ**

ನವದೆಹಲಿ, ಜೂನ್ 17 (ಪಿಟಿಐ)– ಕರ್ನಾಟಕದ ಖಾಸಗಿ ವೈದ್ಯಕೀಯ, ಎಂಜಿನಿಯರಿಂಗ್ ಮತ್ತು ಇತರ ವೃತ್ತಿಶಿಕ್ಷಣ ಕಾಲೇಜುಗಳಿಗೆ ರಾಜ್ಯದ ಹೊರಗಿನ ವಿದ್ಯಾರ್ಥಿಗಳಿಗೆ ಪ್ರವೇಶ ನಿರಾಕರಿಸುವ ಸರ್ಕಾರದ ಕ್ರಮವನ್ನು ಇಂದು ಟೀಕಿಸಿದ ಸುಪ್ರೀಂ ಕೋರ್ಟ್, ಶೇಕಡ 15ರಷ್ಟು ಅಧಿಕ ಶುಲ್ಕದ ಸೀಟುಗಳನ್ನು ದೇಶದ ವಿವಿಧೆಡೆಯ ವಿದ್ಯಾರ್ಥಿಗಳಿಗಾಗಿ ಕಾದಿರಿಸುವಂತೆ ಸೂಚಿಸಿತು.

50 ವರ್ಷಗಳ ಹಿಂದೆ

ಶುಕ್ರವಾರ, 18-6-1971

- **ಬಾಂಗ್ಲಾ ದೇಶಕ್ಕೆ ನಿರಾಶ್ರಿತರ ವಾಪಸ್: ಭಾರತದ ದೃಢ ನಿರ್ಧಾರ**

ನವದೆಹಲಿ, ಜೂನ್ 17– ಬಾಂಗ್ಲಾದೇಶದಲ್ಲಿ ಪರಿಸ್ಥಿತಿ ಸುಧಾರಿಸಿದ ಕೂಡಲೇ ನಿರಾಶ್ರಿತರನ್ನು ವಾಪಸು ಕಳುಹಿಸಿಬಿಡಲು ಭಾರತ ನಿರ್ಧರಿಸಿದೆ ಎಂದು ಪ್ರಧಾನಿ ಇಂದಿರಾ ಗಾಂಧಿ ಇಂದು ಮತ್ತೆ ಸ್ಪಷ್ಟಪಡಿಸಿದರು.

ವೃತ್ತಪತ್ರಿಕೆಗಳ ಆರ್ಥಿಕ ವಿಭಾಗದ ಸಂಪಾದಕರುಗಳೊಂದಿಗೆ ಅವರು ಮಾತನಾಡುತ್ತಿದ್ದರು. ಒಂದು ಗಂಟೆ ಕಾಲ ನಡೆದ ಈ ಸಭೆಯಲ್ಲಿ ನಿರಾಶ್ರಿತರ ವಲಸೆಯಿಂದ ಉದ್ಭವಿಸುತ್ತಿರುವ ಸಮಸ್ಯೆಗಳ ಬಗ್ಗೆ ಅವರಿಗೆ ಪ್ರಶ್ನೆಗಳನ್ನು ಕೇಳಲಾಯಿತು.

60 ಲಕ್ಷಕ್ಕೂ ಹೆಚ್ಚಿರುವ ಬಾಂಗ್ಲಾ ನಿರಾಶ್ರಿತರು ಭಾರತಕ್ಕೆ ಹೊರಲಾರದ ಹೊಣೆಯಾಗಿದ್ದಾರೆ. ಇಂಥ ಹೊಣೆಯನ್ನು ಇಷ್ಟು ಅತ್ಯಲ್ಪ ಅವಧಿಯಲ್ಲಿ ಹೊರುವ ಸಂದರ್ಭ ವಿಶ್ವದಲ್ಲಿ ಯಾವ ರಾಷ್ಟ್ರಕ್ಕೂ ಉಂಟಾಗಿರಲಿಲ್ಲ ಎಂದೂ ಪ್ರಧಾನಿ ನುಡಿದರು.

- **ಕಾಸರಗೋಡಿನಲ್ಲಿ ಹರಿಜನರಿಗೆ ಚಿಪ್ಪಿನಲ್ಲಿ ಟೀ**

ಕೊಚ್ಚಿ, ಜೂನ್ 17– ಕೇರಳದ ಕಾಸರಗೋಡು ತಾಲ್ಲೂಕಿನಲ್ಲಿ ಹರಿಜನ ಮತ್ತು ಗಿರಿಜನರು ಇಂದೂ ಕೂಡ ಅಸ್ಪೃಶ್ಯತೆಯಿಂದ ತೊಂದರೆಗೀಡಾಗಿದ್ದಾರೆ.

ಕೇರಳದ ಹರಿಜನ ಕ್ಷೇಮಾಭ್ಯುದಯ ಖಾತೆ ಸಚಿವ ಪಿ.ಕೆ. ರಾಘವನ್ ಅವರು ಇಂದು ಈ ವಿಷಯವನ್ನು ಇಲ್ಲಿ ಪ್ರಕಟಿಸುತ್ತ, ಈ ಜನರಿಗೆ ಟೀ ಅಂಗಡಿ ಮತ್ತು ಹೋಟೆಲ್‌ಗಳಲ್ಲಿ ಗಾಜಿನ ಲೋಟಗಳಿಗೆ ಬದಲು ತೆಂಗಿನ ಚಿಪ್ಪುಗಳಲ್ಲಿ ಟೀ ಕೊಡಲಾಗುತ್ತಿದೆ ಎಂದು ತಿಳಿಸಿದರು.

ಅಸ್ಪೃಶ್ಯತೆ ಕುರಿತ ಕಾನೂನನ್ನು ಜಾರಿಗೆ ತರಲು ತೀವ್ರ ಕ್ರಮ ಕೈಗೊಳ್ಳುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿರುವುದಾಗಿ ಅವರು ನುಡಿದರು.

ಆರೋಗ್ಯ ಸೇವೆ: ರಾಜ್ಯಗಳಿಗೆ ಇನ್ನಷ್ಟು ಸ್ವಾಯತ್ತತೆ ನೀಡಬೇಕಾದ ತುರ್ತಿದೆ

ಸಾರ್ವಜನಿಕ ಆರೋಗ್ಯ ಮತ್ತು ಒಕ್ಕೂಟ ವ್ಯವಸ್ಥೆ



ವಿಶ್ಲೇಷಣೆ

ವಸಂತ ಶೆಟ್ಟಿ

ನೀವೊಬ್ಬ ಹರೆಯದ ಹುಡುಗ. ಜಂಕ್ ಆಹಾರ ಅಂದರೆ ಪಂಚಪ್ರಾಣ. ವ್ಯಾಯಾಮ ಅಂದರೆ ಮೈಲು ದೂರ. ಹೀಗಿರುವಾಗ, ಒಂದು ದಿನ ಆರೋಗ್ಯ ಕೈ ಕೊಟ್ಟಾಗ ನೀವಂದುಕೊಳ್ಳುತ್ತೀರಿ 'ಇಲ್ಲ, ಇನ್ನೆಂದೂ ಜಂಕ್ ತಿನ್ನಲ್ಲ, ದಿನವೂ ವ್ಯಾಯಾಮ ಮಾಡ್ತೀನಿ, ಇದೊಂದು ಸಲ ಹುಷಾರಾದ್ರೆ ಸಾಕಪ್ಪ'. ಹುಷಾರಾದ ಮೇಲೆ ಮೈಮರೆತು ಅದೇ ಹಳೆಯ ಅಭ್ಯಾಸ ಮುಂದುವರಿಸುತ್ತೀರಿ ಅಂದುಕೊಳ್ಳಿ. ಆರೋಗ್ಯದ ವಿಷಯದಲ್ಲಿ ನಿಮ್ಮದು ಅತ್ಯಂತ ಬೇಜವಾಬ್ದಾರಿಯ ನಡತೆ ಅಂತ ಯಾರೂ ಹೇಳಬಹುದು. ಆದರೆ ಆರೋಗ್ಯದ ವಿಷಯದಲ್ಲಿ ದೇಶವೊಂದರ ನಡವಳಿಕೆಯೂ ಹೀಗೆಯೇ ಇದ್ದರೆ ಏನಾಗುತ್ತದೆ ಅನ್ನುವುದನ್ನು ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ದೇಶದಲ್ಲಿ ಉಂಟಾದ ಅಪಾರ ಸಾವು, ನೋವಿನ ಕತೆಯಲ್ಲಿ ಕಾಣಬಹುದು.

ಗಡ್ಡಕ್ಕೆ ಬೆಂಕಿ ಬಿದ್ದಾಗಲೇ ಬಾವಿ ತೋಡುವ ಧೋರಣೆಯಿಂದ, ಆರೋಗ್ಯದ ವಿಷಯದಲ್ಲಿ ಸ್ವಾತಂತ್ರ್ಯ ಬಂದಾಗಿನಿಂದಲೂ ಮಾಡಬೇಕಾದಷ್ಟು ಹೂಡಿಕೆ ಮಾಡದ ಪರಿಣಾಮವನ್ನು, ಒಂದು ದೇಶವಾಗಿ ನಮ್ಮ ಜನರು ಪೀಳಿಗೆಗಳಿಂದ ಅನುಭವಿಸುತ್ತಲೇ ಬಂದಿದ್ದಾರೆ.

ಮುಂದುವರಿದ ನಾಡುಗಳಲ್ಲಿ ಗಮನಿಸಬಹುದಾದ ಸಾಮಾನ್ಯವಾದ ವಿಚಾರವೆಂದರೆ, ಜನರ ಆರೋಗ್ಯ ಮತ್ತು ಶಿಕ್ಷಣದ ಕುರಿತಂತೆ ಸರ್ಕಾರಗಳು ಮಾಡುವ ಹೂಡಿಕೆ. ಆದರೆ ಈ ಎರಡು ಮುಖ್ಯವಾದ ವಿಚಾರಗಳಲ್ಲಿ ನಾವು ಎಲ್ಲರನ್ನೂ ಒಳಗೊಳ್ಳುವ ಬದಲು ಉಳ್ಳವರಿಗೊಂದು, ಇಲ್ಲದವರಿಗೊಂದು ಏರ್ಪಾಡು ಅನ್ನುವತ್ತ ಹೋಗುತ್ತಿದ್ದೇವೆ. ಹಾಗಿದ್ದರೆ ಎಪ್ಪತ್ತು ವರ್ಷಗಳಲ್ಲಿ ಇಂತಹದ್ದೊಂದು 'ಕೆಟ್ಟು ನಿಂತ' ಹಂತಕ್ಕೆ ಯಾಕೆ ತಲುಪಿದ್ದೇವೆ?

ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ದೇಶದ ಶೇ 65-70ರಷ್ಟು ಜನರು ಬಡತನದ ರೇಖೆಯ ಕೆಳಗಿದ್ದರು. ಸರಾಸರಿ ಜೀವಿತಾವಧಿ ಬರೀ 41 ವರ್ಷಗಳಷ್ಟಿತ್ತು. ಜನ ಬಡವರಾಗಿದ್ದಾಗ ಸರ್ಕಾರ ಇನ್ನೂ ಬಡವಾಗಿರುತ್ತದೆ. ಯಾಕೆಂದರೆ ಜನರು ಚೆನ್ನಾಗಿ ಗಳಿಸಿ, ತೆರಿಗೆ ಕಟ್ಟಿದಾಗಲಷ್ಟೇ ಸರ್ಕಾರಕ್ಕೂ ಜನರಿಗೆ ಬೇಕಾದ ವ್ಯವಸ್ಥೆಗಳನ್ನು ಕಲ್ಪಿಸುವ ಆರ್ಥಿಕ ಶಕ್ತಿ, ಅನುಷ್ಠಾನದ ಶಕ್ತಿ ದೊರಕುವುದು. ಸ್ವತಂತ್ರ ಭಾರತದ ಮೊದಲ ನಲವತ್ತು ವರ್ಷಗಳ ಆಳ್ವಿಕೆಯಲ್ಲಿ ಆರ್ಥಿಕತೆಯ ಎಲ್ಲ ಹಂತಗಳನ್ನು ಸರ್ಕಾರವೇ ನಿಯಂತ್ರಿಸುವ 'ಲೈಸೆನ್ಸ್‌ರಾಜ್ ವ್ಯವಸ್ಥೆ'ಯು ಜನರು ಆರ್ಥಿಕವಾಗಿ ಸಬಲರಾಗಲು ಬೇಕಾದ ವ್ಯವಸ್ಥೆಯನ್ನು ಕಟ್ಟಿಕೊಡುವಲ್ಲಿ ಸೋತಿತು.

ತೊಂಬತ್ತೊಂದರ ಆರ್ಥಿಕ ಸುಧಾರಣೆ ಹಲವು ರೀತಿಯಲ್ಲಿ ಜನರನ್ನು ಬಡತನದ ರೇಖೆಯಿಂದ ಹೊರತರಲು ನೆರವಾಗುವುದರ ಜೊತೆಗೆ ಸರ್ಕಾರಗಳ ಆರ್ಥಿಕ ಸಾಮರ್ಥ್ಯ ಹೆಚ್ಚಿಸಿ ಕಲ್ಯಾಣ ಕಾರ್ಯಕ್ರಮಗಳಿಗೆ ಸಂಪನ್ಮೂಲ ಹರಿಸಲು ನೆರವಾಯಿತು. ಜಾಗತೀಕರಣವು ಆರ್ಥಿಕ ಅಸಮಾನತೆ ಇನ್ನಷ್ಟು ಹೆಚ್ಚಲು ಕಾರಣವಾಗಿದೆ ಅನ್ನುವ ಮಾತು ನಿಜವಾದರೂ ತೊಂಬತ್ತರ ಮುಂಚಿನ ಮತ್ತು ನಂತರದ ಭಾರತದ ಸ್ಥಿತಿಯನ್ನು ಹೋಲಿಸಿದಾಗ ಖಂಡಿತವಾಗಿಯೂ ಹೆಚ್ಚು ಒಳಿತಾಗಿದೆ ಅನ್ನಬಹುದು. ಆದರೆ ಸರ್ಕಾರ ಬಡವಾಗಿದ್ದಾಗ ಆಗಲೀ ತಕ್ಕಮಟ್ಟಿಗೆ ಸಿರಿವಂತವಾದಾಗ ಆಗಲೀ ಆರೋಗ್ಯ ಕ್ಷೇತ್ರದಲ್ಲಿನ ಹೂಡಿಕೆಯ ವಿಷಯದಲ್ಲಿ ಅದು ಜಂಕ್‌ಫುಡ್‌ಪ್ರಿಯ ಯುವಕನ ಉದಾಹರಣೆಯಂತೆಯೇ ನಡೆದುಕೊಂಡಿದೆ.

ಇಲ್ಲಿ ಎರಡು ಮುಖ್ಯವಾದ ತೊಂದರೆಗಳಿವೆ. ಮೊದಲನೆಯದು, ಕಾಯಿಲೆ ಬರದಂತೆ ತಡೆಯುವ ವ್ಯವಸ್ಥೆಯ ಬದಲು ಗುಣಪಡಿಸುವ ವ್ಯವಸ್ಥೆಯತ್ತಲೇ ಗಮನ ಹರಿಸಿದ್ದು. ತೃತೀಯ ಜಗತ್ತಿನ ಬಹುತೇಕ ದೇಶಗಳಲ್ಲಿ ಆರೋಗ್ಯದ ಬಹುಪಾಲು ಸಮಸ್ಯೆಗಳು ಅಶುದ್ಧ ನೀರು, ಕಲುಷಿತ ಗಾಳಿಯಿಂದ ಬರುತ್ತವೆ. ಕುಡಿಯಲು ಶುದ್ಧ ನೀರು, ಕೆರೆ-ನದಿಗಳನ್ನು ಕಾಪಿಟ್ಟುಕೊಳ್ಳುವತ್ತ ಗಮನ ಕೊಟ್ಟರೆ ನೀರಿನಿಂದ ಹರಡುವ ಕಾಯಿಲೆಗಳನ್ನೂ, ಸಾರ್ವಜನಿಕ ಸಾರಿಗೆಗೆ ಬೇಕಾದ ಹೂಡಿಕೆ, ದೂಳಿನ ಸಮಸ್ಯೆ ಕಡಿಮೆಯಾಗಿಸುವಂತೆ ರಸ್ತೆಗಳ ನಿರ್ಮಾಣ, ಕಾರ್ಖಾನೆಗಳು ಮಿತಿಯೊಳಗೆ ಹೊಗೆಯುಗುಳುವಂತಹ ಹೆಜ್ಜೆಗಳನ್ನು ಸಮರ್ಥವಾಗಿ ಇರಿಸಿದರೆ, ಅಶುದ್ಧ ಗಾಳಿಯಿಂದ ಬರುವ ಕಾಯಿಲೆಗಳನ್ನೂ ತಡೆಯಬಹುದು. ಆದರೆ ಇಂತಹ ದೂರಗಾಮಿಯಾದ, ಚುನಾವಣಾ ರಾಜಕೀಯದಲ್ಲಿ ಅಷ್ಟು ಮಹತ್ವ ಪಡೆಯದ ರೋಗತಡೆ ಏರ್ಪಾಡುಗಳ ಬದಲು ಲಾಗಾಯ್ತಿನಿಂದಲೂ ದೊಡ್ಡ ಆಸ್ಪತ್ರೆಯಂತಹ 'ಕಣ್ಣಿಗೆ ಕಾಣಿಸುವ' ಗುಣಪಡಿಸುವ ವ್ಯವಸ್ಥೆಗಳಿಗೇ ಆದ್ಯತೆ ಕೊಟ್ಟ ಪರಿಣಾಮವಾಗಿ, ದೇಶದ ಶೇ 65ರಷ್ಟು ಆರೋಗ್ಯ ಸಂಬಂಧಿ ಖರ್ಚು ಜನರ ವೈಯಕ್ತಿಕ ಹಣದಿಂದ ಆಗುತ್ತಿದೆ.

ಇದರ ನಡುವೆ ಗುಣಪಡಿಸುವ ವ್ಯವಸ್ಥೆಯಲ್ಲೂ ಸರಿಯಾದ ಮೂಲಸೌಕರ್ಯಗಳನ್ನು ಕಲ್ಪಿಸದಿರುವುದು, ವೈದ್ಯಕೀಯ ಶಿಕ್ಷಣವೊಂದು ಲಾಭದಾಯಕ ಉದ್ಯಮವಾಗುವ ವ್ಯವಸ್ಥೆ ಕಟ್ಟಿದ್ದು ಆರೋಗ್ಯ ವ್ಯವಸ್ಥೆ ಶಿಥಿಲವಾಗಲು ಕಾರಣವಾಯಿತು. ಇದರ ಮೇಲೆ ಈಗ 'ನೀಟ್' ಬಗೆಯ ಪರೀಕ್ಷಾ ವ್ಯವಸ್ಥೆಯ ಮೂಲಕ ಪಟ್ಟಣಗಳಲ್ಲಿನ, ಕೋಚಿಂಗ್ ವ್ಯವಸ್ಥೆಯ ಲಾಭ ಪಡೆದುಕೊಳ್ಳುವ ಮಕ್ಕಳೇ ವೈದ್ಯರಾಗುವ ಏರ್ಪಾಡು ಕಟ್ಟಿರುವುದರಿಂದ ಹಳ್ಳಿ, ಚಿಕ್ಕ ಪಟ್ಟಣಗಳಲ್ಲಿನ ಆರೋಗ್ಯ ವ್ಯವಸ್ಥೆ ಇನ್ನಷ್ಟು ತೊಂದರೆಯತ್ತಲೇ ಸಾಗುತ್ತಿದೆ.

ಎರಡನೆಯದು, ಆರೋಗ್ಯ ಸೇವೆಗಳು ಸಂವಿಧಾನದ ಪ್ರಕಾರ ರಾಜ್ಯದ ಪಟ್ಟಿಯಲ್ಲಿದ್ದರೂ ಅಲ್ಲಿನ ನೀತಿ-ನಿಯಮ ರೂಪಿಸುವಿಕೆಯಲ್ಲಿ, ಅದಕ್ಕೆ ಬೇಕಾದ ಸಂಪನ್ಮೂಲವನ್ನು ಹೊಂದಿಸಿಕೊಳ್ಳುವಲ್ಲಿ ರಾಜ್ಯ ಸರ್ಕಾರಗಳಿಗೆ ಸರಿಯಾದ ಸ್ವಾಯತ್ತತೆ ಇಲ್ಲದಿರುವುದು. ಇದರಿಂದ, ಸಾರ್ವಜನಿಕ ಆರೋಗ್ಯ ವ್ಯವಸ್ಥೆ ಹೆಚ್ಚು ತಾರತಮ್ಯದ ವ್ಯವಸ್ಥೆಯತ್ತ ಸಾಗಿದೆ ಅನ್ನಬಹುದು.



ಭಾರತದ ತೆರಿಗೆ ವ್ಯವಸ್ಥೆ ಸ್ವಾತಂತ್ರ್ಯ ಬಂದಾಗಿನಿಂದಲೂ ಒಕ್ಕೂಟ ಸರ್ಕಾರದ ಕಡೆಗೆ ವಾಲಿದೆ. ಈಗಲೂ ಅದು ಇನ್ನಷ್ಟು ಕೇಂದ್ರೀಕೃತ ಆಗುತ್ತಿರುವುದಕ್ಕೆ ತೀರಾ ಇತ್ತೀಚಿನ ಉದಾಹರಣೆಯೆಂದರೆ ಜಿಎಸ್‌ಟಿ. ರಾಜ್ಯ ಸರ್ಕಾರಗಳಿಗೆ ಒಂದು ಸಾರ್ವಭೌಮತ್ವ, ಅಸ್ತಿತ್ವ ಅನ್ನುವುದು ಒದಗುವುದೇ ಅವುಗಳಿಗೆ ತಮ್ಮ ಅಗತ್ಯಗಳಿಗೆ ತಕ್ಕಂತೆ ತೆರಿಗೆ ಹೆಚ್ಚಿಸುವ, ತಗ್ಗಿಸುವ ಸ್ವಾಯತ್ತತೆ ಇದ್ದಾಗ. ಕೂಲಿಗಾಗಿ ಕಾಳು, ಬಿಸಿಯೂಟದಂತಹ ಯೋಜನೆಗಳು ಮೊದಲು ರಾಜ್ಯಗಳಲ್ಲಿ ಹುಟ್ಟಿ, ಯಶಸ್ಸು ಕಂಡು ನಂತರ ದೇಶದ ಮಟ್ಟಕ್ಕೆ ಹರಡಿದ್ದರೆ, ರಾಜ್ಯಗಳಲ್ಲಿ ಅದನ್ನು ಸಾಧ್ಯವಾಗಿಸಿದ್ದು ತೆರಿಗೆ ವಿಷಯದಲ್ಲಿ ರಾಜ್ಯಗಳಿಗಿದ್ದ ತಕ್ಕಮಟ್ಟಿಗಿನ ಸ್ವಾಯತ್ತತೆ. ಜಿಎಸ್‌ಟಿ ಅದನ್ನು ರಾಜ್ಯಗಳಿಂದ ಬಹುಪಾಲು ಕಿತ್ತುಕೊಂಡಿದೆ. ಅದರ ವ್ಯಾಪ್ತಿಗೆ ಈಗ ಪೆಟ್ರೋಲಿಯಂ ಉತ್ಪನ್ನಗಳನ್ನೂ ತಂದರೆ ಅಲ್ಲಿಗೆ ಎಲ್ಲದಕ್ಕೂ ದೆಹಲಿಯತ್ತ ಮುಖ ಮಾಡಿ ಕೈಯೊಡ್ಡಿ ನಿಲ್ಲುವ ಸ್ಥಿತಿ ಬರಲಿದೆ.

ತೆರಿಗೆಯ ಪ್ರಮಾಣವನ್ನು ಜಿಎಸ್‌ಟಿ ಕೌನ್ಸಿಲ್‌ನಲ್ಲಿ ರಾಜ್ಯಗಳೇ ನಿರ್ಣಯಿಸುತ್ತವೆ ಅಂತ ಏನೇ ಹೇಳಿದರೂ ಅಲ್ಲಿನ ನಿರ್ಧಾರಗಳು ಬದಲಾಗಲು ಬೇಕಾದ ಶೇ 75ರಷ್ಟು ಮತ ಪಡೆಯಲು ಒಕ್ಕೂಟ ಸರ್ಕಾರದ ಶೇ 33ರಷ್ಟು ಮತವಿಲ್ಲದೇ ಸಾಧ್ಯವಿಲ್ಲ. ದೆಹಲಿಯಲ್ಲಿ ಯಾವ ಪಕ್ಷ ಅಧಿಕಾರದಲ್ಲಿ ಇರುತ್ತದೆಯೋ ಬಹುತೇಕ ರಾಜ್ಯಗಳಲ್ಲಿ ಅದರದ್ದೇ ಆಳ್ವಿಕೆ ಇರುವಾಗ, ಹೈಕಮಾಂಡ್ ರಾಜಕಾರಣಕ್ಕೆ ಹೆದರಿ, ರಾಜ್ಯಗಳ ಪರ ಧ್ವನಿ ಎತ್ತುವ ಸಾಧ್ಯತೆಗಳು ಇಲ್ಲ. ಇವೆಲ್ಲವೂ ರಾಜ್ಯಗಳ ಆರೋಗ್ಯ ಸೇವೆಯ ಹೂಡಿಕೆ ಮೇಲೆ ಪ್ರಭಾವ ಬೀರುತ್ತಿವೆ. ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ವ್ಯಾಕ್ಸಿನ್, ಆಕ್ಸಿಜನ್, ರೆಮ್‌ಡಿಸಿವಿರ್ ಇತ್ಯಾದಿಗಳ ಕುರಿತ ನೀತಿಯಲ್ಲೂ ಅತಿಯಾದ ಕೇಂದ್ರೀಕೃತ ನಿರ್ಧಾರ ವ್ಯವಸ್ಥೆಯಿಂದ ರಾಜ್ಯಗಳಲ್ಲಿ ಆರೋಗ್ಯದ ವಿಷಯದಲ್ಲಿ ದೊಡ್ಡ ಮಟ್ಟದ ತೊಂದರೆಗಳಾದದ್ದನ್ನು ಇಲ್ಲಿ ನೆನೆಯಬಹುದು.

ಕೋವಿಡ್ ತರಹದ ಆರೋಗ್ಯ ತುರ್ತು ಪ್ರತಿಯೊಂದು ದೇಶಕ್ಕೂ ತನ್ನದೇ ಆದ ಪಾಠ ಕಲಿಸುತ್ತಿದೆ. ಯುನೈಟೆಡ್ ಕಿಂಗ್ಡಂ ಹಾಗೂ ಜರ್ಮನಿ ಪಕ್ಕ ಪಕ್ಕದ ನಾಡುಗಳಾದರೂ ಯುಕೆ ಹೋಲಿಕೆಯಲ್ಲಿ ಜರ್ಮನಿಯ ವಿಕೇಂದ್ರೀಕೃತವಾದ, ರಾಜ್ಯ-ರಾಜ್ಯಗಳ ಹಾಗೂ ರಾಜ್ಯ-ಒಕ್ಕೂಟ ಸರ್ಕಾರದ ನಡುವೆ ಹತ್ತಿರದ ಸಮನ್ವಯದ ವ್ಯವಸ್ಥೆ ಕೋವಿಡ್ ನಿಯಂತ್ರಿಸುವಲ್ಲಿ, ಸಾವು, ನೋವು ಕಡಿಮೆ ಮಾಡಿಕೊಳ್ಳುವಲ್ಲಿ ಬಹಳ ಯಶಸ್ವಿಯಾಯಿತು.

ಇಂತಹ ಹಲವು ಅಧ್ಯಯನಗಳನ್ನು ಆಧರಿಸಿ ಹೇಳುವುದಾದರೆ, ರಾಜ್ಯಗಳಿಗೆ ಆರೋಗ್ಯ ಸೇವೆಯತ್ತ ಇನ್ನಷ್ಟು ಸಂಪನ್ಮೂಲ ಮತ್ತು ತನ್ನ ನಿರ್ಧಾರಗಳನ್ನು ತಾನೇ ಕೈಗೊಳ್ಳಲು ಮತ್ತಷ್ಟು ಸ್ವಾಯತ್ತತೆ ನೀಡುವುದೇ ಇನ್ನೊಂದು ಆರೋಗ್ಯ ತುರ್ತನ್ನು ಸಮರ್ಥವಾಗಿ ಎದುರಿಸುವ ದಾರಿಯೆನ್ನಬಹುದು. ಆದರೆ ಇದು ಸಾಧ್ಯವಾಗಲು ಒಕ್ಕೂಟ ವ್ಯವಸ್ಥೆಯನ್ನು ಬಲಪಡಿಸುವಂತಹ ಗಟ್ಟಿಯಾದ ಸಂಕಥನವೊಂದು ನಮ್ಮ ಯೋಚನೆಯ ಮುನ್ನೆಲೆಗೆ ಬರಬೇಕಿದೆ.

ಚುರುಮುರಿ



ಯಜಮಾನಿಕೆ!

• ಬಿ.ಎನ್.ಮಲ್ಲೇಶ್

'ರೀ... ನಿಮಗೂ ವಯಸ್ಸಾತು, ಬೀಪಿ, ಶುಗರ್ರು ಬಂದಿದೆ, ಓಡಾಡೋದು ಕಷ್ಟ... ಮನಿ ಯಜಮಾನಿಕಿ ನನಗೆ ಬಿಟ್ಟುಕೊಡಿ...' ಮಡದಿ ಬೆಳ್ಳಂಬೆಳಿಗ್ಗೆ ಕಾಫಿ ಕೊಡುತ್ತಾ ಹೊಸ ಪ್ರಸ್ತಾವ ಮುಂದಿಟ್ಟಾಗ ನಗು ಬಂತು. ರಾಜ್ಯ ನಾಯಕತ್ವ ಬದಲಾವಣೆ ಚರ್ಚೆಯ ಪ್ರಭಾವ ಇದು ಎಂದು ಅರ್ಥವಾಯಿತು.

'ಅಲ್ವೇ, ನಂಗೇನೋ ವಯಸ್ಸಾಯ್ತು, ನಿಂಗಾಗಿಲ್ವ? ಮದ್ವೆ ಆದಾಗ ಜಿಂಕೆ ತರ ಇದ್ದೆ, ಈಗ ಗಜಗಮನೆ ಆಗಿದೀಯ? ಮೊದ್ಲೆಲ್ಲ ನಿನ್ಮೇಲೆ ಕವಿತೆ ಬರೀತಿದ್ದೆ, ಈಗ ಕಾದಂಬರಿನೇ ಬರಿಯೋ ಥರ ಆಗಿದೀಯ?' ಎಂದೆ ನಗುತ್ತ.

'ಅದೆಲ್ಲ ಗೊತ್ತಿಲ್ಲ, ಇನ್ನೂ ಎಷ್ಟು ವರ್ಷ ನೀವೇ ಯಜಮಾನಿಕಿ ನಡೆಸಬೇಕು? ನಾವು ಬರೀ ಮನೆ ಕೆಲಸ ಮಾಡೋಕಿರೋದಾ?'

'ಎರಡು ವರ್ಷ ತಡಿ, ನಂಗೂ ರಿಟೈರ್ಡ್ ಆಗುತ್ತೆ... ಆಮೇಲೆ ನೀನೇ ಮನೆ ಯಜಮಾನಿ... ಆಯ್ತಾ?'

'ಈಗ ಒಳ್ಳೆ ಸಂಬಳ ಬರೋ ಟೈಮ್ ಬಿಟ್ಟು ಪೆನ್ಷನ್ ಬರೋವಾಗ ಮನೆ ಯಜಮಾನಿಕೆ ತಗಂಡ್ರೆ ಏನ್ ಪ್ರಯೋಜನ?'

'ಅಂದ್ರೆ... ನಿಂಗೆ ನನ್ನ ಸಂಬಳದ ಮೇಲೆ ಕಣ್ಣು, ಅದನ್ನ ನಿನ್ ಕೈಗೆ ತಂದುಕೊಟ್ಟು ನಾನು ಕೈ ಕಟ್ಕೊಂಡ್ ನಿಂತ್ಕೊಬೇಕಾ?'

'ಏನಾದ್ರು ಅಂದ್ಕೊಳ್ಳಿ, ನೀವು ಯಜಮಾನಿಕೆ ಕೊಡದಿದ್ರೆ ನಾನು ತವರುಮನಿಗೆ ಹೋಗ್ತೀನಿ...'

'ಅತೃಪ್ತ ಶಾಸಕರು ಡೆಲ್ಲಿಗೆ ಹೋದಂಗೆ ನನ್ನ ಹೆದರಿಸ್ತೀಯಲ್ಲೆ? ಈ ವಯಸ್ಸಲ್ಲಿ ತವರುಮನಿಗೋದ್ರೆ ನಿಂಗೆ ಮರ್ಯಾದೆ ಇರುತ್ತಾ?'

'ಹಂಗಿದ್ರೆ ಯಜಮಾನಿಕಿ ಬಿಟ್ಟುಕೊಡಿ'.

'ಆಯ್ತು ಬಿಟ್ಟುಕೊಡೋಣ, ನೀನು ಮನಿ ಯಜಮಾನಿ ಆದ್ರೂ ನಾನು ನಿನ್ನ ಯಜಮಾನ ಅನ್ನೋದು ಬದಲಾಗಲ್ವಲ್ಲ ಅದಕ್ಕೇನ್ಮಾಡ್ತಿ?'

ಮಡದಿ ಸರ್ರನೆ ಕಾಫಿ ಕಪ್ ಎತ್ತಿಕೊಂಡು ಗುರ್ರನೆ ಅಡುಗೆ ಮನೆಗೆ ಹೋದಳು!

ಸಂಗತ

ಪರೀಕ್ಷಾರಹಿತ ವ್ಯವಸ್ಥೆ ಹೇಗೆ?

ವಿದ್ಯಾರ್ಥಿಯಲ್ಲಿ ಕಲಿಕೆ ಖಾತರಿಪಡಿಸಿಕೊಳ್ಳುವ ಪ್ರಕ್ರಿಯೆ ಬಲಪಡಿಸಬೇಕಾಗಿದೆ

• ಡಾ. ಎಚ್.ಬಿ.ಚಂದ್ರಶೇಖರ್

ಶೈಕ್ಷಣಿಕ ಕ್ಷೇತ್ರದಲ್ಲಿ ಸುಧಾರಣೆ ತರುವ ದಿಸೆಯಲ್ಲಿ ಪರೀಕ್ಷೆಗಳು ಬೇಕೆ ಅಥವಾ ಬೇಡವೇ ಎಂಬ ಬಗ್ಗೆ ಸಮಗ್ರ ಚರ್ಚೆಯ ಅಗತ್ಯ ಇದೆ. ಬೋಧನೆ, ಕಲಿಕೆ ಮತ್ತು ಪರೀಕ್ಷಾ ಪ್ರಕ್ರಿಯೆಗಳು ಜೊತೆಗೂಡಿ ಸಾಗುತ್ತವೆ. ಪ್ರಾಚೀನ ಕಾಲದಲ್ಲಿ ಕಲಿಕೆಯು ಶ್ರವಣ, ಮನನ, ನಿಧಿಧ್ಯಾಸನದ ಮೂಲಕ ಸಾಗುತ್ತಿತ್ತು. ನಿಯಮಿತವಾಗಿ ನಡೆಸಲಾಗುತ್ತಿದ್ದ ಚರ್ಚೆ ಹಾಗೂ ವಿಚಾರ ಸಂಕಿರಣಗಳ ಮೂಲಕವೂ ಕಲಿಕೆ ನಡೆಯುತ್ತಿತ್ತು. ಶಿಷ್ಯರು ಸದಾ ಗುರುಗಳ ನೇರ ವೈಯಕ್ತಿಕ ಗಮನ, ನಿಯಂತ್ರಣದಲ್ಲಿ ಇರುತ್ತಿದ್ದರು. ಈ ಕಾರಣದಿಂದ, ಶಿಷ್ಯರಲ್ಲಾಗುತ್ತಿದ್ದ ಕಲಿಕೆಯ ಬಗ್ಗೆ ಗುರುಗಳಿಗೆ ಸಂಪೂರ್ಣ ಮಾಹಿತಿ ಇರುತ್ತಿತ್ತು.

ಬಹು ಹಿಂದಿನಿಂದಲೇ ಗ್ರೀಸ್, ಚೀನಾ, ಭಾರತ ಹಾಗೂ ವಿಶ್ವದ ಇತರೆಡೆ ಶಿಕ್ಷಣ ನೀಡಲು ವಿವಿಧ ಸ್ವರೂಪದ ಸಂಸ್ಥೆಗಳಿದ್ದವು. ಔಪಚಾರಿಕ ಸ್ವರೂಪದ ಶಾಲೆಗಳನ್ನು ಅಮೆರಿಕದ ಹೊರೆಸ್ ಮಾನ್ 18ನೇ ಶತಮಾನದಲ್ಲಿ ಸಂಶೋಧಿಸಿದ ಎನ್ನಲಾಗುತ್ತದೆ. ಅವನಿಗಿಂತ ಪೂರ್ವದಲ್ಲಿ, ಪೋಷಕರಿಗೆ ತಮ್ಮ ತುಂಟತನ, ಚೇಷ್ಟೆಗಳ ಮೂಲಕ ತೊಂದರೆ ಕೊಡುತ್ತಿದ್ದ ಮಕ್ಕಳನ್ನೆಲ್ಲಾ ಹೆನ್ರಿ ಪಿ. ಸ್ಕೂಲ್ ಎಂಬುವರು ಒಂದು ಕೊಠಡಿಯಲ್ಲಿ ಕೂಡಿಹಾಕುತ್ತಿದ್ದರು ಎನ್ನಲಾದ ಕಾರಣ ಸ್ಕೂಲ್ ಎಂಬ ಹೆಸರು ಬಂದಿದೆ ಎಂಬ ದಂತಕತೆಯಿದೆ. ಪರೀಕ್ಷೆಯನ್ನು ಅಮೆರಿಕದ ಹೆನ್ರಿ ಫಿಷಲ್ ಎಂಬುವರು ರೂಢಿಗೆ ತಂದರು ಎನ್ನಲಾಗಿದೆ.

ವೃತ್ತಿ, ಜಾತಿ, ಧರ್ಮಗಳನ್ನು ಮೀರಿ, ಸರ್ವರಿಗೂ ಪ್ರವೇಶ ನೀಡಿ ಶಿಕ್ಷಣ ನೀಡುವ ಸಾರ್ವತ್ರಿಕ ಮುಕ್ತ ಶಿಕ್ಷಣವು ಬ್ರಿಟಿಷ್ ಆಳ್ವಿಕೆಯಲ್ಲಿ ಪ್ರಾರಂಭಗೊಂಡಿತು. 1813ರ ಚಾರ್ಟರ್ ಕಾನೂನು ₹ 1 ಲಕ್ಷ ಮೊತ್ತವನ್ನು ಭಾರತೀಯರ ಶಿಕ್ಷಣಕ್ಕೆ ಮೀಸಲಿಟ್ಟಿತು. ಬ್ರಿಟಿಷ್ ಅಧಿಕಾರಿಗಳಾದ ಮೆಕಾಲೆ, ವುಡ್ ಅವರ ಕಾಲದಲ್ಲಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ಚುರುಕು ಪಡೆಯಿತು. ಪಾಶ್ಚಾತ್ಯ ಸಾಹಿತ್ಯ, ವಿಜ್ಞಾನ, ಇಂಗ್ಲಿಷ್ ಭಾಷೆಯನ್ನು ಅಳವಡಿಸಲಾಯಿತು. ಬ್ರಿಟಿಷ್ ಆಡಳಿತಕ್ಕೆ ದೊಡ್ಡ ಸಂಖ್ಯೆಯ ಗುಮಾಸ್ತ ಹಾಗೂ ಆಡಳಿತ ವರ್ಗ ಅವಶ್ಯವಾಗಿತ್ತು. ಹೆಚ್ಚು ಶಾಲೆಗಳನ್ನು ತೆರೆದು, ಬಾಲಕಿಯರನ್ನೂ ಒಳಗೊಂಡಂತೆ ಎಲ್ಲರಿಗೂ ಶಿಕ್ಷಣ ನೀಡಲು ಕ್ರಮ ವಹಿಸಲಾಯಿತು.

ಔಪಚಾರಿಕ ಶಾಲೆಗಳಲ್ಲಿ ಏನನ್ನು, ಎಷ್ಟು ಕಲಿಯಬೇಕು ಎಂಬುದನ್ನು ನಿರ್ದಿಷ್ಟಪಡಿಸಲಾಯಿತು. ಕಲಿತದ್ದನ್ನು ತಿಳಿಯಲು ಪರೀಕ್ಷಾ ವ್ಯವಸ್ಥೆಯು ನಿರ್ದಿಷ್ಟ ರೂಪ ಪಡೆಯಿತು. ದೇಶದಲ್ಲಿ 1921ರಲ್ಲಿ ಉತ್ತರ ಪ್ರದೇಶದಲ್ಲಿ ಶಾಲಾ ಶಿಕ್ಷಣ ಪರೀಕ್ಷೆಗೆ ಮೊದಲ ಬೋರ್ಡ್ ಸ್ಥಾಪಿಸಲಾಯಿತು. ಶಿಕ್ಷಣವು ಹೆಚ್ಚು ಔಪಚಾರಿಕ, ನಿರ್ದಿಷ್ಟ, ಸ್ಪಷ್ಟ, ಖಚಿತವಾಗುತ್ತಾ ಹೋದಂತೆ ಕಲಿಕಾ ಬೋಧನಾ ಪ್ರಕ್ರಿಯೆ ಸಹ ಸಾಂಪ್ರದಾಯಿಕ ಎನ್ನುವಂತೆ ಆಗುತ್ತಾ ಹೋಯಿತು. ಜೊತೆಜೊತೆಗೆ ಶಾಲಾ ಶಿಕ್ಷಣವು ವ್ಯಾಪಾರೀಕರಣಗೊಳ್ಳುತ್ತ ಸಾಗಿದಂತೆ ಬಾಹ್ಯ ಆಡಂಬರ, ಒಣ ಶಿಸ್ತುಗಳು ವಿಜೃಂಭಿಸುತ್ತಾ ಹೋದವು. ಸ್ಥಾಪಿತ ಹಿತಾಸಕ್ತಿಗಳು ಪರೀಕ್ಷೆಗಳನ್ನು ಹೆಚ್ಚು ಜನಪ್ರಿಯಗೊಳಿಸಿ, ಸ್ಪರ್ಧೆ, ಪೈಪೋಟಿಗಳನ್ನು ಮುಂಚೂಣಿಗೆ ತರುವಲ್ಲಿ ಯಶಸ್ವಿಯಾದವು. ಇದರ ಫಲವಾಗಿ ಬೋಧನೆ-ಕಲಿಕಾ ಪ್ರಕ್ರಿಯೆಗಳಿಗಿಂತ ಪರೀಕ್ಷೆಗೆ ಹೆಚ್ಚು ಪ್ರಾಧಾನ್ಯ ಕೊಡುವ ಪರಿಸ್ಥಿತಿ ಸೃಷ್ಟಿಯಾಯಿತು. ಶಿಕ್ಷಣವು ಜ್ಞಾನ ಸಂಪಾದನೆಗೆ ಎಂಬಲ್ಲಿಂದ ಮಾಹಿತಿ, ಅಂಕಿ ಅಂಶವನ್ನು ಕಂಠಪಾಠ ಮಾಡಿ, ಪರೀಕ್ಷೆಗಳಲ್ಲಿ ಹೆಚ್ಚು ಅಂಕ ಪಡೆದು 'ಯಶಸ್ವಿ' ಎನಿಸಿಕೊಳ್ಳಬೇಕು ಎಂಬಲ್ಲಿಗೆ ಬಂದು ನಿಂತಿತು.

ಪರಿಕಲ್ಪನೆಗಳನ್ನು ಸ್ಪಷ್ಟವಾಗಿ ಅರ್ಥೈಸುವಂತೆ ಕಲಿಸುವುದಕ್ಕಿಂತ ನಿಗದಿತ ಪಠ್ಯವನ್ನು ಸೂಚಿತ ಕಾಲಾವಧಿಯೊಳಗೆ ಪೂರೈಸಿ, ವಿದ್ಯಾರ್ಥಿಗಳನ್ನು ಪರೀಕ್ಷೆಗೆ ಸಜ್ಜುಗೊಳಿಸಿ, ಅವರನ್ನು 'ಯಶಸ್ವಿ'ಯಾಗಿ ಮುಂದೆ ದಾಟಿಸುವ ಪ್ರಕ್ರಿಯೆ ಹೆಚ್ಚಿನೆಡೆ ಸಾಮಾನ್ಯ ಎಂಬಂತಾಯಿತು. ಪರೀಕ್ಷಾ ಫಲಿತಾಂಶ ಮುಖ್ಯವಾಗುತ್ತಾ ಹೋಯಿತೇ ವಿನಾ ಬೋಧನಾ ಕಲಿಕಾ ಪ್ರಕ್ರಿಯೆಯನ್ನು ಬಲಪಡಿಸುವ, ಮಕ್ಕಳಲ್ಲಿ ಸಹಜ ಕಲಿಕೆಯ ಆನಂದವನ್ನು ಉದ್ದೀಪಿಸುವ ಹಾಗೂ ನಿಯಮಿತ ಬೆಂಬಲ, ಮೇಲ್ವಿಚಾರಣೆಯ ಮೂಲಕ ಶೈಕ್ಷಣಿಕ ಪ್ರಕ್ರಿಯೆಯನ್ನು ಕಣ್ಗಾವಲಿನಲ್ಲಿ ಇರಿಸುವ ಕೆಲಸ ಹಿಂದೆ ಬಿತ್ತು.



1932ರಲ್ಲಿ ಪ್ರಕಟಗೊಂಡ ಗೀಜುಭಾಯ್ ಬಧೇಕಾ ಅವರ ಜನಪ್ರಿಯ ಪುಸ್ತಕ 'ಹಗಲು ಗನಸು'ವಿನಲ್ಲಿ ಪರೀಕ್ಷೆಗಳ ರದ್ದತಿಯ ಬಗ್ಗೆ ಹೀಗೆ ಉಲ್ಲೇಖಿಸಲಾಗಿದೆ- 'ವಿದ್ಯಾರ್ಥಿಯು ಓದುತ್ತಿರುವವರೆಗೆ, ಶಿಕ್ಷಕ ಕಲಿಸುತ್ತಿರುವವರೆಗೆ ಪರೀಕ್ಷೆಯ ಅವಶ್ಯಕತೆ ಇದ್ದೇ ಇದೆ. ವಿದ್ಯಾರ್ಥಿಗಳು ಉತ್ಸಾಹದಿಂದ ಓದಲು ಸಿದ್ಧರಾದಾಗ ಶಿಕ್ಷಕನು ಅಷ್ಟೇ ಕೌಶಲದಿಂದ, ಉತ್ಸಾಹದಿಂದ ಕಲಿಸಲು ಮುಂದೆ ಬಂದಾಗ ಮಾತ್ರ ಪರೀಕ್ಷೆಯನ್ನು ಕೈಬಿಡಬಹುದು'.

ಶಿಕ್ಷಣ ವ್ಯವಸ್ಥೆಯಲ್ಲಿ ಸುಧಾರಣೆ ತರಲು ಮಕ್ಕಳ ಕೇಂದ್ರಿತ ಶಿಕ್ಷಣ ಪದ್ಧತಿ ಹಾಗೂ ಅನುತ್ತೀರ್ಣರಹಿತ ನೀತಿ ಜಾರಿಗೊಳಿಸಲಾಯಿತು. ನಿರಂತರ, ಸಮಗ್ರ ಮೌಲ್ಯಮಾಪನ ಪದ್ಧತಿಯ ಅಳವಡಿಕೆಯ ಮೂಲಕ ಪರೀಕ್ಷಾ ಸುಧಾರಣೆಗೂ ಮುಂದಡಿ ಇಡಲಾಯಿತು. ಆದರೆ ಕಲಿಕೆಯನ್ನು ಖಾತರಿಪಡಿಸಿಕೊಳ್ಳದೇ ಉತ್ತೀರ್ಣ ಮಾಡುವ ವ್ಯವಸ್ಥೆಯಿಂದ ಗುಣಮಟ್ಟದಲ್ಲಿ ಕುಸಿತಕ್ಕೆ ನಾಂದಿಯಾಗುವ ಜೊತೆಗೆ 10, 12ನೇ ತರಗತಿಗಳ ಬೋರ್ಡ್ ಪರೀಕ್ಷೆಗೆ ಒತ್ತಡ ಸೃಷ್ಟಿಯಾಯಿತು.

ಆಯಾ ತರಗತಿಗಳ ಪ್ರತೀ ವಿದ್ಯಾರ್ಥಿಯಲ್ಲಿ ನಿಗದಿತ ಕಲಿಕೆಯನ್ನು ಖಾತರಿಪಡಿಸಿಕೊಳ್ಳುವ ಪ್ರಕ್ರಿಯೆಯನ್ನು ಬಲಪಡಿಸುವಲ್ಲಿ ಯಶಸ್ವಿಯಾಗುವ ಹಂತ ತಲುಪುವ ಮೂಲಕ ಪರೀಕ್ಷಾಕೇಂದ್ರಿತ ವ್ಯವಸ್ಥೆಯಿಂದ ಹೊರಬರಬಹುದು.

ವಾಚಕರ ವಾಣಿ

ಅಸಂಬದ್ಧ ಗೀತೆಗಳಿಗೆ ಬೀಳಲಿ ಕತ್ತರಿ

ಕೆಟ್ಟ ಅಭಿರುಚಿಯ ಸಿನಿಮಾ ಗೀತೆಗಳ ಕುರಿತು ಸಾಹಿತಿ ಡಾ. ದೊಡ್ಡರಂಗೇಗೌಡ ಅವರು ಬರೆದಿರುವ ಲೇಖನ (ಸಂಗತ, ಮೇ 28) ತುಂಬ ಅರ್ಥಪೂರ್ಣವೂ ಔಚಿತ್ಯಪೂರ್ಣವೂ ಆಗಿದೆ. ನಮ್ಮ ಸಾಂಸ್ಕೃತಿಕ ರಾಯಭಾರಿಗಳೂ ಅಭಿರುಚಿಯ ನಿರ್ಮಾತೃಗಳೂ ಆಗಿರುವ ಗೀತ ರಚನಕಾರರು ತಮ್ಮ ಸಾಮಾಜಿಕ ಹಾಗೂ ಸಾಂಸ್ಕೃತಿಕ ಜವಾಬ್ದಾರಿಯನ್ನು ಅರಿತು ಉತ್ತಮ ಗೀತೆಗಳನ್ನು ರಚಿಸುವುದು ತುಂಬ ಅಗತ್ಯ. ಆದರೆ ಈಗ ಬರುತ್ತಿರುವ ಸಿನಿಮಾ ಗೀತೆಗಳು ಪ್ರಚೋದನಕಾರಿಯೂ ಹಿಂಸೆಯನ್ನು ವೈಭವೀಕರಿಸುವಂತೆಯೂ ಇದ್ದು, ಯುವಜನರ ಮೇಲೆ ದುಷ್ಪರಿಣಾಮವನ್ನು ಉಂಟು ಮಾಡುತ್ತವೆ.

ಸಿನಿಮಾ ಸೆನ್ಸಾರ್ ಮಂಡಳಿಯು ಅಶ್ಲೀಲ ದೃಶ್ಯಗಳಿಗೆ ಕತ್ತರಿ ಹಾಕುವಂತೆ ಅಶ್ಲೀಲ ಹಾಗೂ ಅಸಂಬದ್ಧವಾದ ಗೀತೆಗಳಿಗೂ ಕತ್ತರಿ ಹಾಕುವುದು ಒಳ್ಳೆಯದು. ಆಗ ಮಾತ್ರವೇ ಪ್ರಯೋಗದ ಹೆಸರಿನಲ್ಲಿ ಹಾಗೂ ಮನರಂಜನೆಯ ನೆಪದಲ್ಲಿ ಕೀಳು ಅಭಿರುಚಿಯ ಗೀತೆಗಳು ಪ್ರಸಾರವಾಗುವುದನ್ನು ತಡೆಗಟ್ಟಬಹುದು.

ಡಾ. ಲತಾ ರಾಜಶೇಖರ್, ಮೈಸೂರು

ಮಹಿಳಾ ಸಬಲೀಕರಣ: ಘೋಷಣೆಯ ಗೊಡ್ಡು ಮಂತ್ರ

ಡಾ. ಗೀತಾ ವಸಂತ ಅವರು ಬರೆದಿರುವ ಲೇಖನ (ಪ್ರ.ವಾ., ಮೇ 17) ಸಮಾಜದಲ್ಲಿ ಹೆಣ್ಣಿನ ಸ್ಥಾನದ ಮಹತ್ವದ ಕುರಿತು ಅರಿವು ಮೂಡಿಸುವಂತಿದೆ. ಪ್ರಜ್ಞಾವಂತಿಕೆಯನ್ನು ಹೀರಿ ಬೆಳೆಯಬಲ್ಲವಳಾದ ಮಹಿಳೆ, ಸಮಾಜದಲ್ಲಿ ಅಸ್ಮಿತೆಗಾಗಿ, ತನ್ನ ಹಕ್ಕುಗಳ ರಕ್ಷಣೆಗಾಗಿ ನಿರಂತರವಾಗಿ ಹೋರಾಟ ಮಾಡುತ್ತಿದ್ದಾಳೆ. ದೇಶ ಸ್ವಾತಂತ್ರ್ಯ ಪಡೆದು, ಸಂವಿಧಾನ ಜಾರಿಯಾಗಿ ಎಲ್ಲರಿಗೂ ಸಮಾನ ಅವಕಾಶ ಕೊಟ್ಟಿದ್ದರೂ ಅದರ ಅನುಷ್ಠಾನ ಮಾತ್ರ ಆಮೆಗತಿಯಲ್ಲಿದೆ. ಮಹಿಳಾ ಸಬಲೀಕರಣ ಬರೀ ಘೋಷಣೆಯ ಗೊಡ್ಡು ಮಂತ್ರವಾಗಿದೆ.

ಅನಾದಿ ಕಾಲದಿಂದಲೂ ಅನೇಕ ಸುಧಾರಕರು ಹೆಣ್ಣಿನ ಮೇಲಿನ ದೌರ್ಜನ್ಯಗಳನ್ನು ಖಂಡಿಸಿ ಸುಧಾರಣೆಯ ಹಾದಿ ತೋರಿದ್ದಾರೆ. ಆದರೆ ಅದರ ದಿಕ್ಕು ತಪ್ಪಿಸಿ, ಸಾಂಪ್ರದಾಯಿಕ ರೀತಿ ರಿವಾಜುಗಳ ಮೂಟೆ ಕಟ್ಟಿ ಮುನ್ನಡೆಸುವ ಹುನ್ನಾರ ಇನ್ನೂ ದೂರವಾಗಿಲ್ಲ. ಮಹನೀಯರ ಆದರ್ಶಗಳು ಬರೀ ಮಾತಿನ ಮಂತ್ರಗಳಾಗದೆ, ನಮ್ಮೆಲ್ಲರ ನಡೆನುಡಿಯ ಚೇತನವಾಗಬೇಕಿದೆ.

ಮಲಕಪ್ಪ ಇಂಗಳೇಶ್ವರ, ಧಾರವಾಡ

ರೊನಾಲ್ಡೊ ನಿರ್ಭೀತ ನಡೆ ಶುಭಸೂಚಕ

ಪೋರ್ಚುಗಲ್‌ನ ಫುಟ್‌ಬಾಲ್ ಆಟಗಾರ ಕ್ರಿಸ್ಟಿಯಾನೊ ರೊನಾಲ್ಡೊ ಅವರು ಸುದ್ದಿಗೋಷ್ಠಿಯಲ್ಲಿ ಟೇಬಲ್ ಮೇಲಿನ ತಂಪು ಪಾನೀಯದ ಬಾಟಲಿಗಳನ್ನು ಪಕ್ಕಕ್ಕೆ ತಳ್ಳಿ ನೀರಿನ ಬಾಟಲಿಯನ್ನು ಇಟ್ಟು 'ಆರೋಗ್ಯದಿಂದ ಇರಲು ನೀರನ್ನು ಕುಡಿಯಿರಿ' ಎಂಬ ಸಾರ್ವಕಾಲಿಕ ಸತ್ಯವನ್ನು ಹೇಳಿದ್ದು ವರದಿಯಾಗಿದೆ (ಪ್ರ.ವಾ., ಜೂನ್ 17). ಸೆಲೆಬ್ರಿಟಿಗಳು ಜನರ ಆರೋಗ್ಯವನ್ನು ಕಡೆಗಣಿಸಿ, ತಾವು ಬಳಸದ ವಸ್ತುಗಳ ಜಾಹೀರಾತುಗಳಲ್ಲಿ ಪಾಲ್ಗೊಂಡು, ಆ ವಸ್ತುಗಳಿಂದ ಆಗುವ ಕೆಟ್ಟ ಪರಿಣಾಮಗಳು ತಿಳಿದಿದ್ದರೂ ಅವುಗಳನ್ನು ಬಳಸುವಂತೆ ಅಭಿಮಾನಿಗಳಿಗೆ ಕರೆ ನೀಡುತ್ತಾರೆ. ಹೀಗಿರುವಾಗ, ತಮ್ಮ ಮಗನ ಉದಾಹರಣೆಯನ್ನೇ ತೆಗೆದುಕೊಂಡು, ಹಾನಿಕಾರಕ ಪಾನೀಯಗಳಿಂದ ದೂರವಿರಿ ಎಂದು ಜನರಿಗೆ ತಿಳಿಹೇಳಿ ಸಾಮಾಜಿಕ ಕಾಳಜಿ ತೋರಿದ ರೊನಾಲ್ಡೊ ಅವರು ಇತರ ಸೆಲೆಬ್ರಿಟಿಗಳಿಗೆ ಮಾದರಿ.

ತಂಪುಪಾನೀಯಗಳಲ್ಲಿ ಹಾನಿಕಾರಕ ರಾಸಾಯನಿಕಗಳು ಇರುವುದನ್ನು ಹಲವು ವಿಜ್ಞಾನಿಗಳು ಜಗಜ್ಜಾಹೀರುಗೊಳಿಸಿದ್ದರೂ, ಕೆಲವು ರೈತರು ಅವುಗಳನ್ನು ಕ್ರಿಮಿನಾಶಕವಾಗಿ ಬಳಸಿದ್ದು ತಿಳಿದಿದ್ದರೂ, ಜನರು ಅದರಲ್ಲೂ ಯುವಜನ ಅವುಗಳನ್ನು ಪ್ರತಿನಿತ್ಯ ಬಳಸಿ ಆರೋಗ್ಯ ಹಾಳು ಮಾಡಿಕೊಳ್ಳುತ್ತಿದ್ದಾರೆ. ಇಂತಹ ಸಂದರ್ಭದಲ್ಲಿ ರೊನಾಲ್ಡೊ ಅವರಂಥವರು ತಮ್ಮ ಜನಪರ ನಿಲುವನ್ನು ನಿರ್ಭೀತಿಯಿಂದ ಮಾಧ್ಯಮಗಳಲ್ಲಿ ವ್ಯಕ್ತಪಡಿಸಿರುವುದು, ತಡವಾದರೂ ಶುಭಸೂಚಕ. ಹಾಗೆಯೇ ಇತರ ಸೆಲೆಬ್ರಿಟಿಗಳು ಜನರ ಆರೋಗ್ಯಕ್ಕೆ ಮಾರಕವಾಗುವ ವಸ್ತುಗಳ ಬಗ್ಗೆ ಜಾಹೀರಾತು ನೀಡುವುದನ್ನು ಬಿಟ್ಟು, ಜನರ ಆರೋಗ್ಯಕ್ಕೆ, ಪರಿಸರಕ್ಕೆ ಪೂರಕವಾಗುವ ವಸ್ತುಗಳ ಬಗೆಗಿನ ಜಾಹೀರಾತುಗಳಲ್ಲಿ ಮಾತ್ರ ಕಾಣಿಸಿಕೊಂಡರೆ, ಅವರನ್ನು ಅನುಸರಿಸುವ ಜನರಿಗೂ ಒಳಿತಾಗುತ್ತದೆ, ಸಮಾಜಕ್ಕೂ ಒಳ್ಳೆಯ ಸಂದೇಶ ರವಾನಿಸಿದಂತೆ ಆಗುತ್ತದೆ.

ಡಾ. ಆನಂದ್ ಎನ್.ಎಲ್., ಅಜ್ಜಂಪುರ

ಶೋಭೆ ತಾರದ ನಾಯಕರ ನಡವಳಿಕೆ

ರಾಜ್ಯದ ಆಡಳಿತಾರೂಢ ಪಕ್ಷದಲ್ಲಿ 'ಮುಖ್ಯಮಂತ್ರಿ' ಕುರ್ಚಿಗಾಗಿ ನಡೆದಿರುವ ಮೇಲಾಟಕ್ಕೆ ಇತಿಶ್ರೀ ಹಾಡಲು, ಕೋವಿಡ್ ದುರಿತ ಕಾಲದಲ್ಲಿ ಬಿಜೆಪಿಯ ರಾಜ್ಯ ಉಸ್ತುವಾರಿ ಅರುಣ್ ಸಿಂಗ್ 'ಬಳೆಗಾರ ಚನ್ನಯ್ಯ'ನಂತೆ ಬೆಂಗಳೂರಿನ ಕುಮಾರಕೃಪಾಕ್ಕೆ ಮೊನ್ನೆ ಬಂದಿಳಿದರು. ಈ ಸಂದರ್ಭದಲ್ಲಿ ನೆರೆದಿದ್ದ ಸಚಿವರು, ಶಾಸಕರು, ಎಲ್ಲಕ್ಕಿಂತ ಹೆಚ್ಚಾಗಿ 'ಮುಖ್ಯಮಂತ್ರಿ' ಆಕಾಂಕ್ಷಿಗಳು ಕೋವಿಡ್ ನಿಯಮಗಳ ಬಗ್ಗೆ ತಿಳಿವಳಿಕೆ ಇಲ್ಲದವರಂತೆ ವರ್ತಿಸಿದ್ದನ್ನು ಮಾಧ್ಯಮಗಳಲ್ಲಿ ಕಂಡು ಆಶ್ಚರ್ಯವಾಯಿತು. ಕೋವಿಡ್ ಮಾರ್ಗಸೂಚಿಗಳನ್ನು ಹೊರಡಿಸಿದ್ದು ಇದೇ ನೀತಿಯ ಭೀತಿಯಿಲ್ಲದ ಸರ್ಕಾರವಲ್ಲವೇ? ಹಗಲಿನಲ್ಲಿ ಊರಿಗೆಲ್ಲ 'ಆಚಾರ' ಹೇಳುವ ಈ ಪ್ರಭುತ್ವ, ರಾತ್ರಿಯ ತೆರೆಮರೆಯಲ್ಲಿ 'ಬದನೆಕಾಯಿ' ತಿಂದು ತೇಗಿದಂತೆ ಅಂತರ ಪಾಲಿಸದೆ 'ಕುಮಾರಕೃಪಾ'ದಲ್ಲಿ ನೆರೆದಿದ್ದುದು ಸರಿಯೇ? ಕೋವಿಡ್ ಮಾರ್ಗಸೂಚಿಗಳನ್ನು ಪಾಲಿಸದ ಇವರ ಮೇಲೆ ಯಾರು ಪ್ರಕರಣ ದಾಖಲಿಸಬೇಕು? ಇವರ ಈ ನಡೆಯು 'ಅಧಿಕಾರದ ಲಾಲಸೆಗಾಗಿ ಜೀವದ ಆಸೆಯನ್ನೇ ಬಿಡಬೇಕು' ಎಂಬ ಸಂದೇಶವನ್ನು ಭವಿಷ್ಯದ ಯುವ ರಾಜಕಾರಣಿಗಳಿಗೆ ನೀಡುವಂತಿದೆ!

ಒಂದೆಡೆ, ನಾಡಿನಲ್ಲಿ ಬದುಕುವುದಕ್ಕಾಗಿ ಹೋರಾಟ ನಡೆಸುತ್ತಿರುವ ಜನರ ಆಕ್ರಂದನ, ಪ್ರೀತಿಪಾತ್ರರನ್ನು ಕಳೆದುಕೊಂಡ ಮುಗ್ಧ ಮಕ್ಕಳ ಕಣ್ಣೀರ ಕೋಡಿ. ಇನ್ನೊಂದೆಡೆ, ಸ್ವಾರ್ಥ ರಾಜಕಾರಣಕ್ಕಾಗಿ ಹಪಹಪಿ. ಕೊರೊನೋತ್ತರ ಜನರ ಸಂಕಟಗಳಿಗೆ ಸ್ಪಂದಿಸಬೇಕಾದ ಹೊತ್ತಿನಲ್ಲಿ ಪ್ರಮುಖ ನಾಯಕರು ಹೀಗೆ ವರ್ತಿಸುತ್ತಿರುವುದು ಶೋಭೆ ತರುವಂತಹದ್ದಲ್ಲ.

ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯ ಇಂದಿನಿಂದ; ಭಾರತ–ನ್ಯೂಜಿಲೆಂಡ್ ಹಣಾಹಣಿ

ಕೊರೊನಾ ನೆರಳಲ್ಲಿ ಟೆಸ್ಟ್ ಮುಕುಟಕ್ಕೆ ಹೋರಾಟ

• ಗಿರೀಶ ದೊಡ್ಡಮನಿ

ಸುಮಾರು ಒಂದು ಶತಮಾನಕ್ಕೂ ಹೆಚ್ಚು ಕಾಲದಿಂದ 'ಅಸಾಧ್ಯ'ವೆಂದೇ ಹೇಳಲಾಗುತ್ತಿದ್ದ ಕಾರ್ಯವೊಂದು ಸಾಧ್ಯವಾಗುವ ದಿನ ಇಂದು.

ಶುಕ್ರವಾರ ಸೌತಾಂಪ್ಟನ್‌ನ ಏಜಿಸ್ ಬಾಲ್ ಕ್ರೀಡಾಂಗಣದಲ್ಲಿ ನಡೆಯಲಿರುವ ಚೊಚ್ಚಲ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯವು 144 ವರ್ಷಗಳ ಇತಿಹಾಸವಿರುವ ಟೆಸ್ಟ್ ಕ್ರಿಕೆಟ್‌ಗೆ ಕಿರೀಟಪ್ರಾಯವಾಗಲಿದೆ.

ಕ್ರಿಕೆಟ್ ಆರಂಭವಾಗಿದ್ದೇ ಟೆಸ್ಟ್ ಮಾದರಿಯಿಂದ. ಆದರೆ ನಂತರ ಪ್ರವರ್ಧಮಾನಕ್ಕೆ ಬಂದ ಏಕದಿನ ಮತ್ತು ಟ್ವೆಂಟಿ–20 ಕ್ರಿಕೆಟ್ ಮಾದರಿಗಳಲ್ಲಿ ವಿಶ್ವಕಪ್ ಟೂರ್ನಿಗಳು ನಡೆದಿವೆ. ಏಕದಿನ ಕ್ರಿಕೆಟ್‌ಗೆ 1975ರಲ್ಲಿ ಮತ್ತು ಚುಟುಕು ಕ್ರಿಕೆಟ್‌ಗೆ 2007ರಲ್ಲಿ ವಿಶ್ವಕಪ್ ಟೂರ್ನಿಗಳು ಆರಂಭವಾದವು. ಆದರೆ, ಐದು ದಿನಗಳ ಮಾದರಿಯಲ್ಲಿ 10–12 ತಂಡಗಳನ್ನು ಒಂದೇ ವೇದಿಕೆಗೆ ತಂದು ವಿಶ್ವಕಪ್ ಟೂರ್ನಿ ಆಯೋಜಿಸುವ ಚಿಂತನೆಗಳು ನಡೆದವಾದರೂ ಸಾಕಾರಗೊಳ್ಳಲಿಲ್ಲ. ದೀರ್ಘ ಮಾದರಿಯೇ ಅದಕ್ಕೆ ಅಡ್ಡಿಯಾಯಿತು. ಆದರೆ 2017ರಲ್ಲಿ ಎರಡು ವರ್ಷಗಳ ದೀರ್ಘ ಅವಧಿಯ ವಿಶ್ವ ಚಾಂಪಿಯನ್‌ಷಿಪ್‌ಗೆ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಅಸ್ತು ಎಂದಿತು. ಈ ಅವಧಿಯಲ್ಲಿ ನಡೆದ ದ್ವಿಪಕ್ಷೀಯ ಟೆಸ್ಟ್ ಸರಣಿಗಳನ್ನೇ ವಿಶ್ವಕಪ್ ಫೈನಲ್‌ಗೆ ಮಾನದಂಡವಾಗಿ ನಿಗದಿಪಡಿಸಲಾಯಿತು. ಅದಕ್ಕೆ ತಕ್ಕಂತೆ ವೇಳಾಪಟ್ಟಿಯೂ ಸಿದ್ಧವಾಯಿತು.

ಎಲ್ಲವೂ ಸಾಂಗವಾಗಿ ಹೊರಟಿದ್ದ ಸಮಯದಲ್ಲಿ ಹೋದವರ್ಷವಕ್ಕರಿಸಿದಕೊರೊನಾಕಂಟಕದಿಂದಾಗಿ ಯೋಜನೆ ಏರುಪೇರಾಯಿತು. ಕೆಲವು ಸರಣಿಗಳನ್ನು ರದ್ದು ಮಾಡಬೇಕಾಯಿತು. ಪಾಯಿಂಟ್ಸ್ ಲೆಕ್ಕಾಚಾರ ಪದ್ಧತಿಯನ್ನು ಬದಲಿಸಲಾಯಿತು. ಅದರಿಂದಾಗಿ ಭಾರತ, ನ್ಯೂಜಿಲೆಂಡ್, ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾದಂತಹ ಘಟಾನುಘಟಿ ತಂಡಗಳು ಫೈನಲ್ ಪ್ರವೇಶಕ್ಕಾಗಿ ಪರದಾಡಿದವು. ಆದರೆ, ಅತ್ಯಂತ ಕಠಿಣ ಹಾದಿಯನ್ನು ಕ್ರಮಿಸಿದ ಭಾರತ ಪ್ರಶಸ್ತಿಯ ಹೊಸ್ತಿಲಲ್ಲಿ ಬಂದು ನಿಂತಿದೆ. 'ಕೂಲ್ ಕ್ಯಾಪ್ಟನ್' ಕೇನ್ ವಿಲಿಯಮ್ಸನ್ ಬಳಗವು ಭಾರತಕ್ಕಿಂತ ಮುಂಚೆಯೇ ಅರ್ಹತೆ ಗಿಟ್ಟಿಸಿತ್ತು.

ಕ್ರಿಕೆಟ್ ಜನಕರ ನಾಡಿನಲ್ಲಿ ಪಾರುಪತ್ಯ!: ಕ್ರಿಕೆಟ್ ಜನಿಸಿದ ಇಂಗ್ಲೆಂಡ್‌ನಲ್ಲಿ ಈ ಫೈನಲ್ ನಡೆಯುತ್ತಿದೆ. ಆದರೆ, ಇಂಗ್ಲೆಂಡ್ ತಂಡ ಆಡುತ್ತಿಲ್ಲ. 1983ರಲ್ಲಿ ಏಕದಿನ ವಿಶ್ವಕಪ್ ಜಯಿಸಿದ ನೆಲದಲ್ಲಿ ಭಾರತಕ್ಕೆ ಮತ್ತೊಂದು ಇತಿಹಾಸ ಬರೆಯುವ ಅವಕಾಶ ಒದಗಿಬಂದಿದೆ. 2019ರಲ್ಲಿ ಏಕದಿನ ವಿಶ್ವಕಪ್ ಟೂರ್ನಿಯಲ್ಲಿ ವೀರೋಚಿತವಾಗಿ ಹೋರಾಡಿದರೂ ಪ್ರಶಸ್ತಿ ದಕ್ಕದ ಹತಾಶೆ ಅನುಭವಿಸಿದ್ದ ಕಿವೀಸ್ ಬಳಗ ಎದುರಾಳಿಯಾಗಿರುವುದು ವಿಶೇಷ. ಎರಡು ವರ್ಷಗಳ ಹಿಂದಿನ ಆ ಟೂರ್ನಿಯಲ್ಲಿ ಭಾರತವು ಸೆಮಿಫೈನಲ್‌ನಲ್ಲಿ ಸೋತಿದ್ದು ಕೂಡ ಇದೇ 'ಬ್ಲ್ಯಾಕ್‌ಕ್ಯಾಪ್ಸ್' ಬಳಗದ ಎದುರು.

ವಿರಾಟ್ ಕೊಹ್ಲಿ ನಾಯಕತ್ವದ ಬಳಗಕ್ಕೆ ಇಲ್ಲಿಯವರೆಗಿನ ಹಾದಿಯು ಹೂವಿನ ಹಾಸಿಗೆಯೇನಾಗಿರಲಿಲ್ಲ. ಆದರೆ ಕಳೆದ ಏಳು ತಿಂಗಳುಗಳಲ್ಲಿ ಭಾರತ ತಂಡವು ಟೆಸ್ಟ್ ಕ್ರಿಕೆಟ್‌ನಲ್ಲಿ ಮಾಡಿರುವ ಸಾಧನೆಯನ್ನು ಮೆಚ್ಚಿ ಕೊಂಡಾಡದವರೇ ಇಲ್ಲ. ಅದರಲ್ಲೂ ಭಾರತದ ಬೆಂಚ್ ಶಕ್ತಿಯ ಪ್ರತಾಪಕ್ಕೆ ಎಲ್ಲರೂ ಬೆಚ್ಚಿಬಿದ್ದಿದ್ದಾರೆ. ಕ್ರಿಕೆಟ್ ರಂಗದಲ್ಲಿ ತಾವೇ ದೊಡ್ಡವರು ಎಂದುಕೊಂಡಿದ್ದ ಆಸ್ಟ್ರೇಲಿಯಾ ತಂಡವನ್ನು ಅದರ ನೆಲದಲ್ಲಿಯೇ ಸದೆಬಡಿದ ದಾಖಲೆ ಬರೆದದ್ದು ಇದೇ ಅವಧಿಯಲ್ಲಿ. ಹೋದ ನವೆಂಬರ್–ಡಿಸೆಂಬರ್‌ನಲ್ಲಿ ಆಸ್ಟ್ರೇಲಿಯಾದ ಸ್ಲೆಡ್ಜಿಂಗ್ ಮತ್ತು ಬಾಡಿಲೈನ್ ಬೌಲಿಂಗ್‌ಗೆ ಎದೆಕೊಟ್ಟು ಆಡಿದ ಯುವಪಡೆಯು ಇತಿಹಾಸವನ್ನೇ ಬರೆಯಿತು. ವಿರಾಟ್ ಕೊಹ್ಲಿ ಅನುಪಸ್ಥಿತಿಯಲ್ಲಿಯೂ ಸರಣಿ ಗೆದ್ದು ತಂಡವು ಮೆರೆಯಿತು. ಆ ಸರಣಿಯ ಮೊದಲ ಪಂದ್ಯದಲ್ಲಿ ಭಾರತ ತಂಡವು ಹೀನಾಯ ಸೋಲು ಕಂಡಿತ್ತು. ಆಗಲೇ ಫೈನಲ್ ಆಸೆ ಕೈತಪ್ಪುವ ಅತಂಕ ಮೂಡಿತ್ತು. ಆದರೆ, ಅನುಭವವಿಲ್ಲದ ಹುಡುಗರ ದಂಡು ಆಸೆಯನ್ನು ಜೀವಂತವಾಗಿ ಉಳಿಸಿತು.

ಭಾರತದ ಆತಿಥ್ಯದಲ್ಲಿ ನಡೆದ ಇಂಗ್ಲೆಂಡ್ ವಿರುದ್ಧದ ಸರಣಿಯಲ್ಲಿಯೂ ಏಳು, ಬೀಳುಗಳ ನಡುವೆಯೂ ವಿರಾಟ್ ಬಳಗವು ಸರಣಿ ಗೆದ್ದು ಫೈನಲ್‌ಗೆ ಲಗ್ಗೆ ಇಟ್ಟಿತು. ಈ ಹಾದಿಯಲ್ಲಿ ರಿಷಭ್ ಪಂತ್, ಶುಭಮನ್ ಗಿಲ್, ಅಕ್ಷರ್ ಪಟೇಲ್, ಶಾರ್ದೂಲ್ ಠಾಕೂರ್, ಮೊಹಮ್ಮದ್ ಸಿರಾಜ್, ವಾಷಿಂಗ್ಟನ್ ಸುಂದರ್, ಹನುಮವಿಹಾರಿ ಅವರಂತಹ ಆಟಗಾರರ ಪ್ರತಿಭೆ ಕಣ್ಣು ಕೋರೈಸಿತು. ಚೇತೇಶ್ವರ್ ಪೂಜಾರ ಎಂಬ ಗೋಡೆ ಮತ್ತಷ್ಟು ಬಲಿಷ್ಠವಾಯಿತು. ರವೀಂದ್ರ ಜಡೇಜ ಮತ್ತು ಆರ್. ಅಶ್ವಿನ್ ಅಂಥವರ ಆಲ್‌ರೌಂಡ್ ಸಾಮರ್ಥ್ಯ ಮತ್ತಷ್ಟು ಹೆಚ್ಚಿತು.

ಈ ಎಲ್ಲ ಸವಿನೆನಪುಗಳೇ ಈಗ ವಿರಾಟ್ ಎದೆಯಲ್ಲಿ ಆತ್ಮವಿಶ್ವಾಸದ ಪ್ರವಾಹವೇ ಹರಿಯುವಂತೆ ಮಾಡಿವೆ. ಈ ಪಂದ್ಯಕ್ಕೂ ಮುನ್ನ ಹೆಚ್ಚು ಅಭ್ಯಾಸಕ್ಕೆ ಅವಕಾಶ ಸಿಕ್ಕಿಲ್ಲ. ಸರಣಿಗಳಲ್ಲಿ ಆಡಲು ಸಾಧ್ಯವಾಗಿಲ್ಲ. ಕೊರೊನಾ ಎರಡನೇ ಅಲೆಯ ಅಬ್ಬರಕ್ಕೆ ಸಾವು, ನೋವುಗಳ ಸರಮಾಲೆಯನ್ನೇ ಕಂಡ ಭಾರತದ ಅಭಿಮಾನಿಗಳ ಹೃದಯಕ್ಕೆ ವಿಶ್ವಕಪ್ ಗೆಲುವಿನ ಸಿಹಿ ಸಾಂತ್ವನ ಹೇಳುವ 'ಟೆಸ್ಟ್' ವಿರಾಟ್ ಬಳಗಕ್ಕಿದೆ.

ಸರಣಿಯಲ್ಲಿ 1000ಕ್ಕೂ ಹೆಚ್ಚು ರನ್ ಸಾಧನೆ

ಬ್ಯಾಟ್ಸ್‌ಮನ್	ದೇಶ	ಪಂದ್ಯ	ರನ್	ಗರಿಷ್ಠ	ಶತಕ	ಅರ್ಧಶತಕ
ಮಾರ್ನಸ್ ಲಾಬುಶೇನ್	ಆಸ್ಟ್ರೇಲಿಯಾ	13	1,675	215	5	9
ಜೋ ರೂಟ್	ಇಂಗ್ಲೆಂಡ್	20	1,660	228	3	8
ಸ್ಟೀವ್ ಸ್ಮಿತ್	ಆಸ್ಟ್ರೇಲಿಯಾ	13	1,341	211	4	7
ಬೆನ್ ಸ್ಟೋಕ್ಸ್	ಇಂಗ್ಲೆಂಡ್	17	1,334	176	4	6
ಅಜಿಂಕ್ಯ ರಹಾನೆ	ಭಾರತ	17	1,095	115	3	6
ರೋಹಿತ್ ಶರ್ಮಾ	ಭಾರತ	11	1,030	212	4	2



ಸೌತಾಂಪ್ಟನ್‌ನಲ್ಲಿ ಶುಕ್ರವಾರ ಆರಂಭವಾಗಲಿರುವ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯದಲ್ಲಿ ಕಣಕ್ಕಿಳಿಯಲಿರುವ ಭಾರತ ತಂಡದ ಚಿತ್ರವನ್ನು ಬಿಸಿಸಿಐ ಟ್ವೀಟ್ ಮಾಡಿದೆ –ಪಿಟಿಐ ಚಿತ್ರ

ಇಂಗ್ಲೆಂಡ್ ವಾತಾವರಣಕ್ಕೆ ಹೊಂದಿಕೊಳ್ಳಲು ನ್ಯೂಜಿಲೆಂಡ್‌ಗೆ ಸುಲಭ. ಅಲ್ಲದೇ ತಂಡದ ಎಲ್ಲ ಆಟಗಾರರು ಶಿಸ್ತಿನಿಂದ ಇದ್ದಾರೆ. ಆದ್ದರಿಂದ ಡಬ್ಲ್ಯುಟಿಸಿ ಫೈನಲ್‌ನಲ್ಲಿ ಕಿವೀಸ್ ಬಳಗದ ಗೆಲುವು ಖಚಿತ

ಮೈಕೆಲ್ ವಾನ್
ಇಂಗ್ಲೆಂಡ್ ಮಾಜಿ ಕ್ರಿಕೆಟಿಗ

ರೋಹಿತ್ ಶರ್ಮಾ ಮತ್ತು ಶುಭಮನ್ ಗಿಲ್ ಆರಂಭದ 20 ಓವರ್‌ಗಳನ್ನು ಆಡಬೇಕು. ಆ ಅಡಿಪಾಯದ ಮೇಲೆ ಪೂಜಾರ, ಕೊಹ್ಲಿ, ರಹಾನೆ, ಹನುಮವಿಹಾರಿ ಮತ್ತು ಪಂತ್ ರನ್‌ಸೌಧ ಕಟ್ಟಬಲ್ಲರು. ಇದು ಗೆಲುವಿಗೆ ಸೋಪಾನವಾಗಲಿದೆ

ಸೌರವ್ ಗಂಗೂಲಿ, ಬಿಸಿಸಿಐ ಅಧ್ಯಕ್ಷ

ವಿರಾಟ್ ಕೊಹ್ಲಿ ಟೆಸ್ಟ್ ಸಾಧನೆ

ಪಂದ್ಯ	ಇನಿಂಗ್ಸ್	ರನ್	ಗರಿಷ್ಠ	ಶತಕ	ಅರ್ಧಶತಕ	ಸರಾಸರಿ
91	153	7,490	254*	27	25	52.37

ನಾಯಕನಾಗಿ ವಿರಾಟ್ ಕೊಹ್ಲಿ ಸಾಧನೆ

ಅವಧಿ	ಪಂದ್ಯ	ಜಯ	ಸೋಲು	ಡ್ರಾ
2014-21	60	36	14	10



ಕೈಲ್ ಜೆಮಿಸನ್ ಮತ್ತು ಟಿಮ್ ಸೌಥಿ

ಅಗ್ರ ಐದು ತಂಡಗಳ ಸರಣಿ ಸಾಧನೆ

ತಂಡ	ಸರಣಿ	ಜಯ
ಭಾರತ	6	5
ನ್ಯೂಜಿಲೆಂಡ್	5	3
ಇಂಗ್ಲೆಂಡ್	6	4
ಆಸ್ಟ್ರೇಲಿಯಾ	4	2
ಪಾಕಿಸ್ತಾನ	6	3

ಗರಿಷ್ಠ ಮೊತ್ತ ಗಳಿಸಿದ ತಂಡಗಳು

ದೇಶ	ರನ್	ಎದುರಾಳಿ
ನ್ಯೂಜಿಲೆಂಡ್	6ಕ್ಕೆ 659	ಪಾಕಿಸ್ತಾನ
ಶ್ರೀಲಂಕಾ	8ಕ್ಕೆ 648	ಬಾಂಗ್ಲಾದೇಶ
ದಕ್ಷಿಣ ಆಫ್ರಿಕಾ	621	ಶ್ರೀಲಂಕಾ
ಭಾರತ	5ಕ್ಕೆ 601	ದಕ್ಷಿಣ ಆಫ್ರಿಕಾ
ಆಸ್ಟ್ರೇಲಿಯಾ	3ಕ್ಕೆ 589	ಪಾಕಿಸ್ತಾನ

ಹೆಚ್ಚು ವಿಕೆಟ್ ಗಳಿಸಿದವರು

ಬೌಲರ್	ದೇಶ	ಪಂದ್ಯ	ವಿಕೆಟ್	ಶ್ರೇಷ್ಠ
ಪ್ಯಾಟ್ ಕಮಿನ್ಸ್	ಆಸ್ಟ್ರೇಲಿಯಾ	14	70	28ಕ್ಕೆ 5
ಸ್ಟುವರ್ಟ್ ಬ್ರಾಡ್	ಇಂಗ್ಲೆಂಡ್	17	69	31ಕ್ಕೆ 6
ಆರ್.ಅಶ್ವಿನ್	ಭಾರತ	13	67	145ಕ್ಕೆ 7
ನೇಥನ್ ಲಯನ್	ಆಸ್ಟ್ರೇಲಿಯಾ	14	56	49ಕ್ಕೆ 6
ಟಿಮ್ ಸೌಥಿ	ನ್ಯೂಜಿಲೆಂಡ್	10	51	32ಕ್ಕೆ 5

ಗಾಜಿಯಾಬಾದ್ ಹಲ್ಲೆ ಪ್ರಕರಣ

ಟ್ವಿಟರ್ ಎಂ.ಡಿ., ಸ್ವರಾ ಮೇಲೆ ದೂರು

ಪ್ರಜಾವಾಣಿ ವಾರ್ತೆ



ಸ್ವರಾ

ನವದೆಹಲಿ: ವೃದ್ಧ ಮುಸ್ಲಿಂ ವ್ಯಕ್ತಿಯ ಮೇಲೆ ಹಲ್ಲೆ ನಡೆಸಿದ ಬಗ್ಗೆ ಟ್ವಿಟರ್‌ನಲ್ಲಿ ಮಾಡಿದ ಪೋಸ್ಟ್‌ಗಳಿಗೆ ಸಂಬಂಧಿಸಿದಂತೆ ನಟಿ ಸ್ವರಾ ಭಾಸ್ಕರ್ ಹಾಗೂ ಟ್ವಿಟರ್ ಇಂಡಿಯಾ ವ್ಯವಸ್ಥಾಪಕ ನಿರ್ದೇಶಕ ಮನೀಶ್ ಮಹೇಶ್ವರಿ ಮತ್ತು ಇತರರ ವಿರುದ್ಧ ದೆಹಲಿ ಪೊಲೀಸರಿಗೆ ದೂರು ನೀಡಲಾಗಿದೆ.

ತಿಲಕ್ ಮಾರ್ಗ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಬಗ್ಗೆ ತನಿಖೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ಹೇಳಿದ್ದರೂ ಇಲ್ಲಿಯವರೆಗೆ ಯಾವುದೇ ಎಫ್‌ಐಆರ್ ದಾಖಲಾಗಿಲ್ಲ.

ಕೋಮು ಸಂಘರ್ಷ ಪ್ರಚೋದಿಸುವ ಉದ್ದೇಶದಿಂದ ಅಬ್ದುಲ್ ಸಮದ್ ಅವರ ವಿಡಿಯೊವನ್ನು ಹಂಚಿಕೊಳ್ಳಲಾಗಿದೆ ಎಂದು ಆರೋಪಿಸಿ ಉತ್ತರ ಪ್ರದೇಶ ಪೊಲೀಸರು ಟ್ವಿಟರ್, ದಿ ವೈರ್, ಪತ್ರಕರ್ತರು ಮತ್ತು ಕಾಂಗ್ರೆಸ್ ಮುಖಂಡರ ವಿರುದ್ಧ ಪ್ರಕರಣ ದಾಖಲಿಸಿಕೊಂಡ ಬೆನ್ನಲ್ಲೇ ಈ ದೂರು ದಾಖಲಾಗಿದೆ.

ಜೂನ್ 7ರಂದು ದಾಖಲಾದ ಎಫ್‌ಐಆರ್ ಪ್ರಕಾರ, ಜೈ ಶ್ರೀರಾಮ್ ಎಂದು ಘೋಷಣೆ ಕೂಗಲು ಅಥವಾ ಗಡ್ಡವನ್ನು ಕತ್ತರಿಸಲು ತನಗೆ ಒತ್ತಾಯಪಡಿಸಿ-ಲ್ಲ ಎಂದು ವೃದ್ಧ ಹೇಳಿದ್ದಾರೆ ಎಂದು ಗಾಜಿಯಾಬಾದ್ ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ಅಮಿತ್ ಪಾಠಕ್ ಹೇಳಿದ್ದಾರೆ.

ಮಮತಾ ಖಂಡನೆ



ಕೋಲ್ಕತ್ತ (ಪಿಟಿಐ): ಟ್ವಿಟರ್ ಸಂಸ್ಥೆಯ ಮೇಲೆ ಪ್ರಭಾವ ಬೀರಲು ನಡೆಸಿದ ಯತ್ನ ವಿಫಲವಾಗಿದೆ, ಹಾಗಾಗಿ ಅದನ್ನು ದಮನಿಸಲು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಯತ್ನಿಸುತ್ತಿದೆ ಎಂದು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಾಗ್ದಾಳಿ ನಡೆಸಿದ್ದಾರೆ.

'ತಮ್ಮ ಸರ್ಕಾರದ ಜೊತೆಗೂ ಕೇಂದ್ರ ಸರ್ಕಾರ ಹೀಗೆಯೇ ನಡೆದುಕೊಂಡಿತು. ಅವರಿಗೆ ನನ್ನನ್ನು ಏನೂ ಮಾಡಲು ಆಗಲಿಲ್ಲ. ಯಾರನ್ನು ನಿಗ್ರಹಿಸಲು ಸಾಧ್ಯವಿಲ್ಲವೂ ಅವರ ಜೊತೆಗೆಲ್ಲಾ ಕೇಂದ್ರ ಹೀಗೆ ನಡೆದುಕೊಳ್ಳುತ್ತದೆ' ಎಂದು ಅವರು ಆರೋಪಿಸಿದ್ದಾರೆ.

ಮಾಹಿತಿ ತಂತ್ರಜ್ಞಾನ ನಿಯಮಗಳನ್ನು ಪಾಲಿಸದಿರುವುದು ಮತ್ತು ಹೊಸ ಮಾರ್ಗಸೂಚಿಗಳ ಅನ್ವಯ ಸಿಬ್ಬಂದಿ ನೇಮಿಸುವಲ್ಲಿ ವಿಫಲವಾದ ಕಾರಣ ಟ್ವಿಟರ್ ಸಂಸ್ಥೆಯು ಭಾರತದಲ್ಲಿ ಪಡೆದಿದ್ದ ರಕ್ಷಣೆಯನ್ನು ಕಳೆದುಕೊಂಡಿದೆ. ಟ್ವಿಟರ್ ವೇದಿಕೆಯಲ್ಲಿ ಮೂರನೇ ವ್ಯಕ್ತಿ ಮಾಡುವ ಅಕ್ರಮ ಚಟುವಟಿಕೆಗಳಿಗೆ ಭಾರತೀಯ ದಂಡ ಸಂಹಿತೆಯ ಪ್ರಕಾರ ಟ್ವಿಟರ್ ಸಂಸ್ಥೆಯು ಜವಾಬ್ದಾರವಾಗಿರುತ್ತದೆ.

ಎಸ್‌ಪಿ ಕಾರ್ಯಕರ್ತನ ವಿರುದ್ಧ ಪ್ರಕರಣ

ಗಾಜಿಯಾಬಾದ್ (ಪಿಟಿಐ): ವೃದ್ಧ ಮುಸ್ಲಿಂ ವ್ಯಕ್ತಿಯೊಬ್ಬರ ಮೇಲೆ ಕೆಲವು ಯುವಕರು ಹಲ್ಲೆ ನಡೆಸಿದ ವಿಡಿಯೊ ಪ್ರಸರಣ ಸಂಬಂಧ ಗಾಜಿಯಾಬಾದ್ ಪೊಲೀಸರು ಸಮಾಜವಾದಿ ಪಕ್ಷದ ಕಾರ್ಯಕರ್ತರೊಬ್ಬರ ವಿರುದ್ಧ ಪ್ರಕರಣ ದಾಖಲಿಸಿದ್ದಾರೆ.

ದಾರಿತಪ್ಪಿಸುವ ಈ ವಿಡಿಯೊದ ಸತ್ಯಾಸತ್ಯತೆ ಪರಿಶೀಲಿಸಲು ಪ್ರಯತ್ನಿಸದೇ ಫೇಸ್‌ಬುಕ್ ಸಂಸ್ಥೆಯು ಅದನ್ನು ಪ್ರಸಾರ ಮಾಡಲು ಅವಕಾಶ ಮಾಡಿಕೊಟ್ಟಿದೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ. ಆದರೆ ಫೇಸ್‌ಬುಕ್ ಅನ್ನು ಈ ಪ್ರಕರಣದಲ್ಲಿ ಆರೋಪಿ ಎಂದು ಉಲ್ಲೇಖಿಸಿಲ್ಲ.

ವಿಡಿಯೊವನ್ನು ಸಾಮಾಜಿಕ ಮಾಧ್ಯಮದಲ್ಲಿ ಪ್ರಸಾರ ಮಾಡುವ ಮೂಲಕ ಅದಕ್ಕೆ ಕೋಮು ಬಣ್ಣ ನೀಡಲು ಯತ್ನಿಸಿದ ಆರೋಪದ ಮೇಲೆ ಉಮ್ಮೆದ್ ಪೆಹೆಲ್ವಾನ್ ವಿರುದ್ಧ ದ್ವೇಷ ಹುಟ್ಟುಹಾಕಿದ ಮತ್ತು ಶಾಂತಿ ಕದಡಿದ ಆರೋಪ ಹೊರಿಸಲಾಗಿದೆ ಎಂದು ಎಫ್‌ಐಆರ್ ಉಲ್ಲೇಖಿಸಿದೆ.

ಎಸ್‌ಪಿ ಸರ್ಕಾರದ ಅವಧಿಯಲ್ಲಿ ಉಮ್ಮೆದ್ ಅವರು ಗಾಜಿಯಾಬಾದ್ ಅಭಿವೃದ್ಧಿ ಪ್ರಾಧಿಕಾರದ (ಜಿಡಿಎ) ಸದಸ್ಯರಾಗಿದ್ದರು. ಈಗಲೂ ಅವರು ಪಕ್ಷದ ಕಾರ್ಯಕರ್ತರಾಗಿದ್ದಾರೆ ಎಂದು ಪಕ್ಷದ ಪದಾಧಿಕಾರಿಯೊಬ್ಬರು ತಿಳಿಸಿದ್ದಾರೆ. ಟ್ವಿಟರ್, ಸುದ್ದಿ ವೆಬ್‌ಸೈಟ್, ಕೆಲವು ಪತ್ರಕರ್ತರು ಮತ್ತು ಕಾಂಗ್ರೆಸ್ ಮುಖಂಡರ ವಿರುದ್ಧ ಗಾಜಿಯಾಬಾದ್ ಪೊಲೀಸರು ಪ್ರಕರಣ ದಾಖಲಿಸಿದ ಮರುದಿನ ಲೋನಿ ಬಾರ್ಡರ್ ಪೊಲೀಸ್ ಠಾಣೆಯಲ್ಲಿ ಈ ಪ್ರಕರಣ ದಾಖಲಾಗಿದೆ.

ಲಾರ್ಡ್ಸ್‌ನಿಂದ ಸೌತಾಂಪ್ಟನ್‌ಗೆ

ವಿಶ್ವ ಚಾಂಪಿಯನ್‌ಷಿಪ್ ಫೈನಲ್ ಪಂದ್ಯವೊಂದು ಬಯೋಬಬಲ್‌ನಲ್ಲಿ (ಜೀವ ಸುರಕ್ಷತಾ ನಿಯಮ) ನಡೆಯುತ್ತಿರುವುದು ಇದೇ ಮೊದಲು.

2020ರ ಜುಲೈನಲ್ಲಿ ಮೊದಲ ಬಾರಿಗೆ ಬಯೋಬಬಲ್ ಟೆಸ್ಟ್ ನಡೆದ ತಾಣವೂ ಆಗಿರುವ ಸೌತಾಂಪ್ಟನ್‌ನಲ್ಲಿಯೇ ಈ ಐತಿಹಾಸಿಕ ಫೈನಲ್ ನಡೆಯುತ್ತಿದೆ. ವಿಶ್ವ ಚಾಂಪಿಯನ್‌ಷಿಪ್ ವೇಳಾಪಟ್ಟಿ ರಚಿಸಿದಾಗ ಫೈನಲ್ ಪಂದ್ಯಕ್ಕೆ ಲಾರ್ಡ್ಸ್ ಕ್ರೀಡಾಂಗಣವನ್ನು ನಿಗದಿ ಮಾಡಲಾಗಿತ್ತು.


ಆದರೆ ಈಚೆಗಷ್ಟೇ ಬಯೋಬಬಲ್ ಕಾರಣಗಳಿಗಾಗಿ ಸೌತಾಂಪ್ಟನ್‌ಗೆ ಸ್ಥಳಾಂತರಿಸಲಾಯಿತು. ಕ್ರೀಡಾಂಗಣಕ್ಕೆ ಹೊಂದಿಕೊಂಡಂತಿರುವ ಹೋಟೆಲ್‌ನಲ್ಲಿ ಉಭಯ ತಂಡಗಳ ಆಟಗಾರರಿಗೆ ವಸತಿ ವ್ಯವಸ್ಥೆ ಮಾಡಲಾಗಿದೆ. ಭಾರತ ತಂಡದ ಆಟಗಾರರು ಜೂನ್ 2ರಿಂದಲೇ ಇಲ್ಲಿ ಬೀಡುಬಿಟ್ಟಿದ್ದಾರೆ. ಕಡ್ಡಾಯ ಕ್ವಾರಂಟೈನ್ ಪೂರೈಸಿದ್ದಾರೆ. ಕಳೆದ ಹದಿನೈದು ದಿನಗಳಲ್ಲಿ ಐದು ಬಾರಿ ಕೋವಿಡ್ ಪರೀಕ್ಷೆಗೂ ಒಳಗಾಗಿದ್ದಾರೆ.

ಮೇ ತಿಂಗಳದಲ್ಲಿ ಐಪಿಎಲ್ ಸ್ಥಗಿತಗೊಂಡಾಗ ನ್ಯೂಜಿಲೆಂಡ್ ಆಟಗಾರರು ಇಂಗ್ಲೆಂಡ್‌ಗೆ ತೆರಳಿದ್ದರು. ಈಚೆಗೆ ಇಂಗ್ಲೆಂಡ್ ವಿರುದ್ಧ ಎರಡು ಪಂದ್ಯಗಳ ಸರಣಿಯಲ್ಲಿ 1–0 ಜಯವನ್ನೂ ಕಿವೀಸ್ ಗಳಿಸಿತ್ತು.



ನ್ಯೂಜಿಲೆಂಡ್‌ನ ಟ್ರೆಂಟ್ ಬೌಲ್ಟ್

ಗುಂಡಣ್ಣ



ದಿನ ಭವಿಷ್ಯ

ಶುಕ್ರವಾರ ಜೂನ್ 18, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ಜ್ಯೇಷ್ಠ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಮೃಗಶಿರ ಅಷ್ಟಮೀ ಗಂ. 25-17 (ಹ. 4-08) ಶುಕ್ರವಾರ ನಿತ್ಯ ನಕ್ಷತ್ರ ಉತ್ತರ ಫಲ್ಗುಣೀ ಗಂ. 29-45 (ಸಾ. 5-56) ವ್ಯತೀಪಾತ ನಾಮ ಯೋಗ ಗಂ. 44-24 ಬವ ಕರಣ ಗಂ. 25-17 ವಿಷ ಗಂ. 49-53 ಅಮೃತ ಗಂ. 11-45: ರಾಹುಕಾಲ ಬೆ ಗಂ. 10-30 ರಿಂದ 12-00 ಗುಳಿಕ ಬೆ ಕಾಲ ಗಂ 7-30 ರಿಂದ 9-00 ಯಮಗಂಡ ಕಾಲ ಮ ಗಂ 3-00 ರಿಂದ 4-30 ಸೂರ್ಯೋದಯ: 5-57 ಸೂರ್ಯಾಸ್ತ: 6-43 ಅದೃಷ್ಟ ಸಂಖ್ಯೆ 7 9

ಮೇಷ: ನಿಮ್ಮ ಗುರಿಸಾಧನೆಯಲ್ಲಿ ಪ್ರಗತಿ ಕಾಣುವಿರಿ. ಅಂದುಕೊಂಡ ಕಾರ್ಯ ಸಾಧನೆಗಾಗಿ ಸಮರ್ಥ ಮಾರ್ಗ ಗೋಚರವಾಗಲಿದೆ. ಸಹೋದ್ಯೋಗಿಗಳಿಂದ ಸ್ವಲ್ಪಮಟ್ಟಿನ ವಿರೋಧ ವ್ಯಕ್ತವಾಗಬಹುದು. ಸಮಚಿತ್ತ ಕಾಯ್ದುಕೊಳ್ಳಿ.

ವೃಷಭ: ಆರ್ಥಿಕ ಅಭಿವೃದ್ಧಿ ಕಾಣುವಿರಿ. ಕಾರ್ಯಯೋಜನೆಯ ಯಶಸ್ಸಿಗಾಗಿ ಅನೇಕ ಸಲಹೆಗಳು ಬಂದರೂ ಸ್ವಯಂ ತುಲನೆ ಮಾಡಿ ನಿರ್ಧಾರಕ್ಕೆ ಬರುವುದು ಒಳ್ಳೆಯದು.

ಮಿಥುನ: ತೊಂದರೆ ಎದುರಾದರೂ ಹೆಚ್ಚು ಕೆಲಸ ಮಾಡುವ ಸ್ಥೈರ್ಯ. ಬುದ್ಧಿವಂತಿಕೆಯಿಂದ ಸಾಧನೆ ಮಾಡುವಿರಿ. ಒಳ್ಳೆಯ ಗೌರಾವದರಗಳು ಬರಲಿವೆ. ಮಾನಸಿಕ ಶಾಂತಿ ಲಭಿಸಲಿದೆ.

ಕರ್ಕಾಟಕ: ಆಕರ್ಷಣೀಯ ವ್ಯಕ್ತಿತ್ವದ ಜೊತೆಗೆ ನಡವಳಿಕೆಯಿಂದಾಗಿ ಅಭಿಮಾನಿಗಳು ಹೆಚ್ಚುವ ಸಾಧ್ಯತೆ. ಸಮರ್ಥ ಕಾರ್ಯ ಯೋಜನೆಗಳನ್ನು ಯಶಸ್ವಿಯಾಗಿ ನಿಭಾಯಿಸುವಿರಿ. ವಿದ್ಯಾಭ್ಯಾಸದಲ್ಲಿ ಮುನ್ನಡೆ.

ಸಿಂಹ: ಪ್ರಮುಖ ಯೋಜನೆಗಳ ಆಗುಹೋಗುಗಳ ಬಗ್ಗೆ ಪರಿಣತ ವ್ಯಕ್ತಿಗಳೊಂದಿಗೆ ಸಮಾಲೋಚನೆಯ ಸಾಧ್ಯತೆ. ಸರಿಯಾದ ನಿರ್ಧಾರದಿಂದಾಗಿ ಪ್ರಶಂಸೆಗೆ ಪಾತ್ರರಾಗುವಿರಿ. ಮಾದಕ ವಸ್ತುಗಳಿಂದ ದೂರವಿರಿ.

ಕನ್ಯಾ: ಸ್ವತಂತ್ರ ನಿರ್ಧಾರ ಕೈಗೊಳ್ಳುವಲ್ಲಿ ಹಿಂಜರಿಕೆ ಬೇಕಾಗಿಲ್ಲ. ಸಮತೋಲನ ಕಾಯ್ದುಕೊಳ್ಳುವ ಚಾಣಾಕ್ಷತೆಯಿಂದಾಗಿ ಮಾನಸಿಕ ನೆಮ್ಮದಿ. ಸ್ನೇಹಿತರೊಂದಿಗೆ ಹಿತವಾದ ಚರ್ಚೆಗಳು ನಡೆದು ಪ್ರಮುಖ ನಿರ್ಧಾರ ಕೈಗೊಳ್ಳುವಿರಿ.

ತುಲಾ: ನಿಮ್ಮ ಮಹತ್ತರವಾದ ಕನಸುಗಳನ್ನು ಕೈಬಿಡುವಂತೆ ಬಂಧುಗಳಿಂದ ಸಲಹೆಗಳು ಬರುವ ಸಾಧ್ಯತೆ. ನಿಮ್ಮ ದಿಟ್ಟ ನಿಲುವಿನಿಂದ ಹಿಂದೆ ಸರಿಯುವ ಅವಶ್ಯಕತೆ ಇಲ್ಲ. ದುಡುಕದೇ ಯೋಚಿಸಿ ಕೆಲಸಕ್ಕೆ ಕೈ ಹಾಕುವುದು ಉತ್ತಮ.

ವೃಶ್ಚಿಕ: ಕಾರ್ಯಗಳನ್ನು ಮಾಡಿ ಮುಗಿಸುವ ತವಕದಿಂದಾಗಿ ಗೊಂದಲ ಉಂಟಾಗಬಹುದು. ದುಂದುವೆಚ್ಚದ ಸಾಧ್ಯತೆ. ಕಬ್ಬಿಣ ಹಿತ್ತಾಳೆ ತಾಮ್ರ ಮುಂತಾದ ಲೋಹಗಳ ವ್ಯವಹಾರದಲ್ಲಿ ಅಧಿಕ ಲಾಭ ಕಂಡುಬರುತ್ತಿದೆ.

ಧನು: ಎದುರಾದ ಸಮಸ್ಯೆಗಳನ್ನು ಮೆಟ್ಟಿನಿಲ್ಲುವ ದಿಟ್ಟ ಸಾಮರ್ಥ್ಯ ನಿಮ್ಮದು. ಯಾವುದೇ ವಿಚಾರದಲ್ಲಿ ರಾಜಿಯಾಗದ ಮನಃಸ್ಥಿತಿ. ಪ್ರೀತಿಪಾತ್ರರಿಂದ ಸಮಯೋಚಿತ ಭರವಸೆಯ ಬಲ. ಹಿರಿಯರ ಆರೋಗ್ಯದಲ್ಲಿ ವ್ಯತ್ಯಯ.

ಮಕರ: ನಿಮ್ಮ ಸಾಹಸೀ ಪ್ರವೃತ್ತಿಯೇ ನಿಮಗೊಂದು ವೃತ್ತಿಯಾಗಿ ಮಾರ್ಪಾಡಾಗುವ ಸಾಧ್ಯತೆ. ಕಳಕಳಿ ಹೊಂದಿದವರಿಂದ ಉಚಿತವಾದ ಸಲಹೆ, ಕ್ರೀಡಾಪಟುಗಳಿಗೆ ಉತ್ತೇಜನ.

ಕುಂಭ: ಕುಟುಂಬದ ಸದಸ್ಯರೊಂದಿಗೆ ಸಂತಸದ ದಿನವನ್ನು ಕಳೆಯುವಿರಿ. ಉದ್ಯೋಗದಲ್ಲಿ ಬಡ್ತಿ ಅಥವಾ ಪ್ರಗತಿಯ ಸಾಧ್ಯತೆ. ಶಿಸ್ತಿನ ನಡವಳಿಕೆ. ಸಮಸ್ಯೆಗಳಿಗೆ ಸುಲಭ ಪರಿಹಾರ ದೊರೆಯಲಿದೆ.

ಮೀನ: ಅನಿವಾರ್ಯ ಒತ್ತಡಕ್ಕೆ ಒಳಗಾಗಿ ಎಲ್ಲವನ್ನು ತಾಳಿಕೊಳ್ಳಬೇಕಾದೀತು. ಒಳ್ಳೆಯ ಯೋಜನೆಯೊಂದಕ್ಕೆ ಮುನ್ನುಡಿ ಹಾಡುವ ಸಾಧ್ಯತೆ. ವಿಶ್ವಾಸ, ಪ್ರೀತಿಪಾತ್ರ ನಡೆಗಳಿಂದಾಗಿ ಎಲ್ಲರಲ್ಲೂ ಪ್ರಶಂಸೆಗೆ ಪಾತ್ರರಾಗುವಿರಿ.

ನಿಮ್ಮ ಜನ್ಮದಿನ 18-ಜೂನ್ ಈ ದಿನವು ಅತ್ಯಂತ ಶುಭಕರವಾಗಿದ್ದು, ಜೀರ್ಣಕ್ರಿಯೆಗೆ ಸಂಬಂಧಿಸಿದಂತೆ ವಾಯು ಪ್ರಕೋಪ ಮುಂತಾದ ರೋಗದಿಂದ ಬಳಲುವ ಸಾಧ್ಯತೆ. ಕರಕುಶಲ ಕಲೆಗಳಲ್ಲಿ ನಿಪುಣತೆ ಸಾಧಿಸುವಿರಿ. ಗೃಹ ಕೈಗಾರಿಕೆಯಿಂದ ಹೆಚ್ಚಿನ ಲಾಭ ಗಳಿಸುವಸಾಧ್ಯತೆ ಕಂಡುಬರುವುದು.

ಬೆರಗಿನ ಬೆಳಕು

ಗುರುರಾಜ ಕರಜಗಿ



ದಾನದ ನಂತರ ಕಾಡಿಗೆ ಗಮನ

ದೂತನಿಗೆ ಹಾಗೆ ಹೇಳಿಬಿಟ್ಟು ವೆಸ್ಸಂತರ ತನ್ನ ಆಪ್ತ ಸೇವಕರನ್ನು ಕರೆದು ಕೆಲವು ಸಿದ್ಧತೆಗಳನ್ನು ಮಾಡುವಂತೆ ಸೂಚನೆ ಮಾಡಿ ಯಾವ ಚಿಂತೆಯೂ ಇಲ್ಲದೆ ನಿದ್ರೆ ಮಾಡಿದ. ಮರುದಿನ ನಾಗರಿಕರು ಬಂದಾಗ ಅವರಲ್ಲಿ ಒಂದು ವಿನಂತಿ ಮಾಡಿಕೊಂಡ, 'ನನ್ನ ದಾನದಿಂದ ನಿಮಗೆ ಕೋಪ ಬಂದಿದೆ. ತಾವು ಅಪೇಕ್ಷಿಸಿದಂತೆ ನಾನು ದೇಶವನ್ನು ಬಿಟ್ಟು ಹೋರ-ಟುಹೋಗುತ್ತೇನೆ. ತಮ್ಮಿಂದ ನನಗೆ ಮತ್ತೊಂದು ದಿನದ ಅವಕಾಶಬೇಕು. ಯಾಕೆಂದರೆ ದಾನ ನನ್ನ ಜೀವನ, ಸ್ವಭಾವ. ದಾನ ಮಾಡಲಾರದೆ ನಾನು ಹೋಗಲಾರೆ. ಇಂದು ನಾನು ಏಳುನೂರರ ದಾನ ಕೊಡುತ್ತೇನೆ. ಏಳನೂರು ಆನೆಗಳು, ಏಳನೂರು ಕುದುರೆಗಳು, ಏಳನೂರು ರಥಗಳು, ಏಳುನೂರು ಸುಂದರ ಸ್ತ್ರೀಯರು, ಏಳುನೂರು ಗೋವುಗಳು, ಏಳನೂರು ದಾಸಿಯರು ಮತ್ತು ಏಳನೂರು ದಾಸರನ್ನು ದಾನ ಮಾಡುತ್ತೇನೆ. ಅದರೊಂದಿಗೆ ನಾನಾ ತರಹದ ತಿಂಡಿ-ತೀರ್ಥಗಳನ್ನು ಹಂಚುತ್ತೇವೆ. ಆನಂತರ ನಾಳೆ ಬೆಳಿಗ್ಗೆ ಈ ದೇಶದಿಂದ ಹೊರಟು-ಹೋಗುತ್ತೇನೆ'.ಅವನ ಮಾತಿನಲ್ಲಿದ್ದ ಪ್ರಾಮಾಣಿಕತೆ, ಧೃಢತೆಯನ್ನು ಕಂಡು ನಾಗರಿಕರಾರೂ ಮಾತನಾಡಲಿಲ್ಲ.

ವೆಸ್ಸಂತರ ಎಲ್ಲವನ್ನೂ ದಾನಮಾಡಿ ಅರಮನೆಗೆ ಬಂದು ಹೆಂಡತಿಯಾದ ಮಾದ್ರಿಯೊಡನೆ ಮಾತನಾಡಿದ, 'ಆರ್ಯೆ, ನಾನು ಕೊಟ್ಟ ಹಾಗೂ ನನ್ನ ಬಳಿಯಿರುವ ಧನ, ಧಾನ್ಯ, ಬಂಗಾರ, ಮಣಿಗಳು ಮತ್ತು ಪಿತ್ರಾರ್ಜಿತವಾಗಿ ಬಂದ ವಸ್ತುಗಳನ್ನು ನಿಧಿ ಮಾಡಿ ಇಟ್ಟುಬಿಡು'. ಆಕೆ ಆಶ್ಚರ್ಯದಿಂದ, 'ಇದನ್ನೆಲ್ಲ ನಿಧಿ ಮಾಡಿ ಏನು ಮಾಡಲಿ? ಅದನ್ನೆಲ್ಲ ಎಲ್ಲಿಡಲಿ?' ಎಂದು ಕೇಳಿದಳು. ಆಗ ವೆಸ್ಸಂತರ, 'ಮಾದ್ರಿ, ಅವುಗಳನ್ನೆಲ್ಲ ಸದಾಚಾರಿಗಳಿಗೆ ದಾನ ಮಾಡಿಬಿಡು. ಅದಕ್ಕಿಂತ ದೊಡ್ಡ ನಿಧಿ ಬೇರೆ ಇಲ್ಲ' ಎಂದ. 'ಆಯ್ತು ಹಾಗೆಯೇ ಮಾಡುತ್ತೇನೆ' ಎಂದು ಅವನ ಮಾತನ್ನು ಒಪ್ಪಿಕೊಂಡಳು. ಮತ್ತೆ ಉಪದೇಶ ಮಾಡುತ್ತ ಹೇಳಿದ, 'ಮಾದ್ರಿ, ನೀನು ಅತ್ತೆ- ಮಾವಂದಿರನ್ನು ಚೆನ್ನಾಗಿ ನೋಡಿಕೊಳ್ಳಬೇಕು. ಮಕ್ಕಳನ್ನು ಚೆನ್ನಾಗಿ ಬೆಳೆಸು. ನಮ್ಮ ತಂದೆ ಯಾರನ್ನಾದರೂ ರಾಜನನ್ನಾಗಿ ಮಾಡಿದರೆ ಅವನನ್ನು ವಿರೋಧಿಸಬೇಡ. ಅವನಿಗೆ ಸಹಕಾರವನ್ನು ನೀಡು. ನಾನಿಲ್ಲವೆಂದು ನೀನು ಮನಸ್ಸಿಗೆ ತೊಂದರೆ ಮಾಡಿಕೊಳ್ಳಬಾರದು'. ಆಕೆಗೆ ಗಾಬರಿಯಾಯಿತು. ಆಕೆಗೆ ವೆಸ್ಸಂತರ ಯಾಕೆ ಹೀಗೆ ಮಾತನಾಡುತ್ತಾನೆಂಬುದು ತಿಳಿಯಲಿಲ್ಲ. 'ಯಾಕೆ ಸ್ವಾಮಿ, ಹೀಗೆ ಅನುಚಿತವಾದ ಮಾತುಗಳನ್ನಾಡು-ತ್ತಿದ್ದೀರಿ? ತಾವು ಎಲ್ಲಿಗೆ ಹೋಗುತ್ತಿದ್ದೀರಿ?' ಎಂದು ಆತಂಕದಿಂದ ಕೇಳಿದಳು. ನಡೆದದ್ದನ್ನೆಲ್ಲ ತಿಳಿಸಿ ತಾನು ಬೆಳಿಗ್ಗೆ ಸಿವಿದೇಶದಿಂದ ಹೊರಡುವುದಾಗಿ ವೆಸ್ಸಂತರ ಹೇಳಿದ. ಆಗ ಮಾದ್ರಿ ಅಳುತ್ತ ಹೇಳಿದಳು, 'ನಾನು ನಿಮ್ಮನ್ನು ಬಿಟ್ಟು ಇರಲಾರೆ. ನೀವು ಯಾವ ಸ್ಥಳದಲ್ಲಿದ್ದರೂ, ಯಾವ ಸ್ಥಿತಿಯಲ್ಲಿದ್ದರೂ, ನಾನು ನಿಮ್ಮ ಜೊತೆಗೇ ಇರುತ್ತೇನೆ. ನಿಮ್ಮ ಜೊತೆಗೇ ಇದ್ದರೆ ನನಗೆ ರಾಜ್ಯದ, ಸಂಭ್ರಮದ ನೆನಪೇ ಬರುವುದಿಲ್ಲ. ಆದ್ದರಿಂದ ನಾನು ನನ್ನ ಇಬ್ಬರು ಮಕ್ಕಳನ್ನು ಕರೆದುಕೊಂಡು ನಿಮ್ಮ ಸಂಗಡ ಬಂದೇ ತೀರುತ್ತೇನೆ'. ಅವರ ಮಕ್ಕಳಾದ ಜಾಲಿಕುಮಾರ ಮತ್ತು ಕೃಷ್ಣಾಜಿನರಿಬ್ಬರೂ ಬಂದು ತಂದೆ-ತಾಯಿಯರ ಹತ್ತಿರ ಕುಳಿತರು. ಅಂತೂ ಅರಮನೆಯನ್ನು ಬಿಟ್ಟು ಘನವಾದ ಕಾಡಿಗೆ ಹೋಗಲು ಸರ್ವಸಿದ್ಧತೆಗಳಾದವು. ❖

ಪದಬಂಧ 4631


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಕೊನೆಗೆ ಪದವಿದ್ದರೆ ಮೋಕ್ಷ ಸಿಕ್ಕೀತು! (5)
4. ಕಕ್ಷದಲ್ಲಿ ಕೃಪಾದೃಷ್ಟಿ ಇದೆ (3)
5.ರಾತ್ರಿಯ ಕೊನೆ (3)
6.ಸರ ನೀಡಿ ಪ್ರಾರಂಭಿಸಿದ ಸಲ್ಲಾಪ (3)
10.ಯೋಗವಿಟ್ಟುಕೊಂಡು ಮಾಡಿದ ಹಂಚಿಕೆ (4)
11.ಜೀವಿಸಿದರೂ ಶವದಂತೆ ಇರುವವನು (4)
12.ಒಳ್ಳೆಯ ದಿನವಿದು (3)
14.ದೊಡ್ಡ ಪೆಟ್ಟಿಗೆಯಿದು (3)
16. ನೀರ ಮೇಲಿನ ಗುಳ್ಳೆ (3)
17.ಬೆಂಗಳೂರಿನಲ್ಲಿರುವ ಭವ್ಯಸರ್ಕಾರಿ ಕಟ್ಟಡ (5)

ಮೇಲಿಂದ ಕೆಳಕ್ಕೆ

1.ಹದಿನೈದು ದಿನಗಳ ಅವಧಿ (2)
2.ಇದು ಕನ್ನಡಿಗನ ಲೆನ್ಸ್! (3)
3.ಇಂಪಾದ ಸ್ವರವಿದು (2)
6.ಮಧುರವಾದ ಸ್ವಪ್ನ (5)
7.ಜೊತೆಯಲ್ಲಿ ಬಾಳುವುದು (5)
8.ಯಜ್ಞದಲ್ಲಿ ಅಗ್ನಿಗೆ ಅರ್ಪಿಸುವ ವಸ್ತುಗಳು (3)
9.ಆ ವರ್ತಕನಿಗೆ ಕಾಣಿಸಿದ ನೀರಿನ ಸುಳಿ (3)
13.ದಿನದಲ್ಲಿ ಬಂದಿರುವ ಮಂತ್ರಿ (3)
15.ಕವಿತೆ ರಚನೆಗಾರ (2)
16.ನವಗ್ರಹಗಳಲ್ಲಿ ಇದೊಂದು (2)



4630ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಜನಗಣತಿ 4.ಪರಂಗಿ
5.ದಿಗ್ಭ್ರಮೆ 6.ಹವನ 8.ಪ್ರಶಸ್ತ
9.ವೀಕ್ಷಕ 11.ಕಳಶ 12.ರಪಣ
13.ಲವಣ 15.ಕಲಭ
17.ದಾಸೋಹ 18.ವಸತಿಗೃಹ

ಮೇಲಿಂದ ಕೆಳಕ್ಕೆ:
1.ಜಗಿ 2.ಗಡವ 3.ತಿದಿ
6.ಹಸ್ತಕೌಶಲ 7.ನವೀಕರಣ
8.ಪ್ರತೀಕ 10.ಕಲ್ಯಾಣ
14.ವರ್ಧಂತಿ 16.ಭವ 17.ದಾಹ

ಸುಡೊಕು 5017

				6		1		
9							7	8
	8		7			2		6
6		1		5		7		9
			8	9	6			
8				7		5		2
3		9		1				
			6		7	9	3	4
7		8		2			1	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5016 ಸುಡೊಕು

1	5	9	3	2	7	6	8	4
4	6	7	1	8	9	3	5	2
3	8	2	6	4	5	9	1	7
2	9	3	5	1	4	7	6	8
6	7	4	9	3	8	5	2	1
5	1	8	7	6	2	4	9	3
8	2	5	4	9	3	1	7	6
7	3	1	2	5	6	8	4	9
9	4	6	8	7	1	2	3	5

ದೂರವಾಣಿ ಕರೆ ಕದ್ದಾಲಿಕೆ: ಬೆಲ್ಲದ

ಪ್ರಜಾವಾಣಿ ವಾರ್ತೆ


ಅರವಿಂದ ಬೆಲ್ಲದ

ಬೆಂಗಳೂರು: 'ನನ್ನ ದೂರವಾಣಿ ಕರೆಗಳನ್ನು ಕದ್ದಾಲಿಸಲಾಗುತ್ತಿದೆ. ನನ್ನನ್ನೂ ಯಾರೋ ಹಿಂಬಾಲಿಸುತ್ತಿದ್ದಾರೆ' ಎಂದು ಹುಬ್ಬಳ್ಳಿ-ಧಾರವಾಡ ಪಶ್ಚಿಮ ಕ್ಷೇತ್ರದ ಬಿಜೆಪಿ ಶಾಸಕ ಅರವಿಂದ ಬೆಲ್ಲದ್ ಹೇಳಿದ್ದಾರೆ.

ಸುದ್ದಿಗಾರರ ಜತೆ ಗುರುವಾರ ಮಾತನಾಡಿದ ಅವರು, 'ಈ ಬಗ್ಗೆ ವಿಧಾನಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಮತ್ತು ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರಿಗೆ ದೂರು ನೀಡಿದ್ದೇನೆ' ಎಂದರು.

'ಹತ್ತು ದಿನಗಳ ಹಿಂದೆ ಯುವರಾಜ ಸ್ವಾಮಿ ಎಂಬ ವ್ಯಕ್ತಿ ನನಗೆ ಕರೆ ಮಾಡಿ, ನನ್ನನ್ನು ಅನಗತ್ಯವಾಗಿ ಜೈಲಿಗೆ ಹಾಕಿದ್ದಾರೆ. ನನಗೆ ಸಹಾಯ ಮಾಡಿ ಎಂದು ಕೇಳಿದ್ದ. ಇದರ ಹಿಂದೆ ಪಿತೂರಿ ಇದೆ. ಜೈಲಿನಲ್ಲಿರುವ ವ್ಯಕ್ತಿ ಹೇಗೆ ಕರೆ ಮಾಡಲು ಸಾಧ್ಯ. ಜೈಲಿನಲ್ಲಿ ಮೊಬೈಲ್ ಹೇಗೆ ಸಿಗಲು ಸಾಧ್ಯ? ಮುಖ್ಯಮಂತ್ರಿ ಸ್ಥಾನಕ್ಕೆ ನಿಮ್ಮ ಹೆಸರು ಇದೆ ಎಂಬುದಾಗಿಯೂ ಆತ ಹೇಳಿದ್ದ' ಎಂದರು.

'ಮೊದಲಿಗೆ ಯುವರಾಜ ಸ್ವಾಮಿ ಯಾರು ಎಂಬುದು ಗೊತ್ತಾಗಲಿಲ್ಲ. ಆ ಬಳಿಕ, ವಂಚನೆಯ ಪ್ರಕರಣದಲ್ಲಿ ಆತ ಬಂಧನವಾಗಿದ್ದ ವಿಷಯ ಪತ್ರಿಕೆಗಳಿಂದ ತಿಳಿಯಿತು. ಆತನ ಜತೆ ಹೆಚ್ಚು ಮಾತನಾಡದೇ ಕರೆಯನ್ನು ಕಡಿತಗೊಳಿಸಿದೆ. ಆಗ ನನ್ನ ದೂರವಾಣಿ ಕದ್ದಾಲಿಕೆ ಮಾಡುತ್ತಿರುವುದು ಗಮನಕ್ಕೆ ಬಂದಿತು. ಅಲ್ಲದೆ, ನನ್ನನ್ನು ಅಪರಿಚಿತರು ಹಿಂಬಾಲಿಸುತ್ತಿರುವುದೂ ಗೊತ್ತಾಯಿತು' ಎಂದು ಬೆಲ್ಲದ ಹೇಳಿದರು.

'ನನ್ನ ತಂದೆ ಐದು ಬಾರಿ ಶಾಸಕರಾಗಿದ್ದರು. ನನ್ನ ತಂದೆ ಮೇಲಾಗಲಿ, ನನ್ನ ಮೇಲಾಗಲಿ ಒಂದೂ ಕಪ್ಪು ಚುಕ್ಕೆ ಇಲ್ಲ' ಎಂದು ಅವರು ತಿಳಿಸಿದರು.

ಪ್ರಚಾರಕ್ಕಾಗಿ ಹೇಳಿಕೆ: ಈ ಬಗ್ಗೆ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ಎಂ.ಪಿ. ರೇಣುಕಾಚಾರ್ಯ, 'ಮುಖ್ಯಮಂತ್ರಿ ಆಗುತ್ತೇನೆ ಎಂದು ಕೋಟು ಹೊಲಿಸಿಕೊಂಡು ಓಡಾಡುತ್ತಿರುವವರು ಪ್ರಚಾರಕ್ಕಾಗಿ ಇಂಥ ಮಾತುಗಳನ್ನು ಆಡಿದ್ದಾರೆ. ಅರವಿಂದ ಬೆಲ್ಲದ ಅವರ ದೂರವಾಣಿ ಕದ್ದಾಲಿಸುವ ಪರಿಸ್ಥಿತಿ ಯಡಿಯೂರಪ್ಪ ಸರ್ಕಾರಕ್ಕೆ ಬಂದಿಲ್ಲ' ಎಂದರು.

'ಬೆಲ್ಲದ ಎಲ್ಲಿಗೆ ಹೋಗುತ್ತಾರೆ. ಏನು ಮಾಡುತ್ತಾರೆ ಎಂಬುದರ ಗೋಜಿಗೆ ಯಾರೂ ಹೋಗುವುದಿಲ್ಲ. ಅವರ ಹೇಳಿಕೆಯನ್ನು ಒಪ್ಪುವುದಿಲ್ಲ. ಕದ್ದಾಲಿಕೆಗೆ ಸಂಬಂಧ ದಾಖಲೆಗಳಿದ್ದರೆ ಬಿಡುಗಡೆ ಮಾಡಲಿ ಎಂದು' ಎಂದು ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ಪ್ರತಿಕ್ರಿಯೆ ನೀಡಿದರು.

ಹೈಕೋರ್ಟ್ ನ್ಯಾಯಾಧೀಶರಿಂದ ತನಿಖೆಗೆ ಕಾಂಗ್ರೆಸ್ ಆಗ್ರಹ

'ದೂರವಾಣಿ ಕರೆ ಕದ್ದಾಲಿಕೆ ಆಗುತ್ತಿದೆ ಎಂದು ಬಿಜೆಪಿ ಭಿನ್ನಮತೀಯ ಶಾಸಕ ಅರವಿಂದ ಬೆಲ್ಲದ ಮಾಡಿರುವ ಆರೋಪದ ಬಗ್ಗೆ ಹೈಕೋರ್ಟ್ ನ್ಯಾಯಾಧೀಶರಿಂದ ತನಿಖೆ ನಡೆಸಬೇಕು' ಎಂದು ವಿಧಾನ ಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಆಗ್ರಹಿಸಿದರೆ, 'ಪ್ರಕರಣದ ತನಿಖೆಯನ್ನು ಸಿಬಿಐಗೆ ವಹಿಸಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದ್ದಾರೆ.

'ಇದು ಬೆಲ್ಲದ್‌ರೊಬ್ಬರ ಕರೆ ಕದ್ದಾಲಿಕೆ ಸಂಬಂಧಿಸಿದ್ದು ಆಗಿರಲಿಕ್ಕಿಲ್ಲ, ಭಿನ್ನಮತೀಯರೆಂದು ಗುರುತಿಸಿಕೊಂಡಿರುವ ಇತರ ಶಾಸಕರು, ವಿರೋಧಪಕ್ಷದ ನಾಯಕರ ಕರೆಗಳ ಕದ್ದಾಲಿಕೆಯೂ ನಡೆದಿರುವ ಸಾಧ್ಯತೆಗಳಿವೆ. ಬಿಜೆಪಿಯ ರಾಜ್ಯ ಮತ್ತು ಕೇಂದ್ರ ನಾಯಕರ ಒಡನಾಡಿಯಾಗಿರುವ ಸದ್ಯ ಜೈಲಿನಲ್ಲಿರುವ ಯುವರಾಜ ಸ್ವಾಮಿ ಎಂಬ ವ್ಯಕ್ತಿಯ ಹೆಸರನ್ನೂ ಬೆಲ್ಲದ ಹೇಳಿದ್ದಾರೆ. ಈ ಬಗ್ಗೆಯೂ ತನಿಖೆ ಆಗಬೇಕು' ಎಂದು ಸಿದ್ದರಾಮಯ್ಯ ಒತ್ತಾಯಿಸಿದರು.

ಟ್ವೀಟ್ ಮಾಡಿರುವ ಶಿವಕುಮಾರ್, '2020ರಲ್ಲಿ ದೂರವಾಣಿ ಕರೆ ಕದ್ದಾಲಿಕೆ ಪ್ರಕರಣವನ್ನು ಯಡಿಯೂರಪ್ಪ ಸರ್ಕಾರ ಸಿಬಿಐಗೆ ವಹಿಸಿತ್ತು. ತನಿಖೆ ಇನ್ನೂ ನಡೆಯುತ್ತಿದೆ. ಬೆಲ್ಲದ ಆರೋಪಿಸಿರುವ ದೂರವಾಣಿ ಕರೆ ಕದ್ದಾಲಿಕೆ ಪ್ರಕರಣವನ್ನೂ ಹಿಂದಿನ ರೀತಿಯಲ್ಲಿಯೇ ಸಿಬಿಐಗೆ ವಹಿಸಬೇಕು' ಎಂದಿದ್ದಾರೆ.

ಮುಂದುವರಿದ ಮುಂಗಾರಿನ ಆರ್ಭಟ ● ಹಲವೆಡೆ ಕಿರುಸೇತುವೆಗಳು ಮುಳುಗಿ ಸಂಪರ್ಕ ಕಡಿತ

ಜಲಾಶಯಗಳ ಒಳಹರಿವು ಹೆಚ್ಚಳ

ಪ್ರಜಾವಾಣಿ ವಾರ್ತೆ


ಧಾರವಾಡದ ಅಳ್ನಾವರ ತಾಲ್ಲೂಕಿನ ಕಂಬಾರಗಣವಿ ಗ್ರಾಮದ ಸೇತುವೆ ಗುರುವಾರ ಜಲಾವೃತಗೊಂಡಿದ್ದರಿಂದ ಗ್ರಾಮಸ್ಥರು ನೀರಿನಲ್ಲೇ ದಾಟಿದರು. ಗ್ರಾಮಸ್ಥರೇ ವಂತಿಗೆ ಸಂಗ್ರಹಿಸಿ ಜೆಸಿಬಿ ಬಳಸಿ, ಕಟ್ಟಿಕೊಂಡಿದ್ದ ಕಸಕಡ್ಡಿ ತೆರವುಗೊಳಿಸಿದರು

ಬೆಂಗಳೂರು: ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಗುರುವಾರ ಧಾರಾಕಾರ ಮಳೆಯಾಗಿದೆ. ಕರಾವಳಿಯಲ್ಲಿ ಮಳೆಯ ಅಬ್ಬರ ತುಸು ಕಡಿಮೆಯಾಗಿದೆ. ಚಿಕ್ಕಮಗಳೂರು, ಕೊಡಗು ಜಿಲ್ಲೆಗಳಲ್ಲಿ ಭಾರಿ ಮಳೆಯಾಗಿದೆ.

ರಾಜ್ಯದ ಜಲಾಶಯಗಳ ಒಳಹರಿವಿನಲ್ಲಿ ಹೆಚ್ಚಳವಾಗಿದೆ. ಭದ್ರಾ ಜಲಾಶಯದ ನೀರಿನ ಮಟ್ಟ ಒಂದೇ ದಿನ 1.40 ಟಿಎಂಸಿ ಅಡಿ, ಲಿಂಗನಮಕ್ಕಿ ಜಲಾಶಯದ ಮಟ್ಟ 1.65 ಟಿಎಂಸಿ ಅಡಿಗೆ ಏರಿಕೆಯಾಗಿದೆ.

ನೆರೆಯ ಮಹಾರಾಷ್ಟ್ರದ ಘಟ್ಟ ಪ್ರದೇಶದಲ್ಲಿ ಸತತ ಮಳೆ ಆಗುತ್ತಿರುವುದರಿಂದ ಬೆಳಗಾವಿ ಜಿಲ್ಲೆಯಲ್ಲಿ ಕೃಷ್ಣಾ, ವೇದಗಂಗಾ, ದೂಧ್‌ಗಂಗಾ ಹಾಗೂ ಹಿರಣ್ಯಕೇಶಿ ನದಿಗಳಲ್ಲಿ ನೀರಿನ ಪ್ರಮಾಣ ಹೆಚ್ಚಳ ಆಗುತ್ತಿದೆ.

ಘಟಪ್ರಭಾ ನದಿಗೆ ಹುಕ್ಕೇರಿ ತಾಲ್ಲೂಕಿನ ಹಿಡಕಲ್‌ನಲ್ಲಿ ನಿರ್ಮಿಸಿರುವ ರಾಜಾ ಲಖಮಗೌಡ ಜಲಾಶಯಕ್ಕೆ ಒಳಹರಿವಿನಪ್ರಮಾಣಹೆಚ್ಚಾಗಿದ್ದು, 17,114 ಕ್ಯುಸೆಕ್ ನೀರು ಸೇರುತ್ತಿದೆ. ಮಲಪ್ರಭಾ ನದಿಗೆ ಸವದತ್ತಿ ತಾಲ್ಲೂಕಿನ ನವಿಲುತೀರ್ಥ ಬಳಿ ನಿರ್ಮಿಸಿರುವ ಜಲಾಶಯಕ್ಕೆ ಒಳಹರಿವು ಆರಂಭವಾಗಿದೆ. 877 ಕ್ಯುಸೆಕ್ ಒಳಹರಿವು ಇತ್ತು.

ಉಡುಪಿ ಜಿಲ್ಲೆಯಲ್ಲಿ ಗಾಳಿಯ ಅಬ್ಬರ ಹೆಚ್ಚಾಗಿದ್ದು, ಸಮುದ್ರ ಪ್ರಕ್ಷುಬ್ಧಗೊಂಡಿದೆ. ಮೀನುಗಾರರಿಗೆ ಸಮುದ್ರಕ್ಕೆ ಇಳಿಯದಂತೆ ಎಚ್ಚರಿಕೆ ನೀಡಲಾಗಿದೆ.

ರಸ್ತೆ ಸಂಪರ್ಕ ಕಡಿತ (ಹುಬ್ಬಳ್ಳಿ ವರದಿ): ಧಾರವಾಡ, ಬೆಳಗಾವಿ ಹಾಗೂ ಉತ್ತರ ಕನ್ನಡ ಜಿಲ್ಲೆಗಳಲ್ಲಿ ಗುರುವಾರ ಧಾರಾಕಾರ ಮಳೆಯಾಗಿದೆ. ಕೆಲವೆಡೆ ಕಿರು ಸೇತುವೆಗಳು ಮುಳುಗಿವೆ, ರಸ್ತೆ ಸಂಪರ್ಕ ಕಡಿತಗೊಂಡಿವೆ.

ಕಾರವಾರ ಜಿಲ್ಲೆಯ ಮಲೆನಾಡು ತಾಲ್ಲೂಕುಗಳಲ್ಲಿ ಜೋರಾಗಿ ಮಳೆಯಾಯಿತು. ಬೆಳಗಾವಿ ನಗರವೂ ಸೇರಿದಂತೆ ಜಿಲ್ಲೆಯ ಹಲವೆಡೆ ಮಳೆ ಮುಂದುವರಿದಿದ್ದು 9 ಕಡೆಗಳಲ್ಲಿ ರಸ್ತೆ ಸಂಪರ್ಕ ಕಡಿತಗೊಂಡಿದೆ. ಹುಕ್ಕೇರಿ ತಾಲ್ಲೂಕಿನಲ್ಲಿ 5 ಬ್ರಿಜ್ ಕಂ ಬ್ಯಾರೇಜ್ ಮುಳುಗಡೆಯಾಗಿವೆ.

ನಿರಂತರ ಮಳೆ (ಶಿವಮೊಗ್ಗ ವರದಿ): ಶಿವಮೊಗ್ಗ ಜಿಲ್ಲೆಯ ಎಲ್ಲೆಡೆ ಉತ್ತಮ ಮಳೆಯಾಗಿದೆ. ತುಂಗಾ, ಭದ್ರಾ ಜಲಾಶಯಗಳಿಗೆ ಸಾಕಷ್ಟು ನೀರು ಹರಿದುಬರುತ್ತಿದೆ. ತೀರ್ಥಹಳ್ಳಿ ತಾಲ್ಲೂಕಿನ ಬೆಜ್ಜುವಳ್ಳಿ ಬಳಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಚಲಿಸುತ್ತಿದ್ದ ಲಾರಿ ಮೇಲೆ ತೆಂಗಿನ ಮರ ಬಿದ್ದು ಲಾರಿ ಜಖಂಗೊಂಡಿದೆ. ಹೊಸನಗರ ತಾಲ್ಲೂಕಿನ ಬಾಳೆಬರೆ ಜಲಪಾತ ಸೇರಿ ಸಣ್ಣಪುಟ್ಟ ಜಲಪಾತಗಳಲ್ಲಿ ನೀರು ಧುಮ್ಮಿಕ್ಕುತ್ತಿದೆ. ದಾವಣಗೆರೆ, ಚಿತ್ರದುರ್ಗ ಜಿಲ್ಲೆಯಲ್ಲೂ ಉತ್ತಮ ಮಳೆಯಾಗಿದೆ.

ಕಡಿಮೆಯಾದ ಅಬ್ಬರ (ಮಂಗಳೂರು ವರದಿ): ಕರಾವಳಿಯಲ್ಲಿ ಮಳೆಯ ಅಬ್ಬರ ತುಸು ಕಡಿಮೆಯಾಗಿದ್ದು, ಚಿಕ್ಕಮಗಳೂರು ಜಿಲ್ಲೆಯಲ್ಲಿ ಧಾರಾಕಾರ ಮಳೆ ಸುರಿದಿದೆ. ಹೇಮಾವತಿ, ಭದ್ರಾ, ತುಂಗಾ ನದಿಗಳಲ್ಲಿ ಹರಿವಿನ ಪ್ರಮಾಣ ಜಾಸ್ತಿಯಾಗಿದೆ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2 ಮನೆಗಳು ಸಂಪೂರ್ಣ ಹಾಗೂ 7 ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಹೆಬ್ರಿಯ ನಾಡ್ಪಾಲು ಗ್ರಾಮದಲ್ಲಿ 150 ಅಡಿಕೆ ಮರಗಳಿಗೆ ಹಾನಿಯಾಗಿದೆ.

ಜನಜೀವನ ಅಸ್ತವ್ಯಸ್ತ (ಮೈಸೂರು ವರದಿ): ಕೊಡಗು ಜಿಲ್ಲೆಯಲ್ಲಿ ಮುಂಗಾರು ಮಳೆ ಆರ್ಭಟಿಸುತ್ತಿದ್ದು, ಜನಜೀವನ ಸಂಪೂರ್ಣ ಅಸ್ತವ್ಯಸ್ತಗೊಂಡಿದೆ. ಕಾವೇರಿ ನದಿಯೂ ಸೇರಿದಂತೆ ಹಳ್ಳಕೊಳ್ಳಗಳಲ್ಲಿ ನೀರಿನಮಟ್ಟ ಏರಿಕೆಯಾಗಿದೆ. ಮೈಸೂರು, ಮಂಡ್ಯ ಜಿಲ್ಲೆಯ ಹಲವೆಡೆ ದಿನವಿಡೀ ಬಿಟ್ಟು ಬಿಟ್ಟು ಮಳೆಯಾಗಿದೆ.

ವಿರಾಜಪೇಟೆಯ ಅರಸುನಗರ, ಮಲೆತಿರಿಕೆಬೆಟ್ಟ, ಅಯ್ಯಪ್ಪ ಬೆಟ್ಟ, ನೆಹರೂ ನಗರದಲ್ಲಿ ಅಪಾಯ ಸ್ಥಳದಲ್ಲಿ ನೆಲೆಸಿರುವ ಜನರನ್ನು ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ ಎಂದು ಪಟ್ಟಣ ಪಂಚಾಯಿತಿಯ ಮುಖ್ಯಾಧಿಕಾರಿ ಎ.ಎಂ.ಶ್ರೀಧರ್ ತಿಳಿಸಿದ್ದಾರೆ. ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಕೆಲವು ಕಡೆ ಮರ ಹಾಗೂ ಕಂಬಗಳು ಧರೆಗುರುಳಿವೆ. ವನಗೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬಾಣಗೇರಿ ಗ್ರಾಮದ ಅಂಗನವಾಡಿ ಕೇಂದ್ರದ ಶೀಟ್‌ಗಳು ಹಾರಿ ಹೋಗಿವೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	85.68	10,187	375
ಹಾರಂಗಿ	2,859	2,831.57	1,411	80
ಕಬಿನಿ	2,284	2,270	15,000	700
ಹೇಮಾವತಿ	2,922	2,883.35	10,454	200
ಲಿಂಗನಮಕ್ಕಿ	1,819	1,779.25	31,876	957.68
ಸೂಪಾ (ಮೀ)	564	536.40	18,233	503
ಮಾಣಿ (ಮೀ)	594.36	570.52	3,898	-
ತುಂಗಭದ್ರಾ	1,633	1,590.29	568	232
ಮಲಪ್ರಭಾ	2,079.50	2050.00	877	194
ಘಟಪ್ರಭಾ	2,175	2,091.58	17,114	87
ಭದ್ರಾ*	186	144	12,557	957
ಆಲಮಟ್ಟಿ (ಮೀ)	519.60	508.930	13,784	451
ನಾರಾಯಣಪುರ (ಮೀ)	492.25	488.71	267	113

* ನೆಲಮಟ್ಟದಿಂದ

ಗರಿಷ್ಠ ಮಳೆ (ಸೆಂ.ಮೀ.ಗಳಲ್ಲಿ)

ಬೆಳಗಾವಿ ಜಿಲ್ಲೆ	
ಕಣಕುಂಬಿ	20.06
ಅಸೋಗಾ	18.08
ಜಾಂಬೋಟಿ	16.06
ಉಚಗಾಂವ	13.02
ಖಾನಾಪುರ	12.00
ರಾಕಸಕೊಪ್ಪ	10.10
ಸಂತಿಬಸ್ತವಾಡ	10.06
ಲೋಂಡಾ	10.02
ಬೆಳಗಾವಿ ನಗರ	10.01
ಸದಗಲಾ	10.00
ಉತ್ತರ ಕನ್ನಡ ಜಿಲ್ಲೆ	
ಸಿದ್ದಾಪುರ	12.5
ಗೇರುಸೊಪ್ಪ	12.4
ಶಿರಸಿ	9.5
ಮುಂಡಗೋಡ	8.1
ಚಿಕ್ಕಮಗಳೂರು	
ಹೊಸಕೆರೆ	22.4
ಕೊಟ್ಟಿಗೆಹಾರ	21.9
ಬೆಟ್ಟಗೆರೆ	18.2
ಕಿಗ್ಗಾ	16.9
ಉಡುಪಿ	
ನಾಲ್ಲೂರು	9
ದಕ್ಷಿಣ ಕನ್ನಡ	
ನಾವೂರು	14
ಕೊಡಗು ಜಿಲ್ಲೆ	
ಭಾಗಮಂಡಲ	11.6
ಶ್ರೀಮಂಗಲ	9.5
ಪೊನ್ನಂಪೇಟೆ	9.2
ನಾಪೋಕ್ಲು	9
ಹಾಸನ ಜಿಲ್ಲೆ	
ವನಗೂರು ಕದ್ರಹಳ್ಳಿ	18
ಮಾರನಹಳ್ಳಿ	15
ಹಾನುಬಾಳು	13
ಹೆತ್ತೂರು	10

ಲಜ್ಜೆ ಗೆಟ್ಟ ಸರ್ಕಾರ: ಖಂಡ್ರೆ ಕಿಡಿ

ಬೆಂಗಳೂರು: 'ರಾಜ್ಯದಲ್ಲಿ ಕೋವಿಡ್‌ನಿಂದ ಜನ ಸಂಕಷ್ಟದಲ್ಲಿರುವಾಗ ಬಿಜೆಪಿಯಲ್ಲಿ ನಾಯಕತ್ವ ಬದಲಾವಣೆ ನಾಟಕ ನಡೆಯುತ್ತಿದೆ. ಮಾನವೀಯತೆಯನ್ನೇ ಮರೆತಿರುವ ಬಿಜೆಪಿಯವರು, ತಮ್ಮ ವೈಫಲ್ಯ ಮರೆಮಾಚಲು ಈ ನಾಟಕ ಮಾಡುತ್ತಿದ್ದಾರೆ. ಇದು ಲಜ್ಜೆ ಗೆಟ್ಟ ಸರ್ಕಾರ' ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಈಶ್ವರ ಖಂಡ್ರೆ ಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ಕೊರೊನಾ, ಕಪ್ಪು ಶಿಲೀಂಧ್ರದ ಆತಂಕದ ಮಧ್ಯೆ, ಆದಾಯ ಇಲ್ಲದೆ ಜನ ಸಾಮಾನ್ಯರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಈ ಸಮಯದಲ್ಲಿ ನಾಯಕತ್ವ ಬದಲಾವಣೆ ಚರ್ಚೆ ಮಾಡುತ್ತಿರುವ ಬಿಜೆಪಿ ನಾಯಕರಿಗೆ ನಾಚಿಕೆಯಾಗಬೇಕು' ಎಂದು ಕಿಡಿಕಾರಿದರು.

'ಶಾಲಾ ಶುಲ್ಕ: ಸರ್ಕಾರದ ದ್ವಂದ್ವ ನಿಲುವುಗಳಿಂದ ಬಿಕ್ಕಟ್ಟು ಉಲ್ಬಣ'

ಪ್ರಜಾವಾಣಿ facebook LIVE

ಬೆಂಗಳೂರು: ಶಾಲಾ ಶುಲ್ಕದ ವಿಚಾರವಾಗಿ ಖಾಸಗಿ ಶಾಲಾ ಆಡಳಿತ ಮಂಡಳಿ ಹಾಗೂ ಪೋಷಕರ ನಡುವೆ ಸೃಷ್ಟಿಯಾಗಿರುವ ಬಿಕ್ಕಟ್ಟು ಉಲ್ಬಣಿಸುತ್ತಲೇ ಇದೆ. ಸರ್ಕಾರದ ದ್ವಂದ್ವ ನಿಲುವುಗಳಿಂದಾಗಿ ಸಮಸ್ಯೆ ಹೆಚ್ಚುತ್ತಿದ್ದು, ಶಿಕ್ಷಣ ಸಚಿವರ ನಿರ್ಲಕ್ಷವೂ ಇದಕ್ಕೆ ಕಾರಣ. ಸರ್ಕಾರ ಸರ್ವರಿಗೂ ಒಪ್ಪಿತವಾದ ಸೂತ್ರ ಅಳವಡಿಸಿ ಸಮಸ್ಯೆಗೆ ತಿಲಾಂಜಲಿ ಇಡಬೇಕು ಎಂಬ ಅಭಿಪ್ರಾಯ 'ಪ್ರಜಾವಾಣಿ' ಸಂವಾದದಲ್ಲಿ ವ್ಯಕ್ತವಾಗಿದೆ.

'ಆಡಳಿತ ಮಂಡಳಿಗೂ ಕಷ್ಟ'



'ಪಾಲಕರು ಶುಲ್ಕ ಕಟ್ಟದ ಕಾರಣ ಕೆಲ ಶಾಲೆಗಳು ಶಿಕ್ಷಕರಿಗೆ ಸಂಬಳ ಕೊಡಲು ಆಗದ ಸ್ಥಿತಿಗೆ ತಲುಪಿವೆ. ಪ್ರತಿಷ್ಠಿತ ಶಾಲೆಗಳಿಗೆ ಮಕ್ಕಳನ್ನು ದಾಖಲು ಮಾಡಲು ಪೋಷಕರೇ ಮುಗಿಬೀಳುತ್ತಾರೆ. ಅವರು ಕೇಳಿದಷ್ಟು ಹಣ ಮುಂಗಡವಾಗಿಯೇ ಪಾವತಿಸುತ್ತಾರೆ. ಸರ್ಕಾರಿ ನೌಕರರು ಹಾಗೂ ಐಟಿ ಉದ್ಯಮಿಗಳು ಕೈತುಂಬಾ ಸಂಬಳ ಪಡೆಯುತ್ತಿದ್ದಾರೆ. ಅಂತಹವರೇ ಈವರೆಗೂ ಶುಲ್ಕ ಪಾವತಿಸಿಲ್ಲ. ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲೇ ಮಕ್ಕಳು ಕಲಿಯಬೇಕು. ಆದರೆ, ಶುಲ್ಕ ಕಟ್ಟಲು ಆಗುವುದಿಲ್ಲವೆಂದರೆ ಹೇಗೆ?'

'ಕೆಲ ಪ್ರತಿಷ್ಠಿತ ಶಾಲೆಗಳಲ್ಲಿ ಸಮಸ್ಯೆಗಳು ತಲೆದೋರಿದಾಗ ನಾವೇ ದೂರು ದಾಖಲಿಸಿದ್ದೇವೆ. ಆ ದೂರುಗಳಿಗೆ ಸಂಬಂಧಪಟ್ಟ ಅಧಿಕಾರಿಗಳೇ ಸ್ಪಂದಿಸುವುದಿಲ್ಲ. ರಾಜ್ಯ ಸರ್ಕಾರ 12 ವರ್ಷಗಳಿಂದ ಖಾಸಗಿ ಶಾಲೆಗಳನ್ನು ವಂಚಿಸುತ್ತಾ ಬಂದಿದೆ. ಸಭೆ ಕರೆದು ಬಿಕ್ಕಟ್ಟು ಬಗೆಹರಿಸುವಂತೆ ಶಿಕ್ಷಣ ಸಚಿವರ ಬಳಿ ಸಾಕಷ್ಟು ಬಾರಿ ಮನವಿ ಮಾಡಿದ್ದೇವೆ. ಇದಕ್ಕೆ ಅವರೇ ಕಿವಿಗೊಟ್ಟಿಲ್ಲ'.

–ಡಿ.ಶಶಿಕುಮಾರ್, ಪ್ರಧಾನ ಕಾರ್ಯದರ್ಶಿ, ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟ

'ಬಡವರಿಗಾದರೂ ವಿನಾಯಿತಿ ಕೊಡಿ'

'ಮಧ್ಯಮ ಮತ್ತು ಕೆಳ ಮಧ್ಯಮ ವರ್ಗದ ಶೇ 40ರಷ್ಟು ಪೋಷಕರಿಗೆ ಶುಲ್ಕ ಕಟ್ಟಲು ಆಗುತ್ತಿಲ್ಲ. ಅಂತಹವರಿಗೆ ವಿನಾಯಿತಿ ನೀಡಬೇಕು. ಆನ್‌ಲೈನ್ ಶಿಕ್ಷಣ ಪೋಷಕರಿಗೂ ಹೊರೆಯಾಗಿದೆ. ಎಲ್‌ಕೆಜಿ, ಯುಕೆಜಿ ಮಕ್ಕಳಿಗೆ ₹1.5 ಲಕ್ಷ ಶುಲ್ಕ ಪಡೆಯಲಾಗುತ್ತಿದೆ. ಅವರಿಗೆ ಆನ್‌ಲೈನ್ ಪಾಠ ಅರ್ಥವಾಗುತ್ತಾ?'



'ಪ್ರತಿಷ್ಠಿತ ಶಾಲೆಗಳ ಮೇಲೆ ನಿಯಂತ್ರಣ ಹೇರಲು ಆಳುವ ಸರ್ಕಾರಗಳು ವಿಫಲವಾಗಿವೆ. ಶಿಕ್ಷಣ ಸಚಿವರು ತಮಗಿರುವ ಅಧಿಕಾರ ಬಳಸಿ ಒಂದೆರಡು ಶಾಲೆಗಳ ಮೇಲೆ ಕಠಿಣ ಕ್ರಮ ಕೈಗೊಂಡರೆ ಉಳಿದ ಶಾಲೆಗಳು ಬುದ್ಧಿ ಕಲಿಯುತ್ತವೆ. ರಾಜ್ಯ ಸರ್ಕಾರ ಶೀಘ್ರವೇ ಮಧ್ಯಪ್ರವೇಶಿಸಿ ಸಮಸ್ಯೆ ಬಗೆಹರಿಸಬೇಕು'.

ಬಿ.ಎನ್.ಯೋಗಾನಂದ, ಖಾಸಗಿ ಶಾಲೆಗಳ ಪೋಷಕರ ಸಂಘದ ಸಮನ್ವಯ ಸಮಿತಿ ಸದಸ್ಯ

'ನಿರ್ವಹಣೆ ವೆಚ್ಚದ ಆಧಾರದಲ್ಲಿ ಶುಲ್ಕ ನಿಗದಿ'



'ಶಾಲೆಯ ನಿರ್ವಹಣೆಯ ವೆಚ್ಚದ ಆಧಾರದಲ್ಲಿ ಶುಲ್ಕ ಪಡೆಯಬೇಕು. ಶಿಕ್ಷಣ ಸಂಸ್ಥೆಗಳು ಮೊದಲಿನಂತೆ ದಿನಪೂರ್ತಿ ತರಗತಿಗಳನ್ನು ನಡೆಸುತ್ತಿಲ್ಲ. ಈಗ ಸಿಬ್ಬಂದಿಯನ್ನೂ ಕಡಿತ ಮಾಡಿವೆ. ಹೀಗಾಗಿ ವೆಚ್ಚ ತಗ್ಗಿದೆ. ಮೂರು ಗಂಟೆ ಪಾಠ ಮಾಡಿ ಶೇ 100 ರಷ್ಟು ಶುಲ್ಕ ಕಟ್ಟಿ ಎಂದರೆ ಹೇಗೆ'.

'ಸರ್ಕಾರವು ಶಿಕ್ಷಣ ಸಂಸ್ಥೆಗಳು ಹಾಗೂ ಪೋಷಕರ ವಲಯದ ಪ್ರತಿನಿಧಿಗಳನ್ನು ಕರೆಸಿ ಮತ್ತೊಮ್ಮೆ ಮಾತುಕತೆ ನಡೆಸಬೇಕು. ಎಲ್ಲರ ಅಭಿಪ್ರಾಯ ಆಲಿಸಿ ಕೊರೊನಾ ಸಂಕಷ್ಟ ಕಾಲದ ಶುಲ್ಕವನ್ನಷ್ಟೇ ನಿಗದಿಪಡಿಸಬೇಕು'.

–ಆರ್.ರಘು, ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಅಧ್ಯಕ್ಷ ಹಾಗೂ ಬಿಜೆಪಿ ಮುಖಂಡ.

ಸಂವಾದ ವೀಕ್ಷಣೆಗೆ: https://www.facebook.com/prajavani.net/videos/756204878404920

ಸಂಪುಟ ಪುನಾರಚನೆ: ಪ್ರಮುಖರ ಸಭೆಯಲ್ಲಿ ಚರ್ಚೆ- ಸಿ.ಟಿ.ರವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶುಕ್ರವಾರ ನಡೆಯಲಿರುವ ಬಿಜೆಪಿ ರಾಜ್ಯ ಪ್ರಮುಖರ ಸಮಿತಿ ಸಭೆಯಲ್ಲಿ ಸಚಿವ ಸಂಪುಟ ಪುನಾರಚನೆ ಜತೆಗೆ ಹಲವು ವಿಚಾರಗಳು ಚರ್ಚೆಗೆ ಬರಲಿವೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಹೇಳಿದರು.

ಪಕ್ಷದ ಕಚೇರಿಯಲ್ಲಿ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸದ್ಯಕ್ಕೆ ನಾಯಕತ್ವ ಬದಲಾವಣೆ ಪ್ರಶ್ನೆಯೇ ಇಲ್ಲ. ಹೀಗಾಗಿ ಆ ವಿಚಾರವನ್ನು ಯಾರೂ ಹಾದಿ ಬೀದಿಯಲ್ಲಿ ಮಾತನಾಡಬಾರದು. ಬದಲಾವಣೆ ಆಗುತ್ತೆ ಎಂದು ನಾನು ಹೇಳಿಕೆ ನೀಡಿದರೂ, ಬದಲಾವಣೆ ಆಗುವುದಿಲ್ಲ' ಎಂದರು.

'ಕೇಂದ್ರದ ಸಹಕಾರದಿಂದ ರಾಜ್ಯ ಸರ್ಕಾರ ಉತ್ತಮವಾಗಿ ಕೆಲಸ ಮಾಡುವ ಸಂದರ್ಭದಲ್ಲಿ ಯಾರೂ ಗೊಂದಲ ಸೃಷ್ಟಿಸುವುದು ಬೇಡ. ಇದರಿಂದ ವಿರೋಧಿಗಳಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ' ಎಂದೂ ಎಚ್ಚರಿಕೆ ನೀಡಿದರು.

'17 ಶಾಸಕರು ಕಾಂಗ್ರೆಸ್ ಮತ್ತು ಜೆಡಿಎಸ್‌ನಿಂದ ಬಂದ ಕಾರಣ ನಮಗೆ ಬಹುಮತ ಸಿಕ್ಕಿದೆ. 104 ಶಾಸಕರನ್ನು ಬಿಜೆಪಿ ಚಿಹ್ನೆಯಿಂದ ಜನರು ಗೆಲ್ಲಿಸಿದ್ದು ಸತ್ಯ. 104 ಕ್ಕೆ 17 ಸೇರಿದ್ದರಿಂದ 121 ಆಗಿ ಬಹುಮತ ಸಿಕ್ಕಿತು. 17 ಜನ ನಮ್ಮವರೇ, ಅವರನ್ನು ಬೇರೆಯವರೆಂದು ಪರಿಗಣಿಸುವ ಪ್ರಶ್ನೆಯೇ ಇಲ್ಲ' ಎಂದು ರವಿ ತಿಳಿಸಿದರು.

ಯಡಿಯೂರಪ್ಪ ಮುಂದುವರಿಸಿ: ಮಠಾಧೀಶರ ಧರ್ಮ ಪರಿಷತ್ತು ಆಗ್ರಹ

ಬಳ್ಳಾರಿ: 'ಯಡಿಯೂರಪ್ಪನವರಿಗೆ ವಯಸ್ಸಾಗಿದೆ. ಅವರು ಅಧಿಕಾರ ಬಿಡಬೇಕು ಎಂದು ಕೆಲ ನಾಯಕರು ಈಗ ಹೇಳುತ್ತಿದ್ದಾರೆ. ಅವರ ನಾಯಕತ್ವದಲ್ಲಿ ಚುನಾವಣೆ ಎದುರಿಸುವಾಗ ಅವರ ಹಲ್ಲು ಹೋಗಿ, ಬೆನ್ನು ಬಾಗಿರಲಿಲ್ಲವೇ?

ಇದು ವೀರಶೈವ ಮಠಾಧೀಶರ ಧರ್ಮ ಪರಿಷತ್‌ನ ಸ್ವಾಮೀಜಿಗಳ ಹಕ್ಕೊತ್ತಾಯ ಪ್ರಶ್ನೆ ಇದು. 'ಅಧಿಕಾರಕ್ಕೆ ಬಂದ ವರಸೆ ಬದಲಿಸುವುದು ಸರಿಯಲ್ಲ. ಬಿಎಸ್‌ವೈ ಅವರನ್ನೇ ಸಿ.ಎಂ.ಆಗಿ ಮುಂದುವರೆಸಬೇಕು' ಎಂದು ಒತ್ತಾಯಿಸಿದ್ದಾರೆ.

ಗುರುವಾರ ಜಂಟಿ ಸುದ್ದಿಗೋಷ್ಠಿಯಲ್ಲಿ ಪರಿಷತ್‌ನ 15 ಸ್ವಾಮೀಜಿಗಳು, 'ಯಡಿಯೂರಪ್ಪ ಅವರು ಬಿಜೆಪಿಗೆ ಆಮ್ಲಜನಕ ಇದ್ದಂತೆ. ಅವರಿಲ್ಲದೆ ಹೋದರೆ ವೆಂಟಿಲೇಟರ್ ಬೇಕಾಗುತ್ತದೆ. ಇದು ಸಮುದಾಯದವರ ಅಭಿಪ್ರಾಯ. ಸಮಾಜದ ಮುಖವಾಣಿಯಾಗಿ ನಾವು ಹೇಳುತ್ತಿದ್ದೇವೆ' ಎಂದರು.

'ರಾಜಕಾರಣಿಗಳು ದಾರಿ ತಪ್ಪಿದಾಗ ಸನ್ಮಾರ್ಗದಲ್ಲಿ ನಡೆಯಿರಿ ಎಂದು ಸಂದೇಶ ನೀಡುವುದು ಸ್ವಾಮೀಜಿಗಳ ಜವಾಬ್ದಾರಿ' ಎಂದು ಪರಿಷತ್‌ನ ಅಧ್ಯಕ್ಷ ಮರಿಯಮ್ಮನಹಳ್ಳಿಯ ಮಲ್ಲಿಕಾರ್ಜುನ ಸ್ವಾಮೀಜಿ ಹೇಳಿದರು.

'ಬೆಲ್ಲ, ಸಕ್ಕರೆ ಹಾಗೂ ಇತರೆ ಶಕ್ತಿ ಬಿಎಸ್‌ವೈ ಅವರಿಗೆ ಏನು ಮಾಡಲಾಗದು' ಎಂದು ಮಾರ್ಮಿಕವಾಗಿ ನುಡಿದರು.

ಯಡಿಯೂರಪ್ಪ ಬದಲಿಸುವುದು ಸೂಕ್ತ: ವಿಶ್ವನಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಯಡಿಯೂರಪ್ಪ ಅವರಲ್ಲಿ ಹಿಂದಿನ ವೇಗ ಇಲ್ಲ. ಅವರಿಗೆ ವಯಸ್ಸಾಗಿದ್ದು, ಪ್ರಭಾವ ಮಬ್ಬಾಗಿದೆ. ರಾಜೀನಾಮೆಗೆ ಸಿದ್ಧರಿರುವ ಅವರು ಕೇವಲ ಮಾರ್ಗದರ್ಶಕರಾಗಿ ಮುಂದುವರಿಯಬೇಕು' ಎಂದು ವಿಧಾನ-ಪರಿಷತ್ತಿನ ಬಿಜೆಪಿ ಸದಸ್ಯ ಎಚ್.ವಿಶ್ವನಾಥ್ ಹೇಳಿದರು.

ಪಕ್ಷದ ರಾಜ್ಯ ಉಸ್ತುವಾರಿ ಅರುಣ್‌ಸಿಂಗ್ ಭೇಟಿ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಅವರು, 'ಜೆಡಿಎಸ್‌ನಲ್ಲಿರುವ 'ಕುಟುಂಬ ರಾಕ್ಷಸ ರಾಜಕಾರಣ' ಬಿಜೆಪಿಯಲ್ಲೂ ಇದೆ. ಯಡಿಯೂರಪ್ಪ ಬಗ್ಗೆ ಗೌರವವಿದೆ. ಸರ್ಕಾರ ಯಾವ ದಿಕ್ಕಿನಲ್ಲಿ ಸಾಗುತ್ತಿದೆ, ಕುಟುಂಬದ ಹಸ್ತಕ್ಷೇಪ, ಭ್ರಷ್ಟಾಚಾರ ಹೆಚ್ಚಾಗಿದೆ ಎಂಬುದನ್ನು ಸಿಂಗ್ ಅವರಿಗೆ ತಿಳಿಸಿದ್ದೇನೆ' ಎಂದರು.

'ನಾನು ಯಾರ ಪರ ಅಥವಾ ವಿರುದ್ಧವೂ ಇಲ್ಲ. ಅನ್ನಿಸಿದ್ದನ್ನು ಹೇಳಿದ್ದೇನೆ. ಯಡಿಯೂರಪ್ಪ ಸ್ಥಾನಕ್ಕೆ ಪಂಚಮಸಾಲಿ ಸಮುದಾಯದ ಒಬ್ಬರನ್ನು ನೇಮಿಸಲಿ ಎಂದು ಹೇಳಿದ್ದೇನೆ. ನನ್ನ ಮಾತುಗಳನ್ನು ಗಂಭೀರವಾಗಿ ಆಲಿಸಿದ್ದಾರೆ. ಹೈಕಮಾಂಡ್ ಏನು ಕ್ರಮ ತೆಗೆದುಕೊಳ್ಳುತ್ತದೆಯೋ ಕಾದು ನೋಡಬೇಕು' ಎಂದು ವಿಶ್ವನಾಥ್ ಹೇಳಿದರು.

ವಿವಿಧ ಇಲಾಖೆಗಳಲ್ಲಿ ವಿಜಯೇಂದ್ರ ಮತ್ತು ಕುಟುಂಬದ ಇತರ ಸದಸ್ಯರು ಹಸ್ತಕ್ಷೇಪ ಮಾಡುತ್ತಿದ್ದಾರೆ. ಕೊರೊನಾ ನಿರ್ವಹಣೆ, ಭ್ರಷ್ಟಾಚಾರದ ಬಗ್ಗೆ ರಾಜ್ಯದ ಜನ ಆಕ್ರೋಶಗೊಂಡಿದ್ದಾರೆ ಎಂದು ಗಮನಸೆಳೆದಿದ್ದೇನೆ ಎಂದರು.

> **'ಯಡಿಯೂರಪ್ಪ ಅವರಿಗೆ ವಯಸ್ಸಾಗಿದೆ ಎಂದು ಹೇಳುತ್ತೀರಿ, ನಿಮ್ಮ ವಯಸ್ಸೆಷ್ಟು? ಅವರು ಕೋವಿಡ್ ಸಂದರ್ಭದಲ್ಲೂ ಯುವಕರಂತೆ ಓಡಾಡಿ ಕೆಲಸ ಮಾಡುತ್ತಿದ್ದಾರೆ. ಅದು ನಿಮ್ಮ ಮಬ್ಬು ಕಣ್ಣಿಗೆ ಕಾಣುವುದಿಲ್ಲವೆ?**
> **ಎಂ.ಪಿ.ರೇಣುಕಾಚಾರ್ಯ**
> ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ

ವಿಶ್ವನಾಥ್ ವಿರುದ್ಧ ಕ್ರಮಕ್ಕೆ ಸಲಹೆ

ಸರ್ಕಾರ ಮತ್ತು ಪಕ್ಷದ ಬಗ್ಗೆ ಎಚ್.ವಿಶ್ವನಾಥ್ ಮಾತನಾಡಿರುವುದನ್ನು ನಳಿನ್ ಕುಮಾರ್ ಕಟೀಲ್ ಮತ್ತು ಅರುಣ್‌ಸಿಂಗ್ ಅವರ ಗಮನಕ್ಕೆ ತಂದು, ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ ಎಂದು ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ ಎನ್. ರವಿಕುಮಾರ್ ತಿಳಿಸಿದರು.

'ಅವರ ಮಾತುಗಳನ್ನು ಸಾರಾಸಗಟಾಗಿ ತಿರಸ್ಕರಿಸುತ್ತೇವೆ. ಅವರು ವೈಯಕ್ತಿಯ ನೆಲೆಯಲ್ಲಿ ಮಾತನಾಡಿದ್ದು, ಅಂತಹ ಹೇಳಿಕೆಗಳಿಂದ ಯಾರೂ ಪ್ರೇರೇಪಣೆಗೊಳ್ಳಬಾರದು' ಎಂದು ಪಕ್ಷದ ಕಾರ್ಯಕರ್ತರಿಗೆ ಮನವಿ ಮಾಡಿದರು.

'ವಿಶ್ವನಾಥ್ ಮಾನಸಿಕ ಅಸ್ವಸ್ಥ'

'ಪಕ್ಷಕ್ಕೆ ಬಂದ ದಿನದಿಂದ ಇಲ್ಲಿವರೆಗೆ ಮುಖ್ಯಮಂತ್ರಿ ಮತ್ತು ಸರ್ಕಾರದ ವಿರುದ್ಧ ಮಾತನಾಡುತ್ತಾ ಬಂದಿದ್ದ ಎಚ್.ವಿಶ್ವನಾಥ್ ಅವರು ಅರೆ ಹುಚ್ಚನಂತೆ ವರ್ತಿಸುತ್ತಿದ್ದಾರೆ ಎಂದು ನಾನು ಭಾವಿಸಿದ್ದೆ. ಆದರೆ, ಅವರ ಚಾಳಿ ಗಮನಿಸಿದರೆ ಪೂರ್ಣ ಹುಚ್ಚು ಹಿಡಿದಿದೆ ಎನಿಸುತ್ತಿದೆ' ಎಂದು ಬಿಡಿಎ ಅಧ್ಯಕ್ಷ ಹಾಗೂ ಶಾಸಕ ಎಸ್.ಆರ್.ವಿಶ್ವನಾಥ್ ಹೇಳಿದರು.

ಅದಕ್ಕೆ ಪ್ರತಿಕ್ರಿಯಿಸಿರುವ ಎಚ್.ವಿಶ್ವನಾಥ್ ಅವರು, 'ಹೌದಪ್ಪ, ನಾನು ಅರೆ ಹುಚ್ಚ. ನೀನು ಬಿಡಿಎದಲ್ಲಿ ಕುಳಿತು ಲೂಟಿ ಮಾಡುತ್ತಿದ್ದೀಯಲ್ಲ' ಎಂದು ಹರಿಹಾಯ್ದಿದ್ದಾರೆ.

'ರಾಕ್ಷಸ ಸರ್ಕಾರ' ಕೆಡವಿದ ಸಮಾಜ ಸುಧಾರಕರೆಲ್ಲಿ: ಎಚ್‌ಡಿಕೆ

ಹಿಂದೆ ರಾಜ್ಯದಲ್ಲಿ ಅಸ್ತಿತ್ವದಲ್ಲಿದ್ದ 'ರಾಕ್ಷಸ ಸರ್ಕಾರ'ವನ್ನು ಜನರ ಹಿತಕ್ಕಾಗಿ, ಅಭಿವೃದ್ಧಿಗಾಗಿ ಕೆಡವಿದ 'ಸಮಾಜ ಸುಧಾರಕರು' ಈಗೇಕೆ ಸುಮ್ಮನಿದ್ದಾರೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ಎಚ್.ಡಿ. ಕುಮಾರಸ್ವಾಮಿ ಪ್ರಶ್ನಿಸಿದ್ದಾರೆ.

ಕುಮಾರಸ್ವಾಮಿ ನೇತೃತ್ವದ ಮೈತ್ರಿ ಸರ್ಕಾರವನ್ನು ಕೆಡವಿದ್ದ ಈಗ ವಿಧಾನಪರಿಷತ್ತಿನ ಬಿಜೆಪಿ ಸದಸ್ಯರಾಗಿರುವ ಎಚ್.ವಿಶ್ವನಾಥ್, ಆ ಸರ್ಕಾರವನ್ನು ರಾಕ್ಷಸ ಸರ್ಕಾರ ಎಂದು ಜರೆದಿದ್ದಲ್ಲದೇ, ಕೆಡವಿದ್ದನ್ನು ಸಮರ್ಥಿಸಿಕೊಂಡಿದ್ದರು.

ಈಗ ಅದನ್ನೇ ಉಲ್ಲೇಖಿಸಿರುವ ಕುಮಾರಸ್ವಾಮಿ, 'ನಾಯಕತ್ವವಿಲ್ಲದ 'ಅಪಾಯಕಾರಿ ಸರ್ಕಾರ'ದ ಬಗ್ಗೆ ಆ ಸಮಾಜ ಸುಧಾರಕರು ಸುಮ್ಮನಿರುವುದಾದರೂ ಹೇಗೆ. ಅವರ ದಿವ್ಯ ಮೌನ ಆಶ್ಚರ್ಯ ತರಿಸುತ್ತಿದೆ ಎಂದು ಅವರು ಹೇಳಿದ್ದಾರೆ.

ಪ್ರಜಾವಾಣಿ DH ಕೋವಿಡ್ ಪರಿಹಾರ ನಿಧಿ

ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್–19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 27 ಲಕ್ಷಕ್ಕೂ ಅಧಿಕ ಜನ ಕಾಯಿಲೆಪೀಡಿತರಾಗಿದ್ದು, 33 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ–ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.



ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ 'ಡೆಕ್ಕನ್ ಹೆರಾಲ್ಡ್' ಹಾಗೂ 'ಪ್ರಜಾವಾಣಿ' ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
(Canara Bank, Cantonment Branch; A/C NO.0404101200385, IFSC CODE : CNRB0000404)

ಡೆಬಿಟ್/ಕ್ರೆಡಿಟ್ ಕಾರ್ಡ್, ಯುಪಿಐ, ಇ-ವ್ಯಾಲೆಟ್ ಅಥವಾ ನೆಟ್‌ಬ್ಯಾಂಕಿಂಗ್ ಮೂಲಕ ಪಾವತಿಸುವವರು QR ಕೋಡ್ ಸ್ಕ್ಯಾನ್ ಮಾಡಿ ಅಥವಾ ಈ ಕೆಳಗಿನ ಲಿಂಕ್‌ಗೆ ಭೇಟಿ ಮಾಡಿ: **https://bit.ly/3iaryCA**

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.finc@printersmysore.co.in **ಈ ಇ-ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.**

ದೇಣಿಗೆ ಕೊಟ್ಟವರ ವಿವರ

ಸಂ	ಹೆಸರು, ವಿಳಾಸ	ದೇಣಿಗೆ ₹ಗಳಲ್ಲಿ
1	**ಅಶೋಕ್ ವಾರನ್,** 52, ಒಂದನೇ ಬ್ಲಾಕ್, 15ನೇ ಅಡ್ಡರಸ್ತೆ, ಆರ್.ಟಿ.ನಗರ ಬೆಂಗಳೂರು	1,00,000
2	**ಪ್ರತ್ಯುಷ,** ಬಿ.ಜಿ.ರಸ್ತೆ, ಬೆಂಗಳೂರು	25,000
3	**ಡಾ.ಐ.ಎಸ್.ಮಾಲಗಿ,** ಯಲವಿಗಿ ರಸ್ತೆ, ಶಿಗ್ಗಿ	20,000
4	**ನಾಗರಾಜ್ ಕೆ.ಎಂ,** ನಂ.204, 2ನೇ ಮಹಡಿ, ಸಪ್ತಗಿರಿ ನಿಲಯ, ನಂ.6, 1ನೇ ಮುಖ್ಯರಸ್ತೆ, ವೈಟ್‌ಫೀಲ್ಡ್ ರಸ್ತೆ, ಬಿ.ನಾರಾಯಣಪುರ, ಬೆಂಗಳೂರು	15,000
5	**ಮಹೇಶ್ ಚಾಂದ್ ಟಿ.ಎನ್.,** ನಂ.16, ನ್ಯೂ ನಂ. 31, ಶ್ರೀ ರಾಮಕೃಷ್ಣ ನಿಲಯ, 2ನೇ ಆಂಜನೇಯ ಟೆಂಪಲ್ ಸ್ಟ್ರೀಟ್, ಶೇಷಾದ್ರಿಪುರ, ಬೆಂಗಳೂರು	10,000
6	**ರುದ್ರೇಶ್ ಕುಮಾರ್ ಎಚ್.ಪಿ,** ನಂ.730, 11ನೇ ಮುಖ್ಯರಸ್ತೆ, 4ನೇ ಹಂತ, ಟಿ.ಕೆ.ಲೇಔಟ್, ಮೈಸೂರು	10,000
7	**ರವೀಂದ್ರನಾಥ್ ಎ.,** ನಂ.2635/77, 12ನೇ ಮುಖ್ಯರಸ್ತೆ, ಇ ಬ್ಲಾಕ್, ಎರಡನೇ ಹಂತ, ರಾಜಾಜಿನಗರ, ಬೆಂಗಳೂರು	10,000
8	**ಫ್ಯಾಮಿಲಿ ಟ್ರಸ್ಟ್,** ಕೆ.ಆರ್ ಜಗನ್ನಾಥಯ್ಯ ಶೆಟ್ಟಿ, 13ಎ, 7ನೇ ಅಡ್ಡರಸ್ತೆ, 5 ನೇ ಮುಖ್ಯರಸ್ತೆ, ಸರಸ್ವತಿಪುರಂ, ಮೈಸೂರು	10,000
9	**ಕಾರ್ತಿಕ್, ಟಿ.ದಾಸರಹಳ್ಳಿ,** ಬೆಂಗಳೂರು	5,001
10	**ಚಂದ್ರಶೇಖರಯ್ಯ ಶ್ರೀರಂಗ,** 914/ಎ, ಬಿಡಿಎ ಲೇಔಟ್, ಬಿಟಿಎಂ 4 ನೇ ಹಂತ, 2 ನೇ ಬ್ಲಾಕ್, ಬೆಂಗಳೂರು	5,001
11	**ಕುಂಭಾರ್ ಎಚ್.ನಾಗಪುರವಾಲಾ,** ನಂ.907, 3ಬಿ ಅಡ್ಡರಸ್ತೆ, 9ಎ ಮುಖ್ಯರಸ್ತೆ, ಎಚ್‌ಆರ್‌ಬಿಆರ್ ಲೇಔಟ್, 1ನೇ ಬ್ಲಾಕ್, ಕಲ್ಯಾಣನಗರ, ಬೆಂಗಳೂರು	5,001
12	**ವೆಲೇರಿಯನ್ ಮೆನೇಜಸ್,** ದೊಡ್ಡಕಲ್ಲಸಂದ್ರ, ಬೆಂಗಳೂರು	5,000
13	**ಸಿದ್ದಪ್ಪ ಗಡ್ಡೆದ,** ಸೆಕ್ಟರ್ -21, 5 ನೇ ಅಡ್ಡರಸ್ತೆ, ಬಾಗಲಕೋಟೆ	5,000
14	**ಎಂ.ಕೆ.ಜಯಲಕ್ಷ್ಮಿ,** ಎಫ್ -704, ಬ್ರಿಗೇಡ್ ಗೇಟ್ ವೇ ಬೆಂಗಳೂರು	5,000
15	**ಆರ್.ಪಾರ್ವತಿ ಬಾಯಿ,** 15 ಮಸೀದಿ ರಸ್ತೆ, ಪ್ಯಾಲೇಸ್ ಗುಟ್ಟಹಳ್ಳಿ ನಾರ್ತ್, ಬೆಂಗಳೂರು	5,000
16	**ಎಸ್.ಡಬ್ಲ್ಯೂ.ಚಿಬ್,** ಎಡಬ್ಲ್ಯೂ 1 ಫೆರ್ನ್ ಸರೋಜ್ ಅಪಾರ್ಟ್‌ಮೆಂಟ್, 7 ಎ ಅಡ್ಡರಸ್ತೆ, ಎಲ್‌ಬಿಎಸ್ ನಗರ, ಬೆಂಗಳೂರು	5,000
17	**ಸುಭಾಷಿತಾ ದತ್,** 17 ನೇ ಮುಖ್ಯರಸ್ತೆ, 1ನೇ ಅಡ್ಡರಸ್ತೆ, ಎಚ್‌ಎಎಲ್ 2ನೇ ಹಂತ, ಇಂದಿರಾನಗರ ಬೆಂಗಳೂರು	5,000
18	**ಡಾ.ಶೋಭಾ ಶ್ರೀನಾಥ್,** 858, 8ನೇ ಮುಖ್ಯರಸ್ತೆ, 17ನೇ ಅಡ್ಡರಸ್ತೆ, ಇಸ್ರೊ ಲೇಔಟ್, ಬೆಂಗಳೂರು	5,000
19	**ಪ್ರಕಾಶ್ ಮರಗನಹಳ್ಳಿ,** ಎನ್‌ಎಸ್‌ಎಸ್ ಅಧಿಕಾರಿ, ಸಹ್ಯಾದ್ರಿ ಕಾಲೇಜು, ಶಿವಮೊಗ್ಗ	5,000
20	**ವೈ.ಬಿ.ಬಡೋದಗಿ,** ಗುರುಕೃಪ, ನಂ .61/ಎ, 5ನೇ ಎ ಅಡ್ಡರಸ್ತೆ, ಎಚ್‌ಎಎಲ್ 2 ನೇ ಹಂತ, ಕೋಡಿಹಳ್ಳಿ, ಬೆಂಗಳೂರು	5,000
21	**ದಿವ್ಯಾ ಎಂ.,** ನಂ.3, ವಿಷ್ವೇಶ್ವರ ಸ್ಟ್ರೀಟ್, ಬ್ಯಾಂಕ್ ಅವಿನ್ಯೂ, ಬಾಬುಸಪಾಳ್ಯ, ಬೆಂಗಳೂರು	5,000
22	**ಹೇಮಲತಾ ಎನ್. ಶೆಟ್ಟಿ,** ನಂ.2794, 18ನೇ ಬಿ ಮುಖ್ಯರಸ್ತೆ, 5ನೇ ಬಿ ಅಡ್ಡರಸ್ತೆ, ಎಚ್‌ಎಎಲ್ ಎರಡನೇ ಹಂತ, ಬೆಂಗಳೂರು	5,000
23	**ಡಾ.ಸೌಪರ್ಣಿಕಾ ಮತ್ತು ಕುಟುಂಬ,** ಶ್ರೀರಕ್ಷಾ, ಕುವೆಂಪು ಬಡಾವಣೆ, ಕುಶಾಲನಗರ	3,001
24	**ವಿಕ್ರಂ ಶಿವಶಂಕರ್,** ಬನಶಂಕರಿ 2ನೇ ಹಂತ, ಬೆಂಗಳೂರು	3,000
25	**ಪಿ.ಎಂ.ನಾರಾಯಣ,** #873/1026, 1ನೇ ಇ ಮುಖ್ಯರಸ್ತೆ, 2ನೇ ಹಂತ, ಗಿರಿನಗರ, ಬೆಂಗಳೂರು	3,000
26	**ಕೆ.ವೆಂಕಟೇಶ್,** ನಂ. 138, 8ನೇ ಕ್ರಾಸ್, ಕಾನ್‌ಕಾರ್ಡ್ ಬಡಾವಣೆ, ಪಟ್ಟಣಗೆರೆ, ಆರ್.ಆರ್.ನಗರ, ಬೆಂಗಳೂರು	3,000
27	**ಟಿ.ಎಸ್.ವಾಮನಮೂರ್ತಿ,** C/o ಕಾಶಿರಾಮಯ್ಯ ಬ್ರಾಹ್ಮಣರ ಬೀದಿ, ಗಾಂಧಿ ಸರ್ಕಲ್, ವರ್ತೂರು, ಬೆಂಗಳೂರು	2,500
28	**ಡಾ.ಮುರಳೀಧರ ಎಂ.ಕುಲಕರ್ಣಿ,** ಶ್ರೇಯಸ್, #16-126ಜೆ (8ಎ) ಹುಡ್ಕೊ ಕಾಲೊನಿ, ಮಣಿಪಾಲ	2,001
29	**ರಾಜು ಎನ್.ಸಿ.,** ನಿವೃತ್ತ ಯೋಧ, ಯಶವಂತಪುರ, ಬೆಂಗಳೂರು	2,000
30	**ಚಂದ್ರಕಾಂತ,** ನಂ.403, ಸಿರಿ ಹನಿ, ಕತ್ರಿಗುಪ್ಪೆ, ಬನಶಂಕರಿ 3ನೇ ಹಂತ, ಬೆಂಗಳೂರು	2,000
31	**ರಂಜಿತಾ ಬಸವರಾಜು,** D/o ಬಿ.ಎಸ್. ಬಸವರಾಜು, ರಾಜಾ ಕೆಂಪೇಗೌಡ ಬಡಾವಣೆ, ಚನ್ನಪಟ್ಟಣ	2,000
32	**ಪದ್ಮಾ ಎ.ಎಸ್.,** ರವೀಂದ್ರನಗರ, 5ನೇ ಕ್ರಾಸ್, ಬಲಬದಿ, ಶಿವಮೊಗ್ಗ	2,000
33	**ಎಸ್.ಭಾರತಿ,** ಫ್ಲಾಟ್ ನಂ.103, ಶಾರದಾ ಅಪಾರ್ಟ್‌ಮೆಂಟ್ಸ್, 10ನೇ ಎ ಮುಖ್ಯರಸ್ತೆ, ಮಲ್ಲೇಶ್ವರಂ, ಬೆಂಗಳೂರು	2,000
34	**ಅಮುಧನ್ ಎಸ್, ನೈವೇಲಿ,** ತಮಿಳುನಾಡು	1,500
35	**ರಿಶಿಕಾ ಸಂತೋಷ್,** ಸಂಜಯನಗರ, ಬೆಂಗಳೂರು	1,400
36	**ಎಚ್.ಶಿವಕುಮಾರ ಸ್ವಾಮಿ,** ಎಸ್‌ಎಂಐಜಿ ಬಿ, 5ನೇ ಹಂತ, ಯಲಹಂಕ ನ್ಯೂಟೌನ್, ಬೆಂಗಳೂರು	1,051
37	**ಟಿ.ಎನ್. ನಾಗಮಲ್ಲಪ್ಪ ತೆರಕಣಾಂಬಿ,** ತೆರಕಣಾಂಬಿ ಗ್ರಾಮ ಮತ್ತು ಅಂಚೆ	1,008
38	**ಸುಧೀಂದ್ರ ಬಿಂದಗಿ,** ಎ 205, ರಘುರಾಮ್ ರೆಸಿಡೆನ್ಸಿ, ನಂ.30, ಎಂಎಸ್‌ಆರ್ ರಸ್ತೆ, ಗೋಕುಲ, ಬೆಂಗಳೂರು	1,001
39	**ಮೋಹನಕೃಷ್ಣ ಎಚ್.,** ನಂ. 5, ಚಿಕ್ಕಸಂದ್ರ, ಸಪ್ತಗಿರಿ ಎಂಜಿನಿಯರಿಂಗ್ ಕಾಲೇಜು ರಸ್ತೆ, ಎಂಪಿ ಲೇಔಟ್ ಎದುರು, ಬೆಂಗಳೂರು	1,001
40	**ಎಚ್.ಎಸ್.ಶಿವಕುಮಾರ,** ನಂ.240, 6ನೇ ಬ್ಲಾಕ್, ಎಸ್‌ಎಂವಿ ಲೇಔಟ್, ವಿಶ್ವನೀಡಂ ಅಂಚೆ, ಬೆಂಗಳೂರು	1,001
41	**ಬಿ.ಆರ್.ಗುರುರಾಜ,** ನಂ. 1401. ಟಿ4. ಜಿಎಂ ಇನ್ಫಿನಿಟ ಡ್ವೆಲ್ಲಿಂಗ್, ಹೆಸರಘಟ್ಟ ಮುಖ್ಯರಸ್ತೆ, ಬೆಂಗಳೂರು	1,001
42	**ಗೋಪಿನಾಥ್ ಬಿ.ಎಲ್.,** ನಂ.199, ಶ್ರೀ ಲಕ್ಷ್ಮೀಶ ಕೃಪ, ಭಾಷ್ಯಂ ರಸ್ತೆ, ಕಾಟನ್ ಪೇಟೆ, ಪ್ರೇಮಾ ಬಾರ್ ಎದುರು, ಬೆಂಗಳೂರು	1,000
43	**ಬಸವಕುಮಾರ್,** ಶ್ರೀನಿಧಿ ಅಪಾರ್ಟ್‌ಮೆಂಟ್, ಜೆ.ಬಿ. ಲೋಬೊ ರಸ್ತೆ, ಕೋಡಿಕಲ್ ಅಶೋಕನಗರ, ಮಂಗಳೂರು	1,000
44	**ವಲಸಪಲ್ಲಿ ಚಂದ್ರಶೇಖರ್,** 42, 448, 8ಎ ಭಾಗ್ಯ ನಗರ ಕಾಲೋನಿ, ಕಡಪ	1,000
45	**ಸುಧೀರ್ ಪಾಟೀಲ್,** ಎಫ್ 403, ಕಾನ್‌ಕಾರ್ಡ್ ಮ್ಯಾನ್‌ಹಟನ್ಸ್ ಅಪಾರ್ಟ್‌ಮೆಂಟ್ಸ್, ಎಲೆಕ್ಟ್ರಾನಿಕ್ಸ್ ಸಿಟಿ ಮೊದಲ ಹಂತ, ವಿಪ್ರೋ ಗೇಟ್ #16 ಎದುರು, ಬೆಂಗಳೂರು	1,000
46	**ಬಿ.ಕೆ.ಸುರೇಶ್, ದಿ** ಗ್ಯಾಲಕ್ಸಿ ಹೋಟೆಲ್ ಹಿಂಭಾಗ, ಹೆನ್ನಾಗರ ಕ್ರಾಸ್ ಎದುರು, ಬೊಮ್ಮಸಂದ್ರ, ಬೆಂಗಳೂರು	1,000
47	**ಡಾ.ಎಂ. ರವೀಂದ್ರ,** ನಂ. 453, 8ನೇ ಮುಖ್ಯ ರಸ್ತೆ, 13ನೇ ಕ್ರಾಸ್, ಇಸ್ರೋ ಬಡಾವಣೆ, ಬೆಂಗಳೂರು	1,000
48	**ಈಶ್ವರಪ್ಪ ಜ್ಯೋತಿ,** ಬೆಂಗಳೂರು	1,000
49	**ಭಾನುಶ್ರೀ ಬಸವರಾಜ್,** ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ನಂ. 6, 5ನೇ ಕ್ರಾಸ್, ಅಪ್ಪಾರೆಡ್ಡಿ ಕಾಂಪ್ಲೆಕ್ಸ್, ಮೈಸೂರು ರಸ್ತೆ, ಬೆಂಗಳೂರು	1,000
	ಇದುವರೆಗಿನ ಒಟ್ಟು ಮೊತ್ತ:	1,17,87,388

ಪರೀಕ್ಷೆ ರದ್ದು: ಪರ್ಯಾಯ ವಿಧಾನಕ್ಕೆ ಹಲವರ ಸ್ವಾಗತ, ಕೆಲವರ ಕಳವಳ

ಸಿಬಿಎಸ್‌ಇ 12ನೇ ತರಗತಿ ಮೌಲ್ಯಮಾಪನ ಹೇಗೆ

12ನೇ ತರಗತಿಯ ವಿದ್ಯಾರ್ಥಿಗಳ ಮೌಲ್ಯಮಾಪನವನ್ನು ಹೇಗೆ ನಡೆಸುತ್ತೇವೆ ಎಂಬುದನ್ನು ಕೇಂದ್ರೀಯ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ (ಸಿಬಿಎಸ್‌ಇ) ವಿವರಿಸಿದೆ. ಪರೀಕ್ಷೆಗೆ ಪರ್ಯಾಯವಾಗಿ ಮೌಲ್ಯಮಾಪನ ನಡೆಸಲು ರೂಪಿಸಿರುವ ಈ ವಿಧಾನವನ್ನು ಕಾರ್ಯರೂಪಕ್ಕೆ ತರಲು ಅಧಿಸೂಚನೆ ಹೊರಡಿಸಬಹುದು ಎಂದು ಸುಪ್ರೀಂ ಕೋರ್ಟ್ ಅನುಮತಿ ನೀಡಿದೆ.

- 10ನೇ ತರಗತಿಯ ಅಂತಿಮ ಥಿಯರಿ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕಗಳನ್ನು ಪಡೆದ ಮೂರು ವಿಷಯಗಳ, ಸರಾಸರಿ ಅಂಕಗಳನ್ನು ಪರಿಗಣಿಸಲಾಗುತ್ತದೆ. ಈ ಅಂಕಗಳಿಗೆ 12ನೇ ತರಗತಿಯ ಅಂತಿಮ ಫಲಿತಾಂಶದ ಶೇ 30ರಷ್ಟು ಅಂಕಗಳಿಗೆ ಇದನ್ನು ಪರಿಗಣಿಸಲಾಗುವುದು
- 11ನೇ ತರಗತಿಯ ಅಂತಿಮ ಥಿಯರಿ ಪರೀಕ್ಷೆಯಲ್ಲಿ ಒಟ್ಟು ಅಂಕಗಳನ್ನು ಪರಿಗಣಿಸಲಾಗುತ್ತದೆ. ಈ ಅಂಕಗಳಿಗೆ 12ನೇ ತರಗತಿಯ ಅಂತಿಮ ಫಲಿತಾಂಶದ ಶೇ 30ರಷ್ಟು ಅಂಕಗಳಿಗೆ ಇದನ್ನು ಪರಿಗಣಿಸಲಾಗುವುದು
- 12ನೇ ತರಗತಿಯ ಘಟಕ, ಮಧ್ಯಂತರ ಮತ್ತು ಪೂರ್ವಭಾವಿ ಥಿಯರಿ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ಪಡೆದ ಅಂಕಗಳನ್ನು ಪರಿಗಣಿಸಲಾಗುತ್ತದೆ. ಈ ಅಂಕಗಳಿಗೆ 12ನೇ ತರಗತಿಯ ಅಂತಿಮ ಫಲಿತಾಂಶದ ಶೇ 40ರಷ್ಟು ಅಂಕಗಳಿಗೆ ಇದನ್ನು ಪರಿಗಣಿಸಲಾಗುವುದು
- ಈ ಅಂಕಗಳನ್ನು 12ನೇ ತರಗತಿಯ ಅಂತಿಮ ಫಲಿತಾಂಶದಲ್ಲಿ ಥಿಯರಿ ಅಂಕಗಳನ್ನಾಗಿ ಮಾತ್ರ ಪರಿಗಣಿಸಲಾಗುತ್ತದೆ
- 12ನೇ ತರಗತಿಯ ಪ್ರಾಯೋಗಿಕ ಪರೀಕ್ಷೆ ಮತ್ತು ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಶಾಲೆಗಳು ಈಗಾಗಲೇ ನಿಗದಿ ಮಾಡಿವೆ. ಆ ಅಂಕಗಳನ್ನು ಯಥಾವತ್ತಾಗಿ ಪರಿಗಣಿಸಲಾಗುವುದು
- ಥಿಯರಿ ಅಂಕಗಳು ಮತ್ತು ಪ್ರಾಯೋಗಿಕ ಪರೀಕ್ಷೆ/ಆಂತರಿಕ ಮೌಲ್ಯಮಾಪನದ ಅಂಕಗಳನ್ನು ಕ್ರೋಡೀಕರಿಸಿ ಅಂತಿಮ ಫಲಿತಾಂಶ ಪ್ರಕಟಿಸಲಾಗುವುದು
- ಅಗತ್ಯ ಮಾನದಂಡಗಳನ್ನು ಪೂರೈಸದೇ ಇರುವ ವಿದ್ಯಾರ್ಥಿಗಳು ಅನುತ್ತೀರ್ಣರಾಗುತ್ತಾರೆ. ಅವರು ಪೂರಕ ಪರೀಕ್ಷೆಗಳನ್ನು ಬರೆಯಬಹುದು

ಆಕ್ಷೇಪವಿದ್ದರೆ ಭೌತಿಕ ಪರೀಕ್ಷೆ...

'ಈ ಮೌಲ್ಯಮಾಪನ ವ್ಯವಸ್ಥೆಯಲ್ಲಿ ನೀಡಲಾದ ಅಂಕದ ಬಗ್ಗೆ ಆಕ್ಷೇಪ ಇದ್ದರೆ, ವಿದ್ಯಾರ್ಥಿಗಳು ಭೌತಿಕವಾಗಿ ಪರೀಕ್ಷೆ ಎದುರಿಸುವ ವ್ಯವಸ್ಥೆ ಇರಬೇಕು. ಕೋವಿಡ್ ಮಾರ್ಗಸೂಚಿಗಳ ಅನ್ವಯ ಈ ಪರೀಕ್ಷೆ ನಡೆಸಲು ಅವಕಾಶವಿರಬೇಕು' ಎಂದು ಸುಪ್ರೀಂ ಕೋರ್ಟ್ ಹೇಳಿದೆ.

'ಆದರೆ ಆಕ್ಷೇಪ ಸಲ್ಲಿಸಲು, ಪರೀಕ್ಷೆ ನಡೆಸಲು ಕಾಲಮಿತಿಯನ್ನು ಹಾಕಿಕೊಳ್ಳಬೇಕು. ಭೌತಿಕ ಪರೀಕ್ಷೆಯ ದಿನಾಂಕವನ್ನು ನಿಗದಿ ಮಾಡಬೇಕು. ಮುಂದಿನ ವಿಚಾರಣೆ ವೇಳೆಗೆ ಈ ಬಗ್ಗೆ ವರದಿ ಸಲ್ಲಿಸಿ. ಆದರೆ ನಿಮ್ಮ ಮೌಲ್ಯಮಾಪನ ವ್ಯವಸ್ಥೆಯನ್ನು ಮುಂದುವರಿಸಲು ನೀವು ಮುಕ್ತರಾಗಿದ್ದೀರಿ' ಎಂದು ಸುಪ್ರೀಂ ಕೋರ್ಟ್ ಪೀಠವು, ಎರಡೂ ಮಂಡಳಿ ಮತ್ತು ಸರ್ಕಾರದ ಪರವಾಗಿ ಹಾಜರಿದ್ದ ಅಟಾರ್ನಿ ಜನರಲ್ ಕೆ.ಕೆ. ವೇಣುಗೋಪಾಲ್ ಅವರಿಗೆ ಸೂಚಿಸಿತು. 'ಈ ಸಲಹೆಗಳನ್ನು ಖಂಡಿತವಾಗಿ ಪರಿಗಣಿಸುತ್ತೇವೆ' ಎಂದು ವೇಣುಗೋಪಾಲ್ ಅವರು ಪೀಠಕ್ಕೆ ಭರವಸೆ ನೀಡಿದರು. ಜುಲೈ 21ರಂದು ಮುಂದಿನ ವಿಚಾರಣೆ ನಡೆಯಲಿದೆ.

ತಜ್ಞರ ಸಮಿತಿ

ನಿಗದಿಯಂತೆ ಮೌಲ್ಯಮಾಪನ ನಡೆಸಿ, 12ನೇ ತರಗತಿಯ ಅಂತಿಮ ಫಲಿತಾಂಶವನ್ನು ಸಿದ್ಧಪಡಿಸಲು ಶಾಲೆಗಳು ತಜ್ಞರ ಸಮಿತಿಯನ್ನು ನೇಮಕ ಮಾಡಬೇಕಾಗುತ್ತದೆ. ಶಾಲೆಯ ಇಬ್ಬರು ಅತ್ಯಂತ ಹಿರಿಯ ಶಿಕ್ಷಕರನ್ನು ಈ ಸಮಿತಿಗೆ ನೇಮಕ ಮಾಡಬೇಕು. ಅಗತ್ಯವಿದ್ದರೆ, ಶಾಲೆಯ ಸಿಬ್ಬಂದಿಯಲ್ಲದ ತಜ್ಞರೊಬ್ಬರನ್ನು ಸಮಿತಿಗೆ ನೇಮಕ ಮಾಡಬಹುದು ಎಂದು ಸಿಬಿಎಸ್‌ಇ ತಿಳಿಸಿದೆ.

ಮಿಶ್ರ ಪ್ರತಿಕ್ರಿಯೆ

ಸಿಬಿಎಸ್‌ಇಯ ಮೌಲ್ಯಮಾಪನ ವ್ಯವಸ್ಥೆಗೆ ಶಿಕ್ಷಣ ತಜ್ಞರು ಮತ್ತು ವಿದ್ಯಾರ್ಥಿ ಸಮುದಾಯದಿಂದ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. 'ಇಂತಹ ಸಂಕಷ್ಟದ ಕಾಲದಲ್ಲಿ ಇದು ಅತ್ಯಂತ ಸಮತೋಲನದಿಂದ ಕೂಡಿದ ಮಾರ್ಗ' ಎಂದು ಕೆಲವು ಶಿಕ್ಷಣ ತಜ್ಞರು ಈ ವಿಧಾನವನ್ನು ಸ್ವಾಗತಿಸಿದ್ದಾರೆ.

'ಕೆಲವು ವಿದ್ಯಾರ್ಥಿಗಳು ಮುಂದಿನ ತರಗತಿಗಳಿಗೆ ಹೋದಂತೆ ಸುಧಾರಿಸುತ್ತಾರೆ. ಅಂತಹವರು ಹಿಂದಿನ ತರಗತಿಗಳಲ್ಲಿ ಕಡಿಮೆ ಅಂಕಗಳನ್ನು ಪಡೆದಿರಬಹುದು. 10, 11ನೇ ತರಗತಿಯ ಪರೀಕ್ಷೆಯಲ್ಲಿ ಅವರು ಪಡೆದ ಅಂಕಗಳನ್ನು ಪರಿಗಣಿಸಿ 12ನೇ ತರಗತಿಯ ಫಲಿತಾಂಶ ನೀಡುವುದು ಸರಿಯಲ್ಲ. ಅಂತಹ ವಿದ್ಯಾರ್ಥಿಗಳಿಗೆ ಅನ್ಯಾಯ ಆಗಬಹುದು' ಎಂದು ಗುಣಮಟ್ಟದ ಶಿಕ್ಷಣ ಉತ್ತೇಜಕ ಸಂಸ್ಥೆ ಎಫ್‌ಐಸಿಸಿಐ ಮುಖ್ಯಸ್ಥ ಮಣಿತ್ ಜೈನ್ ಕಳವಳ ವ್ಯಕ್ತಪಡಿಸಿದ್ದಾರೆ.

'10ನೇ ತರಗತಿಯ ಅಂತಿಮ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕಗಳನ್ನು ಪಡೆದ ವಿಷಯಗಳ ಸರಾಸರಿ ಅಂಕಗಳನ್ನು ಪರಿಗಣಿಸುವುದರ ಹಿಂದೆ ಯಾವುದೇ ವೈಜ್ಞಾನಿಕ ಕಾರಣವಿಲ್ಲ. 10, 11ನೇ ತರಗತಿಯ ಅಂಕಗಳ ಆಧಾರದ ಮೇಲೆ 12ನೇ ತರಗತಿಯ ಅಂಕಗಳನ್ನು ನೀಡುವುದು ವೈಜ್ಞಾನಿಕವಾಗಿ ಸರಿಯಲ್ಲ. ಆದರೆ ಇದು ಈ ಸಮಯದಲ್ಲಿ ಅತ್ಯಗತ್ಯವಾದ ವಿಧಾನವಾಗಿದೆ. ಆದರೆ ಈ ವಿಧಾನದಲ್ಲಿ ನಿಖರತೆ ಇಲ್ಲ' ಎಂದು ಹೆರಿಟೇಜ್ ಸ್ಕೂಲ್ಸ್‌ನ ಸಿಇಒ ವಿಷ್ಣು ಕಾರ್ತಿಕ್ ಮಿಶ್ರ ಪ್ರತಿಕ್ರಿಯೆ ನೀಡಿದ್ದಾರೆ.

ಈ ಸುದ್ದಿ ಬಹಿರಂಗವಾದ ನಂತರ ಸಾಮಾಜಿಕ ಜಾಲತಾಣಗಳಲ್ಲಿ ಭಾರಿ ಚರ್ಚೆಯಾಗುತ್ತಿದೆ. ಕೆಲವು ವಿದ್ಯಾರ್ಥಿಗಳು ಈ ವಿಧಾನವನ್ನು ಸ್ವಾಗತಿಸಿದ್ದಾರೆ. ಕೆಲವು ವಿದ್ಯಾರ್ಥಿಗಳು ಈ ವಿಧಾನವನ್ನು ನಿರಾಕರಿಸಿದ್ದಾರೆ. '10, 11ನೇ ತರಗತಿಯಲ್ಲಿ ನಾನು ಉತ್ತಮ ಅಂಕಗಳನ್ನು ಪಡೆದುಕೊಂಡಿದ್ದೇನೆ. ಹೀಗಾಗಿ 12ನೇ ತರಗತಿಯಲ್ಲಿ ಹೆಚ್ಚು ಅಂಕ ಬರುತ್ತದೆ' ಎಂದು ಕೆಲವು ವಿದ್ಯಾರ್ಥಿಗಳು ಸಂತಸ ವ್ಯಕ್ತಪಡಿಸಿದ್ದಾರೆ.

'10ನೇ ತರಗತಿಯಲ್ಲಿ ಹೆಚ್ಚು ಅಂಕ ಪಡೆದಿದ್ದೆ. ಆದರೆ 11ನೇ ತರಗತಿಯನ್ನು ಗಂಭೀರವಾಗಿ ಪರಿಗಣಿಸಿರಲಿಲ್ಲ, ಅಲ್ಲಿ ಹೆಚ್ಚು ಅಂಕ ಬಂದಿಲ್ಲ. 12ನೇ ತರಗತಿ ಪರೀಕ್ಷೆಗೆ ಅತ್ಯುತ್ತಮವಾಗಿ ಸಿದ್ಧತೆ ನಡೆಸಿದ್ದೆ. ಆದರೆ, ಈಗ 11ನೇ ತರಗತಿಯ ಅಂಕ ಪರಿಗಣಿಸುವುದರಿಂದ ಒಟ್ಟು ಅಂಕ ಕಡಿಮೆಯಾಗಲಿದೆ' ಎಂದು ಕೆಲವು ವಿದ್ಯಾರ್ಥಿಗಳು ಆತಂಕ ವ್ಯಕ್ತಪಡಿಸಿದ್ದಾರೆ.

ಆಧಾರ: ಪಿಟಿಐ

ಗ್ರಾಮೀಣ ಭಾರತಕ್ಕೆ ಗೂಗಲ್ ನೆರವು: ₹113 ಕೋಟಿ ದೇಣಿಗೆ ಘೋಷಣೆ

ನವದೆಹಲಿ (ಪಿಟಿಐ): ಭಾರತದ ಗ್ರಾಮೀಣ ಭಾಗಗಳಲ್ಲಿ 80 ಆಮ್ಲಜನಕ ಉತ್ಪಾದನಾ ಘಟಕಗಳ ಸ್ಥಾಪನೆ ಮತ್ತು ಆರೋಗ್ಯ ಕಾರ್ಯಕರ್ತರ ಕೌಶಲ ಅಭಿವೃದ್ಧಿಗಾಗಿ ₹113 ಕೋಟಿ ದೇಣಿಗೆ ನೀಡುವುದಾಗಿ ಟೆಕ್ ದೈತ್ಯ ಗೂಗಲ್ ಸಂಸ್ಥೆಯು ಗುರುವಾರ ಹೇಳಿದೆ.

'ಗೂಗಲ್ ಸಂಸ್ಥೆಯು ಇತರೆ ಸಂಸ್ಥೆಗಳೊಂದಿಗೆ ಸೇರಿ ಗ್ರಾಮೀಣ ಪ್ರದೇಶದ ಆರೋಗ್ಯ ಸೌಲಭ್ಯಗಳಿಗಾಗಿ ಸುಮಾರು 80 ಆಮ್ಲಜನಕ ಉತ್ಪಾದನಾ ಘಟಕಗಳ ಖರೀದಿ ಮತ್ತು ಸ್ಥಾಪನೆ ಮಾಡಲಿದೆ. ಇದಕ್ಕಾಗಿ 'ಗೀವ್‌ಇಂಡಿಯಾ'ಗೆ ₹90 ಕೋಟಿ ಮತ್ತು 'ಪಾಥ್'ಗೆ ₹18.5 ಕೋಟಿ ದೇಣಿಗೆ ನೀಡಲಾಗುವುದು' ಎಂದು ಗೂಗಲ್ ತಿಳಿಸಿದೆ.

20,000 ಆರೋಗ್ಯ ಕಾರ್ಯಕರ್ತರಿಗೆ ಕೋವಿಡ್ ನಿರ್ವಹಣೆಯ ವಿಶೇಷ ತರಬೇತಿ ನೀಡಲು ಮತ್ತು ಗ್ರಾಮೀಣ ಆರೋಗ್ಯ ವ್ಯವಸ್ಥೆಗಳನ್ನು ಬಲಪಡಿಸಲು ಅಪೋಲೊ ಮೆಡ್‌ಸ್ಕಿಲ್ಸ್‌ಗೆ ಗೂಗಲ್ ಹಣಕಾಸಿನ ನೆರವು ನೀಡಲಿದೆ.

'ಭಾರತದ 15 ರಾಜ್ಯಗಳಲ್ಲಿ 180,000 ಆಶಾ ಕಾರ್ಯಕರ್ತೆಯರು ಮತ್ತು 40,000 ಎಎನ್‌ಎಂ ಕಾರ್ಯಕರ್ತರಿಗೆ ಕೌಶಲ ಕಾರ್ಯಕ್ರಮಗಳನ್ನು ನಡೆಸಲು ಅರ್ಮಾನ್ ಸಂಸ್ಥೆಗೆ ₹3.6 ಕೋಟಿ ನೆರವು ನೀಡಲಾಗುವುದು' ಎಂದು ಗೂಗಲ್ ಇಂಡಿಯಾದ ಮುಖ್ಯಸ್ಥ ಸಂಜಯ್ ಗುಪ್ತಾ ಅವರು ವರ್ಚುವಲ್ ಸುದ್ದಿಗೋಷ್ಠಿಯಲ್ಲಿ ಹೇಳಿದ್ದಾರೆ.

'ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಆರೋಗ್ಯ ಸೌಲಭ್ಯಗಳನ್ನು ವಿಸ್ತರಿಸಲು ಮತ್ತು ಸದೃಢಗೊಳಿಸಲು ₹135 ಕೋಟಿ ನೀಡುವುದಾಗಿ ಗೂಗಲ್ ಸಂಸ್ಥೆ ಏಪ್ರಿಲ್ ತಿಂಗಳಿನಲ್ಲಿ ಘೋಷಿಸಿತ್ತು. ಇದರ ಭಾಗವಾಗಿ ಕೋವಿಡ್ ಬಿಕ್ಕಟ್ಟಿನಿಂದ ತೊಂದರೆಗೊಳಾಗಿರುವ ಬಡ ಕುಟುಂಬಗಳಿಗೆ ನೆರವಾಗಲು 'ಗೀವ್‌ಇಂಡಿಯಾ' ಮತ್ತು ಯುನಿಸೆಫ್‌ಗೆ ₹20 ಕೋಟಿ ನೀಡಲಾಗಿದೆ' ಎಂದು ಅವರು ತಿಳಿಸಿದರು.

ರೋಹಿಂಗ್ಯಾ ನಿರಾಶ್ರಿತರನ್ನು ಜಲಗಡಿ ದಾಟಿಸಿದ ಕರಾವಳಿ ಪಡೆ

ನವದೆಹಲಿ: ಅಂಡಮಾನ್ ಬಳಿ ಸಮುದ್ರದಲ್ಲಿ ಕೆಟ್ಟುನಿಂತಿದ್ದ ದೋಣಿಯಲ್ಲಿದ್ದ 78 ರೋಹಿಂಗ್ಯಾ ನಿರಾಶ್ರಿತರನ್ನು ಭಾರತೀಯ ಕರಾವಳಿ ಕಾವಲು ಪಡೆಯ ಸಿಬ್ಬಂದಿ ಸುರಕ್ಷಿತವಾಗಿ ಇಂಡೊನೇಷ್ಯಾ ಬಳಿಯ ಅಂತರರಾಷ್ಟ್ರೀಯ ಜಲವ್ಯಾಪ್ತಿಯಲ್ಲಿರುವ ಪಲೌ ಇಡಮಾನ್ ದ್ವೀಪಕ್ಕೆ ತಲುಪಿಸಿದೆ. ಭಾರತೀಯ ನೆಲದಲ್ಲಿ ಇಳಿಯಲು ಈ ನಿರಾಶ್ರಿತರಿಗೆ ಅವಕಾಶ ನೀಡಬೇಕು ಎಂದು ವಿಶ್ವ ಸಂಸ್ಥೆ ಮಾಡಿದ್ದ ಮನವಿಯನ್ನು ತಳ್ಳಿ ಹಾಕಿ, ಈ ಕ್ರಮ ತೆಗದುಕೊಳ್ಳಲಾಗಿದೆ.

ನಿರಾಶ್ರಿತರು ಭಾರತ ಪ್ರವೇಶಿಸಲು ಅವಕಾಶ ನೀಡದೇ ಇರುವುದಕ್ಕೆ ಭಾರತ ಸರ್ಕಾರದ ವಿರುದ್ಧ ಜಾಗತಿಕ ಮಾನವ ಹಕ್ಕುಗಳ ಸಂಘಟನೆಗಳು ಅಸಮಾಧಾನ ವ್ಯಕ್ತಪಡಿಸಿವೆ.

ಸುಮಾರು 110 ದಿನಗಳ ಹಿಂದೆ ಈ ನಿರಾಶ್ರಿತರು ಬಾಂಗ್ಲಾದೇಶದ ಕಾಕ್ಸ್ ಬಜಾರ್ ಮತ್ತು ತೆಕ್ನಾಫ್‌ನಿಂದ ದೋಣಿಯಲ್ಲಿ ಮಲೇಷ್ಯಾಕ್ಕೆ ಹೊರಟಿದ್ದರು. ಕೆಲವೇ ದಿನಗಳಲ್ಲಿ ಈ ದೋಣಿಯ ಎಂಜಿನ್ ಕೆಟ್ಟು, ಅಂಡಮಾನ್ ದ್ವೀಪಕ್ಕೆ ಸಮೀಪದಲ್ಲಿ, ಭಾರತದ ಜಲಗಡಿಯಲ್ಲಿ ದೋಣಿ ನಿಂತಿತ್ತು. ಹಲವು ದಿನಗಳವರೆಗೆ ನೀರಿನಲ್ಲೇ ಇದ್ದ ಅವರನ್ನು ಭಾರತೀಯ ಕರಾವಳಿ ಕಾವಲು ಪಡೆ ಪತ್ತೆ ಮಾಡಿತ್ತು.

ಈ ನಿರಾಶ್ರಿತರನ್ನು ಭಾರತದ ನೆಲದಲ್ಲಿ ಇಳಿಯಲು ಅನುಮತಿ ನೀಡಿ ಎಂದು ವಿಶ್ವ ಸಂಸ್ಥೆ ಮನವಿ ಮಾಡಿತ್ತು. ಆದರೆ ಇದನ್ನು ಭಾರತೀಯ ವಿದೇಶಾಂಗ ಸಚಿವಾಲಯ ನಿರಾಕರಿಸಿತ್ತು. ಅಲ್ಲದೆ, ಅವರನ್ನು ವಾಪಸ್ ಕರೆಸಿಕೊಳ್ಳುವಂತೆ ಬಾಂಗ್ಲಾದೇಶಕ್ಕೆ ಮನವಿ ಮಾಡಿತ್ತು. ನಿರಾಶ್ರಿತರನ್ನು ಕರೆಸಿಕೊಳ್ಳುವುದಿಲ್ಲ ಎಂದು ಬಾಂಗ್ಲಾದೇಶ ಹೇಳಿತ್ತು. ಈ ಎಲ್ಲಾ ಪ್ರಕ್ರಿಯೆಗಳು ಆಗುವಷ್ಟರಲ್ಲಿ 3 ತಿಂಗಳು ಆಗಿತ್ತು. ಮೂರು ತಿಂಗಳವರೆಗೂ ಈ ನಿರಾಶ್ರಿತರಿಗೆ ಕಾವಲು ಪಡೆಯು ಆಹಾರ, ನೀರು ಮತ್ತು ವೈದ್ಯಕೀಯ ನೆರವು ಒದಗಿಸಿತ್ತು.

'ವಿಚಾರಣೆಗೆ ಒಳಪಡುವ ಸುಳಿವು: ದೇಶ ತೊರೆದ ಚೋಕ್ಸಿ'

ನವದೆಹಲಿ (ಪಿಟಿಐ): ಜಾರಿ ನಿರ್ದೇಶನಾಲಯವು (ಇ.ಡಿ) 2017ರಲ್ಲಿ ತನ್ನನ್ನು ವಿಚಾರಣೆಗೆ ಒಳಪಡಿಸಬಹುದು ಎಂಬ ಸುಳಿವು ವಜ್ರವ್ಯಾಪಾರಿ ಮೆಹುಲ್ ಚೋಕ್ಸಿಗೆ ಇತ್ತು. ಇದೇ ಕಾರಣಕ್ಕೆ ಆತ ದೇಶ ತೊರೆದಿದ್ದಲ್ಲದೇ ಸಾಕ್ಷ್ಯಗಳನ್ನು ಮುಚ್ಚಿಡುವ ಪ್ರಯತ್ನ ಮಾಡಿದ್ದಾರೆ ಎಂದು ಸಿಬಿಐ ಹೇಳಿದೆ.

ಚೋಕ್ಸಿ ವಿರುದ್ಧ ಸಲ್ಲಿಸಿರುವ ಪೂರಕ ಚಾರ್ಜ್‌ಶೀಟ್‌ನಲ್ಲಿ ಸಿಬಿಐ ಈ ವಿಷಯವನ್ನು ಉಲ್ಲೇಖಿಸಿದೆ. ಸಾಕ್ಷ್ಯಗಳ ನಾಶಕ್ಕೆ ಯತ್ನ ಆರೋಪಕ್ಕೆ ಸಂಬಂಧಿಸಿ ಐಪಿಸಿ ಸೆಕ್ಷನ್ 201ಅಡಿ ಪ್ರಕರಣ ದಾಖಲಿಸಿಕೊಂಡಿದೆ.

ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ ಚೋಕ್ಸಿ ಕೋಟ್ಯಂತರ ರೂಪಾಯಿ ವಂಚಿಸಿದ ಆರೋಪಕ್ಕೆ ಸಂಬಂಧಿಸಿದ ಪ್ರಕರಣ ಇದಾಗಿದೆ.

'ವಾಹನಗಳಿಗೆ ಏಕರೂಪ ಮಾಲಿನ್ಯ ನಿಯಂತ್ರಣ ಪತ್ರ'

ನವದೆಹಲಿ (ಪಿಟಿಐ): ದೇಶದಾದ್ಯಂತ ಎಲ್ಲ ವಾಹನಗಳಿಗೆ ಏಕರೂಪ ಪಿಯುಸಿ (ಮಾಲಿನ್ಯ ನಿಯಂತ್ರಣ) ಪ್ರಮಾಣ ಪತ್ರ ನೀಡುವಂತೆ ಮತ್ತು ಅದರ ದತ್ತಾಂಶಗಳನ್ನು 'ನ್ಯಾಷನಲ್ ರಿಜಿಸ್ಟರ್'ನಲ್ಲಿ ಸೇರಿಸುವಂತೆ ಕೇಂದ್ರ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಅಧಿಸೂಚನೆ ಹೊರಡಿಸಿದೆ.

ಕೇಂದ್ರ ಮೋಟಾರು ವಾಹನ ನಿಯಮ–1989ರ ನಿಯಮಗಳನ್ನು ಸಾರಿಗೆ ಸಚಿವಾಲಯವು ಬದಲಾಯಿಸಿದೆ. ಅದರಂತೆ ಪಿಯುಸಿ ಪ್ರಮಾಣ ಪತ್ರಗಳಿಗೆ ಕ್ಯೂಆರ್ ಕೋಡ್ ನೀಡಲಾಗುತ್ತದೆ. ಅದರಲ್ಲಿ ವಾಹನದ ಎಂಜಿನ್–ಚಾಸಿ ಸಂಖ್ಯೆ, ಮಾಲೀಕರ ಮೊಬೈಲ್ ಸಂಖ್ಯೆ, ವಿಳಾಸ ಮತ್ತು ವಾಹನದ ಇಂಗಾಲ ಹೊರಸೂಸುವಿಕೆಯ ಸ್ಥಿತಿಯ ವಿವರಗಳು ಇರಲಿವೆ.

'ಪ್ರಮಾಣಪತ್ರದಲ್ಲಿ ವಾಹನ ಮಾಲೀಕರ ಮೊಬೈಲ್ ಸಂಖ್ಯೆಯನ್ನು ಕಡ್ಡಾಯವಾಗಿ ನಮೂದಿಸಬೇಕು. ಆ ಸಂಖ್ಯೆಗೆ ಪ್ರಮಾಣಪತ್ರದ ಸಿಂಧುತ್ವ ಮತ್ತು ಶುಲ್ಕದ ಕುರಿತು ಸಂದೇಶ ರವಾನಿಸಲಾಗುತ್ತದೆ,' ಎಂದೂ ಹೇಳಿಕೆಯಲ್ಲಿ ಉಲ್ಲೇಖಿಸಲಾಗಿದೆ.

'ಇಂಗಾಲ ಹೊರಸೂಸುವಿಕೆ ಪ್ರಮಾಣ ನಿಗದಿತ ಪ್ರಮಾಣಕ್ಕಿಂತಲೂ ಹೆಚ್ಚಿದ್ದರೆ ಅಂಥ ವಾಹನಗಳ ಮಾಲೀಕರಿಗೆ ನಿರಾಕರಣ ಪತ್ರ ನೀಡಲಾಗುತ್ತದೆ. ಒಂದು ವೇಳೆ ವಾಹನವೂ ಸರ್ಕಾರದ ಮಾನದಂಡಗಳಿಗೆ ಅನುಗುಣವಾಗಿಲ್ಲ ಎಂಬುದು ಅಧಿಕಾರಿಗಳಿಗೆ ತಿಳಿದುಬಂದರೆ ಅವರು ವಾಹನದ ಪರೀಕ್ಷೆ ನಡೆಸಲು ಮಾಲೀಕರಿಗೆ ತಿಳಿಸಬಹುದು. ಪರೀಕ್ಷೆ ನಂತರವೂ ವಾಹನವು ಮಾನದಂಡಗಳಿಗೆ ಅನುಗುಣವಾಗಿ ಇಲ್ಲ ಎಂದು ಗೊತ್ತಾದರೆ ವಾಹನದ ಮಾಲೀಕ ಅಥವಾ ಸಂಬಂಧಿಸಿದವರಿಗೆ ದಂಢ ವಿಧಿಸಲಾಗುತ್ತದೆ. ಇದರ ಜಾರಿ ವ್ಯವಸ್ಥೆಯನ್ನು ತಂತ್ರಜ್ಞಾನದೊಂದಿಗೆ ಹೊಂದಿಸಲಾಗಿದೆ,' ಎಂದಿದೆ.

ವಾಹನಗಳ ಪರವಾನಗಿ: ಗಡುವು ವಿಸ್ತರಣೆ

ನವದೆಹಲಿ (ಪಿಟಿಐ): ಕೋವಿಡ್ ಸಾಂಕ್ರಾಮಿಕ ರೋಗದ ಹಿನ್ನೆಲೆಯಲ್ಲಿ ಮೋಟಾರು ವಾಹನ ದಾಖಲೆಗಳಾದ ಚಾಲನಾ ಪರವಾನಗಿ(ಡಿಎಲ್), ವಾಹನದ ನೋಂದಣಿ ಪ್ರಮಾಣ ಪತ್ರ (ಆರ್‌ಸಿ) ಸೇರಿದಂತೆ ವಿವಿಧ ಪರವಾನಗಿ ದಾಖಲೆಗಳ ಸಿಂಧುತ್ವಕ್ಕೆ ನಿಗದಿಪಡಿಸಿದ್ದ ಗಡುವನ್ನು ಸರ್ಕಾರ ಸೆಪ್ಟೆಂಬರ್ 30ರವರೆಗೆ ವಿಸ್ತರಿಸಿದೆ.

ಈ ಕುರಿತು ಗುರುವಾರ ಆದೇಶ ಹೊರಡಿಸಿರುವ ಕೇಂದ್ರ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯ ಲೈಸೆನ್ಸ್, ರಿಜಿಸ್ಟ್ರೇಷನ್ ಇನ್ನಿತರೆ ದಾಖಲಾತಿಗಳ ಮಾನ್ಯ ಮಾಡುವುದನ್ನು ಸೆ. 30ರವರೆಗೆ ವಿಸ್ತರಿಸಿರುವುದಾಗಿ ಹೇಳಿದೆ.

ಮಾಜಿ ಪೊಲೀಸ್ ಅಧಿಕಾರಿ ಪ್ರದೀಪ್ ಶರ್ಮಾ ಬಂಧನ

ಮುಂಬೈ (ಪಿಟಿಐ): ಉದ್ಯಮಿ ಮುಖೇಶ್ ಅಂಬಾನಿ ನಿವಾಸದ ಸಮೀಪ ಸ್ಫೋಟಕಗಳಿದ್ದ ವಾಹನ ಪತ್ತೆ ಮತ್ತು ಮನ್‌ಸುಖ್ ಹಿರೇನ್ ಕೊಲೆ ಪ್ರಕರಣದ ಆರೋಪದಡಿ ಎನ್‌ಐಎ ಅಧಿಕಾರಿಗಳು ಗುರುವಾರ ಮಾಜಿ ಪೊಲೀಸ್ ಅಧಿಕಾರಿ, 'ಎನ್‌ಕೌಂಟರ್ ಪರಿಣತ'ರಾಗಿದ್ದ ಪ್ರದೀಪ್ ಶರ್ಮಾ ಅವರನ್ನು ಬಂಧಿಸಿದ್ದಾರೆ.

ಬುಧವಾರ ರಾತ್ರಿ ಲೋನವಾಲಾದಲ್ಲಿ ಶರ್ಮಾ ಅವರನ್ನು ಅಧಿಕಾರಿಗಳು ವಶಕ್ಕೆ ಪಡೆದಿದ್ದು, ಎನ್‌ಐಎ ಕಚೇರಿಗೆ ಕರೆತಂದು ವಿಚಾರಣೆಗೆ ಒಳಪಡಿಸಿದರು. ಶರ್ಮಾ ನಿವಾಸದ ಮೇಲೂ ದಾಳಿ ನಡೆಸಿದ್ದರು.

ಸಂಕ್ಷಿಪ್ತ ಸುದ್ದಿ

ಗಡಿಯಲ್ಲಿ 12 ನೂತನ ರಸ್ತೆಗಳು ಬಳಕೆಗೆ ಮುಕ್ತ

ಕಿಮಿನ್, ಅರುಣಾಚಲ ಪ್ರದೇಶ (ಪಿಟಿಐ): 'ಭಾರತ ವಿಶ್ವಶಾಂತಿಯನ್ನು ಪ್ರತಿಪಾದಿಸುತ್ತದೆ. ಆದರೆ, ದಾಳಿ ಕ್ರಿಯೆಗಳು ನಡೆದಲ್ಲಿ ಅದಕ್ಕೆ ತಕ್ಕ ಪ್ರತಿರೋಧ ಒಡ್ಡಲು ಸಜ್ಜಾಗಿದೆ' ಎಂದು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಗುರುವಾರ ಹೇಳಿದರು.

12 ನೂತನ ರಸ್ತೆಗಳನ್ನು ಬಳಕೆಗೆ ಮುಕ್ತಗೊಳಿಸಿದ ಅವರು, ಗಡಿ ಭಾಗದಲ್ಲಿ ಶಾಂತಿಗೆ ಭಂಗ ಉಂಟುಮಾಡುವ ಯಾವುದೇ ಶಕ್ತಿಗಳು ಅದರ ಪ್ರತಿಕೂಲ ಪರಿಣಾಮವನ್ನು ಎದುರಿಸಬೇಕಾದಿತು ಎಂದು ಎಚ್ಚರಿಸಿದರು.

ದೀಪ್ ಸಿಧು ವಿರುದ್ಧ ಚಾರ್ಜ್‌ಶೀಟ್

ನವದೆಹಲಿ (ಪಿಟಿಐ): ಕಳೆದ ವರ್ಷ ಗಣರಾಜ್ಯೋತ್ಸವದ ವೇಳೆ ದೆಹಲಿಯ ಕೆಂಪುಕೋಟೆ ಬಳಿ ನಡೆದ ಗಲಭೆಗೆ ಸಂಬಂಧಿಸಿದಂತೆ ನಟ, ಹೋರಾಟಗಾರ ದೀಪ್ ಸಿಧು ಮತ್ತು ಇತರರ ವಿರುದ್ಧ ದೆಹಲಿ ಪೊಲೀಸರು ನ್ಯಾಯಾಲಯಕ್ಕೆ ಪೂರಕ ಚಾರ್ಜ್ ಶೀಟ್ ಸಲ್ಲಿಸಿದ್ದಾರೆ.

ಮುಖ್ಯ ಮೆಟ್ರೋಪಾಲಿಟನ್ ಮ್ಯಾಜಿಸ್ಟ್ರೇಟ್ ಗಜೇಂದ್ರ ಸಿಂಗ್ ನಗರ ಅವರು ಜೂನ್ 19 ರಂದು ಮಧ್ಯಾಹ್ನ 2 ಗಂಟೆಗೆ ಹೊಸ ಚಾರ್ಜ್‌ಶೀಟ್ ಪರಿಶೀಲಿಸಿ ಆದೇಶ ನೀಡಲಿದ್ದಾರೆ.

ರಾಮ್‌ದೇವ್ ವಿರುದ್ಧ ಎಫ್‌ಐಆರ್

ರಾಯಪುರ (ಪಿಟಿಐ): ಕೋವಿಡ್–19ರ ಚಿಕಿತ್ಸೆಗೆ ಬಳಸುತ್ತಿರುವ ಔಷಧಿ ಬಗ್ಗೆ ಸುಳ್ಳು ಮಾಹಿತಿಯನ್ನು ಹರಡುತ್ತಿದ್ದಾರೆ ಎಂಬ ಆರೋಪದಡಿ ಯೋಗ ಗುರು ಬಾಬಾ ರಾಮ್‌ದೇವ್ ವಿರುದ್ಧ ಛತ್ತೀಸಗಢದ ರಾಯಪುರ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

'ಭಾರತೀಯ ವೈದ್ಯಕೀಯ ಮಂಡಳಿಯ (ಐಎಂಎ) ಛತ್ತೀಸಗಡ ಶಾಖೆಯವರು ನೀಡಿದ ದೂರಿನ ಆಧಾರದ ಮೇರೆಗೆ ರಾಮ್‌ದೇವ್ ಅವರ ವಿರುದ್ಧ ಬುಧವಾರ ರಾತ್ರಿ ಎಫ್‌ಐಆರ್ ದಾಖಲಿಸಲಾಗಿದೆ. ಈ ಸಂಬಂಧ ತನಿಖೆ ಆರಂಭಿಸಲಾಗಿದೆ' ಎಂದು ರಾಯಪುರದ ಪೊಲೀಸ್ ವರಿಷ್ಠಾಧಿಕಾರಿ ಅಜಯ್ ಯಾದವ್ ಅವರು ತಿಳಿಸಿದ್ದಾರೆ.

ಚೀನಾ: ಮಾನವ ಸಹಿತ ಗಗನಯಾನ ಯಶಸ್ವಿ

ಬೀಜಿಂಗ್ (ಪಿಟಿಐ): ಮೂವರು ಗಗನಯಾತ್ರಿಗಳನ್ನು ಹೊತ್ತ ಚೀನಾದ ಗಗನನೌಕೆ ಗುರುವಾರ ಬೆಳಿಗ್ಗೆ ಉಡಾವಣೆಗೊಂಡಿದ್ದು, ಚೀನಾ ಹೊಸದಾಗಿ ನಿರ್ಮಿಸುತ್ತಿರುವ ಬಾಹ್ಯಾಕಾಶ ನಿಲ್ದಾಣವನ್ನು ನೌಕೆಯು ಯಶಸ್ವಿಯಾಗಿ ತಲುಪಿದೆ.

ಚೀನಾದ ಮೊದಲ ಮಾನವ ಸಹಿತ ಬಾಹ್ಯಾಕಾಶ ನಿಲ್ದಾಣಕ್ಕೆ ಇಬ್ಬರು ಅನುಭವಿ ಹಾಗೂ ಮತ್ತೊಬ್ಬ ಹೊಸ ಗಗನಯಾತ್ರಿಯನ್ನು ಕಳುಹಿಸಲಾಗಿದೆ. ನಿಯೆ ಹೈಶೆಂಗ್, ಲಿಯು ಬೋಮಿಂಗ್ ಮತ್ತು ಟ್ಯಾಂಗ್ ಹಾಂಗ್ಬೊ ಎಂಬ ಮೂವರು ಗಗನಯಾತ್ರಿಗಳನ್ನು ಹೊತ್ತ ಶೆನ್‌ಶಾವ್-12 ಗಗನನೌಕೆ ಲಾಂಗ್ ಮಾರ್ಚ್ -2 ಎಫ್ ವೈ12 ರಾಕೆಟ್ ಮೂಲಕ ಗೋಬಿ ಮರುಭೂಮಿಯಲ್ಲಿರುವ ಜಿಯುಕ್ವಾನ್ ಉಪಗ್ರಹ ಉಡಾವಣಾ ಕೇಂದ್ರದಿಂದ ಗುರುವಾರ ಬೆಳಿಗ್ಗೆ 9:22ರ ಸಮಯಕ್ಕೆ (ಬೀಜಿಂಗ್ ಕಾಲಮಾನ) ಉಡಾವಣೆಗೊಂಡಿದೆ.

50 ರೈಲುಗಳ ಸಂಚಾರ ಪುನರಾರಂಭ

ನವದೆಹಲಿ: ದೇಶದ ವಿವಿಧೆಡೆ ಲಾಕ್‌ಡೌನ್‌ಸಡಿಲಗೊಳ್ಳುತ್ತಿರುವ ಕಾರಣ ದೇಶದಾದ್ಯಂತ 50 ರೈಲುಗಳ ಸಂಚಾರವನ್ನು ಜೂನ್ 21ರಿಂದ ಪುನರಾರಂಭಿಸುವುದಾಗಿ ಭಾರತೀಯ ರೈಲ್ವೆ ತಿಳಿಸಿದೆ.

ಇದರಲ್ಲಿ ತುರಂತೊ, ಶತಾಬ್ದಿ, ರಾಜಧಾನಿ ಮತ್ತು ಇತರ ಕೆಲ ಎಕ್ಸ್‌ಪ್ರೆಸ್ ರೈಲುಗಳು ಸೇರಿವೆ.

ಬಿಎಸ್‌ಎಫ್ ವರದಿಯಲ್ಲಿ ಉಲ್ಲೇಖ

ಬಾಂಗ್ಲಾದೇಶಕ್ಕೆ ಗೋವುಗಳ ಕಳ್ಳಸಾಗಣೆ ಕಡಿವಾಣ

ಕೋಲ್ಕತ್ತ/ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳದಿಂದ ನೆರೆಯ ಬಾಂಗ್ಲಾದೇಶಕ್ಕೆ ಗೋವುಗಳ ಕಳ್ಳಸಾಗಣೆ ಮೇಲೆ ಸಂಪೂರ್ಣವಾಗಿ ಕಡಿವಾಣ ಹಾಕಲಾಗಿದೆ ಎಂದು ಗಡಿ ಭದ್ರತಾ ಪಡೆ (ಬಿಎಸ್‌ಎಫ್) ಮೂಲಗಳು ಹೇಳಿವೆ.

ಮೇ ತಿಂಗಳಿನಿಂದ ಗಡಿ ಮೂಲಕ ಒಂದೇ ಒಂದು ಗೋವಿನ ಕಳ್ಳಸಾಗಣೆ ನಡೆದಿಲ್ಲ ಎಂದು ಬಿಎಸ್‌ಎಫ್‌ನ ದಾಖಲೆಗಳು ಹೇಳುತ್ತವೆ.

ಪಶ್ಚಿಮ ಬಂಗಾಳದ ದಕ್ಷಿಣ ಪ್ರದೇಶವು ಗೋವುಗಳ ಕಳ್ಳಸಾಗಣೆಗೆ ಕುಖ್ಯಾತಿ ಗಳಿಸಿತ್ತು. ಗೋವುಗಳ ಕಳ್ಳಸಾಗಣೆಯನ್ನು ಸಂಪೂರ್ಣ ನಿಲ್ಲಿಸಲಾಗುವುದು ಎಂದು 2014ರಲ್ಲಿ ಅಧಿಕಾರಕ್ಕೆ ಬಂದಾಗ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಘೋಷಿಸಿತ್ತು. ಈಗ ಈ ಘೋಷಣೆ ಕಾರ್ಯರೂಪಕ್ಕೆ ಬಂದಿದೆ ಎಂದು ಮೂಲಗಳು ಹೇಳಿವೆ.



ಬಾಂಗ್ಲಾದೇಶಕ್ಕೆ ಹೊಂದಿಕೊಂಡಂತೆ ಭಾರತದ ಐದು ರಾಜ್ಯಗಳು ಒಟ್ಟು 4,095 ಕಿ.ಮೀ. ಉದ್ದದಷ್ಟು ಗಡಿ ಹಂಚಿಕೊಂಡಿವೆ. ಈ ಪೈಕಿ, ಗೋವುಗಳ ಕಳ್ಳಸಾಗಣೆ ನಡೆಯುತ್ತಿದ್ದ, 913.32 ಕಿ.ಮೀ ಉದ್ದದ ಗಡಿಯನ್ನು ಕಾಯುವ ಹೊಣೆಯನ್ನು ಬಿಎಸ್‌ಎಫ್‌ಗೆ ವಹಿಸಲಾಗಿತ್ತು.

'ಕಳ್ಳ ಸಾಗಣೆ ನಿಲ್ಲಿಸಲು ಮೂರು ಹಂತಗಳ ಕಾರ್ಯಾಚರಣೆಯನ್ನು ಅಳವಡಿಸಿಕೊಳ್ಳಲಾಗಿತ್ತು. ಈ ಕಾರ್ಯಕ್ಕೆ ನಿಯೋಜನೆಗೊಂಡ ಸಿಬ್ಬಂದಿಯನ್ನು ಉತ್ತೇಜಿಸುವುದು, ಕಳ್ಳಸಾಗಣೆ ಮಾಡುವವರೊಂದಿಗೆ ಸಂಪರ್ಕ ಹೊಂದಿರುವ ಸಿಬ್ಬಂದಿಯನ್ನು ಗುರುತಿಸುವುದು ಹಾಗೂ ಹೊಸ ಕಾರ್ಯತಂತ್ರವನ್ನು ಅಳವಡಿಸಿಕೊಳ್ಳುವ ಮೂಲಕ ಈ ಕಾರ್ಯವನ್ನು ಸಾಧಿಸಲಾಗಿದೆ' ಎಂದು ಬಿಎಸ್‌ಎಫ್‌ನ ಸಿಐಜಿ ಅಶ್ವಿನಿಕುಮಾರ್ ಸಿಂಗ್ ಹೇಳಿದರು.

ಗೋವುಗಳ ಕಳ್ಳಸಾಗಣೆಗೆ ಕಡಿವಾಣ ಬಿದ್ದ ಹಿನ್ನೆಲೆಯಲ್ಲಿ, ಬಾಂಗ್ಲಾದೇಶದಲ್ಲಿನ ಚರ್ಮ, ಗೋ ಮಾಂಸ ಮಾರಾಟ ಹಾಗೂ ಪಿಂಗಾಣಿ ಉದ್ದಿಮೆಗಳು ನಷ್ಟ ಅನುಭವಿಸಿವೆ ಎನ್ನಲಾಗಿದೆ.

ಕರ್ನಾಟಕ ಕ್ರಿಕೆಟ್‌ನ 'ವಿಜಯ'ಗಾಥೆಯ ಕೊಂಡಿ

ಪ್ರಜಾವಾಣಿ ವಾರ್ತೆ


ವಿಜಯಕೃಷ್ಣ

ಬೆಂಗಳೂರು: ಕರ್ನಾಟಕ ತಂಡದಲ್ಲಿ 1970ರ ದಶಕದಲ್ಲಿ ಪ್ರಮುಖ ಆಲ್‌ರೌಂಡರ್ ಆಗಿ ಗುರುತಿಸಿಕೊಂಡಿದ್ದ ಬಿ. ವಿಜಯಕೃಷ್ಣ(71) ಅವರು ಗುರುವಾರ ಬೆಳಿಗ್ಗೆ ಬೆಂಗಳೂರಿನ ಆಸ್ಪತ್ರೆಯಲ್ಲಿ ಹೃದಯಾಘಾತದಿಂದ ನಿಧನರಾದರು. ಕರ್ನಾಟಕ ರಣಜಿ ಟ್ರೋಫಿ ಗೆದ್ದುಕೊಂಡ ಮೂರು ಸಂದರ್ಭಗಳಲ್ಲಿ ಅವರು ತಂಡದಲ್ಲಿ ಆಡಿದ್ದರು.

ಎಡಗೈ ಸ್ಪಿನ್ನರ್ ಮತ್ತು ಬ್ಯಾಟ್ಸ್‌ಮನ್ ಆಗಿದ್ದ ಭರಮಯ್ಯ ವಿಜಯಕೃಷ್ಣ ಅವರು 1968ರಲ್ಲಿ ಕರ್ನಾಟಕ ತಂಡಕ್ಕೆ ಪದಾರ್ಪಣೆ ಮಾಡಿದ್ದು ಸುಮಾರು 14 ವರ್ಷ ರಾಜ್ಯ ತಂಡದಲ್ಲಿ ಆಡಿದ್ದರು.

1973–74, 1977–78 ಮತ್ತು 1981–82ರಲ್ಲಿ ಕರ್ನಾಟಕ ದೇಶಿಯ ಕ್ರಿಕೆಟ್ ಚಾಂಪಿಯನ್ ಆಗಿದ್ದಾಗ ಅವರು ಆಡಿದ್ದರು. ಜೊತೆಗೆ ಮೂರು ಬಾರಿ (1974–75, 1978–79, 1982–83 ರಲ್ಲಿ) ರನ್ನರ್ ಅಪ್ ಆಗಿದ್ದ ತಂಡದಲ್ಲೂ ಆಡಿದ್ದರು. ಸಿಂಡಿಕೇಟ್ ಬ್ಯಾಂಕ್ ಉದ್ಯೋಗಿಯಾಗಿದ್ದ ಅವರು ಕೊನೆಯ ಪಂದ್ಯವನ್ನು 1982–83ರ ಫೈನಲ್‌ನಲ್ಲಿ ಮುಂಬೈ ವಿರುದ್ಧ ಮುಂಬೈನಲ್ಲಿ ಆಡಿದ್ದರು.

ಮಲ್ಲೇಶ್ವರದ ಶಿರೂರು ಪಾರ್ಕ್‌ನಲ್ಲಿ ಸಾಲಸ್ ನರ್ಝುರೆತ್ ಅವರಿಂದ ಬಾಲ್ಯದಲ್ಲಿ ತರಬೇತಿ ಪಡೆದಿದ್ದ ವಿಜಯಕೃಷ್ಣ, 11ನೇ ವಯಸ್ಸಿನಲ್ಲಿ ಸಬ್ ಮೆಟ್ರೊ ಶೀಲ್ಡ್‌ನಲ್ಲಿ ಮೊದಲ ಪಂದ್ಯ ಆಡಿದ್ದರು. ಫಾರ್ವಡ್ ಶಾರ್ಟ್‌ಲೆಗ್‌ನಲ್ಲಿ ಅಮೋಘ ಕ್ಷೇತ್ರರಕ್ಷಣೆಗಾಗಿ ಅವರು ಪ್ರಸಿದ್ಧಿ ಪಡೆದಿದ್ದರು. 1968–69ರಲ್ಲಿ ಬೆಂಗಳೂರಿನಲ್ಲಿ ಹೈದರಾಬಾದ್ ತಂಡದ ವಿರುದ್ಧ ರಣಜಿ ಟೂರ್ನಿಗೆ ಪದಾರ್ಪಣೆ ಮಾಡಿದ್ದರು.

ಘಟಾನುಘಟಿ ಸ್ಪಿನ್ನರ್‌ಗಳಾದ ಇ.ಎ.ಎಸ್. ಪ್ರಸನ್ನ, ಬಿ.ಎಸ್.ಚಂದ್ರಶೇಖರ್ ಮತ್ತು ಬ್ಯಾಟ್ಸ್‌ಮನ್ ಜಿ.ಆರ್. ವಿಶ್ವನಾಥ್ ಅವರ ಸಮಕಾಲೀನರಾಗಿದ್ದವರು ವಿಜಯಕೃಷ್ಣ. ಭಾರತ ತಂಡದಲ್ಲಿಯೂ ಪ್ರಸನ್ನ ಮತ್ತು ಚಂದ್ರಶೇಖರ್ ಅವರು ಮಿಂಚುತ್ತಿದ್ದರು. ಆ ಹಂತದಲ್ಲಿ ವಿಜಯಕೃಷ್ಣ ಅವರಿಗೆ ಸಾಮರ್ಥ್ಯ ಇದ್ದರೂ, ರಾಷ್ಟ್ರೀಯ ತಂಡದಲ್ಲಿ ಆಡುವ ಅವಕಾಶ ಸಿಗಲಿಲ್ಲ. ಆದರೆ ಉಪಯುಕ್ತ ಆಲ್‌ರೌಂಡ್ ಆಟದಿಂದ ರಾಜ್ಯ ತಂಡದ ಶಕ್ತಿಯಾಗಿ ಬೆಳೆದರು. ಪ್ರವಾಸಿ ವೆಸ್ಟ್ ಇಂಡೀಸ್ ವಿರುದ್ಧ 1978–79ರಲ್ಲಿ ನಡೆದ ಮೂರು ದಿನಗಳ ಪಂದ್ಯದಲ್ಲಿ ಅವರು 9 ವಿಕೆಟ್‌ಗಳನ್ನು (79ಕ್ಕೆ6, 89ಕ್ಕೆ3) ಪಡೆದು ಕರ್ನಾಟಕದ ಪ್ರಸಿದ್ಧ ಜಯದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಇದು ಅವರ ಕ್ರಿಕೆಟ್ ಜೀವನದ ಸ್ಮರಣೀಯ ಸಂದರ್ಭಗಳಲ್ಲಿ ಒಂದು. ಒಟ್ಟು 74 ರಣಜಿ ಟ್ರೋಫಿ ಪಂದ್ಯಗಳಲ್ಲಿ ಆಡಿರುವ 'ವಿಜಿ' ಎರಡು ಶತಕ, 16 ಅರ್ಧಶತಕ ಸೇರಿ 2,191 ರನ್ ಬಾರಿಸಿದ್ದಾರೆ. 27.15 ಸರಾಸರಿಯಲ್ಲಿ 177 ವಿಕೆಟ್‌ಗಳನ್ನು ಪಡೆದಿದ್ದಾರೆ. ಐದು ಬಾರಿ ಐದು ವಿಕೆಟ್‌ಗಳ ಗೊಂಚಲು ಪಡೆದಿರುವ ಅವರ ಶ್ರೇಷ್ಠ ಸಾಧನೆ 85ಕ್ಕೆ7 ವಿಕೆಟ್.

ಸಮಕಾಲೀನರಾದ ಪ್ರಸನ್ನ, ಚಂದ್ರಶೇಖರ್, ನಂತರದ ದಿನಗಳಲ್ಲಿ ರಘುರಾಮ ಭಟ್ ಅಂಥ ಘಟಾನುಘಟಿಗಳ ಜೊತೆಗೆ ಆಡಿದ್ದ ಅವರ ಈ ಸಾಧನೆ ಕಡಿಮೆಯೇನೂ ಆಗಿರಲಿಲ್ಲ. 1973–74ರಲ್ಲಿ ರಾಜಸ್ಥಾನ ವಿರುದ್ಧ ಫೈನಲ್‌ನಲ್ಲಿ ಗಳಿಸಿದ 71 ರನ್‌ಗಳು ಪಂದ್ಯದಲ್ಲಿ ಕರ್ನಾಟಕದ ಪಾಲಿಗೆ ನಿರ್ಣಾಯಕ ಎನಿಸಿದ್ದವು.

1975–76ರಲ್ಲಿ ಮಹಾರಾಷ್ಟ್ರ ವಿರುದ್ಧ ಬೆಂಗಳೂರಿನಲ್ಲಿ ನಡೆದ ಪಂದ್ಯದಲ್ಲಿ ಗಳಿಸಿದ ಬಿರುಸಿನ ಶತಕ (102*) ಅವರಿಗೆ ಪ್ರಸಿದ್ಧಿ ತಂದುಕೊಟ್ಟಿತ್ತು. ದೇಶಿ ಕ್ರಿಕೆಟ್‌ನಲ್ಲಿ ವೇಗದ ಶತಕಕ್ಕೆ ನೀಡುವ ಎಲ್ ಪಿ.ಜೈ ಟ್ರೋಫಿ ಪಡೆದ ಕರ್ನಾಟಕದ ಮೊದಲ ಕ್ರಿಕೆಟಿಗರಾದರು.

ವಿಜಯಕೃಷ್ಣ, ಮೂರು ಇರಾನಿ ಟ್ರೋಫಿ, ಒಮ್ಮೆ ದುಲೀಪ್ ಟ್ರೋಫಿಯಲ್ಲೂ ಆಡಿದ್ದಾರೆ. ಅವರ ಅಂತ್ಯಕ್ರಿಯೆ ಗುರುವಾರ ಸಂಜೆ ಹೆಬ್ಬಾಳದ ಚಿತಾಗಾರದಲ್ಲಿ ನೆರವೇರಿತು.

(ಅಂಕಿಅಂಶ: ಚನ್ನಗಿರಿ ಕೇಶವಮೂರ್ತಿ)

ಕಾಳಿಚರಣ್ ವಿಕೆಟ್ ಗಳಿಸಿದ್ದ ವಿಜಿ!

ಬೆಂಗಳೂರು: ಆ ದಿನವನ್ನು ಮರೆಯುವುದು ಸಾಧ್ಯವೇ ಇಲ್ಲ. ವೆಸ್ಟ್ ಇಂಡೀಸ್ ತಂಡದ ಆಲ್ವಿನ್ ಕಾಳಿಚರಣ್ ಅವರನ್ನು ವಿಜಯಕೃಷ್ಣ ಬೌಲ್ಡ್ ಮಾಡಿದ್ದ ರೀತಿಗೆ ಬೆರಗಾಗಿದ್ದೆ. ಅಂತಹ ಅದ್ಭುತ ಬೌಲರ್ ಆಗಿದ್ದವರು. ಅವರು ಭಾರತ ತಂಡದಲ್ಲಿ ಆಡಬೇಕಿತ್ತು ಎಂದು ಮಾಜಿ ಕ್ರಿಕೆಟಿಗ ಎಚ್. ಚಂದ್ರಶೇಖರ್ ನೆನಪಿಸಿಕೊಳ್ಳುತ್ತಾರೆ.

'ಆ ಕಾಲದಲ್ಲಿಯೇ ಚೈನಾಮನ್ ಬೌಲಿಂಗ್ ಮಾಡುತ್ತಿದ್ದರು. ರಣಜಿ ಟ್ರೋಫಿ ಗೆದ್ದಿದ್ದ ಕರ್ನಾಟಕ ತಂಡ ಪ್ರವಾಸಿ ವೆಸ್ಟ್ ಇಂಡೀಸ್ ವಿರುದ್ಧ ಅಹಮದಾಬಾದಿನಲ್ಲಿ ಆಡಿತ್ತು. ಅದರಲ್ಲಿ ನಾವಿಬ್ಬರೂ ಆಡಿದ್ದೆವು. ಆ ಪಂದ್ಯದಲ್ಲಿ ತಂಡ ಜಯಿಸಲು ವಿಜಯಕೃಷ್ಣ ಅವರೇ ಪ್ರಮುಖ ಕಾರಣರಾಗಿದ್ದರು' ಎಂದು ಚಂದ್ರಶೇಖರ್ ನೆನಪಿಸಿಕೊಳ್ಳುತ್ತಾರೆ. 'ವಿಜಯ್ ಅವರಂತಹ ಚೈನಾಮನ್ ಬೌಲರ್ ಮತ್ತೊಬ್ಬರಿಲ್ಲ. ಆ ಕಾಲದಲ್ಲಿ ಭಾರತ ತಂಡದಲ್ಲಿ ಬಿಷನ್ ಸಿಂಗ್ ಬೇಡಿ ಅವರು ಮಿಂಚುತ್ತಿದ್ದ ಕಾರಣ ವಿಜಯ್‌ಗೆ ಅವಕಾಶ ಸಿಗಲಿಲ್ಲ' ಎಂದರು.

'ವಿಜಯ್ ಅವರ ತಂದೆ ಐಎಎಸ್ ಅಧಿಕಾರಿಯಾಗಿದ್ದರು. ವಿದ್ಯಾವಂತ ಕುಟುಂಬದ ವಿಜಯ್, ನೇರ ನುಡಿಯ ಮನುಷ್ಯ. ತಪ್ಪು ಕಂಡಾಗ ಖಂಡಿಸುತ್ತಿದ್ದರು. ಅಗತ್ಯವಿದ್ದವರಿಗೆ ನೆರವು ನೀಡುವ ಸ್ನೇಹಿತ ಕೂಡ. ವಿಜಿ ನನಗೆ ಸಹಆಟಗಾರನೂ ಹೌದು, ಎದುರಾಳಿಯೂ ಹೌದು. ರಾಜ್ಯ ತಂಡದಲ್ಲಿ ಆಡುವಾಗ ಜೊತೆಯಾಗಿರುತ್ತಿದ್ದೆವು. ವಿಜಯಾ ಬ್ಯಾಂಕ್ ತಂಡದಲ್ಲಿದ್ದ ನಾನು ಬ್ಯಾಂಕ್ ಟೂರ್ನಿಗಳಲ್ಲಿ ಸಿಂಡಿಕೇಟ್ ಬ್ಯಾಂಕ್‌ನ ವಿಜಿಗೆ ಎದುರಾಳಿಯಾಗಿರುತ್ತಿದ್ದೆ' ಎಂದು ಚಂದ್ರಶೇಖರ್ ಸ್ಮರಿಸಿಕೊಂಡರು.

ಬೌಲಿಂಗ್ ಅಥವಾ ಬ್ಯಾಟಿಂಗ್ ಮೂಲಕ ಪಂದ್ಯ ಗೆಲ್ಲಿಸಿಕೊಡುವ ಸಾಮರ್ಥ್ಯ ಇದ್ದ ಆಟಗಾರ ಆಗಿದ್ದರು. ರಾಜ್ಯ ತಂಡ ಚೊಚ್ಚಲ ರಣಜಿ ಟ್ರೋಫಿ ಗೆಲ್ಲುವಲ್ಲಿ ಅವರ ಕಾಣಿಕೆ ಮಹತ್ವದ್ದಾಗಿತ್ತು.
ಬ್ರಿಜೇಶ್ ಪಟೇಲ್ ಮಾಜಿ ಕ್ರಿಕೆಟಿಗ

ಸುದ್ದಿ 2 ನಿಮಿಷ

ರಾಷ್ಟ್ರೀಯ ಅಥ್ಲೆಟಿಕ್ ಕೂಟ: ರಾಜ್ಯ ತಂಡದಲ್ಲಿ ಪೂವಮ್ಮ, ಚೇತನ್

ಬೆಂಗಳೂರು: ಮಧ್ಯಮ ದೂರ ಅಂತರದ ಓಟಗಾರ್ತಿ ಎಂ.ಆರ್. ಪೂವಮ್ಮ ಮತ್ತು ಹೈಜಂಪ್ ಪಟು ಚೇತನ್ ಬಿ ಅವರು ಇದೇ 25ರಿಂದ 29ರ ವರೆಗೆ ಪಟಿಯಾಲದಲ್ಲಿ ನಡೆಯಲಿರುವ ರಾಷ್ಟ್ರೀಯ ಸೀನಿಯರ್ ಅಥ್ಲೆಟಿಕ್ ಕೂಟದಲ್ಲಿ ರಾಜ್ಯ ತಂಡವನ್ನು ಪ್ರತಿನಿಧಿಸಲಿದ್ದಾರೆ.

ಮಹಿಳೆಯರ 400 ಮೀಟರ್ಸ್ ಮತ್ತು 800 ಮೀಟರ್ಸ್ ಓಟದ ಸ್ಪರ್ಧೆಯಲ್ಲಿ ಪೂವಮ್ಮ ಪಾಲ್ಗೊಳ್ಳಲಿದ್ದಾರೆ.



ಪುರುಷರ 800 ಮೀಟರ್ಸ್ ಓಟದಲ್ಲಿ ಕುಮಾರಸ್ವಾಮಿ ಬಿ.ಕೆ. ಸ್ಪರ್ಧಿಸಲಿದ್ದಾರೆ. ಚೇತನ್ ಬಿ ತಂಡವನ್ನು ಮುನ್ನಡೆಸುವರು ಎಂದು ರಾಜ್ಯ ಅಥ್ಲೆಟಿಕ್ ಸಂಸ್ಥೆಯ ಕಾರ್ಯದರ್ಶಿ ಎ.ರಾಜವೇಲು ತಿಳಿಸಿದ್ದಾರೆ.

ತಂಡಗಳು: ಪುರುಷರ ವಿಭಾಗ: ಚೇತನ್ ಬಿ (ಹೈಜಂಪ್), ಮನು ಡಿ.ಪಿ. (ಜಾವೆಲಿನ್), ಬೆಳ್ಳಿಯಪ್ಪ (10,000 ಮೀ), ಜೆಸ್ಸಿ ಸಂದೇಶ್ (ಹೈಜಂಪ್, ಟ್ರಿಪಲ್ ಜಂಪ್), ಲೋಕೇಶ್ ಎಸ್ (ಲಾಂಗ್ ಜಂಪ್); ಮಹಿಳೆಯರ ವಿಭಾಗ: ಎಂ.ಆರ್.ಪೂವಮ್ಮ (400, 800 ಮೀ), ಪ್ರಿಯಾ ಎಚ್.ಮೋಹನ್ (200, 400 ಮೀ), ದಾನೇಶ್ವರಿ ಎ.ಟಿ (100 ಮೀ), ನವಮಿ ಎಚ್.ಆರ್ (100 ಮೀ), ಜ್ಯೋತಿ ಕೆ (400 ಮೀ), ಕರಿಷ್ಮಾ ಸನಿಲ್ (ಜಾವೆಲಿನ್). ಅಧಿಕಾರಿಗಳು: ಲಕ್ಷ್ಮಣ, ರಾಜವೇಲು.

ಮರಡೋನಾ ಸಾವಿಗೆ ವೈದ್ಯರೇ ಕಾರಣ ಎಂದ ವಕೀಲ

ಸ್ಯಾನ್ ಇಸಿದ್ರೊ, ಅರ್ಜೆಂಟೀನಾ (ಎಎಫ್‌ಪಿ): ಫುಟ್‌ಬಾಲ್ ದಿಗ್ಗಜ ಡಿಯಾಗೊ ಮರಡೋನಾ ಅವರ ಸಾವಿಗೆ ವೈದ್ಯರ ನಿರ್ಲಕ್ಷ್ಯವೇ ಕಾರಣ ಎಂದು ಶುಶ್ರೂಷಕಿ ದಹಿಯಾನ ಗಿಸೇಲ ಮ್ಯಾಡ್ರಿಡ್ ಅವರ ಪರ ವಕೀಲ ಅಟಾರ್ನಿ ರುಡೊಲ್ಫೊ ಬೆಕ್ ಬುಧವಾರ ಹೇಳಿದ್ದಾರೆ.

ತನ್ನ ಬಳಿ ಕಾನೂನು ಸಲಹೆ ಪಡೆಯುತ್ತಿರುವ ಶುಶ್ರೂಷಕಿ ದಹಿಯಾನ ಮ್ಯಾಡ್ರಿಡ್ ಅವರನ್ನು ತನಿಖಾಧಿಕಾರಿಗಳು ವಿಚಾರಣೆಗೆ ಒಳಪಡಿಸಿದಾಗ ಈ ವಿಷಯ ಬಹಿರಂಗವಾಗಿದೆ ಎಂದು ರುಡೊಲ್ಫೊ ಬೆಕ್ ತಿಳಿಸಿದ್ದಾರೆ.

ಮರಡೋನಾ ಮಿದುಳಿನ ಶಸ್ತ್ರಕ್ರಿಯೆಯ ನಂತರ ಹೃದಯಾಘಾತದಿಂದ ಕಳೆದ ವರ್ಷದ ನವೆಂಬರ್‌ನಲ್ಲಿ ಕೊನೆಯುಸಿರೆಳೆದಿದ್ದರು. ಅವರಿಗೆ ಸಮರ್ಪಕ ಚಿಕಿತ್ಸೆ ಸಿಗಲಿಲ್ಲ ಎಂಬ ಆರೋಪದ ಹಿನ್ನೆಲೆಯಲ್ಲಿ ವಾಸ್ತವಾಂಶ ತಿಳಿಯಲು ತಜ್ಞರ ಸಮಿತಿಯೊಂದನ್ನು ರಚಿಸಲಾಗಿತ್ತು. ಅವರು ವಿಚಾರಣೆಗೆ ಒಳಪಡಿಸಿದವರ ಪೈಕಿ ದಹಿಯಾನ ಮ್ಯಾಡ್ರಿಡ್ ಕೂಡ ಒಬ್ಬರು.

'ಮರಡೋನಾ ಸಾವಿನಲ್ಲಿ ದಹಿಯಾನ ಅವರ ಕೈವಾಡ ಇದೆ ಎಂಬ ಆರೋಪ ಇದೆ. ಆದರೆ ಅವರು ನಿರಪರಾಧಿಯಾಗಿದ್ದು ವೈದ್ಯರೇ ಮರಡೋನಾ ಅವರ ಸಾವಿಗೆ ಕಾರಣ. ಮಿದುಳಿನ ಶಸ್ತ್ರಚಿಕಿತ್ಸೆಯ ನಂತರ ಮರಡೋನಾ ಚೇತರಿಸಿಕೊಳ್ಳುತ್ತಿದ್ದರು. ಆಗ ಅವರ ಹೃದಯ ವೇಗವಾಗಿ ಕಾರ್ಯನಿರ್ವಹಿಸುವುದಕ್ಕಾಗಿ ಔಷಧೋಪಚಾರ ನಡೆಯುತ್ತಿತ್ತು' ಎಂದು ಬೆಕ್ ವಿವರಿಸಿದ್ದಾರೆ.

'ಮರಡೋನಾ ಅವರು ಒಂದು ದಿನ ಆಸ್ಪತ್ರೆಯಲ್ಲಿ ಕುಸಿದು ಬಿದ್ದಿದ್ದರು. ಅವರನ್ನು ಸಿಟಿ ಸ್ಕ್ಯಾನ್‌ಗೆ ಒಳಪಡಿಸಬೇಕು ಎಂದು ದಹಿಯಾನ ಸೂಚಿಸಿದ್ದರು. ವಿಷಯ ಮಾಧ್ಯಮಗಳಿಗೆ ತಿಳಿದರೆ ಸಮಸ್ಯೆಯಾದೀತು ಎಂದು ಮರಡೋನಾ ಅವರ ಸಹವರ್ತಿಯೊಬ್ಬರು ಹೇಳಿದ್ದರು. ಮರಡೋನಾ ಅವರು ಸಾವಿನ ಕದ ತಟ್ಟುತ್ತಿದ್ದರು. ಹೀಗಿದ್ದೂ ವೈದ್ಯರು ಅವರನ್ನು ರಕ್ಷಿಸಲು ಮುಂದಾಗಲಿಲ್ಲ' ಎಂದು ರುಡೊಲ್ಫೊ ಬೆಕ್ ಆರೋಪಿಸಿದ್ದಾರೆ.

ಮಹಿಳೆಯರ ಟೆಸ್ಟ್ ಪಂದ್ಯ: ಉತ್ತಮ ಮೊತ್ತ ಪೇರಿಸಿದ ಹೀಥರ್ ನೈಟ್ ಬಳಗ

ಸ್ಮೃತಿ–ಶಫಾಲಿ ಭರ್ಜರಿ ಜೊತೆಯಾಟ


ಪಾನೀಯ ವಿರಾಮದ ವೇಳೆ ಶಫಾಲಿ ಮತ್ತು ಸ್ಮೃತಿ ಮಂದಾನ–ರಾಯಿಟರ್ಸ್ ಚಿತ್ರ

ಬ್ರಿಸ್ಟಲ್ (ಪಿಟಿಐ): ಆರಂಭಿಕ ಜೋಡಿ ಸ್ಮೃತಿ ಮಂದಾನ (78; 155 ಎಸೆತ, 14 ಬೌಂಡರಿ) ಮತ್ತು ಶಫಾಲಿ ವರ್ಮಾ (96; 152 ಎ, 13 ಬೌಂ, 2 ಸಿ) ಇಂಗ್ಲೆಂಡ್ ಬೌಲರ್‌ಗಳ ಬೆವರಿಳಿಸಿದರು.

167 ರನ್‌ಗಳ ಜೊತೆಯಾಟವಾಡಿದ ಇವರಿಬ್ಬರು ಭಾರತ ಪಾಳಯದಲ್ಲಿ ಭರವಸೆ ಮೂಡಿಸಿದರು. ಆದರೆ ಇವರ ವಿಕೆಟ್ ಕಳೆದುಕೊಂಡ ನಂತರ ದಿಢೀರ್ ಪತನ ಕಂಡ ಭಾರತ ತಂಡ ಇಲ್ಲಿ ನಡೆಯುತ್ತಿರುವ ಮಹಿಳೆಯರ ಟೆಸ್ಟ್ ಕ್ರಿಕೆಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಆಘಾತಕ್ಕೆ ಒಳಗಾಗಿದೆ.

ಎರಡನೇ ದಿನವಾದ ಗುರುವಾರ ಇಂಗ್ಲೆಂಡ್ 9ಕ್ಕೆ 396 ರನ್ ಗಳಿಸಿ ಮೊದಲ ಇನಿಂಗ್ಸ್ ಡಿಕ್ಲೇರ್ ಮಾಡಿಕೊಂಡಿತು. ಭಾರತ ದಿನಾಟದ ಮುಕ್ತಾಯಕ್ಕೆ 5ಕ್ಕೆ 187 ರನ್ ಗಳಿಸಿದೆ.

ಸೋಫಿಯಾ ಡಂಕ್ಲಿ (74; 127ಎ, 9 ಬೌಂ) ಅವರ ಅಜೇಯ ಅರ್ಧಶತಕ ಮತ್ತು 10ನೇ ಕ್ರಮಾಂಕದ ಅನ್ಯಾ ಶ್ರಬ್‌ಸೋಲ್ (47; 33 ಎ, 6 ಬೌಂ, 1 ಸಿಕ್ಸರ್) ಅವರ ಅಮೋಘ ಬ್ಯಾಟಿಂಗ್ ನೆರವಿನಿಂದ ಇಂಗ್ಲೆಂಡ್ ಉತ್ತಮ ಮೊತ್ತ ಪೇರಿಸಿತು. ಬುಧವಾರ ಆರು ವಿಕೆಟ್‌ಗಳಿಗೆ 296 ರನ್ ಗಳಿಸಿದ್ದ ಇಂಗ್ಲೆಂಡ್ ಬೆಳಿಗ್ಗೆ ಕ್ಯಾಥರಿನ್ ಬ್ರೂಂಟ್ ಮತ್ತು ಸೋಫಿ ಎಕ್ಲೆಸ್ಟೋನ್ ಅವರನ್ನು ಕಳೆದುಕೊಂಡಿತು. ಆದರೆ ಸೋಫಿ ಕ್ರೀಸ್‌ನಲ್ಲಿ ತಳವೂರಿ ಭಾರತದ ಬೌಲರ್‌ಗಳನ್ನು ಕಾಡಿದರು. ಅವರೊಂದಿಗೆ ಒಂಬತ್ತನೇ ವಿಕೆಟ್‌ಗೆ ಅನ್ಯಾ 70 ರನ್‌ಗಳ ಜೊತೆಯಾಟ ಆಡಿದರು. ಹೀಗಾಗಿ ತಂಡಕ್ಕೆ ಮೊದಲ ದಿನದ ಮೊತ್ತಕ್ಕೆ 127 ರನ್ ಸೇರಿಸಲು ಸಾಧ್ಯವಾಯಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್ (ಬುಧವಾರ 92 ಓವರ್‌ಗಳಲ್ಲಿ 6ಕ್ಕೆ 269): 121.2 ಓವರ್‌ಗಳಲ್ಲಿ 9ಕ್ಕೆ 396 ಡಿಕ್ಲೇರ್ (ಸೋಫಿಯಾ ಡಂಕ್ಲಿ ಔಟಾಗದೆ 74, ಅನ್ಯಾ ಶ್ರಬ್‌ಸೋಲ್ 47; ಸ್ನೇಹ್ ರಾಣಾ 131ಕ್ಕೆ 4, ದೀಪ್ತಿ ಶರ್ಮಾ 65ಕ್ಕೆ3, ಜೂಲನ್ ಗೋಸ್ವಾಮಿ 58ಕ್ಕೆ1, ಪೂಜಾ ವಸ್ತ್ರಕಾರ್ 53ಕ್ಕೆ1); **ಭಾರತ:** 60 ಓವರ್‌ಗಳಲ್ಲಿ 5ಕ್ಕೆ 187 (ಸ್ಮೃತಿ ಮಂದಾನ 78, ಶಫಾಲಿ ವರ್ಮಾ 96; ಹೀಥರ್ ನೈಟ್ 1ಕ್ಕೆ2).

ಒಲಿಂಪಿಕ್ ಕೂಟ: ಭಾರತ ಮಹಿಳಾ ಹಾಕಿ ತಂಡ ಪ್ರಕಟ

ರಾಣಿ ಬಳಗದಲ್ಲಿ 8 ಹೊಸಮುಖ


ರಾಣಿ ರಾಂಪಾಲ್

ಬೆಂಗಳೂರು (ಪಿಟಿಐ): ಯುವ ಮತ್ತು ಅನುಭವಿ ಆಟಗಾರ್ತಿಯರನ್ನು ಒಳಗೊಂಡ ಹಾಕಿ ತಂಡವನ್ನು ಟೋಕಿಯೊ ಒಲಿಂಪಿಕ್ಸ್‌ಗೆ ಭಾರತ ಗುರುವಾರ ಪ್ರಕಟಿಸಿದೆ. ಎಂಟು ಮಂದಿ ಇದೇ ಮೊದಲ ಬಾರಿ ಒಲಿಂಪಿಕ್ಸ್ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ. ಉಳಿದ ಎಂಟು ಮಂದಿ ರಿಯೊ ಒಲಿಂಪಿಕ್ಸ್‌ನಲ್ಲಿ ಆಡಿದ ಅನುಭವ ಹೊಂದಿದ್ದಾರೆ.

ಸ್ಟ್ರೈಕರ್ ರಾಣಿ ರಾಂಪಾಲ್ ನೇತೃತ್ವದ ತಂಡದಲ್ಲಿ ಡ್ರ್ಯಾಗ್ ಫ್ಲಿಕ್ಕರ್ ಗುರ್ಜೀತ್ ಕೌರ್, ಉದಿತಾ, ನಿಶಾ, ನೇಹಾ, ನವನೀತ್ ಕೌರ್, ಶರ್ಮಿಳಾ ದೇವಿ ಮತ್ತು ಲಾಲ್ ರೆಮ್ಸಿಯಾಮಿ ಸಲಿಮಾ ಟೆಟೆ ಚೊಚ್ಚಲ ಒಲಿಂಪಿಕ್ಸ್‌ಗೆ ಸಜ್ಜಾಗಿದ್ದಾರೆ. ಸಲೀಮಾ ಟೆಟೆ 2018ರ ಯೂತ್ ಒಲಿಂಪಿಕ್ಸ್‌ನಲ್ಲಿ ಭಾರತ ತಂಡವನ್ನು ಮುನ್ನಡೆಸಿದ್ದು ತಂಡ ಬೆಳ್ಳಿ ಗೆದ್ದಿತ್ತು. ಭಾರತ 1980ರ ನಂತರ ತಂಡ 2016ರಲ್ಲಿ ಅರ್ಹತೆ ಪಡೆದುಕೊಂಡಿತ್ತು. 2016ರಲ್ಲಿ ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಗೆದ್ದಿದ್ದ ತಂಡ 2017ರ ಏಷ್ಯಾಕಪ್‌ನಲ್ಲೂ ಚಾಂಪಿಯನ್ ಆಗಿತ್ತು. 2018ರ ಏಷ್ಯನ್ ಗೇಮ್ಸ್‌ನಲ್ಲಿ ಬೆಳ್ಳಿ ಪದಕ ಗಳಿಸಿತ್ತು. ಆ ವರ್ಷ ಮಹಿಳೆಯರ ವಿಶ್ವಕಪ್ ಟೂರ್ನಿಗೆ ಮೊದಲ ಬಾರಿ ಅರ್ಹತೆ ಗಳಿಸಿತ್ತು.

ತಂಡ: ಗೋಲ್‌ಕೀಪರ್: ಸವಿತಾ; **ಡಿಫೆಂಡರ್‌ಗಳು:** ದೀಪ್ ಗ್ರೇಸ್ ಎಕ್ಕಾ, ನಿಕ್ಕಿ ಪ್ರಧಾನ್, ಗುರ್ಜೀತ್ ಕೌರ್, ಉದಿತಾ; **ಮಿಡ್‌ಫೀಲ್ಡರ್:** ನಿಶಾ, ನೇಹಾ, ಸುಶೀಲಾ ಚಾನು, ಮೋನಿಕಾ, ನವಜ್ಯೋತ್ ಕೌರ್, ಸಲಿಮಾ ಟೆಟೆ; **ಫಾರ್ವರ್ಡರ್:** ರಾಣಿ ರಾಂಪಾಲ್, ನವನೀತ್ ಕೌರ್, ಲಾಲ್‌ರೆಮ್ಸಿಯಾಮಿ, ವಂದನಾ ಕಟಾರಿಯಾ, ಶರ್ಮಿಳಾ ದೇವಿ.

ಯೂರೊ ಕಪ್: ಇಟಲಿ ಜಯಭೇರಿ


ಲೊಕಾಟೆಲಿ –ಎಎಫ್‌ಪಿ ಚಿತ್ರ

ರೋಮ್: ಮ್ಯಾನ್ಯುಯೆಲ್ ಲೊಕಾಟೆಲಿ ಗಳಿಸಿದ ಎರಡು ಗೋಲುಗಳ ಬೆನ್ನಲ್ಲೇ ಸೀರೊ ಇಮೊಬೈಲ್ ಅವರ ಗೋಲು ಇಟಲಿ ತಂಡದ ಭರ್ಜರಿ ಜಯಕ್ಕೆ ಕಾರಣವಾಯಿತು. ರೋಮ್‌ನ ಸ್ಟೇಡಿಯೊ ಒಲಿಂಪಿಕೊದಲ್ಲಿ ಬುಧವಾರ ತಡರಾತ್ರಿ ನಡೆದ ಹಣಾಹಣಿಯಲ್ಲಿ ಸ್ವಿಟ್ಜರ್ಲೆಂಡ್ ವಿರುದ್ಧ 3–0 ಅಂತರದ ಜಯ ಗಳಿಸಿದ ಇಟಲಿ, ಯೂರೊ ಕಪ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ 16ರ ಘಟ್ಟ ಪ್ರವೇಶಿಸಿತು.

'ಎ' ಗುಂಪಿನ ಪಂದ್ಯದ 26ನೇ ನಿಮಿಷದಲ್ಲಿ ಲೊಕಾಟೆಲಿ ಗೋಲು ಗಳಿಸಿ ಮುನ್ನಡೆ ತಂದುಕೊಟ್ಟರು. 52ನೇ ನಿಮಿಷದಲ್ಲಿ ಅವರು ಮತ್ತೊಂದು ಗೋಲು ಗಳಿಸಿದರು. 89ನೇ ನಿಮಿಷದಲ್ಲಿ ಇಮೊಬೈಲ್ ಚೆಂಡನ್ನು ಗುರಿ ಮುಟ್ಟಿಸಿದರು.


ಗುರುವಾರ ಸಂಜೆ ನಡೆದ 'ಸಿ' ಗುಂಪಿನ ಪಂದ್ಯದಲ್ಲಿ ಉಕ್ರೇನ್ 2–1 ಗೋಲುಗಳಿಂದ ನಾರ್ತ್ ಮೆಸಿಡೋನಿಯಾವನ್ನು ಮಣಿಸಿತು. ಉಕ್ರೇನ್ ಪರ ಯಾಂಡ್ರಿ ಯರ್ಮೊಲೆಂಕೊ (29ನೇ ನಿಮಿಷ) ಮತ್ತು ರೋಮನ್ ಯರೆಚುಕ್ (34 ನೇ ನಿ) ಗೋಲು ಗಳಿಸಿದರೆ ನಾರ್ತ್ ಮೆಸಿಡೋನಿಯಾ ಪರ ಎಸ್ಜಾನ್ ಅಲಿಸೊಕಿ (57ನೇ ನಿ) ಗೋಲು ದಾಖಲಿಸಿದರು.

ರಾತ್ರಿ ನಡೆದ 'ಬಿ' ಗುಂಪಿನ ಪಂದ್ಯದಲ್ಲಿ ಬೆಲ್ಜಿಯಂ 2–1ರಲ್ಲಿ ಡೆನ್ಮಾರ್ಕ್ ವಿರುದ್ಧ ಜಯ ಗಳಿಸಿತು. ಬೆಲ್ಜಿಯಂಗಾಗಿ ತೋರ್ಗನ್ ಹಜಾರ್ಡ್ (54ನೇ ನಿ) ಮತ್ತು ಕೆವಿನ್ ಬ್ರೂನಿ (70ನೇ ನಿ) ಗೋಲು ಗಳಿಸಿದರೆ ಯೂಸುಫ್ ಪೌಲ್ಸೆನ್ (2ನೇ ನಿ) ಡೆನ್ಮಾರ್ಕ್‌ಗೆ ಗೋಲು ತಂದುಕೊಟ್ಟರು.

ಎಚ್‌ಸಿಎ: ಅಜರುದ್ದೀನ್ ಅಮಾನತು

ಹೈದರಾಬಾದ್ (ಪಿಟಿಐ): ಮಾಜಿ ಕ್ರಿಕೆಟಿಗ ಮತ್ತು ಹೈದರಾಬಾದ್ ಕ್ರಿಕೆಟ್ ಸಂಸ್ಥೆಯ (ಎಚ್‌ಸಿಎ) ಅಧ್ಯಕ್ಷ ಮೊಹಮ್ಮದ್ ಅಜರುದ್ದೀನ್ ಅವರನ್ನು ಎಚ್‌ಸಿಎ ಅಪೆಕ್ಸ್ ಸಮಿತಿ ಗುರುವಾರ ಅಮಾನತು ಮಾಡಿದೆ. ಸಂಸ್ಥೆಯ ನಿಯಮಾವಳಿಗಳನ್ನು ಉಲ್ಲಂಘಿಸಿದ್ದಕ್ಕಾಗಿ ಈ ಕ್ರಮ ಕೈಗೊಳ್ಳಲಾಗಿದೆ. ಅಪೆಕ್ಸ್ ಸಮಿತಿಯ ಈ ಕ್ರಮವನ್ನು ಪ್ರಶ್ನಿಸಲು ಅಜರುದ್ದೀನ್ ಅವರಿಗೆ ಅವಕಾಶವಿದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15,767
ಇಂದಿನ ಅಂತ್ಯ	15,691
▼	76
ದಿನದ ಕನಿಷ್ಠ	15,616

ವಿನಿಮಯ ದರ

$ ಡಾಲರ್	74.08
£ ಪೌಂಡ್	103.55
€ ಯುರೊ	88.55
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹525
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹520

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1440 (1440)
ಸೋಯಾ (ರಿಫೈನ್ಡ್)	₹1305 (1310)
ಸೂರ್ಯಕಾಂತಿ (ರಿಫೈನ್ಡ್)	₹1410(1410)
ಪಾಮೋಲಿನ್	₹1137 (1140)

₹ 3 ಲಕ್ಷ ಕೋಟಿ ಮೊತ್ತದ ಪ್ಯಾಕೇಜ್‌ಗೆ ಸಿಐಐ ಆಗ್ರಹ

ನವದೆಹಲಿ (ಪಿಟಿಐ): ಭಾರತದ ಅರ್ಥ ವ್ಯವಸ್ಥೆಗೆ ₹ 3 ಲಕ್ಷ ಕೋಟಿ ಮೌಲ್ಯದ ಉತ್ತೇಜನಾ ಪ್ಯಾಕೇಜ್‌ನ ಅವಶ್ಯಕತೆ ಇದೆ ಎಂದು ಭಾರತೀಯ ವಾಣಿಜ್ಯೋದ್ಯಮ ಮಹಾಸಂಘ (ಸಿಐಐ) ಹೇಳಿದೆ. ಜನಧನ ಖಾತೆ ಹೊಂದಿರುವವರಿಗೆ ಹಣಕಾಸಿನ ನೆರವನ್ನು ನೇರವಾಗಿ ವರ್ಗಾವಣೆ ಮಾಡುವುದು ಕೂಡ ಈ ಮೊತ್ತದಲ್ಲಿ ಸೇರಿದೆ ಎಂದು ಅದು ಹೇಳಿದೆ.

ಹಾಲಿ ಆರ್ಥಿಕ ವರ್ಷದಲ್ಲಿ ದೇಶದ ಅರ್ಥ ವ್ಯವಸ್ಥೆಯು ಶೇಕಡ 9.5ರಷ್ಟು ಬೆಳವಣಿಗೆ ಕಾಣಲಿದೆ ಎಂದು ಸಿಐಐ ಅಧ್ಯಕ್ಷ ಟಿ.ವಿ. ನರೇಂದ್ರನ್ ಅವರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಭಾರತದ ಅರ್ಥ ವ್ಯವಸ್ಥೆಯು ಗ್ರಾಹಕರ ಖರೀದಿ ಸಾಮರ್ಥ್ಯವನ್ನು ನೆಚ್ಚಿಕೊಂಡಿದೆ. ಸಾಂಕ್ರಾಮಿಕವು ಗ್ರಾಹಕರ ಖರೀದಿ ಸಾಮರ್ಥ್ಯದ ಮೇಲೆ ಪರಿಣಾಮ ಉಂಟುಮಾಡಿದೆ. ಇದನ್ನು ಸರಿಪಡಿಸಲು ನೇರ ನಗದು ವರ್ಗಾವಣೆಯಂತಹ ಕ್ರಮಗಳ ಅಗತ್ಯವಿದೆ ಎಂದು ಅವರು ಸುದ್ದಿಗಾರರ ಬಳಿ ಹೇಳಿದರು.

ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಪ್ರಮಾಣದ (ಎಂಎಸ್‌ಎಂಇ) ಉದ್ದಿಮೆಗಳು ಸೇರಿದಂತೆ ಎಲ್ಲ ವರ್ಗಗಳಿಗೆ ಸೇರಿದ ಕಂಪನಿಗಳಿಗೆ ಬರಬೇಕಿರುವ ಹಣವು ಸಕಾಲದಲ್ಲಿ ಪಾವತಿ ಆಗಬೇಕು, ಮೂಲಸೌಕರ್ಯಕ್ಕೆ ಸಂಬಂಧಿಸಿದ ಕಾಮಗಾರಿಗಳು ವೇಗ ಪಡೆದುಕೊಳ್ಳಬೇಕು, ತುರ್ತು ಸಾಲ ಖಾತರಿ ಯೋಜನೆಯ ಮೊತ್ತವನ್ನು ₹ 5 ಲಕ್ಷ ಕೋಟಿಗೆ ಹೆಚ್ಚಿಸಬೇಕು, ತೈಲೋತ್ಪನ್ನಗಳ ಮೇಲಿನ ಎಕ್ಸೈಸ್ ಸುಂಕವನ್ನು ತಗ್ಗಿಸಬೇಕು, ತೈಲೋತ್ಪನ್ನಗಳನ್ನು ಜಿಎಸ್‌ಟಿ ವ್ಯಾಪ್ತಿಗೆ ತರಬೇಕು ಎಂದು ನರೇಂದ್ರನ್ ಅವರು ಒತ್ತಾಯಿಸಿದರು.

ಈ ವರ್ಷದ ಡಿಸೆಂಬರ್‌ಗೆ ಮೊದಲು ದೇಶದ ವಯಸ್ಕರಿಗೆಲ್ಲ ಕೋವಿಡ್ ಲಸಿಕೆ ಕೊಡಿಸಬೇಕು ಎಂದಾದರೆ ಪ್ರತಿದಿನ 71.2 ಲಕ್ಷ ಡೋಸ್ ಲಸಿಕೆ ನೀಡಬೇಕಾಗುತ್ತದೆ ಎಂದು ಅವರು ಅಂದಾಜಿಸಿದರು.

ಕೋವಿಡ್‌ನ ಮೊದಲ ಹಾಗೂ ಎರಡನೆಯ ಅಲೆಯು ಜನರ ಆದಾಯ ಮತ್ತು ಕುಟುಂಬಗಳ ವೈದ್ಯಕೀಯ ವೆಚ್ಚಗಳ ಮೇಲೆ ಮಾಡಿರುವ ಪರಿಣಾಮವು ಮಾರುಕಟ್ಟೆಯಲ್ಲಿನ ಬೇಡಿಕೆಯ ಮೇಲೆ ಪರಿಣಾಮ ಉಂಟುಮಾಡುವ ಸಾಧ್ಯತೆ ಇದೆ ಎಂದರು. 'ಕೋವಿಡ್ ಮೂರನೆಯ ಅಲೆ ಎದುರಾಗುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ, ಜಿಲ್ಲಾಡಳಿತಗಳು ಹಾಗೂ ಖಾಸಗಿ ವಲಯದವರು ಗ್ರಾಮೀಣ ಪ್ರದೇಶಗಳಲ್ಲಿ ಕೋವಿಡ್ ಆರೈಕೆ ಕೇಂದ್ರ ಆರಂಭಿಸಬೇಕು' ಎಂದು ಸಲಹೆ ಮಾಡಿದರು.

ಸ್ವಿಸ್ ಬ್ಯಾಂಕ್: ಭಾರತೀಯರು ಇಟ್ಟಿರುವುದು ₹ 20 ಸಾವಿರ ಕೋಟಿ



ನವದೆಹಲಿ/ಜ್ಯುರಿಕ್ (ಪಿಟಿಐ): ಭಾರತದವರು ಸ್ವಿಸ್ ಬ್ಯಾಂಕ್‌ಗಳಲ್ಲಿ ಇರಿಸಿರುವ ಹಣದ ಮೊತ್ತವು 2020ರಲ್ಲಿ ₹ 20,706 ಕೋಟಿಗೆ ಏರಿಕೆ ಕಂಡಿದೆ. ಬೇರೆ ಬೇರೆ ಹಣಕಾಸು ಉತ್ಪನ್ನಗಳ ಮೂಲಕ ಭಾರತದ ವ್ಯಕ್ತಿಗಳು ಹಾಗೂ ಸಂಸ್ಥೆಗಳಿಂದ ಸ್ವಿಸ್ ಬ್ಯಾಂಕ್‌ಗಳಲ್ಲಿ ಇಷ್ಟು ಮೊತ್ತವನ್ನು ಇರಿಸಲಾಗಿದೆ. ನೇರವಾಗಿ ಠೇವಣಿ ರೂಪದಲ್ಲಿ ಇರಿಸಿದ ಮೊತ್ತದಲ್ಲಿ ಇಳಿಕೆ ಆಗಿದೆ.

ಇದು 13 ವರ್ಷಗಳಲ್ಲಿನ ಅತಿಹೆಚ್ಚಿನ ಮೊತ್ತ. ಈ ಮೊತ್ತವು ಸ್ವಿಸ್ ಬ್ಯಾಂಕ್‌ಗಳು ಸ್ವಿಸ್ ನ್ಯಾಷನಲ್ ಬ್ಯಾಂಕ್‌ಗೆ ನೀಡಿರುವ ಅಧಿಕೃತ ಮಾಹಿತಿ. ಇವು ಭಾರತದಲ್ಲಿ ವ್ಯಾಪಕವಾಗಿ ಚರ್ಚೆಯಾಗಿರುವ, ಭಾರತೀಯರು ಸ್ವಿಸ್ ಬ್ಯಾಂಕ್‌ಗಳಲ್ಲಿ ಇರಿಸಿದ್ದಾರೆ ಎನ್ನಲಾದ 'ಕಪ್ಪುಹಣ'ಕ್ಕೆ ಸಂಬಂಧಿಸಿದ ವಿವರ ಅಲ್ಲ.

ಭಾರತೀಯರು ಸ್ವಿಸ್ ಬ್ಯಾಂಕ್‌ಗಳಲ್ಲಿ ಇರಿಸಿರುವ ಹಣವನ್ನು 'ಕಪ್ಪು ಹಣ' ಎಂದು ಕರೆಯಲು ಆಗದು ಎಂಬ ನಿಲುವನ್ನು ಅಲ್ಲಿನ ಅಧಿಕಾರಿಗಳು ಹಿಂದಿನಿಂದಲೂ ಹೊಂದಿದ್ದಾರೆ.

ಬೆಂಗಳೂರು ಪ್ರವೇಶಿಸಿದ ಐಕಿಯಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೀಠೋಪಕರಣಗಳ ಮಾರಾಟ ಕಂಪನಿ, ಸ್ವೀಡನ್ ಮೂಲದ ಐಕಿಯಾ ಬೆಂಗಳೂರಿನ ಮಾರುಕಟ್ಟೆಯನ್ನು ಗುರುವಾರ ಪ್ರವೇಶಿಸಿದೆ. ಆರಂಭಿಕ ಹಂತದಲ್ಲಿ ಕಂಪನಿಯು ಆನ್‌ಲೈನ್ ಮೂಲಕ ಗ್ರಾಹಕರಿಗೆ ಪೀಠೋಪಕರಣಗಳ ಮಾರಾಟ ಮಾಡಲಿದೆ.

ಐಕಿಯಾ ಕಂಪನಿಯ ಭಾರತದ ವ್ಯವಹಾರಗಳ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಪೀಟರ್ ಬೆತ್ಸೆಲ್ ಅವರು, 'ಕಂಪನಿಯು ಒಂದು ವರ್ಷದೊಳಗೆ ಬೆಂಗಳೂರಿನ ನಾಗಸಂದ್ರದಲ್ಲಿ ಸುಮಾರು ನಾಲ್ಕು ಲಕ್ಷ ಚದರ ಅಡಿಗಳಷ್ಟು ವಿಶಾಲವಾಗಿರುವ ಬೃಹತ್ ಮಳಿಗೆಯನ್ನು ತೆರೆಯಲಿದೆ. ಈ ಮಳಿಗೆಯು ನಾಗಸಂದ್ರ ಮೆಟ್ರೊ ರೈಲು ನಿಲ್ದಾಣದೊಂದಿಗೆ ಸಂಪರ್ಕ ಹೊಂದಿರಲಿದೆ' ಎಂದು ಹೇಳಿದ್ದಾರೆ.

ಎರಡನೇ ದಿನವೂ ಸೆನ್ಸೆಕ್ಸ್ ಇಳಿಕೆ



ಮುಂಬೈ (ಪಿಟಿಐ): ದೇಶದ ಷೇರುಪೇಟೆಗಳಲ್ಲಿ ಸತತ ಎರಡನೇ ದಿನವೂ ಸೂಚ್ಯಂಕಗಳು ಇಳಿಕೆ ಕಂಡವು. ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ 179 ಅಂಶ ಇಳಿಕೆ ಆಗಿ 52,323 ಅಂಶಗಳಿಗೆ ತಲುಪಿತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 76 ಅಂಶ ಇಳಿಕೆಯಾಗಿ 15,691ಕ್ಕೆ ತಲುಪಿತು.

ನಿರೀಕ್ಷೆಗಿಂತಲೂ ವೇಗವಾಗಿ ಬಡ್ಡಿದರ ಏರಿಕೆ ಮಾಡುವುದಾಗಿ ಅಮೆರಿಕದ ಫೆಡರಲ್ ರಿಸರ್ವ್ ಹೇಳಿದೆ. ಈ ಸುದ್ದಿಯು ಜಾಗತಿಕ ಷೇರುಪೇಟೆಗಳಲ್ಲಿ ಇಳಿಮುಖ ವಹಿವಾಟು ನಡೆಯುವಂತೆ ಮಾಡಿ, ದೇಶಿ ಮಾರುಕಟ್ಟೆಯ ಮೇಲೆಯೂ ಪರಿಣಾಮ ಉಂಟುಮಾಡಿತು ಎಂದು ತಜ್ಞರು ಹೇಳಿದ್ದಾರೆ.

ಬ್ಯಾಂಕ್ ಮತ್ತು ಹಣಕಾಸು ವಲಯದ ಷೇರುಗಳು ಹೆಚ್ಚಿನ ನಷ್ಟ ಅನುಭವಿಸಿದವು. ಬಿಎಸ್‌ಇ ಮಿಡ್ ಮತ್ತು ಸ್ಮಾಲ್ ಕ್ಯಾಪ್ ಸೂಚ್ಯಂಕಗಳು ಶೇ 1.29ರವರೆಗೂ ಇಳಿಕೆ ಕಂಡಿವೆ.

ರೂಪಾಯಿ 76 ಪೈಸೆ ಕುಸಿತ: ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯ 76 ಪೈಸೆ ಕುಸಿತ ಕಂಡಿದ್ದು, ಒಂದು ಡಾಲರ್‌ಗೆ ₹ 74.08ಕ್ಕೆ ತಲುಪಿತು.

ಎಂಟು ದಿನಗಳ ವಹಿವಾಟು ಅವಧಿಗಳಲ್ಲಿ ರೂಪಾಯಿ ಮೌಲ್ಯ 128 ಪೈಸೆಗಳಷ್ಟು ಇಳಿಕೆ ಆಗಿದೆ.

ಚಿನ್ನ: ₹ 861ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನದ ದರವು ಗುರುವಾರ 10 ಗ್ರಾಂಗೆ ₹ 861ರಷ್ಟು ಇಳಿಕೆ ಆಗಿದ್ದು, ₹ 46,863ಕ್ಕೆ ತಲುಪಿದೆ. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 1,709ರಷ್ಟು ಕಡಿಮೆ ಆಗಿದ್ದು, ₹ 68,798ಕ್ಕೆ ಇಳಿಕೆ ಆಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಇಳಿಕೆ ಹಾಗೂ ಅಮೆರಿಕದ ಡಾಲರ್ ಮೌಲ್ಯ ವೃದ್ಧಿಯು ಚಿನ್ನದ ಬೆಲೆ ಇಳಿಯಲು ಕಾರಣವಾಗಿವೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಚಾಲಿ ಅಡಿಕೆ ಕ್ವಿಂಟಲ್‌ಗೆ ₹40 ಸಾವಿರ

ಪ್ರಜಾವಾಣಿ ವಾರ್ತೆ

ಶಿರಸಿ: ನಗರದ ಮಾರುಕಟ್ಟೆಯಲ್ಲಿ ಚಾಲಿ ಅಡಿಕೆ ದರ ಪ್ರತಿ ಕ್ವಿಂಟಲ್‌ಗೆ ₹40 ಸಾವಿರಕ್ಕೆ ತಲುಪಿದ್ದು, ಈಚಿನ ವರ್ಷಗಳಲ್ಲಿ ಇದು ದಾಖಲೆಯ ದರವಾಗಿದೆ.

ಏಪ್ರಿಲ್ ಹೊತ್ತಿಗೆ ಕ್ವಿಂಟಲ್‌ಗೆ ಸರಾಸರಿ ₹35 ರಿಂದ 38 ಸಾವಿರದವರೆಗೆ ಇದ್ದ ದರವು ಇದೀಗ ಏರಿಕೆ ಕಂಡಿದೆ. ಆವಕವೂ ಹೆಚ್ಚಿದೆ.

'ದಿನವೂ ಸರಾಸರಿ 1 ಸಾವಿರ ಕ್ವಿಂಟಲ್ ಅಡಿಕೆ ಮಾರಾಟ ಆಗುತ್ತಿದ್ದು, ಅದರಲ್ಲಿ 850 ಕ್ವಿಂಟಲ್‌ನಷ್ಟು ಚಾಲಿ ಅಡಿಕೆ ಇದೆ. ಕಳೆದ ವರ್ಷ ಫಸಲು ಕಡಿಮೆ ಇತ್ತು. ಈ ಬಾರಿ ಬೇಡಿಕೆ ಹೆಚ್ಚಿದೆ. ವಿದೇಶದಿಂದ ಆಮದು ನಿಂತಿದೆ. ಹೀಗಾಗಿ ದರ ಏರಿಕೆ ಕಂಡಿದೆ' ಎನ್ನುತ್ತಾರೆ ಟಿಎಸ್‌ಎಸ್ ಸಂಸ್ಥೆಯ ಪ್ರಧಾನ ವ್ಯವಸ್ಥಾಪಕ ರವೀಶ ಹೆಗಡೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	700-800
ನಡುಗೋಲು	850-900
ರಾಶಿ	950-1000
ರಾಶಿ ಉತ್ತಮ	1000-1050
ಜರಡಿ	1150-1200
ಹೆರಕಿದ್ದು	1500-1600
ಹಸಿರು ಸಾಧಾರಣ	900-1000
ಹಸಿರು ಉತ್ತಮ	1100-1200
ಹಸಿರು ಅತಿ ಉತ್ತಮ	1400-1500
ಕಾಳು ಮೆಣಸು	390
ಅಡಿಕೆ	
ಬಂಟ್ವಾಳ	
ಹೊಸತು	23500-40500
ಹಳತು	42500-50500
ಚಿತ್ರದುರ್ಗ	
ಆಪಿ	42619-43029
ಬೆಟ್ಟೆ	33549-33999
ಕೆಂಪುಗೋಟು	27600-28000
ರಾಶಿ	42139-42569
ಸಿದ್ದಾಪುರ	
ಬಿಳಿಗೋಟು	28899-32489
ಚಾಲಿ	37499-40039
ಕೋಕ	26699-30199
ಕೆಂಪುಗೋಟು	25099-29489
ರಾಶಿ	39689-42149
ತಟ್ಟಿಬೆಟ್ಟೆ	35009-40089
ಯಲ್ಲಾಪುರ	
ಬಿಳಿಗೋಟು	26899-33333
ಚಾಲಿ	34210-40169
ಕೋಕ	21512-30212
ಕೆಂಪುಗೋಟು	26899-32699
ರಾಶಿ	39675-44869
ತಟ್ಟಿಬೆಟ್ಟೆ	33599-38400
ಶಿರಸಿ	
ಬೆಟ್ಟೆ	32000-39889
ಬಿಳಿಗೋಟು	25669-36811
ಚಾಲಿ	29701-40101
ರಾಶಿ	36321-42699
ರಾಮನಗರ ರೇಷ್ಮೆ	
ಮಿಶ್ರತಳಿ	310-391
ದ್ವಿತಳಿ	389-512

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	11000	10800	10700	153.30 ಸೆಂಟ್ಸ್
ಎಸಿ	4760	4100	4100	
ಆರ್‌ಪಿ	5300	5100	5350	ಲಂಡನ್
ಆರ್‌ಸಿ	3125	3100	3100	1600 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ

17-6-2021

ಜಾವಾ 70/80(ಹೊಸ)	9650-9700
ಜಾವಾ 80/90(ಹೊಸ)	9050-9100
ದಪ್ಪ ಮಧ್ಯಪ್ರದೇಶ(ಹೊಸ)	10200-10300
ದಪ್ಪ ಗುಜರಾತ್(ಹೊಸ)	9500-9600

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1450 (1450)
ಒಂದು ವಾರದ ಡೆಲಿವರಿ	1445 (1445)
ಸೋಯಾ ಕಚ್ಚಾ	1250 (1260)
ಪಾಮ್ ವಾರದ ಡೆಲಿವರಿ	1135 (1138)
ಸೂರ್ಯಕಾಂತಿ ಎಣ್ಣೆ ಕಚ್ಚಾ	1370 (1330)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ 47,400 (48,250)
ಬೆಳ್ಳಿ ಕೆ.ಜಿ 69,500 (71,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ